ಶುಕ್ರವಾರ, ಮಾರ್ಚ್ 31, 2023 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಮನವಮಿ
ಶ್ರೀನಗರದಲ್ಲಿ ರಾಮನವಮಿ ಮೆರವಣಿಗೆಯಲ್ಲಿ ಮಗುವಿನೊಂದಿಗೆ ಪಾಲ್ಗೊಂಡಿದ್ದ ಕಾಶ್ಮೀರಿ ಪಂಡಿತ ಮಹಿಳೆ -ಎಎಫ್‌ಪಿ ಚಿತ್ರ

2.1 ಕಿ.ಮೀ ಕಾಮಗಾರಿ ಬಾಕಿ • ಆಟೊ ಪ್ರಯಾಣ ದುಬಾರಿ • ಫೀಡರ್ ಸೇವೆ ಹೆಚ್ಚಿಸಿದ ಬಿಎಂಟಿಸಿ

ಕೆ.ಆರ್.ಪುರ – ಬೈಯಪ್ಪನಹಳ್ಳಿ ಪ್ರಯಾಣ ಹೈರಾಣ

• ವಿಜಯಕುಮಾರ್ ಎಸ್.ಕೆ.

ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣದಿಂದ ಕೆ.ಆರ್.ಪುರ ನಿಲ್ದಾಣಕ್ಕೆ ಬಿಎಂಟಿಸಿ ಬಸ್ ಮೂಲಕ ಫೀಡರ್ ಸೇವೆ ಒದಗಿಸುತ್ತಿರುವುದು – ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಿಶೇಷ

ಬೆಂಗಳೂರು: ವೈಟ್‌ಫೀಲ್ಡ್ ಮೆಟ್ರೊ ಪ್ರಯಾಣಿಕರಿಗೆ ಕೆ.ಆರ್.ಪುರ–ಬೈಯಪ್ಪನಹಳ್ಳಿ ಮೆಟ್ರೊ ನಿಲ್ದಾಣಗಳ ನಡುವಿನ ಪ್ರಯಾಣ ದುಬಾರಿ ಆಗಿರುವುದರ ಜತೆಗೆ ಜನರನ್ನು ಹೈರಾಣ ಮಾಡುತ್ತಿದೆ. ಫೀಡರ್ ಸೇವೆಗೆ ಬಿಎಂಟಿಸಿ ಬಸ್‌ಗಳನ್ನು ಒದಗಿಸಿದ್ದರೂ, ಬೆಳಿಗ್ಗೆ ಮತ್ತು ಸಂಜೆ ವೇಳೆಯ ದಟ್ಟಣೆ ಅವಧಿಯಲ್ಲಿ ಜನ ಪರದಾಡುವಂತಾಗಿದೆ.

ನೇರಳೆ ಮಾರ್ಗವೀಗ ವೈಟ್‌ಫೀಲ್ಡ್ ತನಕ ವಿಸ್ತರಣೆಯಾಗಿದೆ. ಆದರೆ, ಬೈಯಪ್ಪನಹಳ್ಳಿಯಿಂದ ಕೆ.ಆರ್.ಪುರ ತನಕ 2.1 ಕಿಲೋ ಮೀಟರ್‌ನಲ್ಲಿ ಕಾಮಗಾರಿ ಬಾಕಿ ಇದೆ. ಈ ಎರಡು ನಿಲ್ದಾಣಗಳ ನಡುವೆ ಬಸ್ ಮತ್ತು ಆಟೊರಿಕ್ಷಾವನ್ನೇ ಜನ ಅವಲಂಬಿಸಬೇಕಿದೆ. ಫೀಡರ್ ಸೇವೆಯನ್ನು ಬಿಎಂಟಿಸಿ ಆರಂಭಿಸಿದೆ.

ಮಂಗಳವಾರದ ತನಕ ಕಡಿಮೆ ಇದ್ದ ಬಸ್‌ಗಳ ಸಂಖ್ಯೆಯನ್ನು ಬುಧವಾರ 11ಕ್ಕೆ ಏರಿಕೆ ಮಾಡಿದೆ. ಈ ಪೈಕಿ ನಾಲ್ಕು ಹವಾನಿಯಂತ್ರಿತ ವಜ್ರ (ವೋಲ್ವೊ) ಬಸ್‌ಗಳು ಕಾರ್ಯಾಚರಣೆ ಮಾಡಿದವು. ಒಂದು ಬಸ್ ದಿನಕ್ಕೆ 35 ಟ್ರಿಪ್‌ಗಳನ್ನು(ಸುತ್ತುವಳಿ) ಒದಗಿಸುತ್ತಿವೆ. ಮಧ್ಯಾಹ್ನ 2.30ರಿಂದ ಕಾರ್ಯಾಚರಣೆ ಆರಂಭಿಸಿ ರಾತ್ರಿ 10.30ರವರೆಗೆ 20 ಟ್ರಿಪ್ ಮತ್ತು ಮರುದಿನ ಬೆಳಿಗ್ಗೆ 5ರಿಂದ ಆರಂಭವಾಗಿ ಮಧ್ಯಾಹ್ನ 12.30ರ ತನಕ 15 ಟ್ರಿಪ್‌ಗಳನ್ನು ಚಾಲಕ ಮತ್ತು ನಿರ್ವಾಹಕರು ನಿರ್ವಹಿಸಬೇಕು. ಇಬ್ಬರು ಸಿಬ್ಬಂದಿಯನ್ನು ಕೆ.ಆರ್.ಪುರ ನಿಲ್ದಾಣದ ಬಳಿ ಬಿಎಂಟಿಸಿ ನಿಯೋಜಿಸಿ ನಿರ್ವಹಣೆ ಮಾಡುತ್ತಿದೆ.

ಈ ಬಸ್‌ಗಳು ಮೆಟ್ರೊ ನಿಲ್ದಾಣಗಳ ಬಾಗಿಲ ಬಳಿಗೆ ಬರುತ್ತಿದ್ದು, ಪ್ರಯಾಣಿಕರಿಗೆ ಅನುಕೂಲ ಆಗುತ್ತಿದೆ. ಫೀಡರ್ ಸೇವೆ ಜತೆಗೆ ಮಾರತಹಳ್ಳಿ, ಐಟಿಪಿಎಲ್, ವೈಟ್‌ಫೀಲ್ಡ್ ಮಾರ್ಗದಲ್ಲಿ ಸಂಚರಿಸುವ ಬಸ್‌ಗಳು ಮೆಟ್ರೊ ಪ್ರಯಾಣಿಕರಿಗೆ ಫೀಡರ್ ಸೇವೆಯಾಗಿ ಕಾರ್ಯ ನಿರ್ವಹಿಸುತ್ತಿವೆ ಎಂದು ಬಿಎಂಟಿಸಿ ಅಧಿಕಾರಿಗಳು ಹೇಳಿದರು.

ಆದರೆ, ಈ ಎರಡು ನಿಲ್ದಾಣಗಳ ನಡುವಿನ ರಸ್ತೆಯಲ್ಲಿ ವಾಹನ ದಟ್ಟಣೆ ಉಂಟಾಗಿ ಬಸ್‌ಗಳು ಸಿಲುಕಿಕೊಂಡರೆ ಪ್ರಯಾಣಿಕರು ಕಾಯಬೇಕಾದ ಸ್ಥಿತಿ ಇದೆ. ಬೆಳಿಗ್ಗೆ ಮತ್ತು ಸಂಜೆ ದಟ್ಟಣೆ ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಿರುತ್ತದೆ. ಅದೇ ವೇಳೆ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಾಗಿ ಬಸ್‌ಗಳು ದಟ್ಟಣೆಯಲ್ಲಿ ಸಿಲುಕಿಕೊಳ್ಳುತ್ತಿವೆ.

ಬಸ್ ಹತ್ತಿರುವ ಪ್ರಯಾಣಿಕರು ಬಸ್‌ನಲ್ಲೇ ಕಾಯುತ್ತಿದ್ದರೆ, ಬಸ್‌ಗಳಿಗಾಗಿ ಮೆಟ್ರೊ ರೈಲು ನಿಲ್ದಾಣಗಳ ಬಳಿಕ ಕಾಯುವ ಅನಿವಾರ್ಯವೂ ಎದುರಾಗುತ್ತಿದೆ. ತುರ್ತಾಗಿ ತೆರಳಬೇಕಾದವರು ಆಟೊರಿಕ್ಷಾಗಳನ್ನು ಹತ್ತಲು ಪ್ರಯತ್ನಿಸಿದರೆ ದುಬಾರಿ ದರ ತೆತ್ತಬೇಕಾಗುತ್ತಿದೆ. ಕನಿಷ್ಠ ₹150ರಿಂದ ₹200 ತನಕ ದರವನ್ನು ಆಟೊ ಚಾಲಕರು ಕೇಳುತ್ತಿದ್ದಾರೆ. ಅನಿವಾರ್ಯ ಇದ್ದವರು ದುಬಾರಿ ದರ ತೆತ್ತು ಪ್ರಯಾಣ ಮಾಡುತ್ತಿದ್ದಾರೆ. ಈ ಎರಡು ನಿಲ್ದಾಣಗಳ ನಡುವೆ ಬಾಕಿ ಇರುವ ಕಾಮಗಾರಿ ಪೂರ್ಣಗೊಳ್ಳಲು ಇನ್ನು ಕನಿಷ್ಠ ಮೂರು ತಿಂಗಳು ಬೇಕಾಗಲಿದೆ. ಅಲ್ಲಿಯ ತನಕ ಎರಡೂ ನಿಲ್ದಾಣಗಳ ಬಳಿ ಮುಂಗಡ ಪಾವತಿ(ಪ್ರೀ ಪೇಯ್ಡ್) ಆಟೊ ಕೌಂಟರ್‌ಗಳನ್ನು ತೆರೆದರೆ ಅನುಕೂಲ ಆಗಲಿದೆ ಎಂದು ಪ್ರಯಾಣಿಕರು ಹೇಳುತ್ತಾರೆ.

ನಿಮಗೂ ತೊಂದರೆ ಆಗುತ್ತಿದೆಯೇ? ಬರೆಯಿರಿ...

ಕೆ.ಆರ್.ಪುರ–ಬೈಯಪ್ಪನಹಳ್ಳಿ ಮಾರ್ಗದಲ್ಲಿ ಸಾಗುತ್ತಿರುವವರಲ್ಲಿ ನೀವೂ ಒಬ್ಬರಾಗಿರಬಹುದು. ನಿಮಗೆ ಈ ಮಾರ್ಗದಲ್ಲಿನ ಪ್ರಯಾಣ ಒಡ್ಡುತ್ತಿರುವ ಸಮಸ್ಯೆಗಳನ್ನು ಸಂಕ್ಷಿಪ್ತವಾಗಿ ನಮಗೆ ಬರೆದು, ನಿಮ್ಮ ಫೋಟೊ ಹಾಗೂ ಪೂರ್ಣ ವಿಳಾಸದ ಸಹಿತ ಕಳುಹಿಸಿ. ಆಯ್ದ ಬರಹಗಳನ್ನು ಪ್ರಕಟಿಸಲಾಗುವುದು.

9606038256

ರಸ್ತೆ ದಾಟುವ ಪಡಿಪಾಟಲು

ಕೆ.ಆರ್.ಪುರದಲ್ಲಿ ಮೆಟ್ರೊ ರೈಲು ನಿಲ್ದಾಣ ಮತ್ತು ರೈಲು ನಿಲ್ದಾಣ ಒಂದೇ ಕಡೆ ಇದ್ದರೂ ರಸ್ತೆ ದಾಟಲು ಪ್ರಯಾಣಿಕರು ಪರದಾಡಬೇಕಿದೆ.

ರಸ್ತೆಯ ಒಂದು ಬದಿಯಲ್ಲಿ ರೈಲು ನಿಲ್ದಾಣ ಇದ್ದರೆ, ಮತ್ತೊಂದು ಬದಿಯಲ್ಲಿ ಮೆಟ್ರೊ ರೈಲು ನಿಲ್ದಾಣವಿದೆ. ಹಳೇ ಮದ್ರಾಸ್ ರಸ್ತೆಯಿಂದ ಹೊರ ವರ್ತುಲ ರಸ್ತೆಯಲ್ಲಿ ಮಾರತಹಳ್ಳಿ, ಐಟಿಪಿಎಲ್ ಕಡೆಗೆ ಹೋಗುವ ಮತ್ತು ಬರುವ ವಾಹನಗಳ ನಡುವೆ ರಸ್ತೆ ದಾಟುವುದು ಪಾದಚಾರಿಗಳಿಗೆ ಕಷ್ಟದ ಕೆಲಸವಾಗಿದೆ.

ಕೆ.ಆರ್.ಪುರ ತೂಗು ಸೇತುವೆಯ ಕೆಳಗೆ ಪಾದಚಾರಿಗಳು ಅನುಭವಿಸುತ್ತಿದ್ದ ಸಮಸ್ಯೆ ಈಗ ದುಪ್ಪಟ್ಟಾಗಿದೆ. ಪಾದಚಾರಿ ಮೇಲ್ಸೇತುವೆ ನಿರ್ಮಿಸುವ ಯೋಜನೆ ನನೆಗುದಿಗೆ ಬಿದ್ದಿದ್ದು, ಜನ ಪರದಾಡುವಂತಾಗಿದೆ. ಸಂಚಾರ ಪೊಲೀಸರು ವಾಹನಗಳನ್ನು ಆಗಾಗ ತಡೆದು ಪಾದಚಾರಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ.

ಸುದ್ದಿ 2 ನಿಮಿಷ

ನಿಮ್ಹಾನ್ಸ್, ಎನ್‌ಸಿಬಿಎಸ್‌ಗೆ ₹100 ಕೋಟಿ ದೇಣಿಗೆ

ಬೆಂಗಳೂರು: ನಿಮ್ಹಾನ್ಸ್ ಮತ್ತು ರಾಷ್ಟ್ರೀಯ ಜೈವಿಕ ವಿಜ್ಞಾನಗಳ ಕೇಂದ್ರಕ್ಕೆ (ಎನ್‌ಸಿಬಿಎಸ್) 'ರೋಹಿಣಿ ನಿಲೇಕಣಿ ಫಿಲಾಂತ್ರೊಪಿಸ್ ಫೌಂಡೇಷನ್' (ಆರ್‌ಎನ್‌ಪಿ) ವತಿಯಿಂದ ₹100 ಕೋಟಿ ದೇಣಿಗೆ ನೀಡಲಾಗಿದೆ.

ರೋಹಿಣಿ ನಿಲೇಕಣಿ ಅವರು ಈ ಫೌಂಡೇಷನ್ ಸ್ಥಾಪಿಸಿದ್ದಾರೆ. ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಸಂಶೋಧನೆ ಮತ್ತು ಚಿಕಿತ್ಸೆ ಕೈಗೊಳ್ಳಲು ರೋಹಿಣಿ ಅವರು ಈ ದೇಣಿಗೆಯನ್ನು ನೀಡಿದ್ದಾರೆ.

ಮಿದುಳಿಗೆ ಸಂಬಂಧಿಸಿದ ಕೇಂದ್ರವನ್ನು ಸ್ಥಾಪಿಸಲು ಈ ಮೊತ್ತವನ್ನು ಬಳಸಲು ಉದ್ದೇಶಿಸಲಾಗಿದೆ. ನಿಮ್ಹಾನ್ಸ್ ಮತ್ತು ಎನ್‌ಸಿಬಿಎಸ್ ಸಹಭಾಗಿತ್ವದಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮುಂದಿನ ಐದು ವರ್ಷಗಳವರೆಗೆ ಕೈಗೊಳ್ಳುವ ಚಟುವಟಿಕೆಗಳಿಗೆ ರೋಹಿಣಿ ಅವರು ನೆರವು ನೀಡಲಿದ್ದಾರೆ. ಹೊಸದಾಗಿ ಸ್ಥಾಪಿಸಲಾಗುವ ಕೇಂದ್ರವು, ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದ ದೀರ್ಘಾವಧಿ ಸಂಶೋಧನೆಯನ್ನು ಸಹ ಕೈಗೊಳ್ಳಲಿದೆ.

'ಪ್ರಸ್ತುತ ಪರಿಸ್ಥಿತಿಯಲ್ಲಿ ಮಾನಸಿಕ ಆರೋಗ್ಯಕ್ಕೆ ಹೆಚ್ಚು ಗಮನ ನೀಡಬೇಕಾಗಿದೆ. ಕೋವಿಡ್ ಸಾಂಕ್ರಾಮಿಕ ಕಾಯಿಲೆಯಿಂದ ಇದು ಮತ್ತಷ್ಟು ಅಗತ್ಯವಾಗಿದೆ. ಈ ದೇಣಿಗೆ ಮೂಲಕ ದೇಶದ ಎರಡು ಮಹತ್ವದ ಸಂಸ್ಥೆಗಳು ಭಾರತ ಮತ್ತು ಜಗತ್ತಿನಾದ್ಯಂತ ಲಕ್ಷಾಂತರ ಮಂದಿಗೆ ಉತ್ತಮ ಚಿಕಿತ್ಸೆ ನೀಡಲು ನೆರವಾಗುತ್ತವೆ ಎನ್ನುವ ಭರವಸೆ ಇದೆ' ಎಂದು ರೋಹಿಣಿ ನಿಲೇಕಣಿ ಅವರು ತಿಳಿಸಿದ್ದಾರೆ.

ಪಾರ್ಕಿನ್ಸನ್ ಕಾಯಿಲೆ: ಏ. 2ಕ್ಕೆ ಅರಿವು ಮೂಡಿಸುವ ಕಾರ್ಯಕ್ರಮ

ಬೆಂಗಳೂರು: ವಿಶ್ವ ಪಾರ್ಕಿನ್ಸನ್ ಕಾಯಿಲೆ ದಿನವಾದ ಏಪ್ರಿಲ್ 2ರಂದು ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ವತಿಯಿಂದ ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ರೋಗಿಗಳು ಮತ್ತು ಅವರ ಪೋಷಕರು ಹಾಗೂ ಆಸಕ್ತರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬಹುದಾಗಿದೆ.

ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ (ಹಾಲ್ ಎ) ಬೆಳಿಗ್ಗೆ 8ರಿಂದ ಮಧ್ಯಾಹ್ನ 4ರವರೆಗೆ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪಾರ್ಕಿನ್ಸನ್ ಕಾಯಿಲೆಗಳ ಬಗ್ಗೆ ಸುಳ್ಳುಗಳು ಮತ್ತು ವಾಸ್ತವ ಅಂಶಗಳು, ಆಹಾರ ಸೇವನೆ ಮುಂತಾದ ವಿಷಯಗಳ ಕುರಿತು ತಜ್ಞರು ರೋಗಿಗಳಿಗೆ ಮಾಹಿತಿ ನೀಡಲಾಗಿದ್ದಾರೆ. ಇದೇ ಸಂದರ್ಭದಲ್ಲಿ ಉಚಿತ ಆರೋಗ್ಯ ತಪಾಸಣೆಯು ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಸಲ್ಮಾನ್ ಖಾನ್ ವಿರುದ್ಧದ ದೂರು ರದ್ದುಗೊಳಿಸಿದ ಹೈಕೋರ್ಟ್

ಮುಂಬೈ: ಬಾಲಿವುಡ್ ನಟ ಸಲ್ಮಾನ್ ಖಾನ್ ವಿರುದ್ಧ ಸ್ಥಳೀಯ ಪತ್ರಕರ್ತ ಅಶೋಕ್ ಪಾಂಡೆ ದಾಖಲಿಸಿದ್ದ ದೂರನ್ನು ಬಾಂಬೆ ಹೈಕೋರ್ಟ್ ಗುರುವಾರ ರದ್ದುಗೊಳಿಸಿದೆ.

ಸಲ್ಮಾನ್ ಅವರು ತನ್ನ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಿ ಅವರು 2019ರ ಏಪ್ರಿಲ್‌ನಲ್ಲಿ ಪ್ರಕರಣ ದಾಖಲಿಸಿದ್ದರು. 'ಸಲ್ಮಾನ್ ಅವರು ಸೈಕ್ಲಿಂಗ್ ಮಾಡುವಾಗ ಕೆಲ ಮಾಧ್ಯಮದವರು ಅವರ ಫೋಟೊಗಳನ್ನು ತೆಗೆಯಲು ಮುಂದಾದರು. ಆಗ ಸಲ್ಮಾನ್ ನನ್ನ ಮೊಬೈಲ್ ಕಿತ್ತುಕೊಂಡು ಬೆದರಿಕೆ ಹಾಕಿದರು' ಎಂದು ದೂರು ನೀಡಿದ್ದರು.

ಬೊಂಬೆ ಹಬ್ಬ: ಪ್ರಬಂಧ ಸ್ಪರ್ಧೆಯಲ್ಲಿ ಗಾಯಿತ್ರಿ ಹೆಗಡೆ ಪ್ರಥಮ

ಬೆಂಗಳೂರು: ಇನ್ಫೊಸಿಸ್ ಪ್ರತಿಷ್ಠಾನ ಮತ್ತು ಭಾರತೀಯ ವಿದ್ಯಾಭವನ 'ಪ್ರಜಾವಾಣಿ' ಸಹಯೋಗದಲ್ಲಿ ಇತ್ತೀಚೆಗೆ 'ಬೊಂಬೆ ಹಬ್ಬ' ಆಯೋಜಿಸಿದ್ದವು. ಇದೇ ಸಂದರ್ಭದಲ್ಲಿ ಬುಕ್ ಬ್ರಹ್ಮ ಏರ್ಪಡಿಸಿದ್ದ ಪ್ರಬಂಧ ಸ್ಪರ್ಧೆಯ ಫಲಿತಾಂಶವು ಪ್ರಕಟವಾಗಿದೆ.

ಬೆಂಗಳೂರಿನ ಎನ್.ಎಂ.ಕೆ. ಆರ್.ವಿ ಮಹಿಳಾ ಕಾಲೇಜಿನ ಗಾಯಿತ್ರಿ ಹೆಗಡೆ ಗಡಿಗೆಹೊಳೆ (ಪ್ರಥಮ ₹5000), ಹಾಸನ ಜಿಲ್ಲೆಯ ಹಳೆಬೀಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪವಿತ್ರಾ ಆರ್.ಎಸ್., (ದ್ವಿತೀಯ ₹3000), ಇದೇ ಕಾಲೇಜಿನ ಚೈತ್ರಶ್ರೀ ಎಂ., (ತೃತೀಯ ₹2000) ಚಂದನ ಎಲ್,

ಗಾಯಿತ್ರಿ ಹೆಗಡೆ ಗಡಿಗೆಹೊಳೆ

ರಶ್ಮಿ ಎಂ.ಎಚ್., ಮಧುರಾ ಕೆ.ವೈ, ಚಿತ್ರಶ್ರೀ ಎಂ. ಇವರು ಸಮಾಧಾನಕರ ಬಹುಮಾನ ಪಡೆದುಕೊಂಡಿದ್ದಾರೆ.

ಸುರಾನ ಕಾಲೇಜಿನ ಕನ್ನಡ ವಿಭಾಗದ ಮಂಜುಳಾ ಗೋನಾಳ ಮತ್ತು ಬಿ.ಎ.ಎನ್. ಎಂ.ಎಸ್ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಎಚ್. ವೀರಭದ್ರಪ್ಪ ತೀರ್ಪುಗಾರರಾಗಿ ಪಾಲ್ಗೊಂಡಿದ್ದರು ಎಂದು ಭಾರತೀಯ ವಿದ್ಯಾಭವನದ ನ. ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತುಪ್ಪ, ಮೊಸರು, ಪನ್ನೀರ್ ಕೊರತೆ

ಹಾಲು ಉತ್ಪಾದನೆಯಲ್ಲಿ ಕುಸಿತ • ಒಂದು ತಿಂಗಳಿನಿಂದ ಇಲ್ಲದ ಪೂರೈಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಾಲು ಉತ್ಪಾದನೆ ಕುಸಿತವು ತುಪ್ಪ, ಮೊಸರು, ಪನ್ನೀರ್ ಸೇರಿದಂತೆ ಇತರ ಹಾಲಿನ ಉತ್ಪನ್ನಗಳಿಗೂ ತಟ್ಟಿದೆ.

ಕಳೆದ ಒಂದು ತಿಂಗಳಿಂದ ನಗರದಲ್ಲಿ ತುಪ್ಪ ಮತ್ತು ಮೊಸರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಹಾಲಿನ ಬೂತ್‌ಗಳಿಗೆ ನಿಯಮಿತವಾಗಿ ಪೂರೈಕೆಯಾಗುತ್ತಿಲ್ಲ.

ಬೇಸಿಗೆ, ಚರ್ಮ ಗಂಟು ರೋಗ, ಪಶು ಆಹಾರ ದರ ಹೆಚ್ಚಳ ಮುಂತಾದ ಕಾರಣಗಳಿಂದ ಹಾಲಿನ ಉತ್ಪಾದನೆಯಲ್ಲಿ ಕುಸಿತವಾಗಿದೆ.

'ಬಮುಲ್ ವ್ಯಾಪ್ತಿಯಲ್ಲಿ ಕಳೆದ ಬೇಸಿಗೆಯಲ್ಲಿ ಪ್ರತಿದಿನ 15 ಲಕ್ಷ ಲೀಟರ್ ಹಾಲು ಉತ್ಪಾದನೆಯಾಗುತ್ತಿತ್ತು.

ಆದರೆ, ಈ ವರ್ಷ 13 ಲಕ್ಷ ಲೀಟರ್ ಉತ್ಪಾದನೆಯಾಗುತ್ತಿದೆ. ಸರ್ಕಾರ ಹಾಲಿಗೆ ಹೆಚ್ಚಿನ ದರ ನೀಡದ ಕಾರಣ ರೈತರು ಹೈನುಗಾರಿಕೆಯಿಂದ ದೂರ ಸರಿಯುತ್ತಿದ್ದಾರೆ. ಹಾಲಿನ ಉತ್ಪಾದನೆ ಕುಸಿತದಿಂದ ತುಪ್ಪದ ಉತ್ಪಾದನೆಯಲ್ಲಿ 10 ಪಟ್ಟು ಕಡಿಮೆಯಾಗಿದೆ' ಎಂದು ಬಮುಲ್ ಅಧ್ಯಕ್ಷ ನರಸಿಂಹಮೂರ್ತಿ ತಿಳಿಸಿದ್ದಾರೆ.

ಹೋಟೆಲ್ ಉದ್ಯಮಕ್ಕೂ ಕೊರತೆಯ ಬಿಸಿ ತಟ್ಟಿದೆ. ಇದರಿಂದಾಗಿ, ಕೆಲವು ಹೋಟೆಲ್‌ಗಳಲ್ಲಿ ಸಿಹಿ ತಿಂಡಿಗಳನ್ನು ತಯಾರಿಸುವುದನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದಾರೆ. ಈ ಪರಿಸ್ಥಿತಿ ದುರುಪಯೋಗಪಡಿಸಿಕೊಂಡು ಕೆಲವು ಅಂಗಡಿಗಳಲ್ಲಿ ₹10ರಿಂದ ₹15ರಷ್ಟು ಹೆಚ್ಚು ದರಕ್ಕೆ ತುಪ್ಪ ಮಾರಾಟ ಮಾಡಲಾಗುತ್ತಿದೆ ಎಂದು ಗ್ರಾಹಕರು ದೂರಿದ್ದಾರೆ.

'ಬೇಸಿಗೆ ಆರಂಭವಾಗಿದ್ದು, ಹಾಲಿನ ಬೇಡಿಕೆ ಶೇ 17ರಷ್ಟು ಹೆಚ್ಚಾಗಿದೆ. ಮೊಸರಿಗೆ ಬೇಡಿಕೆ ಶೇ 37ರಷ್ಟು ಹೆಚ್ಚಾಗಿದೆ. ಹಾಲು ಮತ್ತು ಮೊಸರು ಪೂರೈಕೆಗೆ ಆದ್ಯತೆ ನೀಡಿರುವುದರಿಂದ ತುಪ್ಪ ಮತ್ತು ಇತರ ಉತ್ಪನ್ನಗಳ ತಯಾರಿಕೆಯಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಯವಾಗಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಸಿ. ಸತೀಶ್ ಹೇಳುತ್ತಾರೆ.

'ಕಳೆದ ವರ್ಷಕ್ಕೆ ಹೋಲಿಸಿದರೆ ಹಾಲಿನ ಉತ್ಪಾದನೆಯಲ್ಲಿ ಕೇವಲ ಶೇ 0.8ರಷ್ಟು ಮಾತ್ರ ಕುಸಿತವಾಗಿದೆ. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದು. ದೇಶದಾದ್ಯಂತ ಹಾಲಿನ ಉತ್ಪಾದನೆಯಲ್ಲಿ ಕುಸಿತವಾಗಿದೆ. ಕೆಲವು ರಾಜ್ಯಗಳಲ್ಲಿ ಶೇ 3ರಷ್ಟು ಕುಸಿತವಾಗಿದೆ' ಎಂದು ಹೇಳುತ್ತಾರೆ.

ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತೆರೆ • ಅವ್ಯವಸ್ಥೆಯ ಆಗರ: ಅಸಮಾಧಾನ

'ಬಿಫೋರ್ ನೌ ಆಂಡ್ ದೆನ್' ಅತ್ಯುತ್ತಮ ಚಿತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಗುರುವಾರ ಮುಕ್ತಾಯಗೊಂಡಿದ್ದು, ಇಂಡೋನೇಷ್ಯಾದ 'ಬಿಫೋರ್ ನೌ ಆಂಡ್ ದೆನ್' ಹಾಗೂ ಇರಾನ್‌ನ 'ಮದರ್‌ಲೆಸ್' ಚಿತ್ರಗಳು ಏಷ್ಯನ್ ವಿಭಾಗದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿ ಗಳಿಸಿವೆ.

14ನೇ ಬೆಂಗಳೂರು ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ನಡೆಯಿತು. ಕನ್ನಡ ವಿಭಾಗದಲ್ಲಿ ಅತ್ಯುತ್ತಮ ಚಿತ್ರವಾಗಿ 'ನಾನು ಕುಸುಮ' ಪ್ರಶಸ್ತಿ ಗಳಿಸಿದರೆ, 'ಹದಿನೇಳೆಂಟು' ದ್ವಿತೀಯ ಹಾಗೂ 'ಫೋಟೋ' ತೃತೀಯ ಸ್ಥಾನವನ್ನು ಪಡೆದುಕೊಂಡಿವೆ.

ಏಷ್ಯನ್ ವಿಭಾಗದಲ್ಲಿ ಕನ್ನಡದ 'ವಿರಾಟಪುರ ವಿರಾಗಿ' ಮೂರನೇ ಅತ್ಯುತ್ತಮ ಸಿನಿಮಾ ಪ್ರಶಸ್ತಿ ಪಡೆದುಕೊಂಡಿದ್ದು, ಚಿತ್ರಭಾರತಿ ಭಾರತೀಯ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಕನ್ನಡದ 'ಕೋಳಿ ಎಸರು' ಅತ್ಯುತ್ತಮ ಭಾರತೀಯ ಸಿನಿಮಾ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. ಪೋಷಕ ನಟ ದೊಡ್ಡಣ್ಣ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಯಿತು. ವಾರ್ತಾ ಇಲಾಖೆಯ ಆಯುಕ್ತ ಡಾ.ಪಿ. ಎಸ್.ಹರ್ಷ, ನಿರ್ದೇಶಕರಾದ ಡಿ.ಪಿ. ಮುರಳೀಧರ, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ನರಹರಿ ರಾವ್ ವೇದಿಕೆಯಲ್ಲಿದ್ದು ಪ್ರಶಸ್ತಿ ವಿತರಿಸಿದರು. ಚುನಾವಣಾ ನೀತಿ ಸಂಹಿತೆ ಘೋಷಣೆಯಾದ ಹಿನ್ನೆಲೆಯಲ್ಲಿ ಯಾವ ಜನಪ್ರತಿನಿಧಿಗಳೂ ಭಾಗವಹಿಸಲಿಲ್ಲ.

'ಹೊಸತಾಗಿ ಚಿತ್ರ ನಿರ್ಮಾಣ ಮಾಡುವವರಿಗೆ ಚಿತ್ರೋತ್ಸವ ಒಂದು ಅತ್ಯುತ್ತಮ ವೇದಿಕೆ. ಸತ್ಯಜಿತ್ ರೇ ಅವರಂತಹ ನಿರ್ದೇಶಕರ ಪ್ರತಿಭೆಗೆ ಮೊದಲು ಮನ್ನಣೆ ಸಿಕ್ಕಿದ್ದು ಚಿತ್ರೋತ್ಸವದಿಂದ. 1972ರಲ್ಲಿ ನಾನು ಮೊದಲು ಬೆಂಗಳೂರಿನಲ್ಲಿ ಚಿತ್ರೋತ್ಸವ ಆಯೋಜಿಸಿದ್ದೆ. ಅಲ್ಲಿಂದ ನಂತರ ಬೆಂಗಳೂರಿನಲ್ಲಿ ಸಾಕಷ್ಟು ಚಿತ್ರೋತ್ಸವಗಳು ನಡೆಯುತ್ತಿವೆ. ಸುಚಿತ್ರಾ ಫಿಲಂ ಸೊಸೈಟಿ ಚಿತ್ರರಂಗದ ಸಾಕಷ್ಟು ಕಾರ್ಯಕ್ರಮ ನಡೆಸುತ್ತಿದೆ' ಎಂದು ನರಹರಿ ರಾವ್ ಹೇಳಿದರು.

ಅವ್ಯವಸ್ಥೆಯ ಆಗರ: ಚಿತ್ರೋತ್ಸವದ ಆಯೋಜನೆ ಕುರಿತು ಅಸಮಾಧಾನದ ಮಾತುಗಳು ಕೇಳಿಬಂದಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಸಲ ಜನಸಂದಣಿ ಜಾಸ್ತಿಯಾಗಿದೆ ಎಂದು ಸಮಿತಿ ಹೇಳಿಕೊಂಡಿದೆ. ಆದಾಗ್ಯೂ ಪ್ರಚಾರದ ಕೊರತೆ ಎದ್ದು ಕಾಣುತ್ತಿತ್ತು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಅನೇಕರಿಗೆ ಪಾಸ್ ವಿಳಂಬವಾಗಿದೆ. ಮೊದಲ ದಿನವೂ ಪಾಸ್‌ಗಳು, ಮಾಹಿತಿ ಪುಸ್ತಕಗಳು ಸರಿಯಾಗಿ ಸಿಗಲಿಲ್ಲ. ಇನ್ನೂ ಸ್ಪರ್ಧೆ ವಿಭಾಗದಲ್ಲಿ ಹಣ ಪಾವತಿಸಿ, ಚಿತ್ರ ಆಯ್ಕೆಯಾಗದ ನಿರ್ಮಾಣ ಸಂಸ್ಥೆಗಳಿಗೆ ಮಾಹಿತಿ ಪತ್ರವೂ ತಲುಪಿಲ್ಲ ಎಂಬ ದೂರು ಕೇಳಿಬಂದಿದೆ. ಚಿತ್ರೋತ್ಸವದಲ್ಲಿ ಭಾಗವಹಿಸಿದ ವಿದೇಶಿ ಮತ್ತು ಹೊರ ರಾಜ್ಯಗಳ ನಿರ್ದೇಶಕರ ಸಂಖ್ಯೆಯೂ ಕಡಿಮೆ. ರಿಷಬ್ ಶೆಟ್ಟಿ ಸಂವಾದಕ್ಕೆ ಬಹಳ ನಿರೀಕ್ಷೆಯಿತ್ತಾದರೂ, ಅವರು ಕೂಡ ಸಂವಾದದಲ್ಲಿ ಭಾಗಿಯಾಗಲಿಲ್ಲ.

14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪದಲ್ಲಿ ಗುರುವಾರ ಪೋಷಕ ನಟ ದೊಡ್ಡಣ್ಣ ಅವರಿಗೆ 'ಜೀವಮಾನ ಸಾಧನೆ' ಪ್ರಶಸ್ತಿಯನ್ನು ನೀಡಲಾಯಿತು. ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್, ವಾರ್ತಾ ಇಲಾಖೆಯ ನಿರ್ದೇಶಕ ಡಿ.ಪಿ.ಮುರಳೀಧರ, ಆಯುಕ್ತ ಡಾ.ಪಿ.ಎಸ್. ಹರ್ಷ, ಚಿತ್ರೋತ್ಸವದ ಕಲಾತ್ಮಕ ನಿರ್ದೇಶಕ ನರಹರಿ ರಾವ್ ಇದ್ದರು

ಪ್ರಶಸ್ತಿ ಪಡೆದ ಚಿತ್ರಗಳು

ಸ್ಥಾನ	ಚಿತ್ರ	ಭಾಷೆ	ನಿರ್ದೇಶಕರು
ಕನ್ನಡ ವಿಭಾಗ			
ಅತ್ಯುತ್ತಮ	ನಾನು ಕುಸುಮಾ	ಕನ್ನಡ	ಕೃಷ್ಣೆಗೌಡ
ದ್ವಿತೀಯ	ಹದಿನೇಳೆಂಟು	ಕನ್ನಡ	ಪೃಥ್ವಿ ಕೊಣನೂರು
ತೃತೀಯ	ಫೋಟೊ	ಕನ್ನಡ	ಉತ್ಸವ್ ಗೋನಾವರ್
ಚಿತ್ರಭಾರತಿ – ಭಾರತೀಯ ಚಿತ್ರ ವಿಭಾಗ			
ಅತ್ಯುತ್ತಮ	ಕೋಳಿ ಎಸ್ರು	ಕನ್ನಡ	ಚಂಪಾ ಶೆಟ್ಟಿ
ದ್ವಿತೀಯ	ಸೌದಿ ವೆಳ್ಳಕ ಸಿಸಿ	ಮಲಯಾಳಂ	ತರುಣ್ ಮೂರ್ತಿ
ತೃತೀಯ	ಗಾರ್ಗಿ	ತಮಿಳು	ಗೌತಮ್ ರಾಮಚಂದ್ರನ್
ಏಷ್ಯನ್ ವಿಭಾಗ			
ಅತ್ಯುತ್ತಮ	ಬಿಫೋರ್ ನೌ ಆಂಡ್ ದೆನ್	ಇಂಡೋನೇಷ್ಯಾ	ಕಮಿಲಾ ಅಂದಿನಿ
ಅತ್ಯುತ್ತಮ	ಮದರ್‌ಲೆಸ್	ಇರಾನ್	ಸಯ್ಯದ್ ಮೊರ್ತೆಜಾ ಫತೆಮಿ
ದ್ವಿತೀಯ	ಸ್ಯಾಂಡ್	ಶ್ರೀಲಂಕಾ	ವಿಶಕೆಸ ಚಂದ್ರಶೇಕರಮ್
ತೃತೀಯ	ಎ ಟೇಲ್ ಆಫ್ ಟು ಸಿಸ್ಟರ್	ಬಾಂಗ್ಲಾದೇಶ	ಅಕ್ರಂ ಖಾನ್
ತೃತೀಯ	ವಿರಾಟಪುರ ವಿರಾಗಿ	ಕನ್ನಡ	ಬಿ.ಎಸ್.ಲಿಂಗದೇವರು

'ನಾನು ಕುಸುಮಾ' ಹೆಸರು ಹರಿದಾಡಿತ್ತು!

'ಚಿತ್ರೋತ್ಸವ ಒಂದು ದಿನ ಬಾಕಿ ಇರುವಾಗಲೇ ಮೊದಲ ಬಹುಮಾನವಾಗಿ 'ನಾನು ಮತ್ತು ಕುಸುಮ' ಮತ್ತು ಉಳಿದೆರಡು ಚಿತ್ರಗಳನ್ನು ಲಾಬಿ ಮಾಡಿ ಆಯ್ಕೆ ಮಾಡಿದ್ದಾರೆ. ಇದೇ ನಿಜವಾಗಿದ್ದರೆ ಅರ್ಹ ಚಿತ್ರಗಳು ಮತ್ತು ಪ್ರಾಮಾಣಿಕ ನಿರ್ಮಾಪಕ, ನಿರ್ದೇಶಕರುಗಳ ಪಾಡೇನು?' ಎಂಬ ಸಂದೇಶ ಚಿತ್ರರಂಗದ ಸಾಕಷ್ಟು ವಾಟ್ಸ್ ಆ್ಯಪ್ ಗುಂಪುಗಳಲ್ಲಿ ಹರಿದಾಡಿತ್ತು. 'ನಾನು ಕುಸುಮಾ' ಚಿತ್ರಕ್ಕೆ ಅತ್ಯುತ್ತಮ ಪ್ರಶಸ್ತಿ ನೀಡಿದ್ದನ್ನು ನಿರ್ದೇಶಕ ಪೃಥ್ವಿ ಕೊಣನೂರು ವೇದಿಕೆ ಮುಂದೆಯೇ ವಿರೋಧಿಸಿದರು. 'ಬೆಂಗಳೂರು ಚಿತ್ರೋತ್ಸವದಲ್ಲಿ ತುಂಬ ಹಿಂದಿನಿಂದ ಕೆಟ್ಟ ಕೆಟ್ಟ ಸಿನಿಮಾಗಳಿಗೆ ಅತ್ಯುತ್ತಮ ಚಿತ್ರ ಪ್ರಶಸ್ತಿ ಬರುತ್ತಿದೆ. ಇದನ್ನು ಸರಿಪಡಿಸಿಕೊಳ್ಳದಿದ್ದರೆ ಬೆಲೆ ಕಳೆದುಕೊಳ್ಳುತ್ತದೆ. ಹಿಂದಿನ ಸಲ ಚಿತ್ರೋತ್ಸವದಲ್ಲಿ ನನ್ನ ಸಿನಿಮಾಕ್ಕೆ ಮೊದಲ ಪ್ರಶಸ್ತಿ ಬಂದರೂ ಉಳಿದ ಕೆಲ ಉತ್ತಮ ಚಿತ್ರಗಳು ಆಯ್ಕೆಯಾಗಿರಲಿಲ್ಲ. ಪ್ರತಿಭಾನ್ವಿತರಿಗೆ ಅನ್ಯಾಯ ಆಗುತ್ತಿದೆ. ಪಿ.ಶೇಷಾದ್ರಿ, ಕಾಸರವಳ್ಳಿಯವರಂತಹ ಹಿರಿಯರಿಗೆ ಇದೆಲ್ಲ ಕಾಣುತ್ತಿಲ್ಲವೇ ಎಂದು' ಪೃಥ್ವಿ ಪ್ರಶ್ನಿಸಿದರು.

ಎಫ್‌ಐಆರ್ ದಾಖಲಾಗಲೇ ಇಲ್ಲ!

ಈ ಸಲ ಚಿತ್ರೋತ್ಸವದಲ್ಲಿ ಮಾಧ್ಯಮ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ವಿರುದ್ಧ ಹಲ್ಲೆ ಆರೋಪ ಕೇಳಿಬಂದಿತ್ತು. ಆದರೆ ಹಲ್ಲೆ ಕುರಿತು ಕೊನೆಗೂ ಪೊಲೀಸರು ಎಫ್‌ಐಆರ್ ದಾಖಲಿಸಲಿಲ್ಲ.

ನೂತನ ಸಂಸತ್ ಭವನಕ್ಕೆ ಮೋದಿ ದಿಢೀರ್ ಭೇಟಿ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿ ನಿರ್ಮಾಣವಾಗುತ್ತಿರುವ ನೂತನ ಸಂಸತ್ ಭವನಕ್ಕೆ ಗುರುವಾರ ದಿಢೀರ್ ಭೇಟಿ ನೀಡಿ ಹಲವು ಕಾಮಗಾರಿಗಳನ್ನು ಪರಿಶೀಲಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಕಟ್ಟಡದೊಳಗೆ ಒಂದು ಗಂಟೆಗೂ ಹೆಚ್ಚು ಕಾಲ ಇದ್ದ ಅವರು ನಿರ್ಮಾಣ ಕಾರ್ಯದಲ್ಲಿ ತೊಡಗಿಕೊಂಡಿರುವ ಕಾರ್ಮಿಕರ ಜೊತೆ ಸಮಾಲೋಚನೆಯನ್ನೂ ನಡೆಸಿದ್ದಾರೆ' ಎಂದು ಹೇಳಿವೆ.

'ಮೋದಿ ಅವರ ಜೊತೆ ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರೂ ಇದ್ದರು. ಉಭಯ ನಾಯಕರು ನಿರ್ಮಾಣ ಹಂತದಲ್ಲಿರುವ ಸಂಸತ್ತಿನ ಉಭಯ ಸದನಗಳಲ್ಲಿ ಏನೆಲ್ಲಾ ಸೌಕರ್ಯಗಳನ್ನು ಕಲ್ಪಿಸಲಾಗಿದೆ ಎಂಬುದರ ಕುರಿತು ಮಾಹಿತಿ ಪಡೆದರು. ಅಲ್ಲಿ ಅಳವಡಿಸಲಾಗಿರುವ ಪೀಠೋಪಕರಣಗಳು ಹಾಗೂ ಇತರೆ ಉಪಕರಣಗಳ ಗುಣಮಟ್ಟವನ್ನೂ ಪರಿಶೀಲಿಸಿದರು' ಎಂದೂ ಮಾಹಿತಿ ನೀಡಿವೆ.

ನೂತನ ಸಂಸತ್ ಭವನದ ನಿರ್ಮಾಣ ಕಾರ್ಯವು ಕಳೆದ ವರ್ಷದ ನವೆಂಬರ್‌ನಲ್ಲೇ ಪೂರ್ಣಗೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ ಅದು ಸಾಧ್ಯವಾಗಿರಲಿಲ್ಲ. ಈಗ ಇದು ಅಂತಿಮ ಹಂತದಲ್ಲಿದ್ದು ಶೀಘ್ರವೇ ಲೋಕಾರ್ಪಣೆಗೊಳ್ಳಲಿದೆ ಎಂದು ಹೇಳಲಾಗಿದೆ.

ಟಾಟಾ ಪ್ರಾಜೆಕ್ಟ್ಸ್ ಲಿಮಿಟೆಡ್ ಕಂಪನಿಯು ಕಟ್ಟಡದ ನಿರ್ಮಾಣದ ಜವಾಬ್ದಾರಿ ಹೊತ್ತಿದೆ. ₹971 ಕೋಟಿ ವೆಚ್ಚದಲ್ಲಿ ಭವನ ನಿರ್ಮಿಸಲು 2020ರಲ್ಲಿ ಯೋಜಿಸಲಾಗಿತ್ತು. ಆದರೆ ಇದರ ವೆಚ್ಚ ಮತ್ತಷ್ಟು ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನಕ್ಕೆ ಗುರುವಾರ ಭೇಟಿ ನೀಡಿ ಅಲ್ಲಿ ಅಳವಡಿಸಲಾಗಿರುವ ಪೀಠೋಪಕರಣಗಳನ್ನು ಪರಿಶೀಲಿಸಿದರು – ಪಿಟಿಐ ಚಿತ್ರ

ಕನ್ನಡ ಭಾಷಾ ವಿಷಯ ಹೊರತುಪಡಿಸಿ ಪರೀಕ್ಷೆಗೆ ಅನುಮತಿ

ಬೆಂಗಳೂರು: ನಗರದ ಖಾಸಗಿ ಶಾಲೆಯ ವಿದ್ಯಾರ್ಥಿಯೊಬ್ಬರು ಕನ್ನಡ ಭಾಷಾ ವಿಷಯ ಹೊರತುಪಡಿಸಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲು ಹೈಕೋರ್ಟ್ ಅನುಮತಿ ನೀಡಿದೆ.

ಕನ್ನಡ ಭಾಷಾ ವಿಷಯವನ್ನು ಹೊರತುಪಡಿಸಿ ಹಿಂದಿ, ಸಂಸ್ಕೃತ ಮತ್ತು ಇಂಗ್ಲಿಷ್ ಭಾಷಾ ವಿಷಯಗಳಲ್ಲಿ ಎಸ್‌ಎಸ್‌ಎಲ್ ಪರೀಕ್ಷೆ ಬರೆಯಲು ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ನಿರ್ದೇಶಕರು ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಎತ್ತಿ ಹಿಡಿದಿದೆ. ವಿದ್ಯಾರ್ಥಿಗೆ ಶುಕ್ರವಾರದಿಂದ (ಮಾ.31ರಿಂದ) ನಡೆಯುವ ಪರೀಕ್ಷೆಗೆ ಪ್ರವೇಶಪತ್ರ ಒದಗಿಸುವಂತೆ ನಿರ್ದೇಶಿಸಿದೆ.

ವಿಚಾರಣೆ ವೇಳೆ ಮಂಡಳಿ ಪರ ವಕೀಲರು, 'ರಾಜ್ಯ ಸರ್ಕಾರವು ಕನ್ನಡ ಭಾಷೆ ಕಲಿಕೆಯ ನಿಯಮಗಳು–2017 ಅನ್ನು ಪರಿಚಯಿಸಿದ್ದು, ಎಲ್ಲಾ ಶಾಲೆಗಳಲ್ಲಿ ಸಿಬಿಎಸ್‌ಸಿ ಮತ್ತು ಐಸಿಎಸ್‌ಸಿ ಪಠ್ಯಕ್ರಮಗಳಲ್ಲಿ ಕನ್ನಡವನ್ನೂ ಒಂದು ವಿಷಯವಾಗಿ ಕಡ್ಡಾಯವಾಗಿ ಕಲಿಸಬೇಕು ಎಂಬ ಆದೇಶವಿದೆ' ಎಂದು ನ್ಯಾಯಪೀಠಕ್ಕೆ ವಿವರಿಸಿದ್ದರು. ಆದರೆ, ಈ ವಾದಾಂಶವನ್ನು ತಿರಸ್ಕರಿಸಿರುವ ನ್ಯಾಯಪೀಠ, 'ವಿದ್ಯಾರ್ಥಿಯು ಒಂದನೇ ತರಗತಿಯಿಂದ ಈವರೆಗೂ ಕನ್ನಡ ಭಾಷಾ ವಿಷಯವನ್ನು ಅಧ್ಯಯನ ಮಾಡಿಲ್ಲ. ಹಾಗಾಗಿ, ಕನ್ನಡ ಭಾಷಾ ವಿಷಯದಲ್ಲಿ ಪರೀಕ್ಷೆ ಬರೆಯಬೇಕು ಎಂದು ನಿರೀಕ್ಷಿಸುವುದು ಸರಿಯಲ್ಲ' ಎಂದು ಹೇಳಿದೆ.

ಕೋರಿಕೆಯೇನು?

'ನನ್ನ ಮಗನ ಪ್ರಾಥಮಿಕ ಶಿಕ್ಷಣ ಕರ್ನಾಟಕದ ಹೊರ ಭಾಗಗಳಲ್ಲಿ ನಡೆದಿದೆ. ಹೀಗಾಗಿ, ಅವನಿಗೆ ಕನ್ನಡ ಭಾಷಾ ಜ್ಞಾನವಿಲ್ಲ. ಆದ್ದರಿಂದ, ಕನ್ನಡ ಹೊರತುಪಡಿಸಿ ಇತರೆ ಭಾಷಾ ವಿಷಯಗಳಲ್ಲಿ (ಹಿಂದಿ, ಸಂಸ್ಕೃತ ಮತ್ತು ಇಂಗ್ಲೀಷ್) ಪರೀಕ್ಷೆಗೆ ಹಾಜರಾಗಲು ಅನುಮತಿ ನೀಡಬೇಕು' ಎಂದು ರವಿಶಂಕರ್ ಎಂಬುವರು ಶಿಕ್ಷಣ ಇಲಾಖೆಗೆ ನಿರ್ದೇಶಿಸುವಂತೆ ಕೋರಿದ್ದರು.

'ಮಗ ಅಧ್ಯಯನ ಮಾಡಿರುವ ವಿದ್ಯಾಭಾರತಿ ಇಂಗ್ಲಿಷ್ ಸ್ಕೂಲ್, ಪ್ರಾರಂಭದಲ್ಲಿ ಕನ್ನಡ ಹೊರತು ಪಡಿಸಿ ಇತರೆ ಭಾಷಾ ವಿಷಯಗಳನ್ನು ಬೋಧನೆ ಮಾಡಿದೆ. ಈಗ ಕನ್ನಡ ಪರೀಕ್ಷೆ ಬರೆಯಲೇ ಬೇಕು ಎಂದು ತಿಳಿಸಿದೆ. ಆದರೆ, ಮಗನಿಗೆ ಕನ್ನಡ ಭಾಷಾ ಜ್ಞಾನ ಇಲ್ಲ. ಆದ್ದರಿಂದ, ಕನ್ನಡ ಹೊರತು ಪಡಿಸಿ ಬೇರೆ ಭಾಷೆಗಳಲ್ಲಿ ಪರೀಕ್ಷೆ ಬರೆಯಲು ಅವಕಾಶ ಕಲ್ಪಿಸಬೇಕು' ಎಂದು ಮನವಿ ಮಾಡಿದ್ದರು. ಈ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿತ್ತು.

ಡಿಜಿಟಲ್ ಶಿಕ್ಷಣಕ್ಕೆ ಸೆಲ್ಕೊ ಸಂಸ್ಥೆ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಪ್ರದೇಶದ ಶಿಕ್ಷಣದಲ್ಲಿ ಡಿಜಿಟಲ್ ತಂತ್ರಜ್ಞಾನದ ಬಳಕೆ ಹೆಚ್ಚಿಸಲು ಸೌರಚಾಲಿತ ಶೈಕ್ಷಣಿಕ ಕಾರ್ಯಕ್ರಮ (ಡಿಇಪಿ) ಅತ್ಯುತ್ತಮ ಪರ್ಯಾಯ ಸಾಧನವಾಗಿದೆ ಎಂದು ನೆಕ್ಸ್ಟ್ ಎಜುಕೇಷನ್ ಉಪಾಧ್ಯಕ್ಷ ಮನಮೋಹನ್ ಲಾಲ್ವಾನಿ ಹೇಳಿದರು.

ನಗರದ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್‌ನಲ್ಲಿ ಗುರುವಾರ ಸೆಲ್ಕೊ ಸಂಸ್ಥೆಯ 29ನೇ ಸಂಸ್ಥಾಪನಾ ದಿನದ ಸಮಾರಂಭದಲ್ಲಿ ಅವರು ಮಾತನಾಡಿದರು.

ಸರ್ಕಾರಿ ಶಾಲೆಗಳಲ್ಲಿರುವ ಡಿಜಿಟಲ್ ಸೌಲಭ್ಯಗಳು ಮಕ್ಕಳ ಕೈಗೆಟಕುತ್ತಿಲ್ಲ. ಸಂಸ್ಥೆ ರಾಜ್ಯದ ನಾಲ್ಕು ಸರ್ಕಾರಿ ಶಾಲೆಗಳಿಗೆ ಡಿಜಿಟಲ್ ಶೈಕ್ಷಣಿಕ ವ್ಯವಸ್ಥೆಯ ಮೂಲ ಸೌಕರ್ಯವನ್ನು ಉಚಿತವಾಗಿ ಒದಗಿಸಲಿದೆ ಎಂದರು.

ಬೈಲಕುಪ್ಪೆಯ ತ್ಸೊ-ಇ-ಖಾಂಗಸರ್ ಚಾರಿಟಿ ಆಸ್ಪತ್ರೆಯ ಕಾಯನಿರ್ವಾಹಕ ಕಾರ್ಯದರ್ಶಿ ಸೋನಮ್ ಯೌಗ್ಯಾಲ್ ಮಾತನಾಡಿ, ಎಲ್ಲ ವ್ಯವಸ್ಥೆಗಳೂ ಭವಿಷ್ಯದಲ್ಲಿ ಸೌರಮಯವಾಗಲಿವೆ. ಅನಿಯಮಿತ ವಿದ್ಯುತ್ ವ್ಯತ್ಯಯದಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಸಮಸ್ಯೆಗಳಾಗುತ್ತಿವೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳು ಅತ್ಯಂತ ತ್ವರಿತವಾಗಿ ಸೌರೀಕರಣಗೊಳ್ಳಬೇಕಿದೆ ಎಂದರು.

ಸಾಧಕ ಮಹಿಳೆಯರಾದ ಕಲಬುರಗಿಯ ಭುವನೇಶ್ವರಿ, ಬೆಳಗಾವಿಯ ರೇಣುಕಾತಾಯಿ ಪರಪ್ಪಗೋಳ್, ಸೆಲ್ಕೊ ನೌಕರ ಎನ್. ಲೋಕೇಶ್ ಅವರನ್ನು ಸನ್ಮಾನಿಸಲಾಯಿತು.

ಸೆಲ್ಕೊ ಸಂಸ್ಥಾಪಕ ಹರೀಶ್ ಹಂದೆ, ಸಿಇಒ ಮೋಹನ ಭಾಸ್ಕರ ಹೆಗಡೆ, ಹಣಕಾಸು ಅಧಿಕಾರಿ ವಿ.ಕೆ. ಜೋಬಿ, ನಿರ್ದೇಶಕ ಹುದಾ ಜಾಫರ್, ವ್ಯವಸ್ಥಾಪಕ ಜಗದೀಶ್ ಪೈ ಉಪಸ್ಥಿತರಿದ್ದರು.

ನಗರದಲ್ಲಿ ಇತ್ತೀಚೆಗೆ ಕೆಪಿಟಿಸಿಎಲ್ ಇಂಧನ ಭವನವನ್ನು ಇಂಧನ ಸಚಿವ ವಿ. ಸುನಿಲ್ ಕುಮಾರ್ ಉದ್ಘಾಟಿಸಿದರು. ವ್ಯವಸ್ಥಾಪಕ ನಿರ್ದೇಶಕಿ ಎನ್. ಮಂಜುಳಾ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕಪಿಲ್ ಮೋಹನ್ ಇದ್ದಾರೆ. ಪ್ರಜಾವಾಣಿ ಚಿತ್ರ

ಶುಕ್ರವಾರ, ಮಾರ್ಚ್ 31, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 89 | ಪುಟ 16

● www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಬುದ್ಧಿವಂತನಾಗಿ 'ರಾಮಾಚಾರಿ 2.0' ಮತ್ತೆ ಅವತರಿಸಿದ್ದಾನೆ

ಇಂದೋರ್: ಬಾವಿ ಚಾವಣಿ ಕುಸಿದು 14 ಸಾವು 6
ತುರ್ತು ಸುದ್ದಿಗೋಷ್ಠಿ ನಡೆಸಿದ ಬಿಎಸ್‌ವೈ
ಆಳ-ಅಗಲ ಔಷಧ ದರ ಜನರಿಗೆ ಪ್ರಹಾರ
ಖಾರದಪುಡಿ ಮಹೇಶ್ ಪ್ರಕರಣ: ₹ 54.18 ಕೋಟಿ ಆಸ್ತಿ ಜಪ್ತಿ 5
'ಶಾ ವಿಶ್ವಾಸ ಹುಸಿಗೊಳಿಸಲಾರೆ' 4

ಇಬ್ಬರು ಶಾಸಕರಿಗೆ ಕೋರ್ಟ್ ಪ್ರಹಾರ

ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವ ಹೊತ್ತಿನಲ್ಲೇ ಜೆಡಿಎಸ್‌ನ ಇಬ್ಬರು ಶಾಸಕರು ನ್ಯಾಯಾಲಯದ ಪ್ರಹಾರಕ್ಕೆ ಗುರಿಯಾಗಿದ್ದಾರೆ. ಚುನಾವಣೆ ಅಕ್ರಮ ಸಾಬೀತಾಗಿದ್ದರಿಂದ ತುಮಕೂರು ಗ್ರಾಮಾಂತರ ಕ್ಷೇತ್ರದ ಶಾಸಕ ಡಿ.ಸಿ. ಗೌರಿಶಂಕರ್ ಅವರ ಆಯ್ಕೆಯೇ ಅನೂರ್ಜಿತವಾಗಿದೆ. ಬಹುಕೋಟಿ ಮೌಲ್ಯದ ಸರ್ಕಾರಿ ಜಮೀನನ್ನು ಅಕ್ರಮವಾಗಿ ಮಂಜೂರು ಮಾಡಿದ ಆರೋಪದ ಮೇಲೆ ಬೇಲೂರು ಕ್ಷೇತ್ರದ ಶಾಸಕ ಕೆ.ಎಸ್. ಲಿಂಗೇಶ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಶಾಸಕ ಗೌರಿಶಂಕರ್ ಆಯ್ಕೆ ಅಸಿಂಧು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮತದಾರರಿಗೆ ಮತಯಾಚನೆ ಪತ್ರದ ಜೊತೆ ಗುಂಪು ಆರೋಗ್ಯ ವಿಮಾ ಪಾಲಿಸಿಯ ಆಮಿಷವೊಡ್ಡಿ ಅವರಿಂದ ಮತಗಳನ್ನು ಪಡೆದು ಆರಿಸಿ ಬಂದಿದ್ದಾರೆ' ಎಂಬ ಚುನಾವಣಾ ಅಕ್ರಮ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ತುಮಕೂರು ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿದೆ.

ಈ ಕುರಿತಂತೆ ಕಾಯ್ದಿರಿಸಿದ್ದ ಮಹತ್ವದ ತೀರ್ಪನ್ನು ನ್ಯಾಯಮೂರ್ತಿ ಎಸ್. ಸುನೀಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಕಲಬುರ್ಗಿ ಪೀಠದಿಂದ ವಿಡಿಯೊ ಕಾನ್ಫರೆನ್ಸ್ ಮೂಲಕ ಪ್ರಕಟಿಸಿದ್ದು, ಪರಾಜಿತ ಭಾರತೀಯ ಜನತಾ ಪಕ್ಷದ ಅಭ್ಯರ್ಥಿ ಬಿ.ಸುರೇಶ್ ಗೌಡ ಸಲ್ಲಿಸಿದ್ದ ಚುನಾವಣಾ

ಗೌರಿಶಂಕರ್

ತಕರಾರು ಅರ್ಜಿಯನ್ನು ಭಾಗಶಃ ಪುರಸ್ಕರಿಸಿದೆ.

'ಗೌರಿಶಂಕರ್ ವಿರುದ್ಧದ ಚುನಾವಣಾ ಅಕ್ರಮಗಳು ಪ್ರಜಾ ಪ್ರತಿನಿಧಿ ಕಾಯ್ದೆ-1951ರ ಕಲಂ 100 (1)(ಬಿ) ಅನುಸಾರ ಸಾಬೀತಾಗಿರುವ ಕಾರಣ ಆಯ್ಕೆಯನ್ನು ಅನೂರ್ಜಿತಗೊಳಿಸಲಾಗಿದೆ. ಕಲಂ 99 (1)ಎ (ii)ರ ಪ್ರಕಾರ ಗೌರಿಶಂಕರ್ ಏಜೆಂಟರುಗಳಾಗಿದ್ದ ಹಾಗೂ ಪ್ರಕರಣದ ಪ್ರತಿವಾದಿಗಳೂ ಆದ ಜಿ. ಫಾಲನೇತ್ರ, ಅರೇಹಳ್ಳಿ ಮಂಜುನಾಥ, ಕೃಷ್ಣೇಗೌಡ, ರೇಣುಕಮ್ಮ ಮತ್ತು ಸುನಂದಮ್ಮ ಅವರೂ ಅಕ್ರಮಗಳಲ್ಲಿ ಭಾಗಿಯಾಗಿದ್ದಾರೆ' ಎಂದು ತೀರ್ಪಿನಲ್ಲಿ ವಿವರಿಸಲಾಗಿದೆ. ಅಂತೆಯೇ, 'ಚುನಾಯಿತ ಅಭ್ಯರ್ಥಿಯಾಗಿ ನನ್ನನ್ನೇ ಘೋಷಣೆ ಮಾಡಬೇಕು ಎಂಬ ಅರ್ಜಿದಾರ ಸುರೇಶ್ ಗೌಡರ ಮನವಿಗೆ ಸೂಕ್ತ ಆಧಾರ ಮತ್ತು ಸಕಾರಣಗಳು ಇಲ್ಲ' ಎಂದು ನ್ಯಾಯಪೀಠ ತಿಳಿಸಿದೆ.

ತೀರ್ಪು ಹೊರಬೀಳುತ್ತಲೇ, ಗೌರಿಶಂಕರ್ ಪರ ವಕೀಲ ಆರ್. ಹೇಮಂತ ರಾಜ್, 'ವಿಧಾನಸಭೆಗೆ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ತೀರ್ಪಿಗೆ ತಡೆ ನೀಡಬೇಕು' ಎಂದು ಕೋರಿ ಮಧ್ಯಂತರ ಅರ್ಜಿ ಸಲ್ಲಿಸಿದರು. ಈ ಅರ್ಜಿಯನ್ನು ಮಾನ್ಯ ಮಾಡಿದ ನ್ಯಾಯಪೀಠ, 30 ದಿನಗಳ ಕಾಲ ತನ್ನ ಆದೇಶವನ್ನು ಅಮಾನತಿನಲ್ಲಿ ಇರಿಸಿದ್ದು, 'ಈ ಆದೇಶವು ಗೌರಿಶಂಕರ್ ಮುಂದಿನ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಅಡ್ಡಿ ಉಂಟು ಮಾಡುವುದಿಲ್ಲ' ಎಂದೂ ಸ್ಪಷ್ಟಪಡಿಸಿದೆ.

4ನೇ ಪುಟ ನೋಡಿ
ಇನ್ನೊಂದು ಸುದ್ದಿ 3B

ಬೇಲೂರು ಶಾಸಕ ಲಿಂಗೇಶ್ ವಿರುದ್ಧ ಎಫ್‌ಐಆರ್ ದಾಖಲಿಸಲು ಆದೇಶ

ಬೆಂಗಳೂರು: ಸುಮಾರು ₹775 ಕೋಟಿಗೂ ಹೆಚ್ಚಿನ ಮೌಲ್ಯದ 2,750 ಎಕರೆ ಸರ್ಕಾರಿ ಜಮೀನನ್ನು ಅನರ್ಹರಿಗೆ ಮಂಜೂರು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಹಾಸನ ಜಿಲ್ಲೆ ಬೇಲೂರು ವಿಧಾನಸಭಾ ಕ್ಷೇತ್ರದ ಜೆಡಿಎಸ್ ಶಾಸಕ ಕೆ.ಎಸ್. ಲಿಂಗೇಶ್ ವಿರುದ್ಧ ಎಫ್‌ಐಆರ್ ದಾಖಲಿಸುವಂತೆ ನಗರದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ, 'ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ' ನಡೆಸುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶೆ ಜೆ.ಪ್ರೀತ್ ಗುರುವಾರ ಆದೇಶಿಸಿದ್ದು, 'ಅಪರಾಧ ಪ್ರಕ್ರಿಯಾ ಸಂಹಿತೆ ಕಲಂ 156 (3)ರ ಅನುಸಾರ ತನಿಖೆ ನಡೆಸಿ 2023ರ ಜುಲೈ 7ಕ್ಕೆ ವರದಿ ಸಲ್ಲಿಸಿ' ಎಂದು ಬೇಲೂರು ಪೊಲೀಸ್ ಠಾಣಾಧಿಕಾರಿಗೆ ನಿರ್ದೇಶಿಸಿದ್ದಾರೆ.

ಪ್ರಕರಣವೇನು?: ಬೇಲೂರು ತಾಲ್ಲೂಕಿನ ಅಂದಾಜು ಮಾರುಕಟ್ಟೆ ದರ ₹775 ಕೋಟಿಗೂ ಹೆಚ್ಚಿನ ಮೌಲ್ಯದ 2,750 ಎಕರೆ 86 ಗುಂಟೆಯಷ್ಟು ಸರ್ಕಾರಿ ಜಮೀನನ್ನು ಬಲಾಢ್ಯ, ಅನರ್ಹ, ಅಪ್ರಾಪ್ತ ಮತ್ತು ಬೆಂಗಳೂರಿನ ವ್ಯಕ್ತಿಗಳಿಗೆ ನಕಲಿ ದಾಖಲೆ ಸೃಷ್ಟಿಸಿ ಮಂಜೂರು ಮಾಡಲಾಗಿದೆ. ಶಾಸಕ ಕೆ.ಎಸ್.ಲಿಂಗೇಶ್ ಸೇರಿದಂತೆ ಒಟ್ಟು 15 ಜನರು ಈ ಕೃತ್ಯದಲ್ಲಿ ಭಾಗಿಯಾಗಿದ್ದು ಇವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಆರೋಪಿಸಿ ಕೋಲಾರ ಗಾಂಧಿನಗರದ ನಿವಾಸಿ ಕೆ.ಸಿ.ರಾಜಣ್ಣ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು.

4ನೇ ಪುಟ ನೋಡಿ

ಸೌಹಾರ್ದದ ಪಾನಕ

ರಾಮನವಮಿ ಆಚರಣೆ ಪ್ರಯುಕ್ತ ಕಲಬುರಗಿಯಲ್ಲಿ ಗುರುವಾರ ಹಿಂದೂ ರಕ್ಷಕ್ ಶಿವಾಜಿ ಬ್ರಿಗೇಡ್ ಸಂಘಟನೆ ವತಿಯಿಂದ ಆಯೋಜಿಸಲಾಗಿದ್ದ ಮೆರವಣಿಗೆಯಲ್ಲಿ ಪಾಲ್ಗೊಂಡ ಜನರಿಗೆ ಮುಸ್ಲಿಂ ಸಮುದಾಯದವರು ಕೇಸರಿ, ಬಿಳಿ, ಹಸಿರು ಬಣ್ಣವುಳ್ಳ ಪಾನಕ ವಿತರಿಸಿದರು
ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ವ್ಯಾಪಕ ವಿರೋಧ: ಒತ್ತಡಕ್ಕೆ ಮಣಿದ ಎಫ್‌ಎಸ್‌ಎಸ್‌ಎಐ

ಮೊಸರು ಪ್ಯಾಕೆಟ್ ಮೇಲೆ 'ದಹಿ': ಆದೇಶ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೊಸರು ಪ್ಯಾಕೆಟ್ ಮೇಲೆ ಹಿಂದಿ ಪದ 'ದಹಿ' ಎಂದು ನಮೂದಿಸುವಂತೆ ಹೊರಡಿಸಿದ್ದ ನಿರ್ದೇಶನಕ್ಕೆ ವ್ಯಾಪಕ ವಿರೋಧ ವ್ಯಕ್ತವಾಗಿದ್ದರಿಂದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರವು (ಎಫ್‌ಎಸ್‌ಎಸ್‌ಎಐ) ತನ್ನ ಆದೇಶವನ್ನು ಗುರುವಾರ ವಾಪಸ್ ಪಡೆದಿದೆ.

ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಎಫ್‌ಎಸ್‌ಎಸ್‌ಐ ನಿರ್ದೇಶನಕ್ಕೆ ವಿರೋಧ ವ್ಯಕ್ತವಾಗಿತ್ತು. ಜೆಡಿಎಸ್ ಮತ್ತು ಕಾಂಗ್ರೆಸ್ ಹಾಗೂ ಹಲವು ಕನ್ನಡ ಸಂಘಟನೆಗಳು ಆದೇಶ ವಾಪಸ್ ಪಡೆಯುವಂತೆ ಒತ್ತಾಯಿಸಿದ್ದವು.

5ನೇ ಪುಟ ನೋಡಿ

'ನಂದಿನಿ'ಗೆ ಕುಣಿಕೆ ಬಿಗಿಯುವ ದುಷ್ಕೃತ್ಯ ಸಹಿಸುವುದಿಲ್ಲ: ಕುಮಾರಸ್ವಾಮಿ

'ನಂದಿನಿ'ಗೆ ಕುಣಿಕೆ ಬಿಗಿಯುವ ಯಾವುದೇ ದುಷ್ಕೃತ್ಯ ಸಹಿಸುವ ಪ್ರಶ್ನೆಯೇ ಇಲ್ಲ. ನಂದಿನಿ ಕನ್ನಡಿಗರ ಆಸ್ತಿ, ಕನ್ನಡಿಗರ ಅಸ್ಮಿತೆ ಮತ್ತು ಜೀವನಾಡಿ. ಈ ವಿಷಯ ಗೊತ್ತಿದ್ದರೂ ಹಿಂದಿ ಹೇರಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

5ನೇ ಪುಟ ನೋಡಿ

'ನಂದಿನಿ' ಬಲಿ ಕೊಡುವ ಪ್ರಯತ್ನವೇ: ಕಾಂಗ್ರೆಸ್

'ಕೆಎಂಎಫ್ ಮೇಲೆ ಅಮಿತ್ ಶಾ ಕಣ್ಣು ಬಿದ್ದಿದ್ದೇ ತಡ, ನೇಮಕಾತಿಯ ಹೊಣೆಯನ್ನು ಗುಜರಾತ್ ಮೂಲದ ಏಜೆನ್ಸಿಗೆ ವಹಿಸಲಾಯ್ತು. ಕೆಎಂಎಫ್ ನೇಮಕಾತಿಗಳಲ್ಲಿ ಅಕ್ರಮ ನಡೆಯಿತು. ಮೊಸರಿನ ಪ್ಯಾಕ್ ಮೇಲೆ ಹಿಂದಿಯ 'ದಹಿ' ಬರೆಯುವುದು ಕಡ್ಡಾಯವಾಯಿತು. ಇದೆಲ್ಲವೂ ಕರ್ನಾಟಕದ 'ನಂದಿನಿ'ಯನ್ನು ಬಲಿ ಕೊಡಲು ಬಲಿಪೀಠದ ತಯಾರಿಯೇ' ಎಂದು ಕಾಂಗ್ರೆಸ್ ಪ್ರಶ್ನಿಸಿದೆ.

ಹೊಸ ಆರ್ಥಿಕ ವರ್ಷಕ್ಕೆ ಹೊಸ ನಿಯಮಗಳು

ಏಪ್ರಿಲ್ 1ರಿಂದ ಹೊಸ ಆರ್ಥಿಕ ವರ್ಷ ಶುರುವಾಗಲಿದೆ. ಹೊಸ ವರ್ಷದ ಜೊತೆಯಲ್ಲೇ ವೈಯಕ್ತಿಕ ಹಣಕಾಸಿಗೆ ಸಂಬಂಧಿಸಿದ ಹಲವು ಬದಲಾವಣೆಗಳು ಜಾರಿಗೆ ಬರಲಿವೆ. ನಿತ್ಯ ಜೀವನದಲ್ಲಿ ಪರಿಣಾಮ ಬೀರುವ ಕೆಲವು ಮಹತ್ವದ ಬದಲಾವಣೆಗಳ ಮೇಲೊಂದು ಪಕ್ಷಿನೋಟ ಇಲ್ಲಿದೆ.

ಹಿರಿಯ ನಾಗರಿಕರಿಗೆ...
ಹಿರಿಯ ನಾಗರಿಕರ ಉಳಿತಾಯ ಯೋಜನೆಯ (ಎಸ್‌ಸಿಎಸ್‌ಎಸ್) ಠೇವಣಿ ಮಿತಿಯು ₹ 15 ಲಕ್ಷದಿಂದ ₹ 30 ಲಕ್ಷಕ್ಕೆ ಹೆಚ್ಚಳ ಆಗುತ್ತದೆ.

ಮಾಸಿಕ ಆದಾಯ ಯೋಜನೆ
ಹೂಡಿಕೆದಾರರಿಗೆ ಪ್ರತಿ ತಿಂಗಳೂ ಬಡ್ಡಿ ವರಮಾನವನ್ನು ಕೊಡುವ, ಅಂಚೆ ಕಚೇರಿ ಮಾಸಿಕ ಆದಾಯ ಯೋಜನೆಯ (ಎಂಐಎಸ್) ಠೇವಣಿ ಮಿತಿಯು ₹ 4.5 ಲಕ್ಷದಿಂದ ₹ 9 ಲಕ್ಷಕ್ಕೆ ಏರಿಕೆ ಆಗಲಿದೆ. ಜಂಟಿ ಖಾತೆ ಹೊಂದಿರುವವರಿಗೆ ಠೇವಣಿ ಮಿತಿಯು ₹ 9 ಲಕ್ಷದಿಂದ ₹ 15 ಲಕ್ಷ ಏರಿಕೆ ಆಗುತ್ತದೆ.

ಹೊಸ ತೆರಿಗೆ ಪದ್ಧತಿ
ಆದಾಯ ತೆರಿಗೆದಾರರಿಗೆ ಸದ್ಯ ಹಳೆಯ ತೆರಿಗೆ ವ್ಯವಸ್ಥೆ ಮತ್ತು ಹೊಸ ತೆರಿಗೆ ವ್ಯವಸ್ಥೆಯಲ್ಲಿ ಯಾವುದು ಬೇಕೋ ಅದನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಇದೆ. ಆದರೆ, ಏಪ್ರಿಲ್ 1ರಿಂದ ಹೊಸ ತೆರಿಗೆ ವ್ಯವಸ್ಥೆಯು ಪೂರ್ವ ನಿಗದಿ (ಡಿಫಾಲ್ಟ್) ಆಗಿರುತ್ತದೆ. ಆದರೆ, ಹಳೆಯ ತೆರಿಗೆ ವ್ಯವಸ್ಥೆಯೇ ಬೇಕಿದ್ದರೆ ಉದ್ಯೋಗಿಗಳು ಅದನ್ನು ಆಯ್ಕೆ ಮಾಡಿಕೊಳ್ಳಬೇಕಾಗುತ್ತದೆ. ಹೊಸ ತೆರಿಗೆ ವ್ಯವಸ್ಥೆಯಲ್ಲಿ ₹ 7 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ಸಿಗುತ್ತದೆ.

ವಿಮೆಗೆ ತೆರಿಗೆ
ಜೀವ ವಿಮಾ ಯೋಜನೆಯ ವಾರ್ಷಿಕ ಪ್ರೀಮಿಯಂ ಮೊತ್ತವು ₹ 5 ಲಕ್ಷಕ್ಕಿಂತ ಹೆಚ್ಚಿಗೆ ಇದ್ದಲ್ಲಿ, ಅದರಿಂದ ಬರುವ ಲಾಭಕ್ಕೆ ತೆರಿಗೆ ಕಟ್ಟಬೇಕಾಗುತ್ತದೆ. ಏಪ್ರಿಲ್ 1ರ ನಂತರ ಪಡೆಯುವ ಜೀವ ವಿಮೆಗಳಿಗೆ ಇದು ಅನ್ವಯವಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ. ಯುಲಿಪ್ ಅನ್ನು ಈ ತೆರಿಗೆಯಿಂದ ಹೊರಗಿಡಲಾಗಿದೆ.

ಡೆಟ್ ಮ್ಯೂಚುವಲ್ ಫಂಡ್
ಡೆಟ್ ಮ್ಯೂಚುವಲ್ ಫಂಡ್‌ಗಳಲ್ಲಿ ಮಾಡುವ ಹೂಡಿಕೆಯಿಂದ ಬರುವ ಲಾಭಕ್ಕೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ಕಟ್ಟಬೇಕಾಗುತ್ತದೆ. ಮೂರು ವರ್ಷಕ್ಕಿಂತ ಹೆಚ್ಚಿನ ಅವಧಿಯ ಹೂಡಿಕೆಗೆ ಕೂಡ ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಅನ್ವಯ ಆಗುವುದಿಲ್ಲ. ಜೊತೆಗೆ, ತೆರಿಗೆ ಲೆಕ್ಕ ಹಾಕುವಾಗ ಇಂಡೆಕ್ಸೇಷನ್ (ಹಣದುಬ್ಬರದ ಪ್ರಮಾಣವನ್ನು ಲೆಕ್ಕ ಹಾಕಿ, ತೆರಿಗೆ ಹೊರೆ ಇಳಿಸಿಕೊಳ್ಳುವುದು) ಪ್ರಯೋಜನ ಪಡೆಯಲು ಆಗದು.

ಚಿನ್ನಕ್ಕೆ ತೆರಿಗೆ
ಭೌತಿಕ ಚಿನ್ನವನ್ನು ಡಿಜಿಟಲ್ ರೂಪಕ್ಕೆ ಪರಿವರ್ತನೆ ಮಾಡಿಕೊಂಡರೆ ಅದಕ್ಕೆ ಬಂಡವಾಳ ವೃದ್ಧಿ ತೆರಿಗೆಯನ್ನು ಪಾವತಿಸಬೇಕಾಗಿಲ್ಲ. ಹಾಗೆಯೇ ಡಿಜಿಟಲ್ ರೂಪದಿಂದ ಚಿನ್ನವನ್ನು ಭೌತಿಕ ರೂಪಕ್ಕೆ ಬದಲಾವಣೆ ಮಾಡಿಕೊಂಡಾಗಲೂ ಈ ತೆರಿಗೆ ಪಾವತಿಸಬೇಕಿಲ್ಲ.

ಆನ್‌ಲೈನ್ ಆಟದಿಂದ ಬರುವ ಲಾಭಕ್ಕೆ ತೆರಿಗೆ
ಆನ್‌ಲೈನ್ ಆಟಗಳಲ್ಲಿ ಗೆದ್ದವರಿಗೆ ಸಿಗುವ ಹಣಕ್ಕೆ ಶೇಕಡ 30ರಷ್ಟು ತೆರಿಗೆ ವಿಧಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಇದು ಹೊಸ ಆರ್ಥಿಕ ವರ್ಷದಲ್ಲಿ ಜಾರಿಗೆ ಬರಲಿದೆ.

ಕಾರುಗಳು ತುಟ್ಟಿ
ಮಾರುತಿ ಸುಜುಕಿ, ಟಾಟಾ ಮೋಟರ್ಸ್, ಟೊಯೋಟ, ಮರ್ಸಿಡಿಸ್ ಬೆಂಜ್ ಮತ್ತು ಔಡಿ ಕಂಪನಿಗಳು ಬೆಲೆ ಏರಿಕೆಯನ್ನು ಘೋಷಿಸಿವೆ. ತಯಾರಿಕಾ ವೆಚ್ಚ ಹೆಚ್ಚಾಗುತ್ತಿರುವುದು ಹಾಗೂ ಭಾರತ್ ಸ್ಟೇಜ್:6.2 ಮಾನದಂಡ ಅಳವಡಿಕೆಗಾಗಿ ಬೆಲೆ ಹೆಚ್ಚಳದ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕಂಪನಿಗಳು ಹೇಳಿವೆ.

ಮೀಸಲಾತಿ ಮರುಹಂಚಿಕೆ: ಆದೇಶ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಸ್ಲಿಂ ಸಮುದಾಯಕ್ಕೆ ಆರ್ಥಿಕವಾಗಿ ಹಿಂದುಳಿದವರ ಕೋಟಾದಡಿ ಮೀಸಲಾತಿ ಹಂಚಿಕೆ ಮತ್ತು ಹೊಸ ಪ್ರವರ್ಗಗಳನ್ನು ಸೃಜಿಸಿ ಹಿಂದುಳಿದ ವರ್ಗಗಳ ಮೀಸಲಾತಿಯ ಮರುಹಂಚಿಕೆ ಕುರಿತು ಸಂಪುಟ ಸಭೆಯ ನಿರ್ಧಾರವನ್ನು ಅನುಷ್ಠಾನಗೊಳಿಸಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯು ಸೋಮವಾರ (ಮಾರ್ಚ್ 27) ಎರಡು ಪ್ರತ್ಯೇಕ ಆದೇಶಗಳನ್ನು ಹೊರಡಿಸಿದೆ.

ಹಿಂದುಳಿದ ವರ್ಗಗಳ ಪ್ರವರ್ಗ 2–ಬಿ ಪಟ್ಟಿಯಲ್ಲಿದ್ದ ಸಮುದಾಯಗಳನ್ನು (ಮುಸ್ಲಿಂ) ಆರ್ಥಿಕವಾಗಿ ದುರ್ಬಲ ವರ್ಗದ (ಇಡಬ್ಲ್ಯುಎಸ್) ಪಟ್ಟಿಗೆ ವರ್ಗಾಯಿಸಿ ಆದೇಶ ಹೊರಡಿಸಲಾಗಿದೆ. ಇಡಬ್ಲ್ಯುಎಸ್ ಕೋಟಾದಡಿ ನಿಗದಿಪಡಿಸಿರುವ ಶೇಕಡ 10ರಷ್ಟು ಮೀಸಲಾತಿಯಲ್ಲಿ ಮುಸ್ಲಿಮರಿಗೂ ಮೀಸಲಾತಿ ನೀಡಬೇಕೆಂಬ ಉಲ್ಲೇಖ ಆದೇಶದಲ್ಲಿದೆ.

6ನೇ ಪುಟ ನೋಡಿ

ಜರ್ಮನಿ ಹೇಳಿಕೆಗೆ ದಿಗ್ವಿಜಯ್ ಪ್ರತಿಕ್ರಿಯೆ: ಕೈ–ಕಮಲ ವಾಕ್ಸಮರ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ್ದರ ಕುರಿತು ಜರ್ಮನಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸುವ ಮೂಲಕ ಪಕ್ಷವು ಇಕ್ಕಟ್ಟಿಗೆ ಸಿಲುಕುವಂತೆ ಪಕ್ಷದ ಮುಖಂಡ ದಿಗ್ವಿಜಯ್ ಸಿಂಗ್ ಮಾಡಿದ್ದಾರೆ. ಬಿಜೆಪಿ ಇದಕ್ಕೆ ಕಟುವಾದ ಪ್ರತಿಕ್ರಿಯೆ ನೀಡಿದೆ. ಭಾರತದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ವಿದೇಶಿ ಶಕ್ತಿಗಳನ್ನು ಕಾಂಗ್ರೆಸ್ ಆಹ್ವಾನಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ. 6

ಚಿನಕುರಳಿ

ಪ್ರಕಾಶ್ ಶೆಟ್ಟಿ

ರಾಮದೇವರ ಬೆಟ್ಟ: ಪರಿಸರಸೂಕ್ಷ್ಮ ವಲಯದಲ್ಲಿ ಕಾಮಗಾರಿಗೆ ಸಲ್ಲಿಕೆಯಾಗದ ಪ್ರಸ್ತಾವ

ರಾಮಮಂದಿರ: ಅನುಮತಿ ಅನುಮಾನ

● ಆರ್. ಜಿತೇಂದ್ರ

ರಾಮನಗರ: ಇಲ್ಲಿನ ರಾಮದೇವರ ಬೆಟ್ಟದಲ್ಲಿ ಭವ್ಯ ರಾಮಮಂದಿರ ನಿರ್ಮಾಣ ಮಾಡುವುದಾಗಿ ರಾಜ್ಯ ಬಿಜೆಪಿ ಸರ್ಕಾರ ಹೇಳಿದೆ. ಆದರೆ, ಈ ಬೆಟ್ಟ ಪರಿಸರ ಸೂಕ್ಷ್ಮ ವಲಯವಾದ್ದರಿಂದ ಮಂದಿರ ನಿರ್ಮಾಣಕ್ಕೆ ಅನುಮತಿ ಸಿಗುವುದು ಅನುಮಾನ.

'ರಾಮದೇವರ ಬೆಟ್ಟ ಪರಿಸರ ಸೂಕ್ಷ್ಮ ವಲಯವಾದ್ದರಿಂದ ಯಾವುದೇ ಕಾಮಗಾರಿಗೆ ಮುನ್ನ ಪೂರ್ವಾನುಮತಿ ಕಡ್ಡಾಯವಾಗಿದೆ. ಸಿಕ್ಕರೂ ಸುತ್ತಲಿನ ಬಂಡೆಗಳನ್ನು ಒಡೆಯಲು, ಹೊಸ ರಸ್ತೆ ನಿರ್ಮಿಸಲು ಅವಕಾಶ ಇರುವುದಿಲ್ಲ' ಎಂದು ಅರಣ್ಯ ಇಲಾಖೆ ಹಾಗೂ ವನ್ಯಜೀವಿ ಮಂಡಳಿಯ ಉನ್ನತ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ರಾಮದೇವರ ಬೆಟ್ಟವು ಉದ್ದಕೊಕ್ಕಿನ ರಣಹದ್ದುಗಳ ಆವಾಸಸ್ಥಾನವಾಗಿದೆ. ಅಳಿವಿನ ಅಂಚಿನಲ್ಲಿ ಇರುವ ಪ್ರಭೇದಗಳಲ್ಲಿ ಒಂದಾಗಿರುವ ಈ ಹದ್ದುಗಳ ರಕ್ಷಣೆಗಾಗಿ 2012ರಲ್ಲಿ ಕೇಂದ್ರ ಸರ್ಕಾರವು ಈ ಬೆಟ್ಟವನ್ನು ಪರಿಸರ ಸೂಕ್ಷ್ಮ ವಲಯ ಎಂದು ಗುರುತಿಸಿದೆ.

ರಾಮದೇವರ ಬೆಟ್ಟದಲ್ಲಿನ ಉದ್ದಕೊಕ್ಕಿನ ರಣಹದ್ದುಗಳು

ಬೆಟ್ಟದಲ್ಲಿ ಮುಜರಾಯಿ ಇಲಾಖೆಗೆ ಸೇರಿದ 17 ಎಕರೆಗೂ ಹೆಚ್ಚು ಜಾಗ ಇದ್ದು, ಅಲ್ಲಿ ಮಂದಿರ ನಿರ್ಮಾಣ ಮಾಡುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ ಈಚೆಗೆ ಜಿಲ್ಲಾಡಳಿತ ಸರ್ವೆ ನಡೆಸಿದ್ದು, ಅಷ್ಟು ಪ್ರಮಾಣದ ಜಾಗವೇ ಅಲ್ಲಿಲ್ಲ ಎನ್ನುವ ಅಂಶ ಬೆಳಕಿಗೆ ಬಂದಿದೆ. ಸುತ್ತ ಬರೀ ಬಂಡೆಗಳು ತುಂಬಿದೆ.

ಮಂದಿರ ನಿರ್ಮಾಣ ಸಂಬಂಧ ಅಗತ್ಯ ಅನುಮತಿ ಕೋರಿ ಅರಣ್ಯ ಇಲಾಖೆಗೆ ಈದುವರೆಗೂ ಅಧಿಕೃತವಾಗಿ ಯಾವುದೇ ಪ್ರಸ್ತಾವ ಸಲ್ಲಿಕೆ ಆಗಿಲ್ಲ. ಪ್ರವಾಸೋದ್ಯಮ ಇಲಾಖೆ ಒಂದು ಪತ್ರ ಬರೆದು ಸುಮ್ಮನಾಗಿದೆ.

ಪರಿಸರಪ್ರಿಯರ ಆಕ್ಷೇಪ: ಬೆಟ್ಟದ ಮಧ್ಯಭಾಗದಲ್ಲಿ ಈಗಾಗಲೇ ಪಟ್ಟಾಭಿರಾಮ ದೇಗುಲವಿದ್ದು, ಇಲ್ಲಿ ಪ್ರತಿ ಶ್ರಾವಣ ಮಾಸದ ಶನಿವಾರಗಳಂದು ಸಾವಿರಾರು ಸಂಖ್ಯೆಯಲ್ಲಿ ಭಕ್ತರು ಪೂಜೆ ಸಲ್ಲಿಸುತ್ತಾರೆ. ಸದ್ಯ ಬೆಟ್ಟದಲ್ಲಿ ಕೇವಲ 7–8 ಉದ್ದ ಕೊಕ್ಕಿನ ಹದ್ದುಗಳು ಮಾತ್ರ ಉಳಿದುಕೊಂಡಿದ್ದು, ಅವುಗಳ ಸಂತತಿಯೂ ಕ್ಷೀಣವಾಗಿದೆ. ಹೀಗಿರುವಾಗ ಇಲ್ಲಿ ಯಾವುದೇ ಕಾಮಗಾರಿ ನಡೆದರೂ ಅವುಗಳ ಸಂತತಿಗೆ ಹಾನಿಯಾಗಬಹುದು ಎನ್ನುವುದು ಪರಿಸರ ಪ್ರಿಯರ ಆತಂಕ.

> **ರಾಮದೇವರ ಬೆಟ್ಟದ ಪರಿಸರಸೂಕ್ಷ್ಮ ವಲಯಕ್ಕೆ ಧಕ್ಕೆ ಆಗದಂತೆ ರಾಮಮಂದಿರ ನಿರ್ಮಾಣ ಮಾಡಲಾಗುವುದು. ವನ್ಯಜೀವಿ ಸಂಕುಲಕ್ಕೆ ತೊಂದರೆ ಆಗದು**
> **ಡಾ. ಸಿ.ಎನ್. ಅಶ್ವತ್ಥನಾರಾಯಣ** ಉನ್ನತ ಶಿಕ್ಷಣ ಸಚಿವ

> **ರಾಮದೇವರ ಬೆಟ್ಟ ಪರಿಸರ ಸೂಕ್ಷ್ಮ ವಲಯ ಆಗಿದ್ದು, ಅಲ್ಲಿ ಯಾವುದೇ ಕಾಮಗಾರಿ ನಡೆದಲ್ಲಿ ಪರಿಸರಕ್ಕೆ ಧಕ್ಕೆ ಆಗಲಿದೆ. ರಣಹದ್ದು, ಚಿರತೆಗಳ ಉಳಿವಿಗೆ ವಿವೇಚನಾಯುತ ನಿರ್ಧಾರ ಕೈಗೊಳ್ಳಬೇಕು**
> **ಪ್ರೊ. ಶಿವನಂಜಯ್ಯ,** ಪರಿಸರವಾದಿ

ಪ್ರಕ್ರಿಯೆ ಹೇಗಿರಬೇಕು?

ಮಂದಿರ ನಿರ್ಮಾಣಕ್ಕೆ ಮೊದಲು ಸಂಬಂಧಿಸಿದ ಇಲಾಖೆಯು ಅರಣ್ಯ ಇಲಾಖೆಗೆ ಯೋಜನಾ ವರದಿ ಸಮೇತ ಪ್ರಸ್ತಾವ ಸಲ್ಲಿಸಬೇಕು. ಅದಕ್ಕೆ ಪ್ರಾದೇಶಿಕ ಆಯುಕ್ತರ ನೇತೃತ್ವದ ಸಮಿತಿಯಲ್ಲಿ ಒಪ್ಪಿಗೆ ಸಿಕ್ಕ ನಂತರ ಅರ್ಜಿಯು ಮುಖ್ಯಮಂತ್ರಿ ಅಧ್ಯಕ್ಷತೆಯ ರಾಜ್ಯ ವನ್ಯಜೀವಿ ಮಂಡಳಿಯ ಒಪ್ಪಿಗೆ ಪಡೆಯಬೇಕು. ನಂತರ ಕೇಂದ್ರ ವನ್ಯಜೀವಿ ಮಂಡಳಿಯು ಒಪ್ಪಿಗೆ ಸಿಗಬೇಕು. ಆಗ ಮಾತ್ರ ಮಂದಿರ ನಿರ್ಮಾಣದ ಕನಸು ನನಸಾಗಲಿದೆ.

ಪ್ರಯಾಣಿಕರ ಸುಲಿಗೆ: ಆಟೊ ಚಾಲಕರಿಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಯಾಣಿಕರನ್ನು ಆಟೊದಲ್ಲಿ ಹತ್ತಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಸುಲಿಗೆ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ಉಪ್ಪಾರಪೇಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಅಲ್ಲಾಭಕ್ಷ್ ಹಾಗೂ ನದೀಮ್ ಬಂಧಿತರು. ಇವರಿಬ್ಬರೂ ಆಟೊ ಚಾಲಕರು. ಇವರಿಂದ ₹ 1.10 ಲಕ್ಷ ಮೌಲ್ಯದ ಎರಡು ಮೊಬೈಲ್, ಬೆಲೆಬಾಳುವ ವಸ್ತುಗಳು ಹಾಗೂ ₹ 4,000 ನಗದು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಾರ್ ಹಾಗೂ ರೆಸ್ಟೋರೆಂಟ್ ಬಳಿ ಆರೋಪಿಗಳು ಸುತ್ತಾಡುತ್ತಿದ್ದರು. ಮದ್ಯ ಕುಡಿದು ಹೊರಬರುತ್ತಿದ್ದ ಪ್ರಯಾಣಿಕರನ್ನು ಬಾಡಿಗೆ ನೆಪದಲ್ಲಿ ಆಟೊದಲ್ಲಿ ಹತ್ತಿಸಿಕೊಳ್ಳುತ್ತಿದ್ದರು. ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಜೀವ ಬೆದರಿಕೆಯೊಡ್ಡಿ ಸುಲಿಗೆ ಮಾಡಿ ಪರಾರಿಯಾಗುತ್ತಿದ್ದರು' ಎಂದು ತಿಳಿಸಿದರು.

'ಸುಲಿಗೆ ಬಗ್ಗೆ ವ್ಯಕ್ತಿಯೊಬ್ಬರು ಇತ್ತೀಚೆಗೆ ದೂರು ನೀಡಿದ್ದರು. ತಾಂತ್ರಿಕ ಪುರಾವೆಗಳನ್ನು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮತ್ತಷ್ಟು ಕೃತ್ಯಗಳಲ್ಲಿ ಭಾಗಿಯಾಗಿರುವ ಅನುಮಾನವಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

15 ವರ್ಷ; 32 ಪ್ರಕರಣ • ಸಿದ್ದಾಪುರ ಪೊಲೀಸರ ಕಾರ್ಯಾಚರಣೆ

ಲೋಕಾಯುಕ್ತ ಹೆಸರಿನಲ್ಲಿ ಸುಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಾಯುಕ್ತ, ಸಿಸಿಬಿ, ಸಿಐಡಿ ಹೆಸರಿನಲ್ಲಿ ಸರ್ಕಾರಿ ಅಧಿಕಾರಿಗಳನ್ನು ಬೆದರಿಸಿ ಹಣ ಸುಲಿಗೆ ಮಾಡುತ್ತಿದ್ದ ಅಂತರರಾಜ್ಯ ಜಾಲ ಭೇದಿಸಿರುವ ಸಿದ್ದಾಪುರ ಪೊಲೀಸರು, ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಆಂಧ್ರಪ್ರದೇಶದ ಕಡಪ ಜಿಲ್ಲೆಯ ನಾಗೇಶ್ವರ್ ರೆಡ್ಡಿ ಉಪ್ಪಲೂರ್ (33), ಬುಚುಪಲ್ಲಿ ವಿನೀತ್ ಕುಮಾರ ರೆಡ್ಡಿ (22) ಹಾಗೂ ಶಿವಕುಮಾರ್ ರೆಡ್ಡಿ ಪಂದಿಲ್ಲಾ ಲಾರ್ಲಿ (19) ಬಂಧಿತರು. ಇವರಿಂದ ಐದು ಮೊಬೈಲ್ ಜಪ್ತಿ ಮಾಡಲಾಗಿದೆ. ಜಾಲದ ಪ್ರಮುಖ ಆರೋಪಿ ಶ್ರೀನಾಥ್ ರೆಡ್ಡಿ ತಲೆಮರೆಸಿಕೊಂಡಿದ್ದಾನೆ' ಎಂದು ಪೊಲೀಸರು ಹೇಳಿದರು.

'ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ಜಂಟಿ ನಿರ್ದೇಶಕಿ ಆಶಾ ಭರತ್ ಅವರಿಗೆ ಇತ್ತೀಚೆಗೆ ಕರೆ ಮಾಡಿದ್ದ ಆರೋಪಿಗಳು, ಲೋಕಾಯುಕ್ತ ಕಡೆಯವರೆಂದು ಪರಿಚಯಿಸಿಕೊಂಡಿದ್ದರು. 'ನಿಮ್ಮ ಮನೆ ಮೇಲೆ ಸದ್ಯದಲ್ಲೇ ದಾಳಿ ಮಾಡಲು ತಯಾರಿ ಮಾಡಿಕೊಳ್ಳುತ್ತಿದ್ದೇವೆ. ದಾಳಿ ಬೇಡವೆಂದರೆ, ನಾವು ಕೇಳಿದಷ್ಟು ಹಣ ನೀಡಬೇಕು' ಎಂದು ಬೆದರಿಸಿದ್ದರು. ಹೆದರಿದ್ದ ಆಶಾ, ₹ 1 ಲಕ್ಷ ನೀಡಿದ್ದರು. ಇದಾದ ಬಳಿಕವೂ ಆರೋಪಿಗಳು ಮತ್ತಷ್ಟು ಹಣಕ್ಕೆ ಬೇಡಿಕೆ ಇರಿಸಿದ್ದರು. ಅನುಮಾನಗೊಂಡ ಆಶಾ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

ವಂಚನೆ ಪ್ರಕರಣದ ಆರೋಪಿಗಳು (ಕುಳಿತವರು) ಹಾಗೂ ಅವರನ್ನು ಬಂಧಿಸಿದ ಸಿದ್ದಾಪುರ ಠಾಣೆ ಪೊಲೀಸರು

15 ವರ್ಷದಲ್ಲಿ 32 ಪ್ರಕರಣಗಳಲ್ಲಿ ಭಾಗಿ: 'ಮೊಬೈಲ್ ಕರೆಗಳ ವಿವರ ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಮೂವರು ಆರೋಪಿಗಳು ವಂಚನೆಯನ್ನು ವೃತ್ತಿ ಮಾಡಿಕೊಂಡಿದ್ದರು. ಈ ಜಾಲದ ಆರೋಪಿಗಳು, 15 ವರ್ಷಗಳಲ್ಲಿ ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣದಲ್ಲಿ 32 ವಿವಿಧ ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸರು ಹೇಳಿದರು.

ರೈಲ್ವೆ ಇಲಾಖೆ ಉದ್ಯೋಗಿ: 'ಆರೋಪಿ ನಾಗೇಶ್ವರ ರೆಡ್ಡಿ, ಡಿಪ್ಲೊಮಾ ಮುಗಿಸಿದ್ದ. ರೈಲ್ವೆ ಇಲಾಖೆಯಲ್ಲಿ ಎಂಜಿನಿಯರ್ ಆಗಿ ಕೆಲ ವರ್ಷ ಕೆಲಸ ಮಾಡಿದ್ದ. ಅಲ್ಲಿಯ ಕೆಲಸ ಬಿಟ್ಟು, ಯುರೇನಿಯಂ ಕಾರ್ಪೊರೇಷನ್ ಆಫ್ ಇಂಡಿಯಾ ಸೇರಿದ್ದ. ಆ ಕೆಲಸಕ್ಕೂ ರಾಜೀನಾಮೆ ನೀಡಿ ವ್ಯವಸಾಯ ಆರಂಭಿಸಿದ್ದ' ಎಂದು ಪೊಲೀಸರು ತಿಳಿಸಿದರು.

'ಅಕ್ರಮವಾಗಿ ಹಣ ಗಳಿಸಲು ಮುಂದಾಗಿದ್ದ ನಾಗೇಶ್ವರ, ಟ್ರಾವೆಲ್ಸ್ ಟಿಕೆಟ್ ಕಾಯ್ದಿರಿಸುವ ಹೆಸರಿನಲ್ಲಿ ಜನರಿಂದ ಹಣ ಪಡೆದು ವಂಚಿಸಲಾರಂಭಿಸಿದ್ದ. ಈ ಸಂಬಂಧ ಒಂಬತ್ತು ಪ್ರಕರಣಗಳು ದಾಖಲಾಗಿದ್ದವು. ಆರೋಪಿ ಜೈಲಿಗೂ ಹೋಗಿ ಬಂದಿದ್ದ. ನಂತರ, ಎಟಿಎಂ ಕಾರ್ಡ್ ವಂಚನೆಗೆ ಇಳಿದು ತೆಲಂಗಾಣ ಸಿಐಡಿ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದ. ಇದಾದ ಬಳಿಕವೂ ಆರೋಪಿ ಸಹಚರರ ಜೊತೆ ಸೇರಿ ಹಲವು ಕೃತ್ಯ ಎಸಗುತ್ತಿದ್ದ' ಎಂದರು.

ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿ ಕರೆ: 'ಯಾವೆಲ್ಲ ಸರ್ಕಾರಿ ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ಆರೋಪವಿದೆ ಎಂಬುದನ್ನು ಗೂಗಲ್ ಮೂಲಕ ಆರೋಪಿಗಳು ತಿಳಿದುಕೊಳ್ಳುತ್ತಿದ್ದರು. ಅಧಿಕಾರಿಗಳ ಪಟ್ಟಿ ಸಿದ್ಧಪಡಿಸಿ, ಇಲಾಖೆಯ ಜಾಲತಾಣಗಳ ಮೂಲಕ ಮೊಬೈಲ್ ನಂಬರ್ ಸಂಗ್ರಹಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಅಧಿಕಾರಿಗಳಿಗೆ ಕರೆ ಮಾಡಿ ಬೆದರಿಸುತ್ತಿದ್ದ ಆರೋಪಿಗಳು, ಅಪರಿಚಿತರ ಹೆಸರಿನಲ್ಲಿ ಬ್ಯಾಂಕ್‌ನಲ್ಲಿ ತೆರೆಯುತ್ತಿದ್ದ ಖಾತೆಗಳಿಗೆ ಹಣ ಹಾಕಿಸಿಕೊಳ್ಳುತ್ತಿದ್ದರು. ಅದೇ ಹಣವನ್ನು ಹಂತ ಹಂತವಾಗಿ ತಮ್ಮ ಖಾತೆಗಳಿಗೆ ವರ್ಗಾವಣೆ ಮಾಡಿಕೊಂಡು ಹಂಚಿಕೊಳ್ಳುತ್ತಿದ್ದರು' ಎಂದರು.

ಅಪರಾಧ ಸುದ್ದಿ

'ಫರ್ಜಿ' ವೆಬ್ ಸರಣಿ ನೋಡುತ್ತಿದ್ದ ಪದವೀಧರ

'ಪಾಕಿಸ್ತಾನ್ ಜಾನಾ ಹೈ' ಘೋಷಣೆ: ಯುವಕ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಲಾಲ್, ಮನ್ಸೂರ್ ಚಾಹಿಯೇ... ಪಾಕಿಸ್ತಾನ್ ಜಾನಾ ಹೈ' ಎಂಬುದಾಗಿ ಘೋಷಣೆ ಕೂಗಿದ್ದ ಆರೋಪದಡಿ ಅಂಕುಶ್ (25) ಎಂಬುವವರನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

'ಪಶ್ಚಿಮ ಬಂಗಾಳದ ಅಂಕುಶ್, ಹೋಟೆಲ್ ನಿರ್ವಹಣೆ ವಿಷಯದಲ್ಲಿ ಪದವೀಧರ. ವೈದ್ಯರೊಬ್ಬರ ಮಗನಾದ ಈತ, ಕೆಲಸ ಹುಡುಕಿಕೊಂಡು ಜನವರಿಯಲ್ಲಿ ನಗರಕ್ಕೆ ಬಂದಿದ್ದ. ಪೇಯಿಂಗ್ ಗೆಸ್ಟ್ ಕಟ್ಟಡವೊಂದರಲ್ಲಿ ಉಳಿದುಕೊಂಡಿದ್ದ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಪಾಕಿಸ್ತಾನ ಪರ ಘೋಷಣೆ ಕೂಗಿರುವುದಾಗಿ ಸಾರ್ವಜನಿಕರು ನೀಡಿದ್ದ ಮಾಹಿತಿಯಂತೆ ಈತನನ್ನು ವಶಕ್ಕೆ ಪಡೆಯಲಾಗಿದೆ. ಆದರೆ, ಫರ್ಜಿ ವೆಬ್ ಸರಣಿಯಲ್ಲಿ ಬರುವ ಸಂಭಾಷಣೆಯನ್ನು ಯುವಕ ಪುನರುಚ್ಚರಿಸಿದ್ದನೆಂಬುದು ವಿಚಾರಣೆಯಿಂದ ಗೊತ್ತಾಗಿದೆ' ಎಂದು ತಿಳಿಸಿದರು.

'ಆರೋಪಿ ಪಾಕ್ ಪರ ಘೋಷಣೆ ಕೂಗಿಲ್ಲವೆಂಬುದು ತನಿಖೆಯಿಂದ ತಿಳಿದುಬಂದಿದೆ. ಮಾನಸಿಕ ಅಸ್ವಸ್ಥನಂತಿರುವ ಅಂಕುಶ್ ವರ್ತನೆಯಿಂದ ಎಲ್ಲಿಯೂ ಕೆಲಸ ಸಿಕ್ಕಿರಲಿಲ್ಲ. ಈತನ ಹಿನ್ನೆಲೆ ಬಗ್ಗೆ ಮಾಹಿತಿ ಕಲೆಹಾಕಲಾಗಿದ್ದು, ಯಾವುದೇ ಅಪರಾಧದಲ್ಲಿ ಭಾಗಿಯಾದ ಬಗ್ಗೆ ಮಾಹಿತಿ ಇಲ್ಲ. ಈತನನ್ನು ವಶಕ್ಕೆ ಪಡೆದಿರುವ ಬಗ್ಗೆ ತಂದೆಗೆ ಮಾಹಿತಿ ನೀಡಲಾಗಿದೆ. ಅವರು ನಗರಕ್ಕೆ ಬಂದ ನಂತರ, ಮುಚ್ಚಳಿಕೆ ಬರೆಸಿಕೊಂಡು ಯುವಕನನ್ನು ಬಿಟ್ಟು ಕಳುಹಿಸಲಾಗುವುದು' ಎಂದು ಪೊಲೀಸ್ ಅಧಿಕಾರಿ ಹೇಳಿದರು.

ಆಗಿದ್ದೇನು?: 'ಬಿಟಿಎಂ ಲೇಔಟ್‌ನ ಎರಡನೇ ಹಂತದಲ್ಲಿ ವಾಸವಿರುವ ಅಂಕುಶ್, ಚಹಾ ಕುಡಿಯಲು ಅಂಗಡಿಗೆ ಹೋಗಿದ್ದ. ಟೀ ಕುಡಿಯುತ್ತ ಇಯರ್‌ಫೋನ್ ಹಾಕಿಕೊಂಡು 'ಫರ್ಜಿ' ವೆಬ್ ಸರಣಿ ನೋಡುತ್ತಿದ್ದ' ಎಂದು ಪೊಲೀಸರು ಹೇಳಿದರು.

'ವೆಬ್ ಸರಣಿಯ ಎಸಿಪಿ ಪಾತ್ರಧಾರಿಯೊಬ್ಬ, 'ಬಿಲಾಲ್, ಮನ್ಸೂರ್ ಚಾಹಿಯೇ... ಪಾಕಿಸ್ತಾನ್ ಜಾನಾ ಹೈ...' ಎಂದು ಹೇಳಿದ್ದ. ಅದನ್ನೇ ಅಂಕುಶ್ ಪುನರುಚ್ಚರಿಸಿ ಜೋರಾಗಿ ಹಲವು ಬಾರಿ ಕೂಗಾಡಿದ್ದ. ಅಕ್ಕ-ಪಕ್ಕದಲ್ಲಿದ್ದ ಜನ, ಪಾಕ್ ಪರ ಘೋಷಣೆ ಕೂಗುತ್ತಿದ್ದಾನೆಂದು ತಪ್ಪಾಗಿ ಗ್ರಹಿಸಿ ಸುತ್ತುವರಿದಿದ್ದರು. ಠಾಣೆಗೆ ಮಾಹಿತಿ ನೀಡಿದ್ದರು. ಹೊಯ್ಸಳ ಗಸ್ತು ವಾಹನದ ಸಿಬ್ಬಂದಿ ಅಂಕುಶ್‌ನನ್ನು ವಶಕ್ಕೆ ಪಡೆದಿದ್ದರು. ಇದರಿಂದಾಗಿ ಸ್ಥಳದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು' ಎಂದು ಅವರು ತಿಳಿಸಿದರು.

'ಫರ್ಜಿ ವೆಬ್ ಸರಣಿ ವೀಕ್ಷಿಸಲಾಗಿದೆ. ಅದರಲ್ಲಿ ಈ ಸಂಭಾಷಣೆ ಇದೆ. ಹೀಗಾಗಿ, ಯುವಕನ ಮೇಲೆ ಸದ್ಯಕ್ಕೆ ಯಾವುದೇ ದೂರು ದಾಖಲಿಸಿಕೊಂಡಿಲ್ಲ' ಎಂದು ಪೊಲೀಸರು ಹೇಳಿದರು.

ವಿಮಾನ ನಿಲ್ದಾಣ ರಸ್ತೆಯಲ್ಲಿ ಅಪಘಾತ: ಇಬ್ಬರು ಸಾವು

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ರಸ್ತೆಯಲ್ಲಿ ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

ಬೈಕ್ ಸವಾರ ಗುದ್ರಾಮ್ ಹಾಗೂ ಹಿಂಬದಿ ಸವಾರ ಜುಗ್‌ರಾಜ್ ಪ್ರಜಾಪತ್ (48) ಮೃತರು.

'ಮೃತರ ಪೈಕಿ ಒಬ್ಬರು ಹೂಡಿ ಬಳಿ ಪೀಠೋಪಕರಣ ಮಳಿಗೆ ನಡೆಸುತ್ತಿದ್ದರು. ಅವರ ಸ್ನೇಹಿತರಾಗಿದ್ದ ಇನ್ನೊಬ್ಬರು ರಾಜಸ್ಥಾನದಿಂದ ಇತ್ತೀಚೆಗೆ ನಗರಕ್ಕೆ ಬಂದಿದ್ದರು' ಎಂದು ಯಲಹಂಕ ಸಂಚಾರ ಪೊಲೀಸರು ಹೇಳಿದರು.

'ಇಬ್ಬರೂ ಸೇರಿ ರಾಯಲ್ ಎನ್‌ಫೀಲ್ಡ್ ಬೈಕ್‌ನಲ್ಲಿ (ಕೆಎ 53 ಎಚ್‌ಎನ್ 7115) ಹೊರಟಿದ್ದರು. ಯಲಹಂಕ ಕಾಫಿ ಡೇ ಎದುರಿನ ರಸ್ತೆ ವಿಭಜಕಕ್ಕೆ ಬೈಕ್ ಡಿಕ್ಕಿ ಹೊಡೆದಿತ್ತು. ಬೈಕ್ ಸಮೇತ ಉರುಳಿಬಿದ್ದು, ಒಬ್ಬರು ಸ್ಥಳದಲ್ಲಿ ಮೃತಪಟ್ಟರು. ಇನ್ನೊಬ್ಬರು ಸಮೀಪದ ಆಸ್ಪತ್ರೆಯಲ್ಲಿ ಅಸುನೀಗಿದರು' ಎಂದು ಅವರು ತಿಳಿಸಿದರು.

'ಅತೀ ವೇಗ ಹಾಗೂ ನಿರ್ಲಕ್ಷ್ಯದ ಚಾಲನೆಯಿಂದ ಅಪಘಾತ ಸಂಭವಿಸಿದೆ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿದರು.

ರಥೋತ್ಸವ ಇಂದು

ಬೆಂಗಳೂರು: ಶಂಕರಪುರದಲ್ಲಿರುವ ಶೃಂಗೇರಿ ಮಠದ 38ನೇ ರಥೋತ್ಸವ ಮಾರ್ಚ್ 31ರಂದು (ಶುಕ್ರವಾರ) ಜರುಗಲಿದೆ. ಬೆಳಿಗ್ಗೆ 10ಕ್ಕೆ ರಥೋತ್ಸವ, ಮಧ್ಯಾಹ್ನ 1ಕ್ಕೆ ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 6.30ರಿಂದ ಶೃಂಗೇರಿಯ ಶಾರದಾ ಪೀಠದ ಆರ್.ಕೆ.ಪ್ರಕಾಶ್ ಮತ್ತು ತಂಡದಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾತ್ರಿ 9ಕ್ಕೆ ಮಹಾ ಮಂಗಳಾರತಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬಾಲಕಿ ಮೇಲೆ ದೌರ್ಜನ್ಯ: ಪಕ್ಕದ ಮನೆ ಯುವಕನಿಂದ ಕೃತ್ಯ

ಬೆಂಗಳೂರು: ಚಂದ್ರಾಲೇಔಟ್ ಠಾಣೆ ವ್ಯಾಪ್ತಿಯಲ್ಲಿ 17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ನಡೆದಿದ್ದು, ಪಕ್ಕದ ಮನೆಯ ಯುವಕನೇ ಕೃತ್ಯ ಎಸಗಿರುವ ಬಗ್ಗೆ ಪೋಷಕರು ದೂರು ನೀಡಿದ್ದಾರೆ.

'ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ಬಾಲಕಿ ಮೇಲೆ ಯುವಕನೊಬ್ಬ ಬುಧವಾರ ಬೆಳಿಗ್ಗೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಈ ಬಗ್ಗೆ ಬಾಲಕಿಯ ಪೋಷಕರು ದೂರು ನೀಡಿದ್ದಾರೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬಾಲಕಿ ಹಾಗೂ ಯುವಕ ಒಂದೇ ಪ್ರದೇಶದಲ್ಲಿ ವಾಸವಿದ್ದಾರೆ. ಇಬ್ಬರದ್ದೂ ಬೇರೆ ಬೇರೆ ಧರ್ಮ. ಬಾಲಕಿಯನ್ನು ಪುಸಲಾಯಿಸಿ ಯುವಕ ಈ ಕೃತ್ಯ ಎಸಗಿರುವುದು ತನಿಖೆಯಿಂದ ಗೊತ್ತಾಗಿದೆ. ಆತನನ್ನು ವಶಕ್ಕೆ ಪಡೆಯಬೇಕಿದೆ. ಪೋಕ್ಸೊ ಪ್ರಕರಣವಾಗಿರುವುದರಿಂದ ಹೆಚ್ಚು ಮಾಹಿತಿ ನೀಡಲು ಸಾಧ್ಯವಿಲ್ಲ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ರೌಡಿ ನಾಗರಾಜ್ ಗಡಿಪಾರು

ಬೆಂಗಳೂರು: ಪದೇ ಪದೇ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಸಾರ್ವಜನಿಕರಲ್ಲಿ ಭಯವನ್ನುಂಟು ಮಾಡುತ್ತಿದ್ದ ರೌಡಿ ನಾಗರಾಜ್ ಅಲಿಯಾಸ್ ವಿಲ್ಸನ್ ಗಾರ್ಡನ್ ನಾಗ್‌ನನ್ನು ಒಂದು ವರ್ಷದ ಅವಧಿಗೆ ನಗರದಿಂದ ಗಡಿಪಾರು ಮಾಡಲಾಗಿದೆ.



ನಾಗರಾಜ್

'ಮಾಗಡಿ ರಸ್ತೆ ಠಾಣೆಯ ರೌಡಿಪಟ್ಟಿಯಲ್ಲಿ ನಾಗನ ಹೆಸರಿದೆ. 22 ಪ್ರಕರಣಗಳಲ್ಲಿ ಆರೋಪಿಯಾಗಿರುವ ಈತ, ಜೈಲಿಗೂ ಹೋಗಿ ಬಂದಿದ್ದ. ಅಪರಾಧ ಕೃತ್ಯಗಳಿಗೆ ಪುನಃ ಸಂಚು ರೂಪಿಸುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿಯಾದ ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಅವರು ನಾಗ್‌ನನ್ನು ಗಡಿಪಾರು ಮಾಡಿ ಇತ್ತೀಚೆಗೆ ಆದೇಶ ಹೊರಡಿಸಿದ್ದಾರೆ.

'ಕೊಲೆ, ಸುಲಿಗೆ, ದರೋಡೆ, ಕೊಲೆ ಯತ್ನ, ಜೀವ ಬೆದರಿಕೆ, ವಾಹನ ಕಳವು ಸೇರಿದಂತೆ ಹಲವು ಪ್ರಕರಣಗಳಲ್ಲಿ ನಾಗ್ ಭಾಗಿಯಾಗಿದ್ದ. ಏಳು ಕೊಲೆ ಪ್ರಕರಣಗಳಲ್ಲಿ ಈತನೇ ಪ್ರಮುಖ ಆರೋಪಿಯಾಗಿದ್ದ. ಯುವತಿಯೊಬ್ಬರು ತನ್ನನ್ನು ಪ್ರೀತಿಸಲು ಒಪ್ಪಲಿಲ್ಲವೆಂಬ ಕಾರಣಕ್ಕೆ ಅವರ ತಂದೆಯನ್ನೇ ಕೊಲೆ ಮಾಡಲು ಸಂಚು ರೂಪಿಸಿದ್ದ ಆರೋಪದಡಿ ನಾಗ್‌ನನ್ನು ಸಿಸಿಬಿ ಪೊಲೀಸರೂ ಬಂಧಿಸಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸಿದ್ದಾಪುರ, ರಾಜರಾಜೇಶ್ವರಿನಗರ, ಆಡುಗೋಡಿ, ಬನಶಂಕರಿ ಠಾಣೆಯಲ್ಲೂ ಈತನ ವಿರುದ್ಧ ಪ್ರಕರಣಗಳು ದಾಖಲಾಗಿದ್ದವು. ಇತ್ತೀಚೆಗೆ ಈತ ಬಿಜೆಪಿ ಜೊತೆ ಗುರುತಿಸಿಕೊಂಡಿದ್ದ. ಬಿಜೆಪಿ ಮುಖಂಡರ ಜೊತೆ ಕಾರ್ಯಕ್ರಮಗಳಲ್ಲಿ ಭಾಗಿಯಾಗುತ್ತಿದ್ದ. ವಿಧಾನಸಭಾ ಚುನಾವಣೆ ಆಕಾಂಕ್ಷಿ ಎಂಬುದಾಗಿ ಹೇಳಿಕೊಂಡು ಓಡಾಡುತ್ತಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಉದ್ಭವ ಉತ್ಸವ

ಬೆಂಗಳೂರು: ಹಳ್ಳಿಗಾಡಿನ ಆಟಗಳು ಹಾಗೂ ಸಾಂಪ್ರದಾಯಿಕ ಕಲಾ ಕೆಲಸದ ಅನುಭವ ನೀಡುವ 'ಉದ್ಭವ ಉತ್ಸವ'ವನ್ನು ಏ.9ರಂದು ಆಯೋಜಿಸಲಾಗಿದೆ.

ಕೆಂಗೇರಿ ಸಮೀಪದ ರಾಮೋನಹಳ್ಳಿ ಮುದ್ದಯ್ಯನಪಾಳ್ಯದ ಉದ್ಭವ ಕ್ಯಾಂಪಸ್‌ನಲ್ಲಿ ಈ ಉತ್ಸವ ನಡೆಯಲಿದೆ. ಎಲ್ಲ ವಯೋಮಾನದವರಿಗೆ ವಿಶಿಷ್ಟ ಕಾರ್ಯಕ್ರಮಗಳು ಇರುತ್ತವೆ. ನಿಸರ್ಗದ ಮಡಿಲಲ್ಲಿ ಮಕ್ಕಳಿಗೆ ಮೋಜಿನ ಆಟಗಳು ಇರುತ್ತವೆ. ಸಾಂಪ್ರದಾಯಿಕ ಆಟಗಳು, ಕೆಸರು ಗದ್ದೆ, ಗೋವುಗಳ ಜತೆ ಒಡನಾಟ, ಗೊಂಬೆಯಾಟ, ನೈಸರ್ಗಿಕ ಕೆರೆಯಲ್ಲಿ ಜಲಕ್ರೀಡೆಗಳು ಇರುತ್ತವೆ.

ಮಕ್ಕಳ ಸಂವೇದನಾ ಅನುಭವಗಳನ್ನು ಉತ್ಕೃಷ್ಟಗೊಳಿಸುವ ಸರಳ ಆಟಗಳ ಸಂತೋಷವನ್ನು ಮರಳಿ ತರುವ ಗುರಿಯನ್ನು ಹೊಂದಿದೆ. ಏಪ್ರಿಲ್ 2ರ ಮೊದಲು ನೋಂದಾಯಿಸಬೇಕು, ನಾಲ್ಕು ವರ್ಷಗಳಿಗಿಂತ ಕೆಳಗಿನ ಮಕ್ಕಳಿಗೆ ಉಚಿತ. ವಿವರಗಳಿಗೆ: 78925 57881.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

The public in general is hereby informed that **Smt. Saroja Sridhar W/o K. Sridhar,** R/at 207/1, 40th cross, Jayanagar 8thBlock, Bangalore, Karnataka 560082 is negotiating to sell the undermentioned property to my client. **Smt. Saroja Sridhar** claims that she is the present owner of the said property. Any person claiming any rights, title or interest in the property, by way of sale, inheritance, possession, succession, mortgage, lien, lease, gift or otherwise howsoever in respect of the same, shall intimate the objection in writing to the undersigned with supporting documents thereof at her office Ayana Legal with address as given below within 15 days from the date of publication of this notice failing which any claims by anyone shall not be considered and shall be deemed to have been waived and/ or abandoned and, my client shall proceed to conclude the negotiation and no claims shall be entertained there after.

Schedule of the property:
All the piece and parcel of the property No. 207/1 (Old No. 51/11), (PID No. 58-91-11), situated on 40th cross, Jayanagar 8th Block, Bangalore, Karnataka 560082, admeasuring 70ft*70ft total measuring 4900 sqft with residential house in Ground Floor and First Floor of the property bounded on the East by passage measuring 10ft*70ft and Site No.50, West by Site No.52, North by Site No.51/11/01 and South by Road.

Sd/-
Rama R Iyer, Advocate,
Ayana Legal, #505,506, Brigade Towers, 135, Brigade Road,Bangalore-25, Ph–+918867411595

Date: 29.03.2023
Place: Bangalore

PUBLIC NOTICE

This is inform the general public notice that my clients **Mr.Nitesh Kumar.G** S/o Sri Goutham Chand Jain and Smt. Lakshmi Kochar. P W/o Sri Nitesh Kumar. G is intending to purchase the schedule property from its owner **Smt.Palaniyammal @ Palaniammal** W/o Late Rajapppa Gounder aged about 76 Years His Daughter **Smt. Poornam** D/o Smt.Palaniyammal @ Palaniammal W/o Late Rajapppa Gounder aged about 58 Years Residing at No.390 PP Nilayam, 9th Main, 1st Cross, HAL 2nd Stage, Indiranagara, Bangalore-560038. Any person having any claims over the schedule Property claiming through the predecessors in title or any other persons may lodge their objections or claims in writing with all supporting documentary evidence by registered post with regard to such claim with the undersigned within 7 days there of failing which my client will proceed to conclude the sale transactions. Any claims lodged thereafter will not be entertained by my client.

Item No.1 In Respect of Site in 71 Katha S1 No.4529 and 112/71, Formed in Sy No.61, Measuring East to West 30 Feet and North to South 40 Feet totally 1200 Sq Feet Situated at Byatarayanapura@ Narayanapura Village, K.R Puram Hobli, Bangalore East taluk, Bangalore.
East by : House Site No.72, **West by**: Site No.70, **North by :** 20 Feet Road, **South by** : House Property No.76.
Item No.II In Respect of Site in 72, Katha S1 No.4530 and 23/129/72, Formed in Sy No.61, Situated at Byatarayanapura@ Narayanapura Village, K.R Puram Hobli, Bangalore East taluk, Bangalore. Measuring East to West 30 Feet and North to South 40 Feet totally 1200 Sq Feet. and bounded on the; **East by**: House Site No.73, **West by:** Site No.71, **North by:** 20 Feet Road, South by: Site No.74

BHARATH. B. M. MA, LLB.,
Advocate & Legal Consultant
No.6, Near Sub Registrar Office, K R Pura, Bengaluru-560036.
Contact No.: 9844982345, 7019860613
Bangalore Dt: 31-03-2023

PUBLIC NOTICE
To Place your Classified Ads Contact
9731810277

EDUCATION SUCCESS ಕ್ಲಾಸಿಫೈಡ್ಸ್

GIBS B SCHOOL
(Affiliated to Bengaluru City University, Approved by AICTE, New Delhi.)
@ **SRI KRISHNA GROUP OF INSTITUTIONS**
#2(P), ITI Layout Main Road, Near Vidyapeeta, BSK III Stage, Bengaluru–560 085.

HEARTY CONGRATULATIONS TO
THE BENGALURU CITY UNIVERSITY RANK HOLDERS OF
MBA (2020-22 BATCH)

1st RANK PAVITHRA A | 4th RANK NISHANTH A | 5th RANK ROJA

SRI KRISHNA DEGREE COLLEGE
(Permanently Affiliated to Bengaluru City University & ISO Certified)
Accredited by NAAC in 2nd Cycle with **A+ Grade**
B.Com, BBA BCA & M.Com

Management Congratulate the Faculty of both GIBS B SCHOOL & SRI KRISHNA DEGREE COLLEGE for the above achievements

Wanted Computer Faculty with MCA / M.Sc. (Computer Science)
Apply - principal.skdc2018@gmail.com

Founder Chairman
Dr. M RUKMANGADA NAIDU

RENTAL PROPERTIES

Accommodation Available

House

J.P.NAGAR DOLLARS Colony, Fully Furnished House For Rent. 5 Bedroom, 4 Car-parking. Vastu. 9945114693, 9632852947.

REAL ESTATE SELLING

House

Basaveshwaranagar

RESIDENTIAL BUILDING For Sale, 20ft x 45ft, South Facing, East Door G+ 3Floor, 2 Single Bedroom, 2 Double Bedroom, 1 Shop, Mobile Tower, Excepted Rent Rs. 85.000/- 1st Stage, Basaveshwaranagar: 9845665194

Sites

Kanakapura Road

10000 SQFT Residential Converted 30ft Road Approch Land, Rs. 3200/ Sqft Sale at Adjacent to Kaglipura Kanakapura Road Bangalore- 82 9342552428

Flat

Mahalakshmi Layout

3 BHK Flat Ready to Occupy Semi Furnished 2 Flats Available 1km Iskcon Temple, Metro 1.2Cr Negotiable: 9845014364/ 9513999423

JOB OPPORTUNITIES

Wanted

WANTED 4YEARS + Experience B.Sc Female Home Nurse Rajajinagar Ph: 9341967722

WANTED IMMEDIATELY for Computer Operators at Seegehalli Cross, Magadi Road, Bangalore. Good Salary. Contact: 9620929502

Teachers/ Professors

REQUIRED LECTURERS with B.Pharm or M.Pharm Qualification for Valley College of Pharmacy, Kurubarahalli, Bangalore-86. Interested persons may apply to: kret@rediffmail.com

REQUIRED EXPERIENCED Trained Teachers to handle Nursery, Primary, High School and Receptionist for the Academic year 2023-2024. STATE & ICSE. Qualification: NTT, D.Ed., B.A/B.Sc.,B.Ed M.A/M.Sc.,M.Ed. Only English medium candidates need apply. Contact Max Muller Public School, Mahalakshmi Layout, Bangalore-96. Ph:23376050. E-mail:maxmullerpublicschool.mlayout@gmail.com

PERSONAL

Change of Name

CHANGE OF NAME
I, **MANISHA G JAIN** Residing at No. # 209, Garla Residency, West Circle Road, V V Puram, Bangalore-560004, have changed my name to **MANISHA JAIN** vide affidavit dated 29.03.2023, before Notary M. Narendran, Bangalore

I, NEETHA CHETHAN W/O CHETHAN KUMAR P, R/O #61, Krithi Nilaya, PVR GREENS, SINGENA AGRAHARA ROAD, GOTTAMARANAHALLI, ELECTRONIC CITY PHASE 2, BENGALURU 560100, have changed my name from NEETA CHETHAN REDDY alias NEETHA CHETHAN REDDY to NEETHA CHETHAN vide affidavit dated : 30/03/2023 sworn before notary B.M. Chandrashekar, BENGALURU.

CHANGE OF NAME
We, **Mrs.GOURI KAR** and **Mr.MANASIJ KAR,** Parents Presently R/at flat No. B-1103, 'Brigade Metropolis', ITPL Main Road, Mahadevapura, Bangalore - 5600048. Karnataka,India, hereby declare that we have changed our daughter's name from **SHIREEN KAR to SHIREEN BANERJEE KAR,** hereafter she will be known and called as **SHIREEN BANERJEE KAR** only. vide affidavit dated 27.01.2022, sworn before K.V.Jagannath Reddy, Advocate & Notary Public, Bengalore

I, AAFREEN RIZWAN, residing at No. 1125, 35th 'C' cross Jayanagar 4th T block, Bangalore- 560041, have changed my name to AFREEN RIZWAN, vide affidavit dated 29.03.2023 before Notary Hegde Ganapati Venkataraman, Bangalore. Henceforth I shall be called AFREEN RIZWAN only.

SADHANA KUMARI, Wife/o 6500207N, NK, NARENDRA SINGH YADAV, Vill- Morar Gwalior Buxar, Madhya Pradesh changed name SADHANA KUMARI to SADHANA YADAV, 28/03/2023, Notary K.V. Mani, Bangalore

I, CHETHAN KUMAR P. S/o Prasanna Kumar, R/O #61, Krithi Nilaya, PVR GREENS, SINGENA AGRAHARA ROAD, GOTTAMARANAHALLI, ELECTRONIC CITY PHASE 2, BENGALURU 560100,, have changed my daughter's name from KRITHI CHETHAN REDDY to KRITHI CHETHAN vide affidavit dated: 30/03/2023 sworn before notary B.M. Chandrashekar, BENGALURU.

I, CHETHAN KUMAR P. S/o Prasanna Kumar, R/O #61, Krithi Nilaya, PVR GREENS, SINGENA AGRAHARA ROAD, GOTTAMARANAHALLI, ELECTRONIC CITY PHASE 2, BENGALURU 560100, have changed my Son's name from VYNAV CHETHAN REDDY to NIHAR VYNAV CHETHAN vide affidavit dated: 30/03/2023 sworn before notary B.M. Chandrashekar, BENGALURU.

OTHERS

For Sale

OWNER LEAVING LEATHER SOFA TEAPOY TEAK DINING DIWAN KING COT AND MATTRESS. CALL: 9845414482/ 7019263843

PROPERTY CORNER

BANK PREMISES FOR RENT AT BTM LAYOUT
No. 281, 7th Main, BTM Layout, 2nd Stage, Bangalore-76
Ground Floor Premises 1500 Sq. feet with Strong Room and ATM frontage
Ideal for Public Sector / Private / Co-operative / Small Finance Bank in- 20 KW power - 24 hour power Back up- Ready to occupy.
Contact : 9341219091

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH ಪ್ರಜಾವಾಣಿ
BOOK YOUR AD FOR SUNDAY & GET **50% OFF*** ON WEEKDAYS
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164
*conditions apply

ನೈಋತ್ಯ ರೈಲ್ವೆ
ಟೆಂಡರ್ ಪ್ರಕಟಣೆ ಸಂ. ಇಸಿಎನ್-ಟಿಆರ್‌ಡಿ-03-2023-ಆರ್‌ಟಿ
ದಿನಾಂಕ : 28-03-2023
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಗಿಣಿಗೇರ ಮತ್ತು ಮುನಿರಾಬಾದ್ ನಡುವೆ ಕಿ.ಮೀ.126/900 – 127/000 ನಲ್ಲಿ ಎಲ್‌ಸಿ 72 ಬದಲಿಗೆ ನಿರ್ಮಿಸಲಾಗುವ ರೈಲ್ ಮೇಲ್ಸೇತುವೆಗೆ ಸಂಬಂಧಿಸಿದಂತೆ ಹಾಲಿ ಇರುವ ಓಹೆಚ್‌ಇ ವ್ಯವಸ್ಥೆಗಳ ಮಾರ್ಪಾಡು.	ರೂ. 32,09,984.80

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 20-04-2023 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್/ಟಿಆರ್‌ಡಿ/ನಿರ್ಮಾಣ ಬೆಂಗಳೂರು ದಂಡು
ಪಿಯುಬಿ/767/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23
S.W.Railways SWRRLY SWRRLY

ORDER

WHEREAS an inquiry Rule 14 of the Central Civil services (Classification Control and Appeal) Rules 1965, for continuous unauthorized absence from duty **wef 07 Jul 2008** is being held against **MES-198330 Shri S Padmanabhan, Mazdoor.**

AND WHEREAS, the undersigned, in exercise of the powers conferred by sub rule (2) of Rule 14 of the said rule appointed Shri Vinay Kumar Srivastava, AE (Civ) as the Inquiring Authority to inquire into the charges framed against the said MES-198330 Shri S Padmanabhan, Mazdoor.

AND WHEREAS, the undersigned, in exercise of the powers conferred by sub rule (5) (c) of Rule 14 of the said rules, appointed Shri M. Manikandan, AE (Civ) as the Presenting Officer.

NOW THEREFORE, the undersigned in exercise of the powers conferred by Rule 19 of the Central Civil Services (Classification Control and Appeal) Rules 1965, hereby removes the said MES-198330 Shri S Padmanabhan, Mazdoor **wef 07 Jul 2008** under Rule 11 (viii) of the Central Civil Services (Classification Control and Appeal) Rules 1965 without any terminal benefits.

Sd/-Garrison Engineer (AF) Yelahanka, Bangalore

PUBLIC NOTICE

Our client ('**Client**') is carrying out an investigation into the title of Mrs. Kamalakshi Kothaneth (present owner) to the immovable property converted for residential purpose and being a portion of Survey No. 14/1 (Old Survey No. 14), bearing E-Khata No. 150300200300220057- 227/223, measuring 02 Acres 23 Guntas, situated at Kodagurki Village, Kasaba Hobli, Devanahalli Taluk, Bangalore Rural District, morefully described in the '**Schedule**' hereto and hereinafter referred to as '**Schedule Property**'.

Notice is hereby given to the general public that any person/s other than the present owner, asserting any right, title, charge, lien, claim/s or any interest whatsoever in respect of the Schedule Property, are hereby called upon to submit to the undersigned, their claim/s, if any. The said claim/s must be in writing, together with documentary proof of such claim/s, so as to reach us at the address given below within a period of **15 (Fifteen) days** from the date of publication of this Notice.

SCHEDULE
(Description of the Schedule Property)

All that piece and parcel of immovable property converted for residential purpose and being a portion of Survey No. 14/1 (Old Survey No. 14), bearing E-Khata No. 150300200300220057- 227/223, measuring 02 Acres 23 Guntas, situated at Kodagurki Village, Kasaba Hobli, Devanahalli Taluk, Bangalore Rural District and bounded on the:

East by : Portion of property bearing Survey No. 15;
West by : Road (Nandi Road);
North by : Yambrahalli Road (Mud Road); and
South by : Remaining portion of property bearing Survey No. 14.

Sd/-
Mr. Srinivas B.R. & Ms. Brijita Prakash, Partners
DSK Legal,
Prestige Loka, No. 201, 2nd Floor, No. 7/1 & 7/7, Brunton Road, Craig Park Layout, Bengaluru – 560025.Tel: 080-69548770.
Date: 31.03.2023
Place : Bengaluru

434 ಕಾಲೇಜುಗಳಲ್ಲೂ ಪ್ರಭಾರ ಪ್ರಾಂಶುಪಾಲರು • 310 ಹುದ್ದೆಗಳ ನೇಮಕಾತಿ ನನೆಗುದಿಗೆ

ಪದವಿ ಕಾಲೇಜು: ಪ್ರಭಾರಿಗಳದ್ದೇ ದರ್ಬಾರ್

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇದ್ದ 310 ಪ್ರಾಂಶುಪಾಲರ (ಗ್ರೇಡ್–1) ಹುದ್ದೆಗಳ ನೇರ ನೇಮಕಾತಿ ಪ್ರಕ್ರಿಯೆ ನನೆಗುದಿಗೆ ಬಿದ್ದಿದ್ದು, ರಾಜ್ಯದ 434 ಕಾಲೇಜುಗಳಲ್ಲೂ ‘ಪ್ರಭಾರ’ವೇ ಮುಂದುವರಿದಿದೆ.

ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗಳಿಗೆ ಕಾಯಂ ನೇಮಕ ಮಾಡುವ ಪ್ರಕ್ರಿಯೆ ಹಲವು ದಶಕಗಳಿಂದಲೂ ನಿಯಮಿತವಾಗಿ ನಡೆದಿಲ್ಲ. ಸೇವಾ ಹಿರಿತನದ ಆಧಾರದ ಮೇಲೆ ಹಲವು ಪ್ರಾಧ್ಯಾಪಕರಿಗೆ 2008–2009ನೇ ಸಾಲಿನಲ್ಲಿ ಪ್ರಾಂಶುಪಾಲರ ಹುದ್ದೆಗಳಿಗೆ ಬಡ್ತಿ ನೀಡಲಾಗಿತ್ತು. ಒಂದು ಸಾವಿರ ವಿದ್ಯಾರ್ಥಿಗಳಿಗಿಂತ ಕಡಿಮೆ ಇರುವ ಹಾಗೂ ಒಂದು ಸಾವಿರಕ್ಕಿಂತ ಹೆಚ್ಚಿರುವ ಕಾಲೇಜುಗಳನ್ನು ವಿಂಗಡಿಸಿ ಗ್ರಾಡ್–1 ಹಾಗೂ ಗ್ರೇಡ್–2 ಪ್ರಾಂಶುಪಾಲರು ಎಂದು ಪರಿಗಣಿಸಿ ಬಡ್ತಿಗೆ ಪರಿಗಣಿಸಲಾಗಿತ್ತು. ಹೀಗೆ ಕಾಯಂ ಪ್ರಾಂಶುಪಾಲರನ್ನು ನೇಮಕ ಮಾಡಿ 14 ವರ್ಷಗಳಾದರೂ ಮತ್ತೆ ಪ್ರಕ್ರಿಯೆಗಳೇ ನಡೆದಿರಲಿಲ್ಲ.

ಪ್ರಜಾವಾಣಿ ವಿಶೇಷ

ಅಂದು ಪ್ರಾಂಶುಪಾಲರಾಗಿ ಬಡ್ತಿ ಹೊಂದಿದ್ದ ಎಲ್ಲರೂ ನಿವೃತ್ತರಾಗಿದ್ದಾರೆ. ಸುದೀರ್ಘ ಅವಧಿ ಬಡ್ತಿ ನೀಡದ ಕಾರಣ ಸಾವಿರಕ್ಕೂ ಹೆಚ್ಚು ಪ್ರಾಧ್ಯಾಪಕರು ಪ್ರಾಂಶುಪಾಲರ ಹುದ್ದೆ ದೊರಕದೆ ನಿವೃತ್ತರಾಗಿದ್ದಾರೆ. ರಾಜ್ಯದ ಎಲ್ಲ ಪ್ರಥಮ

> **ಲಿಖಿತ ಪರೀಕ್ಷೆ ನಿಗದಿಯಾದ ಸಮಯದಲ್ಲಿ ಕೆಲ ಕಾಲೇಜುಗಳಿಗೆ ನ್ಯಾಕ್ ಸಮಿತಿಗಳ ಭೇಟಿ ಇದ್ದ ಕಾರಣ ಅಭ್ಯರ್ಥಿಗಳ ಮನವಿ ಪರಿಗಣಿಸಿ ಪರೀಕ್ಷೆ ಮುಂದೂಡಲಾಗಿದೆ.**
> **ಎಸ್.ರಮ್ಯಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ.

> **ಬಡ್ತಿ ಇಲ್ಲದೆ 1,400 ಅಧ್ಯಾಪಕರು ನಿವೃತ್ತರಾಗಿದ್ದಾರೆ. ನೇರನೇಮಕಾತಿಗೆ ಒಪ್ಪಿಕೊಂಡಿದ್ದೆವು. ಒಂದು ವಾರ ಪರೀಕ್ಷೆ ಮುಂದೂಡಲು ಕೋರಿದ್ದು, ತಿಂಗಳಾದರೂ ಮರು ನಿಗದಿ ಮಾಡಿಲ್ಲ.**
> **ಟಿ.ಎಂ.ಮಂಜುನಾಥ್,** ಅಧ್ಯಕ್ಷ, ಸರ್ಕಾರಿ ಕಾಲೇಜು ಅಧ್ಯಾಪಕರ ಸಂಘ.

ದರ್ಜೆ ಕಾಲೇಜುಗಳಲ್ಲೂ ಹಿರಿಯ ಪ್ರಾಧ್ಯಾಪಕರೇ ಪ್ರಭಾರ ವಹಿಸಿಕೊಂಡಿದ್ದಾರೆ. ಒಂದು ಕಾಲೇಜಿನಲ್ಲೂ ಕಾಯಂ ಪ್ರಾಂಶುಪಾಲರಿಲ್ಲ.

ನೇರ ನೇಮಕಾತಿ ಪ್ರಕ್ರಿಯೆಯೂ ನನೆಗುದಿಗೆ: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಖಾಲಿ ಇರುವ ಪ್ರಾಂಶುಪಾಲರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉನ್ನತ ಶಿಕ್ಷಣ ಇಲಾಖೆ ಮಾರ್ಚ್ 2022ರಲ್ಲಿ ಅಧಿಸೂಚನೆ ಹೊರಡಿಸಿತ್ತು. ಪರೀಕ್ಷೆ ನಡೆಸುವ ಹೊಣೆಗಾರಿಕೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ (ಕೆಇಎ) ವಹಿಸಲಾಗಿತ್ತು. ಪ್ರಾಧಿಕಾರ ಡಿಸೆಂಬರ್‌ನಲ್ಲಿ ಲಿಖಿತ ಪರೀಕ್ಷೆ ನಡೆಸಲು ಅರ್ಜಿ ಆಹ್ವಾನಿಸಿತ್ತು. 15 ವರ್ಷಗಳು ಸೇವೆ ಪೂರೈಸಿದ, ಪಿಎಚ್‌.ಡಿ ಪಡೆದ ಅಧ್ಯಾಪಕರು ಅರ್ಜಿ ಸಲ್ಲಿಸಿದ್ದರು. ಇದೇ ಫೆಬ್ರುವರಿ 28ರಂದು ಪರೀಕ್ಷೆ ನಿಗದಿಯಾಗಿತ್ತು. ಕೊನೆ ಕ್ಷಣಗಳಲ್ಲಿ ಪರೀಕ್ಷೆ ಮುಂದೂಡಲಾಗಿತ್ತು.

ನಿರ್ದೇಶಕ ಸ್ಥಾನವೂ ಪ್ರಭಾರ: ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುವ ಪ್ರಾಧ್ಯಾಪಕರಿಗೆ ಬಡ್ತಿ ನೀಡದ ಕಾರಣ ಪ್ರಾಂಶುಪಾಲರ ಹುದ್ದೆಗಳ ಜತೆಗೆ, ಪ್ರಾಂಶುಪಾಲರ ಸ್ಥಾನದಿಂದ ಬಡ್ತಿ ಹೊಂದುವ ಜಂಟಿ ನಿರ್ದೇಶಕರು, ಹೆಚ್ಚುವರಿ ನಿರ್ದೇಶಕರು ಹಾಗೂ ನಿರ್ದೇಶಕ ಹುದ್ದೆಗಳೂ ಖಾಲಿ ಇವೆ. ಸೇವಾ ಹಿರಿತನ ಹೊಂದಿರುವ ಪ್ರಾಧ್ಯಾಪಕರೇ ಪ್ರಭಾರ ವಹಿಸಿಕೊಂಡು ಆ ಸ್ಥಾನಗಳ ಜವಾಬ್ದಾರಿ ನಿರ್ವಹಿಸುತ್ತಿದ್ದಾರೆ. ಪ್ರಾಧ್ಯಾಪಕರಾಗಿರುವ ಅಪ್ಪಾಜಿ ಗೌಡ ಅವರು ಪ್ರಭಾರದ ಮೇಲೆ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ

ಧ್ವಜಾರೋಹಣ ಮೂಲಕ ‘ಬೆಂಗಳೂರು ಕರಗ ಶಕ್ತ್ಯೋತ್ಸವ’ ಆರಂಭ

ಕರಗದ ಕುಂಟೆಯಲ್ಲಿ ಪ್ರಥಮ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರಂಪರಿಕ ‘ಬೆಂಗಳೂರು ಕರಗ ಶಕ್ತ್ಯೋತ್ಸವ’ ಆರಂಭವಾಗಿದ್ದು, ಬುಧವಾರ ರಾತ್ರಿ ಧ್ವಜಾರೋಹಣ ಮಾಡುವುದರ ಮೂಲಕ ಚಾಲನೆ ನೀಡಲಾಯಿತು.

ತಿಗಳರಪೇಟೆಯ ಶ್ರೀ ಧರ್ಮರಾಯಸ್ವಾಮಿ ದೇವಾಲಯ ತಳಿರು–ತೋರಣ ಹಾಗೂ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡಿದ್ದು, ಬುಧವಾರದಿಂದಲೇ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾದವು.

ತಿಗಳ ಸಮುದಾಯದ ಅರ್ಚಕ ಎ. ಜ್ಞಾನೇಂದ್ರ ಅವರು ಈ ಬಾರಿ ಕರಗ ಹೊರಲಿದ್ದು, ಬೆಳಿಗ್ಗೆ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗೌಡರು, ಗಣಾಚಾರಿ ಹಾಗೂ ಗಂಟೆ ಪೂಜಾರಿಗಳ ಜತೆ ಮೊದಲನೇ ಸ್ನಾನಘಟ್ಟ ಕಬ್ಬನ್‌ಪಾರ್ಕ್‌ನ ಕರಗದ ಕುಂಟೆಗೆ ತೆರಳಿ ಅಲ್ಲಿ ಪ್ರಥಮ ಪೂಜೆ, ಗಂಗೆ ಪೂಜೆ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಿದರು. ರಾಮನವಮಿ ಅಂಗವಾಗಿ ಕೋಸಂಬರಿ ಮತ್ತು ಪಾನಕವನ್ನು ವಿತರಣೆ ಮಾಡಲಾಯಿತು. ಸಂಜೆ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಿತು.

‘ಸಂಪಂಗಿ ಕೆರೆಯ ಅಂಗಳದಲ್ಲಿನ ಶಕ್ತಿ ಪೀಠದಲ್ಲಿ ಶುಕ್ರವಾರ ದ್ವಿತೀಯ ಪೂಜೆ ನಡೆಯಲಿದೆ. ಶನಿವಾರ ಲಾಲ್‌ಬಾಗ್ ರಸ್ತೆಯ ಹೂವಿನ ತೋಟದಲ್ಲಿ, ಭಾನುವಾರ ಗವಿಪುರ ಗುಟ್ಟಹಳ್ಳಿಯ ಜಲಕಂಠೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ನಡೆಯಲಿದೆ. ಸೋಮವಾರ ಕೆಂಪೇಗೌಡ ವೃತ್ತದ ಅಣ್ಣಮ್ಮ ದೇವಸ್ಥಾನ, ಮಂಗಳವಾರ ಕಬ್ಬನ್ ಪಾರ್ಕ್‌ನ ಕರಗದ ಕುಂಟೆ, ಬುಧವಾರ ಕಲಾಸಿಪಾಳ್ಯದ ಮರಿಸ್ವಾಮಿ ಮಠದಲ್ಲಿ ಪೂಜೆ ನಡೆಯಲಿದೆ’ ಎಂದು ಧರ್ಮರಾಯಸ್ವಾಮಿ ದೇವಸ್ಥಾನದ ಅಧ್ಯಕ್ಷ ಕೆ. ಸತೀಶ್ ಮಾಹಿತಿ ನೀಡಿದರು.

‘ಹೂವಿನ ಕರಗ ಏಪ್ರಿಲ್ 6ರ ರಾತ್ರಿ 11.30ಕ್ಕೆ ಧರ್ಮರಾಯಸ್ವಾಮಿ ದೇವಾಲಯದಿಂದ ಹೊರಡುವ ಉತ್ಸವ ಹಲಸೂರು ಪೇಟೆಯ ದೇವಾಲಯಗಳಲ್ಲಿ ಪೂಜೆ ಸ್ವೀಕರಿಸಿ, ನಗರ್ತಪೇಟೆ ಮಾರ್ಗವಾಗಿ ಕಬ್ಬನ್ ಪೇಟೆ, ಗಾಣಿಗರ ಪೇಟೆ, ಅವೆನ್ಯೂ ರಸ್ತೆ, ದೊಡ್ಡಪೇಟೆ, ಕೆ.ಆರ್. ಮಾರುಕಟ್ಟೆ, ಆಕ್ಕಿಪೇಟೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರಪೇಟೆ, ಸುಣ್ಣಕಲ್ ಪೇಟೆಗಳಲ್ಲಿ ಸಂಚರಿಸಲಿದೆ’ ಎಂದರು.

ಕಬ್ಬನ್‌ಪಾರ್ಕ್‌ ಕರಗದ ಕುಂಟೆಯಲ್ಲಿ ಗುರುವಾರ ಪೂಜೆ ಸಲ್ಲಿಸಿ ತೆರಳುತ್ತಿರುವ ಕರಗಕರ್ತ ಎ. ಜ್ಞಾನೇಂದ್ರ ಹಾಗೂ ಇತರ ವೀರಕುಮಾರರು —ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಪ್ರಯಾಣಿಕರ ಮೇಲೆ ಹಲ್ಲೆ: ಆರೋಪ

ರಾಮನಗರ: ಕಣಮಿಣಿಕೆ ಟೋಲ್ ಪ್ಲಾಜಾ ಬಳಿ ಬುಧವಾರ ಸಂಜೆ ಟೋಲ್ ಕಟ್ಟುವ ಸಂಬಂಧ ಪ್ರಯಾಣಿಕ ಹಾಗೂ ಟೋಲ್ ಸಿಬ್ಬಂದಿ ನಡುವೆ ಗಲಾಟೆ ನಡೆದಿದ್ದು, ಈ ಸಂದರ್ಭ ಟೋಲ್ ಸಿಬ್ಬಂದಿ ವಾಹನ ಮಾಲೀಕನ ಮೇಲೆ ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಬೆಂಗಳೂರಿನ ತಣಿಸಂದ್ರ ನಿವಾಸಿ ವಿಶ್ವನಾಥ್ ಎಂಬುವರು ರಾತ್ರಿ ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರು ಕಡೆಗೆ ಹೊರಟಿದ್ದರು. ಈ ವೇಳೆ ಟೋಲ್‌ನಲ್ಲಿ ಕಾರಿನ ಫಾಸ್ಟ್ಯಾಗ್ ರೀಡ್ ಆಗಿರಲಿಲ್ಲ. ಇದೇ ವಿಚಾರವಾಗಿ ವಿಶ್ವನಾಥ್ ಹಾಗೂ ಸಿಬ್ಬಂದಿ ನಡುವೆ ಜಗಳ ನಡೆದಿದೆ. ಸಿಬ್ಬಂದಿ ಹಲ್ಲೆ ನಡೆಸಿದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಕುಂಬಳಗೋಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಗ್ಗನಹಳ್ಳಿ ಸುತ್ತಮುತ್ತ ಆನೆ ಓಡಾಟ

ರಾಮನಗರ: ತಾಲ್ಲೂಕಿನ ಸುಗ್ಗನಹಳ್ಳಿ ಸುತ್ತಮುತ್ತ ಗುರುವಾರ ಬೆಳಿಗ್ಗೆ ಒಂಟಿ ಆನೆಯೊಂದು ಅಡ್ಡಾದಿಡ್ಡಿ ಓಡಾಡುತ್ತ ಆತಂಕ ಸೃಷ್ಟಿಸಿತ್ತು. ಹೊಲ ಗದ್ದೆಗಳಲ್ಲಿ ಆನೆ ಸಂಚಾರ ಕಂಡು ಗ್ರಾಮಸ್ಥರು ಗಾಬರಿಗೊಂಡಿದ್ದು, ಅರಣ್ಯ ಇಲಾಖೆ ಸಿಬ್ಬಂದಿಗೆ ಸುದ್ದಿ ಮುಟ್ಟಿಸಿದರು. ಇಲಾಖೆ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದ್ದು, ಆನೆಯನ್ನು ಕಾಡಿನತ್ತ ಕಳುಹಿಸಲು ಹರಸಾಹಸ ಪಟ್ಟರು.

ಮಹಿಳೆ ಕೂಡಿಹಾಕಿ ಚಿನ್ನಾಭರಣ ದೋಚಿದ ದಂಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆಯಲ್ಲಿ ಒಂಟಿಯಾಗಿದ್ದ ಮಹಿಳೆಯನ್ನು ಕೊಠಡಿಯಲ್ಲಿ ಕೂಡಿಹಾಕಿ ಚಿನ್ನಾಭರಣ ದೋಚಲಾಗಿದ್ದು, ಈ ಸಂಬಂಧ ಗೋವಿಂದಪುರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ವೀರಣ್ಣನಪಾಳ್ಯ ನಿವಾಸಿಯಾದ ಪಶುವೈದ್ಯ ಡಾ. ಶಾಹೀದ್ ಮನೆಯಲ್ಲಿ ಈ ಕೃತ್ಯ ನಡೆದಿದೆ. ಅವರ ಪತ್ನಿಯನ್ನು ಕೂಡಿಹಾಕಿ 250 ಗ್ರಾಂ ಚಿನ್ನಾಭರಣ ಹಾಗೂ ನಗದು ದೋಚಲಾಗಿದೆ. ಮನೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳದ ದೀಪಕ್ ಮತ್ತು ಅಂಜಲಿ ದಂಪತಿಯೇ ಕೃತ್ಯ ಎಸಗಿ ಪರಾರಿಯಾಗಿದ್ದು, ಅವರಿಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಶಾಹೀದ್ ಅವರು ಪತ್ನಿ ಹಾಗೂ ಮೂವರು ಮಕ್ಕಳ ಜೊತೆ ವಾಸವಿದ್ದರು. ನೇಪಾಳದ ದೀಪಕ್ ದಂಪತಿ ವಾರದ ಹಿಂದೆಯಷ್ಟೇ ಡಾ. ಶಾಹೀದ್ ಮನೆಯಲ್ಲಿ ಕೆಲಸಕ್ಕೆ ಸೇರಿದ್ದರು. ದೀಪಕ್ ಭದ್ರತಾ ಸಿಬ್ಬಂದಿ ಆಗಿದ್ದ. ಅಂಜಲಿ ಮನೆ ಕೆಲಸ ಮಾಡುತ್ತಿದ್ದರು.’

‘ಕುಣಿಗಲ್ ಬಳಿ ಕೋಳಿ ಫಾರ್ಮ್ ನಡೆಸುತ್ತಿರುವ ಶಾಹೀದ್, ಅದರ ಕೆಲಸಕ್ಕೆಂದು ಬುಧವಾರ ಬೆಳಿಗ್ಗೆ ಮನೆಯಿಂದ ಹೊರ ಹೋಗಿದ್ದರು. ಮಕ್ಕಳು ಶಾಲೆಗೆ ತೆರಳಿದ್ದರು. ಪತ್ನಿ ಮಾತ್ರ ಮನೆಯಲ್ಲಿದ್ದರು. ಅದನ್ನು ಗಮನಿಸಿದ್ದ ದೀಪಕ್–ಅಂಜಲಿ, ಪರಿಚಯಸ್ಥ ಇಬ್ಬರನ್ನು ಮನೆಗೆ ಕರೆಸಿಕೊಂಡಿದ್ದರು’ ಎಂದರು.

‘ನೇಪಾಳದ ನಾಲ್ವರು ಸೇರಿ ಶಾಹೀದ್ ಪತ್ನಿ ಮೇಲೆ ಹಲ್ಲೆ ಮಾಡಿದ್ದರು. ನಂತರ, ಅವರನ್ನು ಕೊಠಡಿಯಲ್ಲಿ ಕೂಡಿಹಾಕಿದ್ದರು. ಮನೆಯಲ್ಲಿಟ್ಟಿದ್ದ ಚಿನ್ನಾಭರಣ ಹಾಗೂ ನಗದು ದೋಚಿಕೊಂಡು ಆರೋಪಿ ಪರಾರಿಯಾಗಿದ್ದಾರೆ. ಕೆಲ ಹೊತ್ತಿನ ನಂತರ ಕೊಠಡಿಯಿಂದ ಹೊರಬಂದ ಪತ್ನಿ, ಸ್ಥಳೀಯರಿಗೆ ವಿಷಯ ತಿಳಿಸಿದ್ದರು’ ಎಂದರು.

‘ನೇಪಾಳ ದಂಪತಿಯ ಕೃತ್ಯ ಮನೆಯಲ್ಲಿದ್ದ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಆರೋಪಿಗಳು ನೇಪಾಳಕ್ಕೆ ಹೋಗಿರುವ ಮಾಹಿತಿ ಇದ್ದು, ಅವರ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ’ ಎಂದರು.

ಕಳ್ಳತನವೇ ವೃತ್ತಿ: ಅಚ್ಯುತ್‌ಕುಮಾರ್ ಬಂಧನ

ಬೆಂಗಳೂರು: ರಾಜ್ಯದ 160ಕ್ಕೂ ಹೆಚ್ಚು ಕಡೆ ಸರ ಕಳ್ಳತನ ಮಾಡಿ ಜೈಲು ಸೇರಿ ಜಾಮೀನು ಮೇಲೆ ಹೊರಬಂದಿದ್ದ ಆರೋಪಿ ಅಚ್ಯುತ್‌ಕುಮಾರ್ ಅಲಿಯಾಸ್ ವಿಶ್ವನಾಥ್, ಶೇಷಾದ್ರಿಪುರ ಠಾಣೆ ವ್ಯಾಪ್ತಿಯಲ್ಲಿ 4 ಕಡೆ ಕೃತ್ಯ ಎಸಗಿ ಪುನಃ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾನೆ.

‘ದ್ವಿಚಕ್ರ ವಾಹನದಲ್ಲಿ ಬಂದು ಮಹಿಳೆಯರ ಸರ ಕಿತ್ತೊಯ್ದಿದ್ದ ಆರೋಪಿ ಅಚ್ಯುತ್‌ಕುಮಾರ್ ಹಾಗೂ ಸಹಚರ ವಾಸೀಂನನ್ನು ಬಂಧಿಸಲಾಗಿದೆ. ಇವರಿಂದ ₹15.80 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೈಕ್ ಜಪ್ತಿ ಮಾಡಲಾಗಿದೆ. ಇಬ್ಬರೂ ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಹುಬ್ಬಳ್ಳಿ ತಾಲ್ಲೂಕಿನ ಕೋಳಿವಾಡದ ನಿವಾಸಿ ಅಚ್ಯುತ್‌ಕುಮಾರ್, ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ. ನಗರದಿಂದ ನಗರಕ್ಕೆ ವಾಸ್ತವ್ಯ ಬದಲಿಸಿ ಕೃತ್ಯ ಎಸಗುತ್ತಿದ್ದ. ಈತ ಕದಿಯುತ್ತಿದ್ದ ಆಭರಣಗಳನ್ನು ಪತ್ನಿ ಹಾಗೂ ಸಂಬಂಧಿಕರು ವಿಲೇವಾರಿ ಮಾಡುತ್ತಿದ್ದ ಬಗ್ಗೆ ಮಾಹಿತಿ ಇದೆ’ ಎಂದು ತಿಳಿಸಿದರು.

‘ಕೃತ್ಯ ಎಸಗಿ ತಲೆಮರೆಸಿಕೊಂಡಿದ್ದ ಈತನನ್ನು 2018ರಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿ ಬಂಧಿಸಿದ್ದ ಪಶ್ಚಿಮ ವಿಭಾಗದ ಪೊಲೀಸರು, ಕಾಲಿಗೆ ಗುಂಡು ಹೊಡೆದಿದ್ದರು. ಗುಂಡೇಟಿನಿಂದ ಗಾಯಗೊಂಡಿದ್ದ ಅಚ್ಯುತ್‌ಕುಮಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖವಾಗಿದ್ದ. 4 ವರ್ಷ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದ ಈತ, ನಂತರ ಜಾಮೀನು ಮೇಲೆ ಬಿಡುಗಡೆಯಾಗಿದ್ದ. ಸಹಚರರ ತಂಡ ಕಟ್ಟಿಕೊಂಡು ಪುನಃ ಕೃತ್ಯ ಎಸಗಲಾರಂಭಿಸಿದ್ದ’ ಎಂದರು.

ರಾಮನವಮಿ ಪ್ರಯುಕ್ತ ಗಾಂಧಿನಗರದ ಶ್ರೀರಾಮ ದೇವಸ್ಥಾನದಲ್ಲಿ ಗುರುವಾರ ವಿಶೇಷ ಪೂಜೆ ಸಲ್ಲಿಸಲಾಯಿತು (ಎಡಚಿತ್ರ)

ಸಂಜಯನಗರದಲ್ಲಿ ನಡೆದ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಭಕ್ತರು –ಪ್ರಜಾವಾಣಿ ಚಿತ್ರ

ರಾಜಾಜಿನಗರದ ರಾಮಮಂದಿರದಲ್ಲಿ ರಾಮನ ಮೂರ್ತಿಯ ರಥೋತ್ಸವ ನಡೆಯಿತು. –ಪ್ರಜಾವಾಣಿ ಚಿತ್ರ

ಕೆಂಪೇಗೌಡ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿರುವ ಪಾತಾಳ ಆಂಜನೇಯ ದೇವಸ್ಥಾನದ ವತಿಯಿಂದ ಹಮ್ಮಿಕೊಂಡಿದ್ದ ಬೃಹತ್ ರಾಮಮೂರ್ತಿ ಮೆರವಣಿಗೆಯಲ್ಲಿ ಹನುಮಂತನ ವೇಷ ಧರಿಸಿ ಕಲಾವಿದರು ನೃತ್ಯ ಪ್ರದರ್ಶಿಸಿದರು. –ಪ್ರಜಾವಾಣಿ ಚಿತ್ರ

ದೇಗುಲಗಳ ಬಳಿ ಭಕ್ತರ ದಂಡು: ಪಾನಕ, ಕೋಸಂಬರಿ ವಿತರಣೆ

ಸಂಭ್ರಮದ ರಾಮನವಮಿ ಎಲ್ಲೆಡೆ ರಾಮನ ಜಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಕ್ತಿ, ಸಡಗರ-ಸಂಭ್ರಮದೊಂದಿಗ ನಗರದಲ್ಲಿ ಶ್ರೀರಾಮನವಮಿಯನ್ನು ಗುರುವಾರ ಆಚರಿಸಲಾಯಿತು. ದೇವಾಲಯಗಳಲ್ಲಿ ಶ್ರೀರಾಮ ಸ್ಮರಣೆಯೊಂದಿಗೆ ವಿಶೇಷ ಪೂಜೆ ಮತ್ತು ಅಭಿಷೇಕ ಕಾರ್ಯಕ್ರಮಗಳು ನಡೆದವು.

ಆಂಜನೇಯ ಹಾಗೂ ಶ್ರೀರಾಮ ದೇವಾಲಯಗಳನ್ನು ತಳಿರು ತೋರಣಗಳಿಂದ ವಿಶೇಷವಾಗಿ ಸಿಂಗರಿಸಲಾಗಿತ್ತು. ಬೆಳಿಗ್ಗೆಯಿಂದಲೇ ದೇವಸ್ಥಾನಗಳಲ್ಲಿ ಭಕ್ತರು ಸಾಲಾಗಿ ನಿಂತು ದೇವರ ದರ್ಶನ ಪಡೆದರು.

ಭಕ್ತಾದಿಗಳಿಗೆ ಪಾನಕ, ಕೋಸಂಬರಿ, ಮಜ್ಜಿಗೆ ವಿತರಿಸಲಾಯಿತು. ರಾಮನವೇಷಧಾರಿಗಳು ಸಹ ಪಾನಕ ವಿತರಿಸಿ ಗಮನಸೆಳೆದರು. ಹಲವು ಸಂಘಟನೆಗಳು ನಗರದ ವಿವಿಧೆಡೆ ಆಯೋಜಿಸಿದ್ದ ಶ್ರೀರಾಮನ ಶೋಭಾಯಾತ್ರೆ ಹಬ್ಬದ ಸಂಭ್ರಮವನ್ನು ಇಮ್ಮಡಿಗೊಳಿಸಿದವು. ಶ್ರೀರಾಮನ ಘೋಷಣೆಗಳೊಂದಿಗೆ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ವಿವಿಧ ಕಡೆಗಳಲ್ಲಿ ರಾಮಭಕ್ತರು ರಾಮನಾಮ ಸಂಕೀರ್ತನೆ, ಭಜನೆ ಮಾಡಿದರು. ಮಲ್ಲೇಶ್ವರದ ಕೋದಂಡರಾಮಪುರದ ಕೋದಂಡರಾಮ ಭಜನಾ ಮಂದಿರ, ಯಶವಂತಪುರ ವೃತ್ತದಲ್ಲಿರುವ ದಾರಿ ಆಂಜನೇಯಸ್ವಾಮಿ ದೇವಸ್ಥಾನ, ರಂಗನಾಥಪುರದಲ್ಲಿರುವ ವೀರಾಂಜನೇಯ ಸ್ವಾಮಿ ದೇವಸ್ಥಾನ, ಅಶ್ವತ್ಥನಗರದಲ್ಲಿರುವ ಆಂಜನೇಯ ದೇವಸ್ಥಾನ, ಮೈಸೂರು ರಸ್ತೆಯ ಗಾಳಿ ಆಂಜನೇಯ ದೇವಸ್ಥಾನ, ಮಹಾಲಕ್ಷ್ಮಿ ಬಡಾವಣೆಯ ಆಂಜನೇಯ ದೇವಸ್ಥಾನ, ರಾಗಿಗುಡ್ಡದ ಆಂಜನೇಯ ದೇವಾಲಯ, ರಾಜಾಜಿನಗರದ ಶ್ರೀರಾಮಮಂದಿರ ಸೇರಿದಂತೆ ನಗರದ ವಿವಿಧ ಆಂಜನೇಯ ಹಾಗೂ ರಾಮಮಂದಿರಗಳಲ್ಲಿ ವಿಶೇಷ ಪೂಜೆ, ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಬೆಳಿಗ್ಗೆಯಿಂದಲೇ ಜರುಗಿದವು.

ವಿವಿಧ ದೇವಾಲಯಗಳಲ್ಲಿ ಸಂಗೀತೋತ್ಸವ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗಿತ್ತು. ನರಸಿಂಹರಾಜ ಕಾಲೊನಿಯ ಶ್ರೀರಾಮಮಂದಿರಂ ಟ್ರಸ್ಟ್‌ನಿಂದ ಸುಂದರಕಾಂಡ ನೃತ್ಯ-ರೂಪಕವನ್ನು ಪ್ರಸ್ತುತ ಪಡಿಸಲಾಯಿತು.

ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಗುಟ್ಟೆ ಆಂಜನೇಯ ಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ಅಂಗವಾಗಿ ವಿಶೇಷ ಪೂಜೆ ಮಾಡಲಾಯಿತು. ಹೆಸರುಬೇಳೆ, ಮಜ್ಜಿಗೆ ಪಾನಕವನ್ನು ವಿಶ್ವವಿದ್ಯಾಲಯದ ಶಿಕ್ಷಕರು, ಶಿಕ್ಷಕೇತರ ನೌಕರರು ಹಾಗೂ ವಿದ್ಯಾರ್ಥಿಗಳಿಗೆ ವಿತರಿಸಲಾಯಿತು.

ಅಮೃತಹಳ್ಳಿ: ರಾಮನವಮಿ ಸಂಭ್ರಮ

ಯಲಹಂಕ: ಅಮೃತಹಳ್ಳಿಯ ಶ್ರೀರಾಮ ದೇವಾಲಯದಲ್ಲಿ 15ನೇ ವರ್ಷದ ಶ್ರೀರಾಮನವಮಿ ಉತ್ಸವದ ಪ್ರಯುಕ್ತ ಸ್ವಾಮಿಗೆ ಹೋಮ, ಹವನ ಸೇರಿ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಭಕ್ತಮಂಡಳಿಯಿಂದ ವಿಷ್ಣುಸಹಸ್ರನಾಮ ಪಾರಾಯಣ, ಅಮೃತಹಳ್ಳಿಯ ಶ್ರೀರಾಮ ಭಜನಾಮಂಡಳಿ ಹಾಗೂ ಉಭಯ ಮಾರಮ್ಮ ಭಜನಾಮಂಡಳಿಯಿಂದ ಭಜನಾ ಕಾರ್ಯಕ್ರಮ, ಶ್ರೀರಾಮ ಸಂಗೀತ ಶಾಲೆಯ ಮಕ್ಕಳಿಂದ ಸಂಗೀತ ಕಾರ್ಯಕ್ರಮ ನಡೆದವು. ಸೀತಾರಾಮ ಕಲ್ಯಾಣೋತ್ಸವದಲ್ಲಿ ಅಪಾರ ಸಂಖ್ಯೆಯಲ್ಲಿ ಭಕ್ತರು ಪಾಲ್ಗೊಂಡಿದ್ದರು.

ಸಂಪಿಗೇಹಳ್ಳಿ ಸಮೀಪದ ವೆಂಕಟೇಶಪುರದಲ್ಲಿರುವ ಅಭಯ ಆಂಜನೇಯಸ್ವಾಮಿ ದೇವಾಲಯದಲ್ಲಿ ಶ್ರೀರಾಮನವಮಿ ಪ್ರಯುಕ್ತ ಸ್ವಾಮಿಗೆ ವಿವಿಧ ಹೋಮ-ಹವನ, ವಿಶೇಷ ಪೂಜೆ ನಡೆದವು. ಭಕ್ತರು ಬೆಳಿಗ್ಗೆಯಿಂದಲೇ ದೇವಸ್ಥಾನಕ್ಕೆ ಭೇಟಿ ನೀಡಿ ದರ್ಶನ ಪಡೆದರು. ಅನ್ನದಾನದ ಜೊತೆಗೆ ಕೋಸಂಬರಿ, ಪಾನಕ ಹಾಗೂ ಮಜ್ಜಿಗೆ ವಿತರಿಸಲಾಯಿತು.

ದೇವಸ್ಥಾನ ಟ್ರಸ್ಟ್ ಗೌರವಾಧ್ಯಕ್ಷ ನಾಗರಾಜಪ್ಪ, ಅಧ್ಯಕ್ಷ ಎನ್. ಸುಬ್ರಮಣಿ, ಕಾರ್ಯದರ್ಶಿ ಅಕ್ಷಯ್ ಕುಮಾರ್, ಉಪಾಧ್ಯಕ್ಷ ಎಚ್.ಎ. ಶಿವಕುಮಾರ್ ಇದ್ದರು.

ಅಮೃತಹಳ್ಳಿಯ ಶ್ರೀರಾಮ ದೇವಸ್ಥಾನದ ಸೀತಾ, ಲಕ್ಷ್ಮಣ ಸಮೇತ ರಾಮದೇವರಿಗೆ ವಿಶೇಷ ಹೂವಿನ ಅಲಂಕಾರ ಮಾಡಿರುವುದು

ಸುದ್ದಿ 2 ನಿಮಿಷ

3 ದಿನದಲ್ಲಿ ಕಾಮಗಾರಿ: ದಾಖಲೆ ಸಲ್ಲಿಸಲು ಹೈಕೋರ್ಟ್ ನಿರ್ದೇಶನ

ಬೆಂಗಳೂರು: 'ಕೋವಿಡ್ ಕಾರಣಕ್ಕಾಗಿ ಲಾಕ್ ಡೌನ್ ಜಾರಿ ಮಾಡಲಾಗಿದ್ದ ಸಮಯದಲ್ಲಿ ಟೆಂಡರ್ ಆಹ್ವಾನಿಸದೇ ₹ 5.02 ಕೋಟಿ ಮೊತ್ತದ ಕಾರ್ಯಾದೇಶ ನೀಡಿ ಕೆಲಸ ಮಾಡಿಸಿದ್ದ ಕಾರ್ಯ-ನಿರ್ವಾಹಕ ಎಂಜಿನಿಯರ್ ವಿರುದ್ಧ ತನಿಖೆಗೆ ಅನುಮತಿ ನಿರಾಕರಿಸಿರುವ ಕುರಿತಾದ ದಾಖಲೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

ಈ ಸಂಬಂಧ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆಯ ನಾಗೇಗೌಡ ಎಂಬುವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಹೇಮಾವತಿ ಎಡದಂಡೆ ಕಾಲುವೆ ಘಟಕದ ಕಾಮಗಾರಿಗೆ 2020ರ ಮಾರ್ಚ್ 27ರಂದು ಗುತ್ತಿಗೆದಾರ ಪಿ. ಕೆ. ಶಿವರಾಮು ಎಂಬುವರಿಗೆ ಸದ್ಯ ನಿವೃತ್ತರಾಗಿರುವ ಕಾರ್ಯ-ನಿರ್ವಾಹಕ ಎಂಜಿನಿಯರ್ ಕೆ. ಶ್ರೀನಿವಾಸ್ ಕಾರ್ಯಾದೇಶ ನೀಡಿದ್ದಾರೆ ಎಂಬುದು ದಾಖಲೆಗಳನ್ನು ಪರಿಶೀಲಿಸಿದಾಗ ಕಂಡು ಬಂದಿದೆ' ಎಂದು ಹೇಳಿದೆ.

3 ದಿನಗಳಲ್ಲಿ ಕೆಲಸ ಮುಗಿಸಿದ್ದು, ಇದಕ್ಕಾಗಿ ₹ 5.02 ಕೋಟಿ ವೆಚ್ಚವಾಗಿದೆ ಎಂದು ಗುತ್ತಿಗೆದಾರ ಬಿಲ್ ಸಲ್ಲಿಸಿದ್ದರು. ಇದನ್ನು ಒಪ್ಪಿ ಮಾರ್ಚ್ 31ರಂದು ಕಾರ್ಯನಿರ್ವಾಹಕ ಎಂಜಿನಿಯರ್ ಬಿಲ್ ಪಾವತಿ ಮಾಡಿದ್ದರು. ಇದನ್ನು ಪ್ರಶ್ನಿಸಿ ಅರ್ಜಿದಾರರು ಶ್ರೀನಿವಾಸ್ ಮತ್ತು ಇತರರ ವಿರುದ್ಧ ವಿಚಾರಣಾ ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ ತನಿಖೆಗೆ ಆದೇಶಿಸಿತ್ತು.

'ಲೋಕಾಯುಕ್ತರ ಮುಂದೆ ಇದೇ ರೀತಿಯ ಪ್ರಕರಣ ವಿಚಾರಣೆಗೆ ಬಾಕಿ ಇದೆ' ಎಂದು ಸಕ್ಷಮ ಪ್ರಾಧಿಕಾರವು ಅನುಮತಿ ನೀಡಲು ತನಿಖಾಧಿಕಾರಿಯ ಕೋರಿಕೆಯನ್ನು ನಿರಾಕರಿಸಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ನಕ್ಷತ್ರಪುಂಜದಲ್ಲಿ ಕಪ್ಪು ರಂಧ್ರ ಪತ್ತೆ'

ನವದೆಹಲಿ (ಪಿಟಿಐ): ಖಗೋಳ ವಿಜ್ಞಾನಿಗಳು ಇದೇ ಮೊದಲ ಬಾರಿಗೆ ಗುರುತ್ವಾಕರ್ಷಣೆಯ ಮಸೂರದ ಮೂಲಕ ನಕ್ಷತ್ರಪುಂಜವೊಂದರಲ್ಲಿ ಅತಿದೊಡ್ಡ ಕಪ್ಪು ರಂಧ್ರವನ್ನು ಪತ್ತೆಹಚ್ಚಿದ್ದಾರೆ.

'ಇದು ಸೂರ್ಯನ ದ್ರವ್ಯರಾಶಿಯ 30 ಶತಕೋಟಿಗೂ ಹೆಚ್ಚು ಪಟ್ಟು ದೊಡ್ಡದಾಗಿದೆ' ಎಂದು ಬ್ರಿಟನ್‌ನ ಡುರ್ಹ್ಯಾಮ್ ವಿಶ್ವವಿದ್ಯಾಲಯದ ಸಂಶೋಧಕರು ತಿಳಿಸಿದ್ದಾರೆ.

ಈ ಕ್ಷೇತ್ರದಲ್ಲಿ ಮತ್ತಷ್ಟು ಕಪ್ಪು ರಂಧ್ರಗಳನ್ನು ಕಂಡುಹಿಡಿಯುವ ಹಾಗೂ ಅವುಗಳ ಮೂಲಗಳ ಕುರಿತು ಅಧ್ಯಯನ ಕೈಗೊಳ್ಳುವುದಕ್ಕೆ ಈ ಸಂಶೋಧನೆ ದಾರಿ ಮಾಡಿಕೊಡಲಿದೆ ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

ಈ ಸಂಶೋಧನಾ ವರದಿಯು 'ಮಂಥ್ಲಿ ನೋಟಿಸಸ್ ಆಫ್ ದಿ ರಾಯಲ್ ಆಸ್ಟ್ರೋನೊಮಿಕಲ್ ಸೊಸೈಟಿ' ಎಂಬ ನಿಯತಕಾಲಿಕೆಯಲ್ಲಿ ಪ್ರಕಟಗೊಂಡಿದೆ.

ಕಪ್ಪು ರಂಧ್ರಗಳು ನಿಗೂಢವಾದುವು. ಇವು ಕಾಣಿಸಿಕೊಳ್ಳುವುದು ತೀರಾ ಅಪರೂಪ. ಇವುಗಳ ಮೂಲವು ಅಸ್ಪಷ್ಟವಾಗಿದೆ. 'ಈಗ ಪತ್ತೆಹಚ್ಚಲಾಗಿರುವ ಕಪ್ಪು ರಂಧ್ರವು ತುಂಬಾ ದೊಡ್ಡದು. ನಿಷ್ಕ್ರಿಯ ಸ್ಥಿತಿಯಲ್ಲಿರುವ ಕಪ್ಪು ರಂಧ್ರಗಳನ್ನು ಕಂಡುಹಿಡಿಯುವುದಕ್ಕೆ ಗುರುತ್ವಾಕರ್ಷಣೆಯ ಮಸೂರವು ಸಹಕಾರಿಯಾಗಿದೆ' ಎಂದು ಡುರ್ಹ್ಯಾಮ್ ವಿಶ್ವವಿದ್ಯಾಲಯದ ಭೌತಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ಜೇಮ್ಸ್ ನೈಟಿಂಗೇಲ್ ತಿಳಿಸಿದ್ದಾರೆ.

ಮತದಾರರಿಗೆ ಹಂಚಲು ಸಾಗಿಸುತ್ತಿದ್ದ ಕುಕ್ಕರ್ ಜಪ್ತಿ

ಪ್ರಜಾವಾಣಿ ವಾರ್ತೆ

ಪೀಣ್ಯ-ದಾಸರಹಳ್ಳಿ: ಮತದಾರರಿಗೆ ಹಂಚಲು ಸಾಗಿಸುತ್ತಿದ್ದ ₹ 8.50 ಲಕ್ಷ ಮೌಲ್ಯದ 500ಕ್ಕೂ ಹೆಚ್ಚು ಕುಕ್ಕರ್ ಹಾಗೂ ಇತರೆ ಗೃಹೋಪಯೋಗಿ ವಸ್ತುಗಳನ್ನು ಚುನಾವಣಾಧಿಕಾರಿಗಳು ಜಪ್ತಿ ಮಾಡಿದ್ದಾರೆ.

'ಲೋಕೇಶ್ ಕಾರ್ಗೊ ಮೂವರ್ಸ್ ಕಂಪನಿಗೆ ಸೇರಿದ್ದ ಲಾರಿಯಲ್ಲಿ (ಕೆಎ 52 ಬಿ 5569) ಕುಕ್ಕರ್ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಸಾಗಿಸಲಾಗುತ್ತಿತ್ತು. ಈ ಬಗ್ಗೆ ಮಾಹಿತಿ ಬಂದಿತ್ತು. ರಾಜಗೋಪಾಲನಗರ ಠಾಣೆ ವ್ಯಾಪ್ತಿಯ ಬೃಂದಾವನ ತಂಗುದಾಣ ಬಳಿ ಲಾರಿ ತಡೆದು ಪರಿಶೀಲಿಸಿದಾಗ ವಸ್ತುಗಳು ಪತ್ತೆಯಾದವು' ಎಂದು ಅಧಿಕಾರಿಗಳು ತಿಳಿಸಿದರು.

'ಗ್ರೀನ್ ಷೆಫ್ ಕಂಪನಿಯ ಕುಕ್ಕರ್‌ಗಳ ಮೇಲೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಶಾಸಕ ಆರ್. ಮಂಜುನಾಥ್ ಭಾವಚಿತ್ರವಿರುವ ಸ್ಟಿಕ್ಕರ್ ಇದೆ. ಮತದಾರರಿಗೆ ಹಂಚಲೆಂದು ಇವುಗಳನ್ನು ಸಾಗಿಸುತ್ತಿದ್ದ ಅನುಮಾನವಿದೆ.'

'ಲಾರಿ ಸಮೇತ ಎಲ್ಲ ಕುಕ್ಕರ್ ಜಪ್ತಿ ಮಾಡಲಾಗಿದೆ. ಅಕ್ರಮ ಸಾಗಣೆ ಬಗ್ಗೆ ರಾಜಗೋಪಾಲನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪೊಲೀಸರು ತನಿಖೆ ಮುಂದುವರಿಸಿದ್ದಾರೆ' ಎಂದು ಅಧಿಕಾರಿಗಳು ಹೇಳಿದರು.

ಕುಕ್ಕರ್ ಅಕ್ರಮ ಸಾಗಣೆ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ಮುಖಂಡ ಎಸ್. ಮುನಿರಾಜು, 'ಮತದಾರರನ್ನು ಸೆಳೆಯುವ ಉದ್ದೇಶದಿಂದ ಶಾಸಕ ಆರ್. ಮಂಜುನಾಥ್ ಬೆಂಬಲಿಗರು ಕುಕ್ಕರ್ ಹಂಚುತ್ತಿದ್ದಾರೆ. ಇವರ ವಿರುದ್ಧ ಪ್ರಕರಣ ದಾಖಲಿಸಿ, ಬಂಧಿಸಬೇಕು' ಎಂದು ಆಗ್ರಹಿಸಿದರು.

ಚುನಾವಣಾಧಿಕಾರಿಗಳ ದಾಳಿ ಬಗ್ಗೆ ಪ್ರತಿಕ್ರಿಯೆ ಪಡೆಯಲು ಆರ್. ಮಂಜುನಾಥ್ ಲಭ್ಯರಾಗಲಿಲ್ಲ.

ಚುನಾವಣಾಧಿಕಾರಿ ತಂಡ ಜಪ್ತಿ ಮಾಡಿರುವ ಕುಕ್ಕರ್‌ಗಳು

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

'ಭಾರತೀಯ ಹೈಕಮಿಷನ್ ಕಚೇರಿಯ ಭದ್ರತೆ: ಸುನಕ್‌ಗೆ ಅರಿವಿದೆ'

ಲಂಡನ್ (ಪಿಟಿಐ): 'ಖಾಲಿಸ್ತಾನ ಪರ ಬೆಂಬಲಿಗರು ಇಲ್ಲಿನ ಭಾರತೀಯ ಹೈಕಮಿಷನ್ ಕಚೇರಿ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಕಚೇರಿಗೆ ಹೆಚ್ಚಿನ ಭದ್ರತೆ ಕಲ್ಪಿಸಲು ನಿರ್ಧರಿಸಲಾಗಿದೆ. ಭಾರತದ ಭದ್ರತಾ ಕಾಳಜಿ ಕುರಿತು ಪ್ರಧಾನಿ ರಿಷಿ ಸುನಕ್ ಅವರಿಗೆ ಅರಿವಿದೆ. ಭದ್ರತೆ ಹೆಚ್ಚಳ ವಿಚಾರ ಅವರ ಗಮನಕ್ಕೂ ಬಂದಿದೆ' ಎಂದು ಬ್ರಿಟನ್ ಪ್ರಧಾನಿಯವರ ಕಾರ್ಯಾಲಯ ಗುರುವಾರ ತಿಳಿಸಿದೆ.

ಖಾಲಿಸ್ತಾನ ಪರ ಬೆಂಬಲಿಗರು ಕಚೇರಿಯ ಕಿಟಕಿ ಗಾಜುಗಳನ್ನು ಒಡೆದು ಹಾಕಿದ್ದರು. ಕಚೇರಿ ಎದುರು ಅಳವಡಿಸಲಾಗಿದ್ದ ತ್ರಿವರ್ಣ ಧ್ವಜವನ್ನೂ ಕೆಳಗಿಳಿಸಿದ್ದರು. ಈ ಘಟನೆ ಬೆನ್ನಲ್ಲೇ ಹೇಳಿಕೆ ಬಿಡುಗಡೆ ಮಾಡಿದ್ದ ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಜೇಮ್ಸ್ ಕ್ಲೀವರ್ಲಿ, ಕಚೇರಿಗೆ ಅಗತ್ಯ ಭದ್ರತೆ ಒದಗಿಸುವುದಾಗಿ ಹೇಳಿದ್ದರು.

'ಭದ್ರತೆಯ ವಿಚಾರವಾಗಿ ವಿದೇಶಾಂಗ ಕಾರ್ಯಾಲಯವು ನಮ್ಮ ಪೊಲೀಸರು ಹಾಗೂ ಭಾರತದ ರಾಜತಾಂತ್ರಿಕರ ಜೊತೆ ಚರ್ಚಿಸಿದೆ. ಇದರಲ್ಲಿ ಪ್ರಧಾನಿ ಸುನಕ್ ಅವರು ನೇರವಾಗಿ ಭಾಗಿಯಾಗಿಲ್ಲ. ಆದರೆ ಈ ಕುರಿತು ಅವರಿಗೆ ಮಾಹಿತಿ ಇದೆ' ಎಂದು ಪ್ರಧಾನ ಮಂತ್ರಿಯವರ ವಕ್ತಾರರೊಬ್ಬರು ತಿಳಿಸಿದ್ದಾರೆ.

'ಭಾರತೀಯ ನೌಕಾಪಡೆಗೆ 17 ಹಡಗುಗಳ ಖರೀದಿ'

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಗೆ ಮುಂದಿನ ಪೀಳಿಗೆಯ 11 ಕರಾವಳಿ ಕಾವಲು ಹಡಗುಗಳು ಮತ್ತು ಕ್ಷಿಪಣಿ ಸಜ್ಜಿತ ಆರು ಹಡಗುಗಳನ್ನು ಸುಮಾರು ₹19,600 ಕೋಟಿ ವೆಚ್ಚದಲ್ಲಿ ಖರೀದಿಸುವ ಒಪ್ಪಂದಗಳಿಗೆ ರಕ್ಷಣಾ ಸಚಿವಾಲಯವು ಭಾರತೀಯ ಹಡಗುಕಟ್ಟೆಗಳ (ಶಿಪ್‌ಯಾರ್ಡ್) ಜತೆಗೆ ಗುರುವಾರ ಮಹತ್ವದ ಒಪ್ಪಂದ ಮಾಡಿಕೊಂಡಿದೆ.

11 ಹಡಗುಗಳ ಪೈಕಿ ಏಳು ಹಡಗುಗಳನ್ನು ಗೋವಾ ಶಿಪ್‌ಯಾರ್ಡ್ ಲಿಮಿಟೆಡ್ (ಜಿಎಸ್‌ಎಲ್) ಮತ್ತು ಉಳಿದ ನಾಲ್ಕು ಹಡಗುಗಳನ್ನು ಕೋಲ್ಕತ್ತಾದ ಗಾರ್ಡನ್ ರೀಚ್ ಶಿಪ್ ಬಿಲ್ಡರ್ಸ್ ಅಂಡ್ ಎಂಜಿನಿಯರ್ಸ್ (ಜಿಆರ್‌ಎಸ್‌ಇ) ದೇಶೀಯವಾಗಿ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಲಿವೆ. ಈ ಹಡಗುಗಳ ಪೂರೈಕೆ 2026ರ ಸೆಪ್ಟೆಂಬರ್‌ನಿಂದ ಆರಂಭವಾಗಲಿದೆ ಎಂದು ಕೇಂದ್ರ ರಕ್ಷಣಾ ಸಚಿವಾಲಯವು ಹೇಳಿಕೆಯಲ್ಲಿ ತಿಳಿಸಿದೆ.

'ರಾಜಕೀಯದಲ್ಲಿ 'ಬಾಸ್' ಕಲ್ಪನೆ ಬೇಕಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಕೀಯದಲ್ಲಿ ಯಾರೂ ಬಾಸ್ ಅಲ್ಲ. ಸಹವರ್ತಿಗಳು ಅಥವಾ ಪಾಲುದಾರರು ಅಷ್ಟೇ. ರಾಜಕೀಯ ಪ್ರವೇಶ ಮಾಡುವವರು ಜೀವನದುದ್ದಕ್ಕೂ ಇದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು' ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜೋತಿರಾದಿತ್ಯ ಸಿಂಧಿಯಾ ಹೇಳಿದರು.

ಬಿಜೆಪಿ ಯುವ ಮೋರ್ಚಾ ಮಂಗಳವಾರ ಈಸ್ಟ್ ಪಾಯಿಂಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್‌ನಲ್ಲಿ ಏರ್ಪಡಿಸಿದ್ದ 'ಯುವ ಸಂವಾದ' ಕಾರ್ಯಕ್ರಮದಲ್ಲಿ ವಿದ್ಯಾರ್ಥಿಯೊಬ್ಬ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದ ತೇಜಸ್ವಿ ಸೂರ್ಯ ತನಗೆ 'ಬಾಸ್' ಇದ್ದಂತೆ ಎಂದು ಹೇಳಿದಾಗ, 'ಯಾರೂ ಬಾಸ್ ಅಲ್ಲ, ಎಲ್ಲರೂ ಪಾಲುದಾರರು. ಇದೇ ನಾವು ಮಾಡುವ ತಪ್ಪು, ಜೀವನಕ್ಕೆ ಇದು ಮತ್ತೊಂದು ಪಾಠ ಆಗಬೇಕು' ಎಂದರು.

'ಒಂದು ವೇಳೆ ಮುಂದೆ ನೀವು ನಾಯಕರಾಗಿ ಹೊರ ಹೊಮ್ಮಿದಾಗ ಎಂದಿಗೂ 'ಬಾಸ್' ಎಂಬ ಭಾವನೆ ಮೂಡಿಸಿಕೊಳ್ಳಬಾರದು. ಸಹವರ್ತಿ ಎಂಬ ಭಾವನೆಯನ್ನು ಜೀವನದ ಉದ್ದಕ್ಕೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು. ನಿಮಗೆ ಹೇಗೆ ಕುಟುಂಬ ಇರುತ್ತದೆಯೋ, ನಿಮ್ಮ ಜತೆ ಕೆಲಸ ಮಾಡುವ ಕಾರ್ಯಕರ್ತರೂ ಕುಟುಂಬದ ಭಾಗ ಎಂಬುದನ್ನು ತಿಳಿದುಕೊಂಡು ಅದೇ ರೀತಿಯಲ್ಲಿ ವ್ಯವಹರಿಸಬೇಕು' ಎಂದು ಕಿವಿಮಾತು ಹೇಳಿದರು.

'ಮೊದಲ ಬಾರಿಯ ಮತದಾರರು ಮುಂಬರುವ ಚುನಾವಣೆಯ ಮತದಾನದಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು. ದೇಶದ ರಾಜಕೀಯ ಭವಿಷ್ಯವನ್ನು ನಿರ್ಧರಿಸುವ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಸರಿಯಾದ ಆಯ್ಕೆಯನ್ನು ಮಾಡಬೇಕು. ನೀವು ಪ್ರಜಾತಂತ್ರದ ಪ್ರಕ್ರಿಯೆಯ ಭಾಗವಾಗಬೇಕು. ನಮ್ಮೆಲ್ಲರ ಭವಿಷ್ಯವನ್ನು ನಿರ್ಧರಿಸುವುದಕ್ಕಾಗಿ ನಾಯಕತ್ವ ವಹಿಸುವವರಿಗಾಗಿ ಮತದಾನದ ದಿನ ಮತ ಚಲಾಯಿಸಲೇಬೇಕು' ಎಂದರು.

ನೋಟಾದ ಔಚಿತ್ಯದ ಬಗ್ಗೆ ವಿದ್ಯಾರ್ಥಿಯೊಬ್ಬರ ಪ್ರಶ್ನೆಗೆ ಉತ್ತರಿಸಿದ ಸಿಂಧಿಯಾ, 'ಯಾವ ಅಭ್ಯರ್ಥಿಯ ಮನಸ್ಸು ಸರಿಯಾದ ದಿಕ್ಕಿನಲ್ಲಿ ಇಲ್ಲದಿದ್ದರೂ, ಹೃದಯ ಸರಿಯಾದ ವಿಚಾರದಲ್ಲಿ ಚಿಂತಿಸುತ್ತದೆಯೋ ಆಗ, ನೋಟಾ ಚಲಾಯಿಸುವ ಕುರಿತು ಯೋಚಿಸಬೇಕಾಗಿಲ್ಲ' ಎಂದರು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಜೋತಿರಾದಿತ್ಯ ಸಿಂಧಿಯಾ ವಿದ್ಯಾರ್ಥಿಗಳ ಜತೆ ಸಂವಾದ ನಡೆಸಿದರು

ಚಿತ್ರಾವಳಿ

ನಗರದ ಕೋಟೆ ಹೈಸ್ಕೂಲ್ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಗುರುವಾರ ಹಮ್ಮಿಕೊಂಡಿದ್ದ ಶ್ರೀರಾಮನವಮಿ ಸಂಗೀತೋತ್ಸವದಲ್ಲಿ ಗಾಯಕಿಯರಾದ ರಂಜನಿ, ಗಾಯತ್ರಿ ಕರ್ನಾಟಕ ಸಂಗೀತ ಪ್ರಸ್ತುತ ಪಡಿಸಿದರು –ಪ್ರಜಾವಾಣಿ ಚಿತ್ರ.

ರಾಮನವಮಿಯ ಅಂಗವಾಗಿ ರಾಮದೇವರ ಬೆಟ್ಟದಲ್ಲಿ ವಿಶೇಷ ಪೂಜೆ ನೆರವೇರಿತು.

ಸ್ಲಂ ನಿವಾಸಿಗಳ ಅಭಿವೃದ್ಧಿಗೆ ಆದ್ಯತೆ ನೀಡಲು ಒತ್ತಾಯ

ಬೆಂಗಳೂರು: ಸ್ಲಂ ಜನಾಂದೋಲನ–ಕರ್ನಾಟಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೊಳೆಗೇರಿ ಮತ್ತು ಸ್ಲಂ ನಿವಾಸಿಗಳ ಸಮಗ್ರ ಅಭಿವೃದ್ಧಿಗೆ ಆದ್ಯತೆ ನೀಡುವ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದೆ.

'ಕೊಳೆಗೇರಿ ಮತ್ತು ಸ್ಲಂ ನಿವಾಸಿಗಳ ಸಮಗ್ರ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯವನ್ನು ಘೋಷಿಸಿ, ಸ್ಲಂ ಜನರ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು. ಇಲ್ಲಿನ ನಿವಾಸಿಗಳಿಗೆ ನಗರ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಬೇಕು. ರಾಜ್ಯದಲ್ಲಿ ವಸತಿ ಹಕ್ಕು ಕಾಯಿದೆ ಜಾರಿಗೊಳಿಸಬೇಕು' ಎಂದು ಸ್ಲಂ ಜನಾಂದೋಲನ–ಕರ್ನಾಟಕದ ರಾಜ್ಯ ಸಂಚಾಲಕ ಎಂ. ನರಸಿಂಹಮೂರ್ತಿ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ರಾಜ್ಯದ 3.36 ಲಕ್ಷ ಸ್ಲಂ ಕುಟುಂಬಗಳಿಗೆ ಹಕ್ಕುಪತ್ರವನ್ನು ನೀಡುವ ಮೂಲಕ ಭೂ ಮಾಲೀಕತ್ವ ಒದಗಿಸಬೇಕು. ಸ್ಲಂನಲ್ಲಿ ವಾಸಿಸುವ ಜನರಿಗೆ ಉಚಿತವಾಗಿ ಮನೆ ನಿರ್ಮಾಣ, ಸಬ್ಸಿಡಿ ಹೆಚ್ಚಳ ಮತ್ತು ಜನರೇ ನಿರ್ಮಿಸಿಕೊಳ್ಳುವ ಯೋಜನೆಗಳನ್ನು ಜಾರಿಗೊಳಿಸಬೇಕು. ಖಾಸಗಿ ಮಾಲೀಕತ್ವದಲ್ಲಿರುವ ಕೊಳಚೆ ಪ್ರದೇಶಗಳಿಗೆ ಹಕ್ಕುಪತ್ರ ವಿತರಿಸಬೇಕು. ನಗರ ಲ್ಯಾಂಡ್ ಬ್ಯಾಂಕ್ ನೀತಿ ಜಾರಿಗೊಳಿಸಿ, ನೆಲಬಾಡಿಗೆ ಸ್ಲಂಗಳಿಗೆ ನೀತಿ ರೂಪಿಸಬೇಕು. ಸಾರ್ವಜನಿಕ ಪಡಿತರ ವ್ಯವಸ್ಥೆಯನ್ನು ಬಲಗೊಳಿಸಬೇಕು. ಸರ್ಕಾರಿ ಶಾಲೆಗಳ ಸಬಲೀಕರಣ, ಜಿಲ್ಲಾ ಆಸ್ಪತ್ರೆಗಳ ಖಾಸಗೀಕರಣವನ್ನು ಕೂಡಲೇ ಸ್ಥಗಿತಗೊಳಿಸಬೇಕು. ಕರ್ನಾಟಕ ಸಮಗ್ರ ಸ್ಲಂ ಅಭಿವೃದ್ಧಿ ಕಾಯಿದೆ 2018ರ ಕರಡನ್ನು ಜಾರಿಗೊಳಿಸಿ, ನಗರ ಬಡತನದ ಪ್ರಮಾಣವನ್ನು ಇಳಿಕೆ ಮಾಡಬೇಕು. ಈ ಎಲ್ಲ ಬೇಡಿಕೆಗಳನ್ನು ಈಡೇರಿಸುವ ಪಕ್ಷಗಳಿಗೆ ನಮ್ಮ ಬೆಂಬಲ ನೀಡಲಾಗುವುದು' ಎಂದು ಮಾಹಿತಿ ನೀಡಿದರು.

ಅಕ್ರಮ ಸಾಗಾಟ: ₹5 ಲಕ್ಷ ವಶ

ರಾಮನಗರ: ದಾಖಲೆ ಇಲ್ಲದೆ ಸಾಗಿಸುತ್ತಿದ್ದ ₹5 ಲಕ್ಷ ನಗದನ್ನು ಬಿಡದಿಯ ಹನುಮಂತನಗರ ಚೆಕ್‌ಪೋಸ್ಟ್ ಬಳಿ ಪೊಲೀಸರು ಗುರುವಾರ ವಶಕ್ಕೆ ಪಡೆದಿದ್ದಾರೆ.

ಜಯಂತ್ ಎಂಬುವರು ತಮ್ಮ ಇನೋವಾ ಕಾರಿನಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಈ ಹಣ ಸಾಗಿಸುತ್ತಿದ್ದು, ಪೊಲೀಸರ ತಪಾಸಣೆ ವೇಳೆ ಕಾರಿನಲ್ಲಿ ನಗದು ಕಂಡುಬಂದಿತು. ದಾಖಲೆ ಇಲ್ಲದ ಕಾರಣ ಜಪ್ತಿ ಮಾಡಿದ್ದು, ಬಿಡದಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಇಂದು

ಶ್ರೀರಾಮೋತ್ಸವ: ಬೆಳಿಗ್ಗೆ 9ಕ್ಕೆ ರಾಮಾಂಜನೇಯ ಪ್ರತಿಮೆ ಸ್ಥಾಪನೆಗೆ ಭೂಮಿಪೂಜೆ, 'ಭರತನಾಟ್ಯ' ಪ್ರದರ್ಶನ: ರಚನಾ ಡಾನ್ಸ್ ಅಕಾಡೆಮಿಯ ವಿದ್ಯಾರ್ಥಿಗಳಿಂದ, ನಿರ್ದೇಶನ: ಕಾವ್ಯ ದಿಲೀಪ್, ಹಿಂದೂಸ್ಥಾನಿ ಸಂಗೀತ: ಚೈತ್ರಾ ಎಚ್.ಜಿ. ಮತ್ತು ತಂಡ, ಆಯೋಜನೆ: ಶ್ರೀರಾಮ ಸೇವಾ ಮಂಡಳಿ, ಸ್ಥಳ: ರಾಜಾಜಿನಗರ, ಬೆಳಿಗ್ಗೆ 5.30ರಿಂದ

ಶ್ರೀರಾಮೋತ್ಸವ ಕಾರ್ಯಕ್ರಮ: ಬೆಳಿಗ್ಗೆ 8ಕ್ಕೆ ಶ್ರೀರಾಮ ತಾರಕ ಹೋಮ, ಅಭಿಷೇಕ, ಅಲಂಕಾರ, ಸಂಜೆ 6ಕ್ಕೆ ಸೀತಾರಾಮ ಕಲ್ಯಾಣೋತ್ಸವ, ಆಯೋಜನೆ: ಸನಾತನ ಭಕ್ತ ಮಂಡಲಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ

ಶ್ರೀರಾಮೋತ್ಸವ: ಭಜನೆ: ವಾಸವಿ ಮಹಿಳಾ ಮಂಡಳಿ, ಕೃಷ್ಣ ವಾದಿರಾಜ ಭಜನಾ ಮಂಡಳಿ, ಗಾಯನ: ನಿರಂಜನ್ ದಿಂದೋಡಿ, ಪಿಟೀಲು: ವೈಭವ್ ರಮಣಿ, ಮೃದಂಗ: ಕೌಶಿಕ್ ಶ್ರೀಧರ್, 'ಕೃಷ್ಣ ಕಾರುಣ್ಯ' ಕುರಿತು ಪ್ರವಚನ: ಪಾವಗಡ ಪ್ರಕಾಶರಾವ್, ಯುಗಳ ಗಾಯನ: ಬೆಂಗಳೂರು ಬ್ರದರ್ಸ್, ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಮೃದಂಗ: ಜಿ.ಎಸ್. ನಾಗರಾಜ್, ಮೋರ್ಚಿಂಗ್: ಭಾಗ್ಯಲಕ್ಷ್ಮಿ ಎಂ. ಕೃಷ್ಣ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

'ಶ್ರೀರಾಮೋತ್ಸವ' ಸಂಗೀತ ಕಾರ್ಯಕ್ರಮ: ಬೆಳಿಗ್ಗೆ 8ಕ್ಕೆ ರಾಮತಾರಕ ಹೋಮ, ಭಜನೆ, ಶ್ರೀರಾಮ ಪಟ್ಟಾಭಿಷೇಕ, ಸಂಜೆ 6 ವೈವಿಧ್ಯಮಯ ಕಾರ್ಯಕ್ರಮಗಳು: ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಮಲ್ಲೇಶ್ವರ

ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಎಸ್. ಸೌಮ್ಯ, ಪಿಟೀಲು: ಚಾರುಲತಾ ರಾಮಾನುಜಮ್, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ರಂಗನಾಥ ಚಕ್ರವರ್ತಿ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30ರಿಂದ

ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ: ಪ್ರವೀಣ್ ಗೋಡ್ಖಿಂಡಿ ಮತ್ತು ಅಂಬಿ ಸುಬ್ರಮಣಿಯಂ, ಘಟ: ಬೆಂಗಳೂರು ವಿ. ಪ್ರವೀಣ್, ತಬಲಾ: ಓಜಸ್ ಅಧಿಯಾ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, 'ಪ್ರಜಾವಾಣಿ', ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 5.30ರಿಂದ

ಪ್ರವೀಣ್ ಗೋಡ್ಖಿಂಡಿ

ಪ್ರವಚನ ವಾಹಿನಿ: ಗಮಕ–ವ್ಯಾಖ್ಯಾನ: 'ಸುಂದರಕಾಂಡ (ತೊರವೆ ರಾಮಾಯಣ) ಹನುಮ ಭೀಮ ಸಮಾಗಮ (ಕುಮಾರವ್ಯಾಸ ಭಾರತ)' ಕುರಿತು ಪ್ರವಚನ: ಎನ್.ಕೆ. ರಾಮಶೇಷನ್, ಕಮಲ ಶ್ರೀನಿವಾಸ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್‌ನ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ: ಅರ್ಚನಾ ಕುಲಕರ್ಣಿ ಮತ್ತು ತಂಡ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ಶ್ರೀರಾಮ ನವಮಿ ಉತ್ಸವ: ವಾದ್ಯಗಳ ಜುಗಲಬಂದಿ: ವೀಣಾವಾದನ: ಸುಮಾ ಸುಧೀಂದ್ರ, ಸ್ಲೈಡ್ ಗಿಟಾರ್: ಪ್ರಕಾಶ್ ಸೊಂಟಕ್ಕೆ, ಮೃದಂಗ: ಬಿ.ಸಿ. ಮಂಜುನಾಥ್, ಘಟ: ಎಸ್.ಎನ್. ನಾರಾಯಣಮೂರ್ತಿ, ತಬಲಾ: ಕಾರ್ತಿಕ್ ಭಟ್, ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ಭಕ್ತಿರಸ ಗಾಯನ: ಅನನ್ಯಾ, **ಕೀ–ಬೋರ್ಡ್:** ಅಮಿತ್, ತಬಲಾ: ಸುದರ್ಶನ್, ಆಯೋಜನೆ ಮತ್ತು ಸ್ಥಳ: ಪ್ರಶಾಂತ ಗಣಪತಿ ಸೇವಾ ಮಂಡಳಿ ಟ್ರಸ್ಟ್, ಪ್ರಶಾಂತನಗರ, ಸಂಜೆ 6.30

'ಶ್ರೀದೇವೀ ಮಹಾತ್ಮೆ' ಯಕ್ಷಗಾನ ಪ್ರದರ್ಶನ: ಆಯೋಜನೆ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ ಹನುಮಗಿರಿ ಮೇಳ, ಸ್ಥಳ: ಆದರ್ಶನಗರ ಸರ್ಕಾರಿ ಶಾಲಾ ಆವರಣ, ಅರಸಿನಕುಂಟೆ, ತುಮಕೂರು ರಸ್ತೆ, ಸಂಜೆ 6ರಿಂದ

ಎಬಿಸಿ 3.0 ಕಲಾಕೃತಿಗಳ ಪ್ರದರ್ಶನ: ಆಯೋಜನೆ: ಆರ್ಟ್ ಬೆಂಗಳೂರು ಕಲೆಕ್ಟೀವ್, ಸ್ಥಳ: ರಂಗೋಲಿ ಮೆಟ್ರೊ ಆರ್ಟ್ ಸೆಂಟರ್, ಎಂ.ಜಿ. ರಸ್ತೆ, ಬೆಳಿಗ್ಗೆ 11ರಿಂದ

ಬಿ.ಇಡಿ ತರಗತಿಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಅತಿಥಿಗಳು: ವಿ. ಲೋಕೇಶ, ನಿರ್ಮಲ್ ಕುಮಾರ್ ಕೆ.ಆರ್., ಎನ್.ಎಸ್. ವಿಜಯ, ಎಂ. ಕೃಷ್ಣದಾಸ್, ಬಿ.ಎಲ್. ನಂದಿನಿ, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಇ.ಎಸ್. ಶಿಕ್ಷಣ ಮಹಾವಿದ್ಯಾಲಯ, ಜಯನಗರ, ಬೆಳಿಗ್ಗೆ 11

ಉದ್ಘಾಟನೆ ಹಾಗೂ ಹೊಣೆಗಾರಿಕೆ ಸ್ವೀಕಾರ ಸಮಾರಂಭ: ಉದ್ಘಾಟನೆ: ಅರವಿಂದ ಲಿಂಬಾವಳಿ, ಅಧ್ಯಕ್ಷತೆ: ಕನಕತಾರಾ, ಪ್ರಾಸ್ತಾವಿಕ ನುಡಿ: ವೆ. ಅಜಿತ್ ಕುಮಾರ್, ಅತಿಥಿಗಳು: ಯಲ್ಲಪ್ಪ, ಪಾಪಣ್ಣ, ಆಯೋಜನೆ: ಕನ್ನಡ ಜಾನಪದ ಪರಿಷತ್, ಸ್ಥಳ: ಶಬರಿ ಆಶ್ರಯಧಾಮ ಬೆಳತ್ತೂರು, ಕಾಡುಗೋಡಿ, ಸಂಜೆ 4

ಡಾ. ಅಶ್ರಫಿ ಎಸ್. ಭಗತ್ ಅವರ 'ನ್ಯಾವಿಗೇಟಿಂಗ್ ಕಲ್ಚರ್ ಥ್ರೂ ಫಾರ್ಮಲ್ ಏಸ್ತೆಟಿಕ್ಸ್' ಪುಸ್ತಕ ಬಿಡುಗಡೆ: ಚಿರಂಜೀವಿ ಸಿಂಗ್, ಅತಿಥಿ: ಆರ್.ಬಿ. ಭಾಸ್ಕರನ್, ಉಪಸ್ಥಿತಿ: ಎಂ.ಎಸ್. ಮೂರ್ತಿ, ರಾಮನಾಥ್, ಅಧ್ಯಕ್ಷತೆ: ಬಿ.ಎಲ್. ಶಂಕರ್, ಪುಸ್ತಕ ಪರಿಚಯ: ಆರ್. ಎಚ್. ಕುಲಕರ್ಣಿ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಸಂಗೀತ ಕಾರ್ಯಕ್ರಮ: ಗಾಯನ: ಬಾಲಸುಬ್ರಮಣ್ಯ ಶರ್ಮಾ, ಮೃದಂಗ: ಭವಾನಿ ಶಂಕರ್, ಪಿಟೀಲು: ನಿತೀಶ್, ವೀಣಾ: ಶಂಕರ್ ರಾಮನ್, ಆಯೋಜನೆ: ನಟನಂ ನೃತ್ಯ ಶಾಲಾ, ಸ್ಥಳ: ಭಾರತೀಯ ವಿದ್ಯಾಭವನ, ಸಂಜೆ 6.30

'ಹರಿದಾಸ ಮಂಜರಿ': ಗಾಯನ: ಪಂಕಜ ಸುಧೀಂದ್ರ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

ಮುತ್ಯಾಲಮ್ಮ ದೇವಿಯ ರಥೋತ್ಸವ: ಹೂವಿನ ಪಲ್ಲಕ್ಕಿ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

ಡಾ.ಸ.ಜ. ನಾಗಲೋಟಿಮಠ ಅವರ ಆತ್ಮಕಥೆ 'ಬಿಚ್ಚಿದ ಜೋಳಿಗೆ' ನಾಟಕ ಪ್ರದರ್ಶನ: ರಂಗ ರೂಪ: ಗಣೇಶ ಅಮೀನಗಡ, ಸಂಗೀತ, ವಿನ್ಯಾಸ, ನಿರ್ದೇಶನ: ಆರ್. ಜಗದೀಶ್ ಎನ್.ಎಸ್.ಡಿ., ಆಯೋಜನೆ: ರಂಗಾಯಣ ಕಲಬುರಗಿ, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕ ಡಾ.ಉದಯ್ ಬಿ ಗರುಡಾಚಾರ್

ಜನರ ಜೊತೆಗೆ ಜನನಾಯಕ, ಜನರ ಸೇವಕ

ರಾಜಧಾನಿ ಬೆಂಗಳೂರಿನ ಹೃದಯಭಾಗದಲ್ಲಿರುವ ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರ ಪ್ರಮುಖ ವ್ಯಾಪಾರ ಕೇಂದ್ರ, ಏಷ್ಯಾದ ಅತಿದೊಡ್ಡ ಚಿಲ್ಲರೆ ಮಾರುಕಟ್ಟೆ ಇರುವ ಈ ಪ್ರದೇಶ ವಿವಿಧ ಧರ್ಮ, ಭಾಷೆಗಳ ಜನರನ್ನು ಒಳಗೊಂಡಿದೆ. ಐತಿಹಾಸಿಕ ಹಿನ್ನೆಲೆಯುಳ್ಳ ಕ್ಷೇತ್ರವು ಹಳೆ ಬೇರು, ಹೊಸ ಚಿಗುರಿನ ಎಲ್ಲ ವರ್ಗದ ಜನರನ್ನು ಹೊಂದಿದೆ.

ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ನಂತರ ಕಳೆದ ಐದು ವರ್ಷಗಳಲ್ಲಿ ಜನರ ಭಾವನೆಗಳಿಗೆ ಸ್ಪಂದಿಸಿ ಸರ್ವಾಂಗೀಣ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ ಭಾರತೀಯ ಜನತಾ ಪಾರ್ಟಿ ಮುಖಂಡ ಜನಪರ, ಜನಪ್ರಿಯ ನಾಯಕರಾದ ಡಾ.ಉದಯ್ ಬಿ.ಗರುಡಾಚಾರ್.

ಹಿಂದೆ ಈ ಕ್ಷೇತ್ರ ಹಲವು ವಲಯಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿತ್ತು. ಸಮಸ್ಯೆ, ಸವಾಲುಗಳು ಅಗಾಧವಾಗಿದ್ದವು. ಸಣ್ಣ ಸಣ್ಣ ಓಣಿಗಳು,ಇಕ್ಕಟ್ಟಿನ ರಸ್ತೆಗಳಿದ್ದ ಕ್ಷೇತ್ರಕ್ಕೆ ಡಾ.ಉದಯ್ ಬಿ.ಗರುಡಾಚಾರ್ ಅವರು ಹೊಸ ರೂಪ ನೀಡಿದ್ದಾರೆ.

ಸದೃಢ ಆರೋಗ್ಯದ ಮಹತ್ವ ಮನಗಂಡಿರುವ ಶಾಸಕರು ಕ್ಷೇತ್ರದಲ್ಲಿ ಆಟದ ಮೈದಾನಗಳ ಅಭಿವೃದ್ಧಿಗೆ ಮುತುವರ್ಜಿವಹಿಸಿದರು. ಸುಸಜ್ಜಿತ ಒಳಾಂಗಣ ಕ್ರೀಡಾಂಗಣ ನಿರ್ಮಿಸಿ ಕ್ರೀಡಾಸಕ್ತರ ನಿರೀಕ್ಷೆಗೆ ಸ್ಪಂದಿಸಿದ್ದಾರೆ. ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಆಸ್ಪತ್ರೆಗಳ ನವೀಕರಣ, ನಿರ್ಮಾಣ, ಕಲಾಸಿಪಾಳ್ಯ ಬಿಎಂಟಿಸಿ ಬಸ್ ನಿಲ್ದಾಣದ ಲೋಕಾರ್ಪಣೆ, ಒಳಚರಂಡಿ ಪೈಪ್ ಲೈನ್ ಅಳವಡಿಕೆ ಮತ್ತು ಮಳೆ ನೀರು ಚರಂಡಿಗಳ ಅಭಿವೃದ್ಧಿ, ರಸ್ತೆಗಳ ಡಾಂಬರೀಕರಣ, ಕಾಂಕ್ರಿಟ್ ರಸ್ತೆ, ವೈಟ್ ಟಾಪಿಂಗ್ ಗೆ ಆದ್ಯತೆ ನೀಡಿದ್ದಾರೆ. ಐತಿಹಾಸಿಕ ಮಹತ್ವದ ಅವೆನ್ಯೂ ರಸ್ತೆ ಇದೀಗ ರಾಜ ಮಾರ್ಗವಾಗಿ ಬದಲಾಗಿದೆ.

ಮೆಟ್ರೊ ನಿಲ್ದಾಣ, ಸೇವೆಯ ಮೂಲಕ ವ್ಯಾಪಾರಿಗಳು, ಗ್ರಾಹಕರಿಗೆ ಅನುಕೂಲ ಕಲ್ಪಿಸಿದ್ದಾರೆ. ಕೃಷ್ಣರಾಜ ಮಾರುಕಟ್ಟೆಯನ್ನು ಜನಸ್ನೇಹಿಯಾಗಿ ನವೀಕರಿಸಿದ್ದಾರೆ. ಬಡವರಿಗೆ ಮನೆಗಳು, ವಸತಿ ಸಮುಚ್ಚಯಗಳ ನಿರ್ಮಾಣ, ಅರ್ಹ ಫಲಾನುಭವಿಗಳಿಗೆ ಸರ್ಕಾರಿ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಜೊತೆಗೆ ಕೇಂದ್ರ, ರಾಜ್ಯ ಸರ್ಕಾರಗಳ ಜನೋಪಯೋಗಿ ಕಾರ್ಯಕ್ರಮಗಳ ಯಶಸ್ವಿ ಅನುಷ್ಠಾನಕ್ಕೆ ಒತ್ತು ನೀಡಿದ್ದಾರೆ.

ಕೌಶಲಕ್ಕೆ ಇಂದು ಹೆಚ್ಚಿನ ಬೇಡಿಕೆ ಇರುವುದನ್ನು ಮನಗಂಡು ವೃತ್ತಿಪರ ಕೌಶಲ ತರಬೇತಿ ಕೇಂದ್ರಗಳಿಗೆ ನೆರವು, ದೇಗುಲಗಳ ದುರಸ್ತಿ ಮತ್ತು ನವೀಕರಣಕ್ಕೆ ಕ್ರಮ, ಕೋವಿಡ್ ಎರಡೂ ಅಲೆಗಳ ಸಂದರ್ಭದಲ್ಲಿ ಅಗತ್ಯವುಳ್ಳವರಿಗೆ ಸಹಾಯಹಸ್ತ, ಲಸಿಕಾ ಶಿಬಿರಗಳ ಮೂಲಕ ಮಾನವೀಯವಾಗಿ ಸ್ಪಂದಿಸಿದ್ದಾರೆ.

ಶಾಸಕರಾದ ಹಿಂದೆಯೇ ಅಭಿವೃದ್ಧಿಯ ದೃಢಸಂಕಲ್ಪದಿಂದ, ಉತ್ಸಾಹ,ಹುಮ್ಮಸ್ಸಿನಿಂದ ಕೆಲಸ ಮಾಡಿದ್ದಾರೆ. ದಿನೇ ದಿನೇ ಚೈತನ್ಯದ ಚಿಲುಮೆಯಾಗಿ ಹೊರ ಹೊಮ್ಮುತ್ತಿದ್ದಾರೆ. ಬಡವರ ಪರ ವಿಶೇಷ ಒಲವು ಹೊಂದಿದ್ದಾರೆ. ಎಲ್ಲ ಜಾತಿ,ಜನಾಂಗ,ಧರ್ಮದವರನ್ನು ಒಟ್ಟಿಗೆ ಮುನ್ನಡೆಸುತ್ತಿದ್ದಾರೆ. ಎಲ್ಲರಿಗೂ ಸಮಾನ ಅವಕಾಶ, ಆದ್ಯತೆಯನ್ನು ನೀಡಿದ್ದಾರೆ. ಪ್ರತಿಯೊಬ್ಬರ ಸಮಸ್ಯೆ ಆಲಿಸಿ ಕಾಳಜಿಯೊಂದಿಗೆ ಸ್ಪಂದಿಸುತ್ತಿದ್ದಾರೆ.

ಐದು ವರ್ಷ ಕ್ಷೇತ್ರದ ಜನರ ಸೇವೆ ಮಾಡಲು ಅವಕಾಶ ಸಿಕ್ಕಿದ ಬಗ್ಗೆ ಹೆಮ್ಮೆ ವ್ಯಕ್ತಪಡಿಸಿರುವ ಡಾ. ಉದಯ್ ಬಿ. ಗರುಡಾಚಾರ್, ಸಾಕಷ್ಟು ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಅಭಿವೃದ್ಧಿಯಲ್ಲೂ ಪ್ರಗತಿಯಾಗಿದೆ. ಸಾಧಿಸಬೇಕಿರುವುದು ಇನ್ನೂ ಇದೆ. ಜನರ ಸೇವೆಗೆ ಈ ಸೇವಕ ಸದಾ ಸಿದ್ಧ ಎನ್ನುತ್ತಾರೆ

ಡಾ.ಉದಯ್ ಬಿ ಗರುಡಾಚಾರ್

ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಸದ ತೇಜಸ್ವಿ ಸೂರ್ಯ ಜೊತೆ ಶಾಸಕ ಉದಯ್ ಬಿ.ಗರುಡಾಚಾರ್

ಅಂಗವಿಕಲರಿಗೆ ನೆರವು, ಸ್ವಉದ್ಯೋಗಕ್ಕೆ ಬೆಂಬಲ

- ವಿಕಲಚೇತನರಿಗೆ ವಾಹನಗಳ ವಿತರಣೆ, ಮಹತ್ವಾಕಾಂಕ್ಷಿ ಭಾಗ್ಯಲಕ್ಷ್ಮಿ ಬಾಂಡ್‌ಗಳ ವಿತರಣೆ, ನಿಗಮ, ಮಂಡಳಿಗಳ ಮೂಲಕ ಫಲಾನುಭವಿಗಳಿಗೆ ಸಾಲ ನೆರವು ಸೌಲಭ್ಯ.
- ಬಿಬಿಎಂಪಿಯಿಂದ ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಲು ಹೊಲಿಗೆ ಯಂತ್ರಗಳ ವಿತರಣೆ, ಬೀದಿ ಬದಿ ವ್ಯಾಪಾರಿಗಳಿಗೆ ಸ್ವಾನಿಧಿ, ಮುದ್ರಾ ಯೋಜನೆ'ಯ ಮೂಲಕ ಸಾಲ ಪಡೆಯಲು ಸಹಕಾರ.
- ಶಾಸಕರ ಉಸ್ತುವಾರಿಯಲ್ಲಿ ವಿಶೇಷ ಶಿಬಿರ ಆಯೋಜಿಸಿ ಅರ್ಹ ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ್, ಆರೋಗ್ಯ ಕರ್ನಾಟಕ ಕಾರ್ಡ್, ಇ-ಶ್ರಮಿಕ್ ಕಾರ್ಡ್‌ಗಳು, ಮನಸ್ವಿನಿ ಪಿಂಚಣಿ ಯೋಜನೆ, ಹಿರಿಯ ನಾಗರಿಕರ ಗುರುತಿನ ಚೀಟಿ, ವಿಧವಾ ಪಿಂಚಣಿ, ಬಿಪಿಎಲ್ ಪಡಿತರ ಚೀಟಿ ಸೇರಿ ವಿವಿಧ ಯೋಜನೆಗಳ ನೆರವು ವಿತರಣೆ.
- ಜಯನಗರ ವಾರ್ಡ್‌ನ ಸರ್ಕಾರಿ ಐಟಿಐ ಕಾಲೇಜಿನಲ್ಲಿ 'ಕೌಶಲ್ಯ ತರಬೇತಿ ಕೇಂದ್ರ'ದ ದುರಸ್ತಿ, ಸಿದ್ದಾಪುರ ವಾರ್ಡ್‌ನಲ್ಲಿ ಅಂಗನವಾಡಿ ಕೇಂದ್ರ ಮತ್ತು ಶಾಲೆಗಳ ನವೀಕರಣ, ಸುಂಕೇನಹಳ್ಳಿ ವಾರ್ಡ್‌ನ ಗಾಂಧಿಬಜಾರ್‌ನಲ್ಲಿ ಸರ್ಕಾರಿ 'ಟಿನ್ ಸ್ಕೂಲ್'ನ ತಡೆಗೋಡೆ ಪುನರ್ ನಿರ್ಮಾಣ. ಕೊಳೆಗೇರಿ ಮಕ್ಕಳಿಗಾಗಿ, ಖಾಸಗಿ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕಂಪ್ಯೂಟರ್ ತರಬೇತಿ, ಕೌಶಲ ತರಬೇತಿಯನ್ನು ಉಚಿತವಾಗಿ ಆಯೋಜನೆ
- ಕ್ಷೇತ್ರದಲ್ಲಿರುವ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನ ಜಲಕಂಠೇಶ್ವರ ಸ್ವಾಮಿ ದೇಗುಲ, ಸಿದ್ದಾಪುರ ವಾರ್ಡ್‌ನ ಸೋಮೇಶ್ವರ ಸ್ವಾಮಿ ದೇವಸ್ಥಾನ, ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಗಳ ಜೀರ್ಣೋದ್ಧಾರ.
- ಕೋವಿಡ್ ಸಂಕಷ್ಟದಲ್ಲಿ ನೆರವು: 'ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಒಂದು ಮತ್ತು ಎರಡನೇ ಅಲೆಯಲ್ಲಿ ಕ್ಷೇತ್ರ ವ್ಯಾಪ್ತಿಯ ಎಲ್ಲ 7 ವಾರ್ಡ್‌ಗಳಲ್ಲಿ ದಿನಸಿ ಪದಾರ್ಥಗಳ 1.3 ಲಕ್ಷ ಕಿಟ್‌ಗಳ ವಿತರಣೆ, ಕೋವಿಡ್ ಸಹಾಯವಾಣಿ ಪ್ರಾರಂಭಿಸಿ 400ಕ್ಕೂ ಹೆಚ್ಚು ಸೋಂಕಿತರ ಚಿಕಿತ್ಸೆಗೆ ನೆರವು.
- ಕ್ವಾರಂಟೈನ್ ಕಿಟ್‌ಗಳ ವಿತರಣೆ, 25 ಸಾವಿರಕ್ಕೂ ಅಧಿಕ ಸ್ಯಾನಿಟೈಸರ್ ಬಾಟಲ್, ಲಕ್ಷಕ್ಕೂ ಅಧಿಕ ಮಾಸ್ಕ್‌ಗಳ ವಿತರಣೆ, ನಿತ್ಯ ಸುಮಾರು ಐದು ಸಾವಿರ ಮಂದಿಗೆ ಮಧ್ಯಾಹ್ನ ಹಾಗೂ ರಾತ್ರಿ ಊಟದ ಪೊಟ್ಟಣಗಳ ವಿತರಣೆ ಮಾಡಿ ಜನರಿಗೆ ಸ್ಪಂದಿಸಿದ್ದಾರೆ. ಲಸಿಕಾ ಶಿಬಿರಗಳ ಆಯೋಜನೆ.

ಅಭಿವೃದ್ಧಿ ಪಥದಲ್ಲಿ ಚಿಕ್ಕಪೇಟೆ

ಚಿಕ್ಕಪೇಟೆ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ರೂಪಿಸಲು ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. ಬಹುತೇಕ ವಾರ್ಡ್‌ಗಳಲ್ಲಿ ರಸ್ತೆಗಳ ಡಾಂಬರೀಕರಣ, ಕಾಂಕ್ರಿಟ್ ರಸ್ತೆ ಅಭಿವೃದ್ಧಿ ಕಾರ್ಯ ಪೂರ್ಣಗೊಂಡಿದೆ. ಕೆಲವು ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಪ್ರಗತಿಯಲ್ಲಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಮಹತ್ವಾಕಾಂಕ್ಷೆಯ ಪ್ರಧಾನಮಂತ್ರಿ ಆವಾಸ್ ಯೋಜನೆ, ರಾಜ್ಯದ ವಸತಿ ಇಲಾಖೆಯ ಕೊಳೆಗೇರಿ ಪ್ರದೇಶ ಅಭಿವೃದ್ಧಿ ಮಂಡಳಿ ಯೋಜನೆ ಜಾರಿಗೊಂಡಿದೆ. ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ 1500ಕ್ಕೂ ಹೆಚ್ಚು ಮನೆ ಮಂಜೂರಾಗಿವೆ. 500ಕ್ಕೂ ಹೆಚ್ಚು ಮನೆ ಹಂಚಿಕೆಯಾಗಿದೆ.

ವಿ.ವಿ.ಪುರಂ ವಾರ್ಡ್‌ನ, ಪಾರ್ವತಿಪುರಂ, ಸುಂಕೇನಹಳ್ಳಿ ವಾರ್ಡ್‌ನ ಮಡಿವಾಳ ಮಾಚಿದೇವ ಬಡಾವಣೆ, ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನಲ್ಲಿ ಬೃಹತ್ ವಸತಿ ಸಮುಚ್ಚಯ ನಿರ್ಮಿಸಿ ಉದ್ಘಾಟಿಸಲಾಗಿದೆ.

ಮೂಲಸೌಕರ್ಯ, ನಾಗರಿಕ ಸೇವೆಗೆ ಆದ್ಯತೆ

ಕ್ಷೇತ್ರ ವ್ಯಾಪ್ತಿಯಲ್ಲಿ ಕ್ರೀಡಾಂಗಣಗಳು, ಆಟೋಟಗಳ ಸೌಲಭ್ಯಗಳ ಅಭಿವೃದ್ಧಿಗೆ ಒತ್ತು ನೀಡಿದೆ. ಹೊಂಬೇಗೌಡ ನಗರ ವಾರ್ಡ್‌ನ ರೆಡ್ ಫೀಲ್ಡ್‌ನಲ್ಲಿ ಸ್ಕೇಟಿಂಗ್ ಅಂಗಳ, ರಂಗಮಂದಿರ ನಿರ್ಮಿಸಿದ್ದು, ಸಿದ್ದಾಪುರ ವಾರ್ಡ್‌ನ ವೆಂಕಟರೆಡ್ಡಿನಗರದ ಆಟದ ಮೈದಾನ ಬಳಕೆಗೆ ಮುಕ್ತವಾಗಿದೆ. ಇದೇ ವಾರ್ಡ್‌ನಲ್ಲಿ ಬ್ಯಾಸ್ಕೆಟ್ ಬಾಲ್ ಮೈದಾನದ ನವೀಕರಣ, ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣದ ಕಾಮಗಾರಿ, ಸುಂಕೇನಹಳ್ಳಿ ವಾರ್ಡ್‌ನ - ಕೊಹಿನೂರ್ ಕ್ರೀಡಾಂಗಣ, ನ್ಯಾಷನಲ್ ಕಾಲೇಜು ಮೈದಾನದ ಅಭಿವೃದ್ಧಿ ನಡೆದಿದೆ. ವಿ.ವಿ ಪುರಂ ವಾರ್ಡ್‌ನ ಮಾವಳ್ಳಿಯಲ್ಲಿ ಬ್ಯಾಡ್ಮಿಂಟನ್ ಒಳಾಂಗಣ ಕ್ರೀಡಾಂಗಣ, ಮಾವಳ್ಳಿಯಲ್ಲಿ ಯೋಗ ಸಭಾಂಗಣ ಸೇವೆಗೆ ಮುಕ್ತವಾಗಿದೆ.

ಕ್ಷೇತ್ರದ ವ್ಯಾಪ್ತಿಯ ಎಲ್ಲ ವಾರ್ಡ್‌ಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ. ಈ ಘಟಕಗಳು ಜನರ ಕುಡಿಯುವ ನೀರಿನ ಅಗತ್ಯವನ್ನು ಈಡೇರಿಸುತ್ತಿದೆ.

ಕ್ಷೇತ್ರ ವ್ಯಾಪ್ತಿಯಲ್ಲಿ ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್‌ನ ಪುರಾತನ ದಾಸಪ್ಪ ಆಸ್ಪತ್ರೆ ನವೀಕರಣ. ಡಿಸ್ಪೆನ್ಸರಿ ರಸ್ತೆಯಲ್ಲಿ 'ನಮ್ಮ ಕ್ಲಿನಿಕ್' ಆರಂಭವಾಗಿದೆ. ರೆಫೆರಲ್ ಆಸ್ಪತ್ರೆಯಲ್ಲಿ ಬ್ಲಾಕ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ.

ಕಲಾಸಿಪಾಳ್ಯದಲ್ಲಿ ಬಿಎಂಟಿಸಿ ಬಸ್ ನಿಲ್ದಾಣ ಕಾಮಗಾರಿ ಪೂರ್ಣವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸಮ್ಮುಖದಲ್ಲಿ ಲೋಕಾರ್ಪಣೆ ಮಾಡಲಾಗಿದೆ. ಕ್ಷೇತ್ರದ ಬಹುತೇಕ ಕಡೆ ಸ್ಯಾನಿಟರಿ ಪೈಪ್ ಲೈನ್ ಅಳವಡಿಕೆ ಪೂರ್ಣವಾಗಿದೆ. ಚರಂಡಿಗಳ ಅಭಿವೃದ್ಧಿ ಕಾಮಗಾರಿ ಕೆಲವೆಡೆ ಪೂರ್ಣಗೊಂಡಿದ್ದು, ಕೆಲವೆಡೆ ಪ್ರಗತಿಯಲ್ಲಿದೆ.

ಉದ್ಯಾನ ಅಭಿವೃದ್ಧಿ ಮತ್ತು ಕೆರೆಗಳ ರಕ್ಷಣೆ

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಕ್ಷೇತ್ರದಲ್ಲಿ ಉದ್ಯಾನಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದು, ಜನಸ್ನೇಹಿಯಾಗಿ ರೂಪಿಸಿದ್ದಾರೆ. ಎಲ್ಲ ಉದ್ಯಾನಗಳಲ್ಲಿ ವಾಕಿಂಗ್ ಪಾಥ್, ಎಲ್‌ಇಡಿ ದೀಪದ ವ್ಯವಸ್ಥೆ, ಮಕ್ಕಳು ಆಡಲು ಪ್ರತ್ಯೇಕ ಪ್ರದೇಶ, ವ್ಯಾಯಾಮ ಪರಿಕರಗಳು, ವಿಶ್ರಾಂತಿಗಾಗಿ ಆಸನದ ವ್ಯವಸ್ಥೆ ಕಲ್ಪಿಸಿದ್ದಾರೆ. ಅಚ್ಚುಕಟ್ಟಿನ ಕಾಮಗಾರಿಗೆ ಒತ್ತು ನೀಡಿದ್ದಾರೆ.

ಹೊಂಬೇಗೌಡ ಉದ್ಯಾನ (ರಾಣಿ ಪಾರ್ಕ್) ಹಾಗೂ ವಿಲ್ಸನ್ ಗಾರ್ಡನ್‌ನ ಭುವನೇಶ್ವರಿ ಉದ್ಯಾನ (ಆನೆ ಪಾರ್ಕ್) ಈಗಾಗಲೇ ಸೇವೆಗೆ ಮುಕ್ತವಾಗಿದೆ. ಧರ್ಮರಾಯಸ್ವಾಮಿ ದೇವಸ್ಥಾನ ವಾರ್ಡ್ ವ್ಯಾಪ್ತಿಯ ಐತಿಹಾಸಿಕ ಬನ್ನಪ್ಪ ಉದ್ಯಾನ ನವೀಕರಣ ಆಗಿದೆ. ಸಿಲ್ವರ್‌ಜ್ಯುಬಿಲಿ ಉದ್ಯಾನದ ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗಿದೆ.

ಮಾಧವ ರಾವ್ ಉದ್ಯಾನ, ವಿ.ವಿ.ಪುರಂ ವಾರ್ಡ್‌ನಲ್ಲಿರುವ ಸಜ್ಜನ್ ರಾವ್ ಉದ್ಯಾನ ಜನಸೇವೆಗೆ ಸಮರ್ಪಿಸಲಾಗಿದೆ. ಸುಂಕೇನಹಳ್ಳಿ ವಾರ್ಡ್‌ನ ಪುರಾತನ ಠಾಗೂರ್ ಉದ್ಯಾನದ ನವೀಕರಣ ನಡೆದಿದೆ. ಜಯನಗರ ವಾರ್ಡ್‌ನ ಎಂ. ಎನ್. ಕೃಷ್ಣರಾವ್ ಉದ್ಯಾನದ ಅಭಿವೃದ್ಧಿ ಕಾಮಗಾರಿ ಅಂತಿಮ ಹಂತದಲ್ಲಿದೆ.

ಚಿಕ್ಕಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿನ ಬೈರಸಂದ್ರ ಕೆರೆ ಮತ್ತು ಕೆಂಪಾಂಬುದಿ ಕೆರೆಗಳ ಅಭಿವೃದ್ಧಿಗೆ ಆದ್ಯತೆ ನೀಡಿದ್ದಾರೆ. ಕೆರೆ ಹೂಳೆತ್ತುವ, ತೋಟದ ನಿರ್ಮಾಣ, ವಾಕಿಂಗ್ ಪಾಥ್, ಮಕ್ಕಳು, ಆಟವಾಡಲು ಪ್ರತ್ಯೇಕ ಸ್ಥಳದ ಅಭಿವೃದ್ಧಿ, ವ್ಯಾಯಾಮ ಪರಿಕರಗಳು, ವಿಶ್ರಾಂತಿಗೆ ಆಸನ ಅಳವಡಿಸಲಾಗಿದೆ.

ಅಸುಪಾಸಿನ ಬಡಾವಣೆಗಳ ನಿವಾಸಿಗಳ ನೆಚ್ಚಿನ ತಾಣ ಇದಾಗಿದೆ. ಭೈರಸಂದ್ರ ಕೆರೆ ಆವರಣವನ್ನು ಮುಖ್ಯಮಂತ್ರಿಯವರೇ ಸೇವೆಗೆ ಮುಕ್ತಗೊಳಿಸಿದ್ದಾರೆ. ಕೆಪಾಂಬುದಿ ಕೆರೆ ಅಭಿವೃದ್ಧಿಗೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಶ್ಲಾಘಿಸಿದ್ದಾರೆ.

ಚಿಕ್ಕಪೇಟೆ ಕ್ಷೇತ್ರ ವ್ಯಾಪ್ತಿಯಲ್ಲಿ ಅಭಿವೃದ್ಧಿಯ ಚಿತ್ರಣ

'ಬುದ್ಧನ ಕಿವಿ'ಗೆ ಬಸವರಾಜ ಕಟ್ಟೀಮನಿ ಯುವ ಪುರಸ್ಕಾರ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಇಲ್ಲಿನ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ 2022ನೇ ಸಾಲಿನ 'ಬಸವರಾಜ ಕಟ್ಟೀಮನಿ ಯುವ ಸಾಹಿತ್ಯ ಪುರಸ್ಕಾರ'ಕ್ಕೆ ಕತೆಗಾರ ದಯಾನಂದ ಅವರ 'ಬುದ್ಧನ ಕಿವಿ' ಕಥಾ ಸಂಕಲನ ಆಯ್ಕೆಯಾಗಿದೆ.

ವಿಜಯಪುರದ ಬಿ.ಎಲ್.ಡಿ.ಇ ವಿಶ್ವವಿದ್ಯಾಲಯದ ಡಾ.ಫ.ಗು.ಹಳಕಟ್ಟಿ ಸಂಶೋಧನಾ ಕೇಂದ್ರದಲ್ಲಿ ಏಪ್ರಿಲ್ 8ರಂದು ಮಧ್ಯಾಹ್ನ 3ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ₹ 10 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. 'ಬುದ್ಧನ ಕಿವಿ' ವಿಶಿಷ್ಟ ಕತೆಗಳನ್ನು ಒಳಗೊಂಡ ಕೃತಿ. ಸಮಕಾಲೀನ ಸಮಸ್ಯೆಗಳಿಗೆ ಬುದ್ಧನನ್ನು ಮುಖಾಮುಖಿ ಆಗಿಸುವ ಯತ್ನ ಇದರಲ್ಲಿದೆ.

'ಸಾಹಿತಿಗಳಾದ ಗುರುಪಾದ ಮರಿಗುದ್ದಿ, ವಿ.ಎಸ್.ಮಾಳಿ ಹಾಗೂ ಪ್ರೊ.ಸಿ.ಎಸ್.ಭೀಮರಾಯ ನಿರ್ಣಾಯಕರಾಗಿದ್ದರು' ಎಂದು ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ವಾಸವಾಗಿರುವ ಕತೆಗಾರ ದಯಾನಂದ ಅವರ ಮೂರನೇ ಕೃತಿ ಇದು. 2005ರಲ್ಲಿ 'ಬಾಳಪೂರ್ಣ' ನಾಟಕ ಹಾಗೂ 2012ರಲ್ಲಿ 'ದೇವರು ಕಚ್ಚಿದ ಸೇಬು' ಕಥಾ ಸಂಕಲನ ಪ್ರಕಟವಾಗಿವೆ.

ವಕೀಲರ ಜೊತೆ ಶಾಸಕ ಚರ್ಚೆ: ಪತ್ನಿ ಕಣಕ್ಕಿಳಿಸಲು ಚಿಂತನೆ

ಗೌರಿಶಂಕರ್‌ಗೆ ಆಘಾತ ನೀಡಿದ 'ಹೈ' ತೀರ್ಪು

• ಕೆ.ಜೆ. ಮರಿಯಪ್ಪ

ತುಮಕೂರು: 2018ರ ವಿಧಾನಸಭೆ ಚುನಾವಣೆ ವೇಳೆ ನಕಲಿ ವಿಮಾ ಬಾಂಡ್ ಹಂಚಿದ್ದ ಆರೋಪದ ಮೇಲೆ ಗ್ರಾಮಾಂತರ ಕ್ಷೇತ್ರದ ಜೆಡಿಎಸ್ ಶಾಸಕ ಡಿ.ಸಿ. ಗೌರಿಶಂಕರ್ ಆಯ್ಕೆಯನ್ನು ಹೈಕೋರ್ಟ್ ಅಸಿಂಧುಗೊಳಿಸಿರುವುದು ಅವರಿಗೆ ಒಂದು ರೀತಿಯಲ್ಲಿ ಆಘಾತ ನೀಡಿದಂತಾಗಿದೆ.

ಈ ತೀರ್ಪಿಗೆ ಕೋರ್ಟ್ ಒಂದು ತಿಂಗಳ ಕಾಲ ತಡೆ ನೀಡಿದೆ. ಅಷ್ಟರಲ್ಲಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿ ತಡೆಯಾಜ್ಞೆ ಪಡೆದುಕೊಂಡರೆ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಸಿಗಬಹುದು. ತಡೆಯಾಜ್ಞೆ ಸಿಗದಿದ್ದರೆ ಸ್ಪರ್ಧೆ ಕಷ್ಟಕರ ಎಂದೇ ಹೇಳಲಾಗುತ್ತಿದೆ. ಆಯ್ಕೆಯನ್ನು ಅಸಿಂಧು ಗೊಳಿಸಿರುವುದರಿಂದ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧಿಸುವ ಅವಕಾಶಗಳಿವೆ.

ಚುನಾವಣೆ ದಿನಾಂಕ ಘೋಷಣೆಯಾದ ಹೊತ್ತಿನಲ್ಲೇ ಇಂತಹದೊಂದು ತೀರ್ಪು ಬಂದಿರುವುದನ್ನು ಅರಗಿಸಿಕೊಳ್ಳಲು ಗೌರಿಶಂಕರ್ ಹಾಗೂ ಜೆಡಿಎಸ್‌ಗೆ ಸಾಧ್ಯವಾಗುತ್ತಿಲ್ಲ. ಅತ್ಯುತ್ಸಾಹದಲ್ಲೇ ಚುನಾವಣೆ ಗೆಲುವಿನ ತಂತ್ರಗಾರಿಕೆಯಲ್ಲಿ ದಳಪತಿಗಳು ತೊಡಗಿಸಿಕೊಂಡಿದ್ದರು. ಈ ತೀರ್ಪು ಬರ ಸಿಡಿಲಿನಂತೆ ಎದುರಾಗಿದ್ದು, ನುಂಗಲಾರದ ತುತ್ತಾಗಿದೆ.

ಈಗಿನ ಸವಾಲುಗಳ ಜತೆಗೆ ಹೊಸದೊಂದು ಸಮಸ್ಯೆ ಹೆಗಲೇರಿದ್ದು, ಜಿಲ್ಲೆ ಹಾಗೂ ಕ್ಷೇತ್ರದ ಮೇಲೆ ಯಾವ ರೀತಿಯ ಪರಿಣಾಮ ಬೀರಬಹುದು ಎಂಬ ರಾಜಕೀಯ ಲೆಕ್ಕಾಚಾರಗಳು ನಡೆದಿವೆ. ಈ ತೀರ್ಪನ್ನು ಯಾವ ರೀತಿ 'ಬಳಸಿಕೊಳ್ಳಬೇಕು', ಜನರ ಮುಂದೆ ಹೇಗೆ ವ್ಯಾಖ್ಯಾನಿಸಬೇಕು ಎಂದು ಚರ್ಚಿಸಲಾಗುತ್ತಿದೆ. ದೇವೇಗೌಡ ಹಾಗೂ ಎಚ್.ಡಿ. ಕುಮಾರಸ್ವಾಮಿ ಒಂದಷ್ಟು ಮಾರ್ಗದರ್ಶನ ಮಾಡಿದ್ದು, ಅದರ ಪರಿಣಾಮ ಎದುರಿಸಲು ಸಜ್ಜಾಗಿದ್ದಾರೆ.

ಸ್ಪರ್ಧೆಗೆ ಸುರೇಶ್ ಗೌಡ ಸಿದ್ಧತೆ ಮಾಡಿಕೊಂಡಿದ್ದಾರೆ. ಗೌರಿಶಂಕರ್ ಅವರಿಗೆ ದಳಪತಿಗಳು ಟಿಕೆಟ್ ಪ್ರಕಟಿಸಿದ್ದು, ಈಗಾಗಲೇ ಸಾಕಷ್ಟು ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. ನೀತಿ ಸಂಹಿತೆ ಜಾರಿಯಾಗಿದ್ದು, ಏ. 13ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದೆ.

ಇಂತಹ ಸಮಯದಲ್ಲಿ ಹೊರ ಬಿದ್ದ ಕೋರ್ಟ್ ತೀರ್ಪು ಗೌರಿಶಂಕರ್‌ಗೆ ಆಘಾತ ನೀಡಿದೆ ಎಂಬ ಮಾತುಗಳು ರಾಜಕೀಯ ಪಡಸಾಲೆಯಲ್ಲಿ ಕೇಳಿ ಬರುತ್ತಿವೆ. ಒಂದು ಕಡೆ ಪ್ರಚಾರ, ಗೆಲುವಿಗೆ ಬೇಕಾದ ತಂತ್ರಗಾರಿಕೆ ರೂಪಿಸಬೇಕಿದ್ದ ಸಮಯದಲ್ಲಿ ಕೋರ್ಟ್ ಮೆಟ್ಟಿಲೇರಬೇಕಾದ ಪರಿಸ್ಥಿತಿ ಬಂದೊದಗಿದೆ.

ಕೋರ್ಟ್ ತೀರ್ಪು ಜಿಲ್ಲೆ ಹಾಗೂ ಗ್ರಾಮಾಂತರ ಕ್ಷೇತ್ರದಲ್ಲಿ ಬಿರುಸಿನ ರಾಜಕೀಯ ಚಟುವಟಿಕೆಗಳಿಗೂ ಕಾರಣವಾಗಿದೆ. 'ಹೈ' ತೀರ್ಪಿಗೆ ತಡೆಯಾಜ್ಞೆ ಸಿಕ್ಕರೆ ಗೌರಿಶಂಕರ್ ಸ್ಪರ್ಧೆಗೆ ದಾರಿ ಸುಗಮವಾಗಲಿದೆ. ತಡೆಯಾಜ್ಞೆ ಸಿಗದಿದ್ದರೆ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲಾಗುತ್ತಿದೆ. ಗೌರಿಶಂಕರ್ ಸ್ಪರ್ಧೆ ಸಾಧ್ಯವೇ ಇಲ್ಲ ಎಂಬ ಸಂದರ್ಭ ಬಂದರೆ ಅಂತಹ ಸಮಯದಲ್ಲಿ ಅವರ ಪತ್ನಿಯನ್ನು ಕಣಕ್ಕಿಳಿಸುವ ಬಗ್ಗೆಯೂ ಚಿಂತನೆಗಳು ನಡೆದಿವೆ ಎನ್ನಲಾಗಿದೆ. ಹಾಗಾಗಿ, ಎಲ್ಲರ ಚಿತ್ತ ಸುಪ್ರೀಂ ಕೋರ್ಟ್‌ನತ್ತ ನೆಟ್ಟಿದೆ.

ಗ್ರಾಮಾಂತರ ಕ್ಷೇತ್ರ ಮೊದಲಿನಿಂದಲೂ ಜಿದ್ದಾಜಿದ್ದಿನ ರಾಜಕಾರಣಕ್ಕೆ ಹೆಸರಾಗಿದೆ. ಜೆಡಿಎಸ್‌ನ ಡಿ.ಸಿ. ಗೌರಿಶಂಕರ್ ಹಾಗೂ ಬಿಜೆಪಿಯ ಬಿ. ಸುರೇಶ್‌ಗೌಡ ನಡುವೆ ಹಣಾಹಣಿ ನಡೆದುಕೊಂಡು ಬಂದಿದೆ. ಕಳೆದ ಬಾರಿ ಗೌರಿಶಂಕರ್ ವಿರುದ್ಧ ಸ್ಪರ್ಧಿಸಿ ಸೋತಿದ್ದ ಸುರೇಶ್ ಗೌಡ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ಮೇಲ್ಮನವಿಗೆ ಸಿದ್ಧತೆ: ಗೌರಿಶಂಕರ್

ಸುಪ್ರೀಂ ಕೋರ್ಟ್‌ನಲ್ಲಿ ತಡೆಯಾಜ್ಞೆ ಕೋರಿ ಒಂದೆರಡು ದಿನಗಳಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು. ತಕ್ಷಣಕ್ಕೆ ತಡೆಯಾಜ್ಞೆ ಸಿಗುವ ವಿಶ್ವಾಸ ಇದೆ. ಈ ಸಂಬಂಧ ವಕೀಲರ ಜತೆಗೆ ಚರ್ಚಿಸಲಾಗಿದೆ ಎಂದು ಶಾಸಕ ಡಿ.ಸಿ. ಗೌರಿಶಂಕರ್ ತಿಳಿಸಿದರು.

ಹೈಕೋರ್ಟ್ ತೀರ್ಪಿಗೆ ಒಂದು ತಿಂಗಳ ಕಾಲ ತಡೆಯಾಜ್ಞೆ ಸಿಕ್ಕಿದೆ. ಅಷ್ಟರಲ್ಲಿ ಸುಪ್ರೀಂ ಕೋರ್ಟ್‌ಗೆ ಹೋಗಲಾಗುವುದು. ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಯಾವುದೇ ಸಮಸ್ಯೆ ಆಗುವುದಿಲ್ಲ. ಪರ್ಯಾಯ ವಿಚಾರಗಳ ಬಗ್ಗೆ ಚಿಂತಿಸಿಲ್ಲ ಎಂದು ಅವರು ಹೇಳಿದರು.

ನರೇಂದ್ರ ನಾಯಕ್ ಅಂಗರಕ್ಷಕನನ್ನು ಹಿಂಪಡೆದ ಪೊಲೀಸ್ ಇಲಾಖೆ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಚಾರವಾದಿ ಪ್ರೊ.ನರೇಂದ್ರ ನಾಯಕ್ ಸಹಿತ ನಾಲ್ವರಿಗೆ ಒದಗಿಸಿದ್ದ ಅಂಗರಕ್ಷಕರ ಸೇವೆಯನ್ನು ನಗರ ಕಮಿಷನರೇಟ್‌ನ ಪೊಲೀಸರು ಹಿಂಪಡೆದುಕೊಂಡಿದ್ದಾರೆ.

'ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಬೆದರಿಕೆ ಎದುರಿಸುತ್ತಿದ್ದ ಐವರಿಗೆ ಪೊಲೀಸ್ ಸಿಬ್ಬಂದಿಯನ್ನು ಅಂಗರಕ್ಷಕರನ್ನಾಗಿ ಒದಗಿಸಲಾಗಿತ್ತು. ಇವರಲ್ಲಿ ಒಬ್ಬರು ಈಗಾಗಲೇ ಅಂಗರಕ್ಷಕ ಸಿಬ್ಬಂದಿ ಬೇಡ ಎಂದಿದ್ದರು. ಉಳಿದ ನಾಲ್ವರಿಗೆ ಇರುವ ಬೆದರಿಕೆಗೆ ಸಂಬಂಧಿಸಿ ಈಚೆಗೆ ಪರಾಮರ್ಶೆ ನಡೆಸಲಾಗಿದ್ದು, ಅವರಿಗೆ ಒದಗಿಸಿದ್ದ ಅಂಗರಕ್ಷಕನನ್ನು ಸದ್ಯಕ್ಕೆ ಹಿಂಪಡೆಯಲು ತೀರ್ಮಾನಿಸಲಾಗಿದೆ' ಎಂದು ಡಿಸಿಪಿ ಅಂಶುಕುಮಾರ್ ತಿಳಿಸಿದ್ದಾರೆ.

ಆದರೆ, ಯಾರಿಗೆ ಅಂಗರಕ್ಷಕ ಸೇವೆ ಒದಗಿಸಲಾಗಿತ್ತು ಎಂಬುದನ್ನು ಅವರು ಬಹಿರಂಗಪಡಿಸಲಿಲ್ಲ.

ಈ ಕುರಿತು ಪ್ರತಿಕ್ರಿಯಿಸಿದ ಪ್ರೊ.ನರೇಂದ್ರ ನಾಯಕ್, 'ಅಂಗರಕ್ಷಕ ನನ್ನು ಒದಗಿಸುವಂತೆ ನಾನೇನು ಪೊಲೀಸರ ಬಳಿ ಕೇಳಿರಲಿಲ್ಲ. ಅವರಾಗಿಯೇ ಒದಗಿಸಿದ್ದರು. ವಿಧಾನಸಭಾ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಯಾದ ಒಂದೇ ಗಂಟೆಯಲ್ಲಿ ಅಂಗರಕ್ಷಕನನ್ನು ಹಿಂದಕ್ಕೆ ಕರೆಸಿಕೊಂಡಿದ್ದಾರೆ' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ವಿಚಾರವಾದಿಗಳಾದ ನರೇಂದ್ರ ದಾಭೋಲ್ಕರ್, ಗೋವಿಂದ ಪಾನ್ಸರೆ, ಎಂ.ಎಂ.ಕಲಬುರ್ಗಿ ಹಾಗೂ ಗೌರಿ ಲಂಕೇಶ್ ಹತ್ಯೆಗೊಳಗಾದ ಬಳಿಕ ಪೊಲೀಸ್ ಇಲಾಖೆ ನರೇಂದ್ರ ನಾಯಕ್ ಅವರಿಗೆ 2016ರ ಜೂನ್‌ನಿಂದ ಅಂಗರಕ್ಷಕನನ್ನು ಒದಗಿಸಿತ್ತು.

'ಮುಂಬೈ– ಗೋವಾ ಹೆದ್ದಾರಿ ಡಿಸೆಂಬರ್‌ಗೆ ಪೂರ್ಣ'

ಠಾಣೆ (ಪಿಟಿಐ): 'ಮಹಾರಾಷ್ಟ್ರದ ಕೊಂಕಣ ಪ್ರದೇಶಕ್ಕೆ ಹೆಚ್ಚಿನ ಉತ್ತೇಜನ ನೀಡುವ ಮುಂಬೈ–ಗೋವಾ ಹೆದ್ದಾರಿಯನ್ನು ಡಿಸೆಂಬರ್ ವೇಳೆಗೆ ಪೂರ್ಣಗೊಳಿಸಲಾಗುವುದು' ಎಂದು ಕೇಂದ್ರ ಭೂ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಅವರು ಗುರುವಾರ ತಿಳಿಸಿದರು.

ಪನವೇಲ್‌ನಲ್ಲಿ ಪಲಸ್ಪೆ–ಇಂದುಪುರ ಹೆದ್ದಾರಿ ಹಾಗೂ ಇತರ ಕಾಮಗಾರಿಗಳಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, 'ಗುತ್ತಿಗೆದಾರರ ಸಮಸ್ಯೆ, ಭೂ ಸ್ವಾಧೀನ ಹಾಗೂ ಅನುಮತಿ ನೀಡಿಕೆಯಂತಹ ಕೆಲವು ಸಮಸ್ಯೆಗಳಿಂದ ಕೊಂಕಣ ಪ್ರದೇಶದ ಹಲವು ಅಭಿವೃದ್ಧಿ ಕಾಮಗಾರಿಗಳು ನಿಂತಿವೆ' ಎಂದರು.

ಇದೇ ವೇಳೆ, ₹ 13,000 ಕೋಟಿ ಮೊತ್ತದಲ್ಲಿ ಮಾರ್ಬೆ- ಕಾರಂಜಾಡೆ ರಸ್ತೆಯನ್ನು ನಿರ್ಮಾಣ ಮಾಡುವುದಾಗಿ ಗಡ್ಕರಿ ಘೋಷಿಸಿದರು. ಇದು ಜವಾಹರಲಾಲ್ ನೆಹರೂ ಬಂದರಿನ ಮೂಲಕ ಹಾದುಹೋಗಲಿದ್ದು, ಮುಂಬೈ- ದೆಹಲಿ ನಡುವಿನ ಪ್ರಯಾಣ ಅವಧಿಯನ್ನು 12 ಗಂಟೆಯಷ್ಟು ತಗ್ಗಿಸಲಿದೆ ಎಂದರು.

ಕೆಎಸ್‌ಎಫ್‌ಸಿ ವ್ಯವಸ್ಥಾಪಕಿ ಲೋಕಾಯುಕ್ತ ಬಲೆಗೆ

ಚಿಕ್ಕಮಗಳೂರು: ಬೆಂಬಲ ಬೆಲೆಯಡಿ ಖರೀದಿಸಿದ್ದ ರಾಗಿಯ ಹಣ ನೀಡಲು ಲಂಚ ಪಡೆಯುವಾಗ ಕೆಎಸ್‌ಎಫ್‌ಸಿ ವ್ಯವಸ್ಥಾಪಕಿ ಅನಸೂಯಾ ಅವರು ಗುರುವಾರ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.ಎಪಿಎಂಸಿ ಪ್ರಾಂಗಣದ ರೈತ ಭವನ ಕಚೇರಿಯಲ್ಲಿ ತಿಮ್ಮನಹಳ್ಳಿಯ ಟಿ.ಎ.ಮಂಜುನಾಥ್ ಅವರಿಂದ ಲಂಚ ಪಡೆಯುವಾಗ ಸಿಕ್ಕಿಬಿದ್ದಿದ್ದಾರೆ. ಲಂಚದ ಹಣ ₹ 9,500 ವಶಕ್ಕೆ ಪಡೆಯಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.


ಅನಸೂಯಾ

ಏನಿದು ದೂರು?: ಮಂಜುನಾಥ್ ಅವರು ಅಮ್ಮ, ಪತ್ನಿ ಹೆಸರಿನಲ್ಲಿ 35 ಕ್ವಿಂಟಲ್ ರಾಗಿಯನ್ನು ಖರೀದಿ ಕೇಂದ್ರಕ್ಕೆ ಮಾರಾಟ ಮಾಡಿದ್ದರು. ಖರೀದಿ ಹಣ ಪಾವತಿಸಲು ಚೀಲಕ್ಕೆ ₹ 25 ರಂತೆ ಲಂಚ ನೀಡುವಂತೆ ಅನುಸೂಯಾ ಬೇಡಿಕೆ ಇಟ್ಟಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್ಪಿ ತಿರುಮಲೇಶ್, ಇನ್‌ಸ್ಪೆಕ್ಟರ್ ಮಲ್ಲಿಕಾರ್ಜುನ್, ಅನಿಲ್ ರಾಥೋಡ್ ಅವರು ಕಾರ್ಯಾಚರಣೆಯಲ್ಲಿದ್ದರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ಚೊಕ್ಕನಹಳ್ಳಿ ಸಮೀಪದಲ್ಲಿ ಬೆಂಗಳೂರು ಜಲಮಂಡಳಿ ವತಿಯಿಂದ ₹26.50 ಕೋಟಿ ವೆಚ್ಚದಲ್ಲಿ 65 ಮಿಲಿಯನ್ ಲೀಟರ್ ಸಾಮರ್ಥ್ಯದ ನೆಲಮಟ್ಟದ ಕಾವೇರಿ ನೀರಿನ ಸಂಗ್ರಹಣಾ ಟ್ಯಾಂಕ್ ನಿರ್ಮಾಣ ಕಾಮಗಾರಿಗೆ ಶಾಸಕ ಕೃಷ್ಣ ಬೈರೇಗೌಡ ಚಾಲನೆ ನೀಡಿದರು. ಬೆಂಗಳೂರು ಜಲಮಂಡಳಿಯ ಕಾರ್ಯನಿರ್ವಾಹಕ ಎಂಜಿನಿಯರ್ ದೀಪಕ್, ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ರುದ್ರೇಶ್, ಎಲ್ ಅಂಡ್ ಟಿ ಕನ್‌ಸ್ಟ್ರಕ್ಷನ್ ಸಂಸ್ಥೆಯ ಯೋಜನಾ ವ್ಯವಸ್ಥಾಪಕ ವಿ.ಬಾಲಸುಬ್ರಮಣ್ಯಂ, ಕಾಂಗ್ರೆಸ್ ಮುಖಂಡರಾದ ಎಂ.ಜಯಗೋಪಾಲಗೌಡ, ಎಚ್.ಎ.ಶಿವಕುಮಾರ್, ಗೋಪಾಲ್ ರೆಡ್ಡಿ, ಟಿ.ವೆಂಕಟರಾಮರೆಡ್ಡಿ, ರಾಜಣ್ಣ ಇತರರು ಇದ್ದರು

ಅರಣ್ಯ ಒತ್ತುವರಿ ತೆರವು: ರೈತರು, ಅಧಿಕಾರಿಗಳ ಜಟಾಪಟಿ

ಲಾಠಿ ಪ್ರಹಾರ: ನಾಲ್ವರಿಗೆ ಗಾಯ

ಪ್ರಜಾವಾಣಿ ವಾರ್ತೆ

ಗುಬ್ಬಿ: ಅರಣ್ಯ ಭೂಮಿ ಒತ್ತುವರಿ ತೆರವು ವಿಚಾರಕ್ಕೆ ಸಂಬಂಧಿಸಿದಂತೆ ತಾಲ್ಲೂಕಿನ ಚೇಳೂರು ಹೋಬಳಿ ಗಂಗಯ್ಯನಪಾಳ್ಯ ಗ್ರಾಮಸ್ಥರು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ನಡುವೆ ಗುರುವಾರ ಜಟಾಪಟಿ ನಡೆದಿದೆ.

ಬೆಳಿಗ್ಗೆ ಅರಣ್ಯ ಇಲಾಖೆ ಸಿಬ್ಬಂದಿ ನಡೆಸಿದ ಲಾಠಿ ಪ್ರಹಾರಕ್ಕೆ ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ದೊಡ್ಡನಂಜಯ್ಯ ಹಾಗೂ ಹಲವು ರೈತರು ಗಾಯಗೊಂಡಿದ್ದಾರೆ.

ಈ ವಿವಾದಿತ ಭೂಮಿಯ ವಿಚಾರಕ್ಕೆ ಸಂಬಂಧಿಸಿದಂತೆ ಒಂದು ವಾರದ ಹಿಂದೆ ಆಗಿದ್ದ ತೀರ್ಮಾನ ಉಲ್ಲಂಘಿಸಿದ ಅರಣ್ಯ ಇಲಾಖೆ ಸಿಬ್ಬಂದಿ ಏಕಾಏಕಿ ರೈತರ ಬಗರ್ ಹುಕುಂ ಭೂಮಿಯಲ್ಲಿ ಅಕ್ರಮವಾಗಿ ಕಂದಕ ತೆಗೆಯಲು ಪ್ರಾರಂಭಿಸಿದ್ದರು. ಇದನ್ನು ವಿರೋಧಿಸಿ ಸುತ್ತಮುತ್ತಲಿನ ರೈತರು ಕರ್ನಾಟಕ ಪ್ರಾಂತ ರೈತ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ದೊಡ್ಡನಂಜಯ್ಯ ಅವರ ನೇತೃತ್ವದಲ್ಲಿ ಅರಣ್ಯ ಇಲಾಖೆ ಅಧಿಕಾರಿಗಳ ಈ ಕಾರ್ಯವೈಖರಿಯನ್ನು ಪ್ರಶ್ನಿಸಿದರು.

ತಾಳ್ಮೆಯಿಂದ ಸ್ಪಂದಿಸುವ ಬದಲಾಗಿ ಅರಣ್ಯ ಇಲಾಖೆ ಸಿಬ್ಬಂದಿ ರೈತರ ಮೇಲೆ ಲಾಠಿಚಾರ್ಜ್ ಮಾಡಿದ್ದಾರೆ ಎಂದು ಮುಖಂಡರು ದೂರಿದರು. ಅರಣ್ಯ ಇಲಾಖೆಗೆ ಲಾಠಿ ಚಾರ್ಜ್ ಮಾಡುವ ಅಧಿಕಾರ ಕೊಟ್ಟವರು ಯಾರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅರಣ್ಯ ಸಿಬ್ಬಂದಿ ನಡೆಸಿದ ಲಾಠಿ ಪ್ರಹಾರದಲ್ಲಿ ನಾಲ್ವರು ರೈತರ ತಲೆಗೆ ತೀವ್ರ ಪೆಟ್ಟು ಬಿದ್ದಿದೆ. ಮಹಿಳೆಯರು ಸೇರಿದಂತೆ ಹತ್ತಾರು ರೈತರಿಗೆ ಪೆಟ್ಟಾಗಿದೆ. ತೀವ್ರ ಗಾಯಗೊಂಡಿರುವ ದೊಡ್ಡ ನಂಜಯ್ಯ ಅವರನ್ನು ತುಮಕೂರು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಈ ಜಟಾಪಟಿಯಲ್ಲಿ ಅರಣ್ಯ ಇಲಾಖೆಯ ಗಸ್ತು ವನಪಾಲಕ ವಿಜಯ ದೇವೇಂದ್ರ ಹಟ್ಟಿ ಎಂಬುವರ ತಲೆಗೂ ಪೆಟ್ಟು ಬಿದ್ದಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ತಿಳಿದುಬಂದಿದೆ.

ಪೊಲೀಸರು ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ಗುಬ್ಬಿ ತಾಲ್ಲೂಕಿನ ಗಂಗಯ್ಯನ ಪಾಳ್ಯದಲ್ಲಿ ರೈತರು ಮತ್ತು ಅರಣ್ಯ ಇಲಾಖೆ ಸಿಬ್ಬಂದಿ ನಡುವೆ ಜಟಾಪಟಿ ನಡೆಯಿತು

ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ವಂಚನೆ: ದೂರು

ಪ್ರಜಾವಾಣಿ ವಾರ್ತೆ

ಮಂಗಳೂರು: 'ನಗರದ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿರುವ 'ಬ್ಲೂ ವಾಟರ್ ಫುಡ್ ಆ್ಯಂಡ್ ಎಕ್ಸ್‌ಪೋರ್ಟ್' ಕಂಪನಿಯು ₹ 88.22 ಕೋಟಿ ವಂಚನೆ ನಡೆಸಿದೆ' ಎಂದು ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆ ಬಳಿಯ ಎಚ್‌ಡಿಎಫ್‌ಸಿ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕಿ ಪಿ.ಎಸ್.ಪದ್ಮಾವತಿ ಅವರು ಪಣಂಬೂರು ಠಾಣೆಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

'ಬೆಂಗಳೂರಿನ ಮಹಾತ್ಮ ಗಾಂಧಿ ರಸ್ತೆ ಬಳಿಯ ಎಚ್‌ಡಿಎಫ್‌ಸಿ ಬ್ಯಾಂಕ್‌ಗೆ ನಗರದ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿರುವ ಬ್ಲೂ ವಾಟರ್ ಫುಡ್ ಆ್ಯಂಡ್ ಎಕ್ಸ್‌ಪೋರ್ಟ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಶ್ರೀನಿವಾಸ ಭಟ್, ನಿರ್ದೇಶಕಿ ವೀಣಾ ಎಸ್.ಭಟ್ ಹಾಗೂ ಯುಎನ್‌ಜೆ ನಂಬೂರಿ ಅವರು ಭೇಟಿ ನೀಡಿ ಸಾಲಕ್ಕೆ ಕೋರಿಕೆ ಸಲ್ಲಿಸಿದ್ದರು. 2015ರ ಅ.20ರಂದು ಈ ಕಂಪನಿಗೆ ₹ 194.83 ಕೋಟಿ ಸಾಲ ಮಂಜೂರು ಮಾಡಲಾಗಿತ್ತು. ಪ್ರತಿವರ್ಷವೂ ಸಾಲ ನವೀಕರಿಸಿ ಸಾಲದ ಕಂತನ್ನು ಮರುಪಾವತಿಯನ್ನೂ ಮಾಡುತ್ತಿದ್ದರು. 2019 ಡಿ. 1ರಿಂದ 2020ರ ಜ.31ರ ನಡುವೆ ಬ್ಯಾಂಕ್‌ನ ಹಾಗೂ ಸಂಬಂಧಪಟ್ಟ ಪ್ರಾಧಿಕಾರದ ಗಮನಕ್ಕೆ ತಾರದೆ, ಕಂಪನಿಯ ಸರಕು ದಾಸ್ತಾನನ್ನು ನಾಶಪಡಿಸಿದ್ದಾಗಿ ತಿಳಿಸಿ ವಂಚಿಸಿದ್ದಾರೆ. ಲೆಕ್ಕಪರಿಶೋಧನೆ ನಡೆಸುವ ವೇಳೆ ಇದು ಬೆಳಕಿಗೆ ಬಂದಿದೆ. ಬ್ಯಾಂಕಿಗೆ ವಂಚಿಸಿ ಅಕ್ರಮವಾಗಿ ಲಾಭ ಗಳಿಸುವ ಉದ್ದೇಶದಿಂದ ಈ ರೀತಿ ಮಾಡಿದ್ದಾರೆ ಎಂದು ಬ್ಯಾಂಕಿನ ಹಿರಿಯ ವ್ಯವಸ್ಥಾಪಕಿ ದೂರಿನಲ್ಲಿ ತಿಳಿಸಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪ್ರಜಾ ಮತ

ಜನತಂತ್ರದ ಹಬ್ಬ 2023

ಸಂಕ್ಷಿಪ್ತ ಸುದ್ದಿ

'ಮೀಸಲಾತಿ: ಚುನಾವಣಾ ಗಿಮಿಕ್ ಅಷ್ಟೇ!'

'ಮುಖ್ಯಮಂತ್ರಿ' ಚಂದ್ರು

ಹುಬ್ಬಳ್ಳಿ: 'ಒಳ ಮೀಸಲಾತಿ ಜಾರಿ, 2ಬಿ ಮೀಸಲಾತಿ ರದ್ದು, ಹೊಸ ಪ್ರವರ್ಗಗಳ ಸೃಷ್ಟಿ, ಮೀಸಲಾತಿ ಹೆಚ್ಚಳ ಇವೆಲ್ಲವೂ ಬಿಜೆಪಿಯ ಚುನಾವಣೆಯ ಗಿಮಿಕ್ ಆಗಿವೆ. ಯಾವುದೇ ಮಾನದಂಡವಿಲ್ಲದ ಈ ಮೀಸಲಾತಿ ಕೋರ್ಟ್‌ನಲ್ಲಿ ನಿಲ್ಲುವುದಿಲ್ಲ, ಜಾರಿಯೂ ಆಗುವುದಿಲ್ಲ' ಎಂದು ಎಐಸಿಸಿ ಪ್ರಚಾರ ಸಮಿತಿ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಹೇಳಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜನಗಣತಿ ಬದಲು ಜಾತಿ ಗಣತಿ ಆಧಾರದ ಮೇಲೆ ಮೀಸಲಾತಿ ಕೊಡಬೇಕು. ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಎಚ್.ಕಾಂತರಾಜು ಆಯೋಗ ರಚಿಸಿ ಅಂತಹ ಗಣತಿ ಮಾಡಿಸಿತ್ತು. ರಾಜಕೀಯ ಕಾರಣಕ್ಕಾಗಿ ಸಿದ್ದರಾಮಯ್ಯ ವರದಿ ಸ್ವೀಕರಿಸಲಿಲ್ಲ. ನಾವು ಅಧಿಕಾರಕ್ಕೆ ಬಂದರೆ, ಆಯೋಗದ ವರದಿಯನ್ನು ಬಹಿರಂಗಪಡಿಸಿ ಸಾರ್ವಜನಿಕ ಚರ್ಚೆಗೊಳಪಡಿಸಿ ಸದನದಲ್ಲಿ ಮಂಡಿಸುತ್ತೇವೆ. ವರದಿ ಪ್ರಕಾರ, ಮೀಸಲಾತಿ ಜಾರಿಗೆ ತರುತ್ತೇವೆ' ಎಂದರು.

ತುರ್ತು ಸುದ್ದಿಗೋಷ್ಠಿ ನಡೆಸಿದ ಬಿಎಸ್‌ವೈ ● ಮತ್ತೆ ಅಧಿಕಾರ ಹಿಡಿಯಲು ಪ್ರಚಾರ ಯಾತ್ರೆ

'ಶಾ ವಿಶ್ವಾಸ ಹುಸಿಗೊಳಿಸಲಾರೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಯಲ್ಲಿ ಬಿ.ಎಸ್.ಯಡಿಯೂರಪ್ಪ ಅವರೇ ನಮ್ಮ 'ಸ್ಟಾರ್ ಪ್ರಚಾರಕ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿರುವ ಬೆನ್ನಲ್ಲೇ ಬುಧವಾರ ಯಡಿಯೂರಪ್ಪ ಪಕ್ಷದ ಕಚೇರಿಯಲ್ಲಿ ಗುರುವಾರ 'ತುರ್ತು' ಸುದ್ದಿಗೋಷ್ಠಿ ನಡೆಸಿ, ಬಹುಮತದೊಂದಿಗೆ ಮತ್ತೆ ಅಧಿಕಾರ ಹಿಡಿಯಲು ರಾಜ್ಯ ವ್ಯಾಪಿ ಪ್ರಚಾರ ಯಾತ್ರೆ ಆರಂಭಿಸುವುದಾಗಿ ಹೇಳಿದರು.

'ಅಮಿತ್ ಶಾ ಅವರು ನನ್ನ ಮೇಲೆ ವಿಶ್ವಾಸವಿಟ್ಟಿದ್ದಾರೆ. ಆ ವಿಶ್ವಾಸವನ್ನು ಹುಸಿಗೊಳಿಸುವುದಿಲ್ಲ' ಎಂದು ಅವರು ಹೇಳಿದರು. ದೆಹಲಿಯಲ್ಲಿ ಖಾಸಗಿ ವಾಹಿನಿಯೊಂದರ ಕಾರ್ಯಕ್ರಮದಲ್ಲಿ ಮಾತನಾಡಿದ್ದ ಶಾ, ಯಡಿಯೂರಪ್ಪ 'ಸ್ಟಾರ್ ಪ್ರಚಾರಕ' ಎಂದಿದ್ದರು.

'ನನಗೆ 80 ವರ್ಷ ವಯಸ್ಸು ಆಗಿರಬಹುದು, ಪರವಾಗಿಲ್ಲ. ಈ ವಿಧಾನಸಭಾ ಚುನಾವಣೆಯಲ್ಲಿ ಅಧಿಕಾರ ತರುವುದರ ಜತೆಗೆ 2024 ರ ಲೋಕಸಭೆ ಚುನಾವಣೆಯಲ್ಲೂ ಮತ್ತೆ 26 ಸ್ಥಾನಗಳನ್ನು ಗೆಲ್ಲಿಸಿಕೊಡಲು ಹಗಲಿರುಳು ಶ್ರಮಿಸುತ್ತೇನೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಿಜೆಪಿ ಕಚೇರಿಯಲ್ಲಿ ಗುರುವಾರ ನಡೆದ ಶ್ರೀರಾಮನವಮಿ ಪೂಜೆಯಲ್ಲಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ, ಕೇಂದ್ರ ಸಚಿವ ಭಗವಂತ ಖೂಬಾ, ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಇದ್ದರು.

'ನಮ್ಮ ಪಕ್ಷದ 25 ಸಂಸದರು ಮತ್ತು ರಾಜ್ಯಸಭಾ ಸದಸ್ಯರೊಂದಿಗೆ ಚುನಾವಣೆಯವರೆಗೆ ಎಲ್ಲ ಜಿಲ್ಲೆಗಳಲ್ಲೂ ಪ್ರವಾಸ ಮಾಡುತ್ತೇನೆ. ಸ್ಪಷ್ಟ ಬಹುಮತ ಪಡೆಯಲು ಕಠಿಣವಾಗಿ ಕೆಲಸ ಮಾಡಬೇಕಾಗಿದೆ' ಎಂದರು.

'ಯಾವುದೇ ಕಾರಣಕ್ಕೂ ಕಾಂಗ್ರೆಸ್ ಅಧಿಕಾರಕ್ಕೆ ಬರುವುದಿಲ್ಲ. ಮುಂದಿನ ವಿರೋಧ ಪಕ್ಷದ ನಾಯಕ ಯಾರು ಆಗಬೇಕು ಎಂಬ ಬಗ್ಗೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಚರ್ಚೆ ಮಾಡಿ ತೀರ್ಮಾನಿಸಿಕೊಳ್ಳಲಿ' ಎಂದು ಯಡಿಯೂರಪ್ಪ ತಿಳಿಸಿದರು.

ಮುಸ್ಲಿಮರಿಗೆ ಅನ್ಯಾಯ ಆಗಿಲ್ಲ: ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೀಸಲಾತಿ ವಿಚಾರವನ್ನು ಮುಖ್ಯಮಂತ್ರಿ ಬೊಮ್ಮಾಯಿ ಸೌಹಾರ್ದವಾಗಿ ಬಗೆಹರಿಸಿದ್ದಾರೆ. ಮುಸ್ಲಿಮರಿಗಿದ್ದ ಶೇ 4 ಮೀಸಲಾತಿ ರದ್ದು ಮಾಡಿ ಅವರನ್ನು ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿಸಲಾಗಿದೆ. ಅಲ್ಲಿ ಶೇ 10 ರಷ್ಟು ಮೀಸಲಾತಿ ಇದೆ. ಇದರಿಂದ ಮುಸ್ಲಿಮರಿಗೆ ಅನ್ಯಾಯವಾಗಿಲ್ಲ ಎಂದರು.

'ವರುಣಾದಲ್ಲಿ ಬಲಿಷ್ಠ ಅಭ್ಯರ್ಥಿ'

'ವರುಣಾದಲ್ಲಿ ಸಿದ್ದರಾಮಯ್ಯ ಅವರ ಗೆಲುವು ಸುಲಭವಲ್ಲ. ಅಲ್ಲಿ ಅವರು ನಿಂತ ನೆಲವೇ ಕುಸಿಯುತ್ತಿದೆ. ಅವರ ವಿರುದ್ಧ ಬಲಿಷ್ಠ ಅಭ್ಯರ್ಥಿಯನ್ನು ಕಣಕ್ಕಿಳಿಸುತ್ತೇವೆ' ಎಂದು ಬಿ.ಎಸ್.ಯಡಿಯೂರಪ್ಪ ಹೇಳಿದರು.

'ಈ ಕ್ಷೇತ್ರದಲ್ಲಿ ಬಿಜೆಪಿಯಿಂದ ಯಾರನ್ನು ಕಣಕ್ಕೆ ಇಳಿಸಬೇಕು ಎಂಬ ಬಗ್ಗೆ ಅಂತಿಮವಾಗಿ ರಾಷ್ಟ್ರೀಯ ಮಟ್ಟದಲ್ಲೇ ತೀರ್ಮಾನ ಆಗುತ್ತದೆ. ವಿಜಯೇಂದ್ರ ಇರಲಿ, ಯಾರೇ ಇರಲಿ ಟಿಕೆಟ್ ಕೇಂದ್ರದಲ್ಲಿ ತೀರ್ಮಾನವಾಗುತ್ತದೆ. ಅಲ್ಲಿ ಅತ್ಯಂತ ಪ್ರಬಲ ಅಭ್ಯರ್ಥಿಯನ್ನು ಕಣಕ್ಕೆ ಇಳಿಸುವುದು ನಿಶ್ಚಿತ' ಎಂದು ಅವರು ತಿಳಿಸಿದರು.

'ಸಿದ್ದರಾಮಯ್ಯ ಅವರಂತಹ ಹಿರಿಯ ನಾಯಕರು ಕ್ಷೇತ್ರಕ್ಕಾಗಿ ಪರದಾಟ ನಡೆಸುತ್ತಿರುವುದು ನೋಡಿದರೆ ಬೇಸರವಾಗುತ್ತದೆ. ಅಂತಹ ಸ್ಥಿತಿ ಬರಬಾರದಿತ್ತು' ಎಂದರು.

ಎದುರಾಳಿಗಳು ಯಾರು ಎನ್ನುವ ಬಗ್ಗೆ ನಾನು ಯೋಚಿಸುವುದಿಲ್ಲ. ಯಾರು ಬಂದರೂ ಎದುರಿಸುವೆ. ಜನರು ಆಶೀರ್ವಾದ ಮಾಡುತ್ತಾರೆ.
ಸಿದ್ದರಾಮಯ್ಯ, ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ

ವರುಣಾದಲ್ಲಿ ಬಿ.ಎಸ್. ಯಡಿಯೂರಪ್ಪ ಅವರೇ ಬೇಕಿದ್ದರೂ ಸ್ಪರ್ಧಿಸಲಿ. ಯಾರೇ ಬಂದರೂ ಎದುರಿಸಲು ಸಿದ್ಧರಿದ್ದೇವೆ.
ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಅಭ್ಯರ್ಥಿ ಆಯ್ಕೆ: ಬಿಜೆಪಿ ಅಭಿಪ್ರಾಯ ಸಂಗ್ರಹ ಇಂದು

ಬೆಂಗಳೂರು: 224 ವಿಧಾನಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳ ಆಯ್ಕೆಗಾಗಿ ಅಭಿಪ್ರಾಯ ಸಂಗ್ರಹಿಸಲು ಬಿಜೆಪಿ ಎಲ್ಲ ಜಿಲ್ಲೆಗಳಿಗೂ ತನ್ನ ತಂಡಗಳನ್ನು ಶುಕ್ರವಾರ ಕಳುಹಿಸಲಿದೆ. ಚುನಾವಣೆ ಮಾದರಿಯಲ್ಲಿ ಅಭಿಪ್ರಾಯ ಸಂಗ್ರಹ ಕಾರ್ಯ ಒಂದೇ ದಿನ ನಡೆಯಲಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಪ್ರತಿಯೊಂದು ವಿಧಾನಸಭಾ ಕ್ಷೇತ್ರಕ್ಕೆ ಮೂವರು ಸಂಭಾವ್ಯ ಅಭ್ಯರ್ಥಿಗಳ ಹೆಸರುಗಳನ್ನು ಬರೆದು ಮತ ಪೆಟ್ಟಿಗೆಗೆ ಹಾಕಬೇಕಿದೆ. ಮೊದಲ ಆದ್ಯತೆ, ಎರಡನೇ ಮತ್ತು ಮೂರನೇ ಆದ್ಯತೆಯ ಹೆಸರುಗಳನ್ನು ಸೂಚಿಸಬೇಕು. ಇದು ಗೋಪ್ಯವಾಗಿ ನಡೆಯಲಿದೆ. ಈ ಪ್ರಕ್ರಿಯೆಯಲ್ಲಿ ಸುಮಾರು 18 ಸಾವಿರ ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಬಿಜೆಪಿ ನಾಯಕರೊಬ್ಬರು ತಿಳಿಸಿದರು.

ಈ ಸಭೆಗೆ ಶಕ್ತಿ ಕೇಂದ್ರದ ಪ್ರಮುಖರು, ಮಹಾಶಕ್ತಿ ಕೇಂದ್ರದ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳು, ಮಂಡಲ ಕೋರ್ ಸಮಿತಿ ಸದಸ್ಯರು, ಮಂಡಲ ಪದಾಧಿಕಾರಿಗಳು, ಮಂಡಲ ಮೋರ್ಚಾಗಳ ಅಧ್ಯಕ್ಷರು, ಮಂಡಲದಲ್ಲಿರುವ ಜಿಲ್ಲೆ, ರಾಜ್ಯ, ಪ್ರಕೋಷ್ಠಗಳ ಸಂಚಾಲಕರು, ಮೋರ್ಚಾಗಳ ಜಿಲ್ಲಾ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು, ಜಿ.ಪಂ, ತಾ.ಪಂ.ಗಳ ಹಾಲಿ ಮತ್ತು ಮಾಜಿ ಸದಸ್ಯರು, ಸ್ಥಳೀಯ ಸಂಸ್ಥೆಗಳ ಸದಸ್ಯರು, ಹಾಲಿ ಮತ್ತು ಮಾಜಿ ಶಾಸಕರು, ಪರಿಷತ್ ಸದಸ್ಯರು, ಹಾಲಿ ಮತ್ತು ಮಾಜಿ ಸಂಸದರು, ಕಳೆದ ಬಾರಿ ಪರಾಜಿತ ಅಭ್ಯರ್ಥಿಗಳು ಅಭಿಪ್ರಾಯ ಸಂಗ್ರಹ ಕಾರ್ಯದಲ್ಲಿ ಭಾಗವಹಿಸಲು ಸೂಚಿಸಲಾಗಿದೆ. ಇವರೆಲ್ಲರೂ ಮತ ಚಲಾಯಿಸಲಿದ್ದಾರೆ.

ಹಿಂದೆಂದೂ ಇತರ ಯಾವುದೇ ರಾಜ್ಯಗಳ ಚುನಾವಣೆ ಸಂದರ್ಭದಲ್ಲಿ ಈ ಮಾದರಿಯನ್ನು ಅನುಸರಿಸಿಲ್ಲ. ಆಂತರಿಕವಾಗಿ ಸಂಗ್ರಹಿಸಿದ ಅಭಿಪ್ರಾಯವನ್ನು ಏ.1 ಅಥವಾ 2 ರಂದು ನಡೆಯುವ ಬಿಜೆಪಿ ಪ್ರಮುಖ ನಾಯಕರ ಸಭೆಯಲ್ಲಿ ಮಂಡಿಸಲಾಗುವುದು. ಇದರ ಆಧಾರದ ಮೇಲೆ ಸಂಭಾವ್ಯ ಅಭ್ಯರ್ಥಿಗಳ ಪಟ್ಟಿಯನ್ನು ಕಳುಹಿಸಲಾಗುವುದು. ಏ.4 ರಂದು ಕೇಂದ್ರೀಯ ಚುನಾವಣಾ ಸಮಿತಿ ಸಭೆ ನಡೆಯುವ ಸಾಧ್ಯತೆ ಇದೆ.

ಬಿಜೆಪಿಯ 36 ಸಂಘಟನಾತ್ಮಕ ಜಿಲ್ಲೆಗಳಲ್ಲಿ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ರವರೆಗೆ ಮತ ಚಲಾವಣೆ ರೂಪದಲ್ಲಿ ಅಭ್ಯರ್ಥಿಗಳ ಹೆಸರು ಸೂಚಿಸಬೇಕು. ಯಾರಿಗೆ ಹೆಚ್ಚು ಮತ ಸಿಗುತ್ತದೆಯೋ ಅವರಿಗೆ ಅವಕಾಶ ಹೆಚ್ಚು. ಇದರಿಂದ ಅನಗತ್ಯ ಬಂಡಾಯ, ಗಲಾಟೆಯನ್ನು ತಪ್ಪಿಸಬಹುದು ಎಂಬ ಪ್ರಯೋಗಕ್ಕೆ ಬಿಜೆಪಿ ಕೈ ಹಾಕಿದೆ ಎಂದು ಅವರು ಹೇಳಿದರು.

ಮತ್ತೆ ಜೆಡಿಎಸ್ ಮರಳಲು ಖೂಬಾ ನಿರ್ಧಾರ

ಬಸವಕಲ್ಯಾಣ (ಬೀದರ್ ಜಿಲ್ಲೆ): 'ನಾನು ಶೀಘ್ರವೇ ಜೆಡಿಎಸ್ ಪಕ್ಷ ಸೇರುವೆ. ಸೇರ್ಪಡೆಗಾಗಿ ವಿಧಾನಸಭೆಯ ಟಿಕೆಟ್ ಕೇಳಲ್ಲ ಮತ್ತು ಯಾವುದೇ ಷರತ್ತು ಕೂಡ ವಿಧಿಸಲ್ಲ' ಎಂದು ಮಾಜಿ ಶಾಸಕ ಮಲ್ಲಿಕಾರ್ಜುನ ಖೂಬಾ ತಿಳಿಸಿದರು.

'ಜೆಡಿಎಸ್‌ನಿಂದ ಎರಡು ಬಾರಿ ಶಾಸಕನಾಗಿರುವೆ. ನಂತರ ಬಿಜೆಪಿಗೆ ಸೇರಿ, ಚುನಾವಣೆಯಲ್ಲಿ ಸ್ಪರ್ಧಿಸಿ ಸೋತಿರುವೆ. ಎರಡು ವರ್ಷಗಳ ಹಿಂದೆ ನಡೆದ ಉಪಚುನಾವಣೆಯಲ್ಲಿ ಸ್ಪರ್ಧಿಸಲು ಬಿಜೆಪಿಯವರು ಟಿಕೆಟ್ ನೀಡಲಿಲ್ಲ. ಪಕ್ಷೇತರನಾಗಿ ಸ್ಪರ್ಧಿಸಿದ್ದರಿಂದ ಬಿಜೆಪಿಯಿಂದ ಉಚ್ಚಾಟಿಸಲಾಯಿತು' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಗುಬ್ಬಿ ಶ್ರೀನಿವಾಸ್ ಅಧಿಕೃತವಾಗಿ ಕಾಂಗ್ರೆಸ್‌ಗೆ

ಬೆಂಗಳೂರು: ಗುಬ್ಬಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ಎಸ್.ಆರ್. ಶ್ರೀನಿವಾಸ್ ಜೆಡಿಎಸ್ ಪಕ್ಷ ತೊರೆದು ಗುರುವಾರ ಅಧಿಕೃತವಾಗಿ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಪಕ್ಷದ ಶಾಲು ಮತ್ತು ಬಾವುಟ ನೀಡುವ ಮೂಲಕ ಶ್ರೀನಿವಾಸ್ ಅವರನ್ನು ಕಾಂಗ್ರೆಸ್ ಪಕ್ಷಕ್ಕೆ ಸ್ವಾಗತಿಸಿದರು.

ಶ್ರೀನಿವಾಸ್ ಗುಬ್ಬಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಸತತವಾಗಿ ನಾಲ್ಕು ಬಾರಿ ಆಯ್ಕೆಯಾಗಿದ್ದರು. ಕೆಲವು ತಿಂಗಳುಗಳಿಂದ ಜೆಡಿಎಸ್ ಪಕ್ಷದ ಚಟುವಟಿಕೆಗಳಿಂದ ದೂರ ಉಳಿದಿದ್ದರು. ಸೋಮವಾರ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ತಮ್ಮ ನೂರಾರು ಬೆಂಬಲಿಗರೊಂದಿಗೆ ಗುರುವಾರ ಕಾಂಗ್ರೆಸ್ ಸೇರಿದರು.

ಮೂಡಿಗೆರೆ ಪುರಸಭೆಯ ಮಾಜಿ ಅಧ್ಯಕ್ಷ ಹಾಲಪ್ಪ ಮತ್ತು ಬಿಜೆಪಿ ಮುಖಂಡ ಎಸ್.ಎಂ. ಕೃಷ್ಣ ಅವರ ಬೆಂಬಲಿಗ ಮಂಡ್ಯದ ಟಿ.ಎಸ್. ಸತ್ಯಾನಂದ ಕೂಡ ಇದೇ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಸೇರಿದರು.

ಜೆಡಿಎಸ್: ಅಣ್ಣ ತೊರೆದ, ತಮ್ಮ ಸೇರಿದ

ಎಚ್‌.ಆರ್ ಚೆನ್ನಕೇಶವ

ಗಂಗಾವತಿ (ಕೊಪ್ಪಳ ಜಿಲ್ಲೆ): ಇಲ್ಲಿನ ಕಾಂಗ್ರೆಸ್ ಪಕ್ಷದ ನಾಯಕ, ಮಾಜಿ ಸಂಸದ ಎಚ್.ಜಿ ರಾಮುಲು ಅವರ ಪುತ್ರ ಹಾಗೂ ಬಿಜೆಪಿ ಮುಖಂಡ ಎಚ್.ಆರ್ ಚೆನ್ನಕೇಶವ ಅವರು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಬೆಂಗಳೂರಿನ ಜೆಡಿಎಸ್ ಕಚೇರಿಯಲ್ಲಿ ಗುರುವಾರ ಅಧಿಕೃತವಾಗಿ ಪಕ್ಷ ಸೇರ್ಪಡೆಯಾದರು.

ಎಚ್.ಆರ್ ಚೆನ್ನಕೇಶವ ಕಳೆದ ಬಾರಿ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಪಡೆಯಲು ವಿಫಲವಾದರು. ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಲು ಸಿದ್ಧತೆ ನಡೆಸಿದ್ದರು. ಈಗ ದಿಢೀರನೇ ಜೆಡಿಎಸ್ ಸೇರಿ ಗಂಗಾವತಿ ಕ್ಷೇತ್ರದಿಂದ ಸ್ಪರ್ಧಿಸುವ ಇಂಗಿತ ವ್ಯಕ್ತಪಡಿಸಿದ್ದಾರೆ.

ಎಚ್.ಆರ್ ಚೆನ್ನಕೇಶವ ಅವರ ಅಣ್ಣ ಎಚ್.ಆರ್.ಶ್ರೀನಾಥ ಕೆಲ ತಿಂಗಳ ಹಿಂದೆ ಜೆಡಿಎಸ್ ತೊರೆದು ಕಾಂಗ್ರೆಸ್ ಸೇರಿದ್ದರು. ಈಗ ಚೆನ್ನಕೇಶವ ಜೆಡಿಎಸ್ ಸೇರಿದ್ದಾರೆ.

ಬಾಲಾಜಿ ಕಾರ್ಖಾನೆ: ಮತ್ತೆ ದಾಳಿ

ಮುದ್ದೇಬಿಹಾಳ: ಸ್ಥಳಕ್ಕೆ ಜೆಸಿಬಿ ಯಂತ್ರಗಳನ್ನು ಕರೆಸಿ ಜಿಲ್ಲಾಧಿಕಾರಿ ತಪಾಸಣೆ

ಪ್ರಜಾವಾಣಿ ವಾರ್ತೆ

ವಿಜಯಪುರ: ಮುದ್ದೇಬಿಹಾಳ ತಾಲ್ಲೂಕಿನ ಯರಗಲ್ಲ ಮದರಿ ಹತ್ತಿರ ಇರುವ ಬಾಲಾಜಿ ಸಕ್ಕರೆ ಕಾರ್ಖಾನೆ ಮೇಲೆ ಚುನಾವಣಾ ವೀಕ್ಷಣಾ ದಳದವರು ಗುರುವಾರ ಸಂಜೆ ಪೊಲೀಸರೊಂದಿಗೆ ಎರಡನೇ ಬಾರಿ ಹಠಾತ್ ದಾಳಿ ನಡೆಸಿದರು.

ಮುದ್ದೇಬಿಹಾಳ ವಿಧಾನಸಭಾ ಮತಕ್ಷೇತ್ರದ ಚುನಾವಣಾಧಿಕಾರಿ ಚಂದ್ರಕಾಂತ ಪವಾರ ಉಸ್ತುವಾರಿಯಲ್ಲಿ ನಡೆದ ದಾಳಿಯ ವೇಳೆ ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಎಸ್.ಆರ್. ಪಾಟೀಲ ಭಾವಚಿತ್ರದ ಗೋಡೆ ಗಡಿಯಾರಗಳು, ಟೀ ಶರ್ಟ್‌ಗಳು ಪ್ಯಾಕಿಂಗ್ ಸ್ಥಿತಿಯಲ್ಲಿ ಲಭ್ಯವಾಗಿವೆ. ದಾಳಿಯಲ್ಲಿ ಅಂದಾಜು ₹40-50 ಲಕ್ಷದ ಸಾಮಗ್ರಿಗಳು ಸಿಕ್ಕಿವೆ ಎನ್ನಲಾಗಿದೆ. ಇದರಿಂದಾಗಿ ಚುನಾವಣಾಧಿಕಾರಿಗಳಲ್ಲಿ ಕಾರ್ಖಾನೆಯ ಚಟುವಟಿಕೆಗಳ ಮೇಲೆ ಸಂಶಯ ಹೆಚ್ಚಾಗಿದ್ದು ಇಡೀ ಕಾರ್ಖಾನೆಯ ಜಾಗವನ್ನು ಬಿಡದೆ ರಾತ್ರಿಯಿಡೀ ತಪಾಸಣೆ ನಡೆಸಿದ್ದಾರೆ.

ಕಾರ್ಖಾನೆಯ ವಿವಿಧೆಡೆ ನೆಲದಲ್ಲಿ ತಗ್ಗು ತೆಗೆದು ಬಚ್ಚಿಡಲಾಗಿದೆ ಎನ್ನುವ ಸಂಶಯದ ಹಿನ್ನೆಲೆಯಲ್ಲಿ ಸ್ಥಳಕ್ಕೆ ಜೆಸಿಬಿ ಯಂತ್ರಗಳನ್ನು ತರಿಸಲಾಗಿದೆ. ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ್, ಎಸ್.ಪಿ ಎಚ್.ಡಿ.ಆನಂದಕುಮಾರ, ಹೆಚ್ಚುವರಿ ಎಸ್ಪಿ ಶಂಕರ ಮಾರಿಹಾಳ, ಮುದ್ದೇಬಿಹಾಳ ವಿಧಾನಸಭಾ ಮತಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ ತಹಶೀಲ್ದಾರ್ ರೇಖಾ, ಪಿಎಸ್‌ಐ ಆರಿಫ ಮುಷಾಪುರಿ ಪೊಲೀಸ್ ಸಿಬ್ಬಂದಿ ಮತ್ತು ಚುನಾವಣೆಯ ಫ್ಲೈಯಿಂಗ್ ಸ್ಕ್ವಾಡ್ ತಂಡ ರಾತ್ರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆಯಲ್ಲಿ ತೊಡಗಿದ್ದಾರೆ.

ದಾಳಿಯಲ್ಲಿ ವಶ ಪಡೆದುಕೊಂಡ ಸಾಮಗ್ರಿಗಳ ನಿಖರ ಮೊತ್ತ ಮತ್ತು ದಾಳಿಯ ಸಂಪೂರ್ಣ ವಿವರ ದಾಳಿ ಮುಗಿದ ಮೇಲೆ ಎಫ್‌ಐಆರ್ ದಾಖಲಿಸಿಕೊಂಡ ನಂತರ ಲಭ್ಯವಾಗಲಿದೆ.

ಇದು ಎರಡನೇ ಬಾರಿ ನಡೆದ ದಾಳಿ. ಮಾ.27ರಂದು ನಡೆದ ಮೊದಲ ದಾಳಿಯಲ್ಲಿ ಎಸ್.ಆರ್.ಪಾಟೀಲ ಭಾವಚಿತ್ರವಿರುವ ₹2.10 ಕೋಟಿ ಮೌಲ್ಯದ ಗೋಡೆ ಗಡಿಯಾರ, ಟೀ-ಶರ್ಟ್ ಮತ್ತು ಕ್ಯಾರಿಬ್ಯಾಗ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿತ್ತು.

₹34.10 ಲಕ್ಷ ಮೌಲ್ಯದ ಗೋಡೆ ಗಡಿಯಾರ ವಶಕ್ಕೆ

ಬಾಗಲಕೋಟೆ: 'ನಗರದ ಎಪಿಎಂಸಿ ಕ್ರಾಸ್ ಬಳಿ ಗುರುವಾರ ಬೆಳಗಿನ ಜಾವ ದಾಖಲೆಗಳಿಲ್ಲದೆ ಸಾಗಿಸುತ್ತಿದ್ದ ಅಂದಾಜು ₹34.10 ಲಕ್ಷ ಮೌಲ್ಯದ 8,100 ಗೋಡೆ ಗಡಿಯಾರಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಜಯಪ್ರಕಾಶ ಅವರು ತಿಳಿಸಿದರು.

ಎರಡೂ ಲಾರಿಗಳನ್ನು ವಶಕ್ಕೆ ತೆಗೆದುಕೊಳ್ಳಲಾಗಿದ್ದು, ಇವು ಯಾರಿಗೆ ಸೇರಿದ್ದು, ಎಲ್ಲಿಂದ ಎಲ್ಲಿಗೆ ಸಾಗಿಸಲಾಗುತ್ತಿತ್ತು ಎಂಬ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಇಬ್ಬರು ಚಾಲಕರನ್ನೂ ವಶಕ್ಕೆ ಪಡೆಯಲಾಗಿದೆ ಎಂದರು.

ಬಗ್ಯಾಸ್ ಸಾಗಿಸುವ ಎರಡು ಲಾರಿಗಳಲ್ಲಿ ಇವುಗಳನ್ನು ಸಾಗಿಸಲಾಗುತ್ತಿತ್ತು. ಒಂದು ಲಾರಿಯಲ್ಲಿ 420, ಇನ್ನೊಂದು ಲಾರಿಯಲ್ಲಿ 390 ಬಾಕ್ಸ್ ಪತ್ತೆಯಾಗಿದ್ದು, ಪ್ರತಿ ಬಾಕ್ಸ್‌ನಲ್ಲಿ ಹತ್ತು ಗೋಡೆ ಗಡಿಯಾರಗಳಿವೆ. ನವನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗೋಡೆ ಗಡಿಯಾರಗಳಲ್ಲಿ ಮಾಜಿ ಸಚಿವ ಎಸ್.ಆರ್. ಪಾಟೀಲ ಅವರ ಭಾವಚಿತ್ರವಿದೆ. ಅವರು ಬಾಗಲಕೋಟೆ ಜಿಲ್ಲೆಯ ಬೀಳಗಿ, ವಿಜಯಪುರ ಜಿಲ್ಲೆಯ ದೇವರಹಿಪ್ಪರಗಿ ಕ್ಷೇತ್ರಗಳಿಂದ ಕಾಂಗ್ರೆಸ್ ಆಕಾಂಕ್ಷಿಯಾಗಿದ್ದಾರೆ.

'ಬಿಜೆಪಿಯೇ ಭರವಸೆ' ಟೀ-ಶರ್ಟ್, ಬ್ಯಾಡ್ಜ್‌ಗಳ ವಶ (ಗದಗ ವರದಿ): ಮುಂಡರಗಿ ಪೊಲೀಸರು ಇಲ್ಲಿನ ಬಿಎಎಂಎಸ್ ಬಳಿ ತೆರೆದಿರುವ ಚೆಕ್‌ಪೋಸ್ಟ್‌ನಲ್ಲಿ ಹೊಸಪೇಟೆಯಿಂದ ಹೂವಿನಹಡಗಲಿಗೆ ತೆರಳುತ್ತಿದ್ದ ವಾಹನ ತಪಾಸಣೆ ನಡೆಸಿದಾಗ 'ಬಿಜೆಪಿಯೇ ಭರವಸೆ' ಸ್ಲೋಗನ್ ಇರುವ 100 ಟೀ- ಶರ್ಟ್, ಮೋದಿ ಮುಖ ಇರುವ 1 ಸಾವಿರ ಫೇಸ್ ಮಾಸ್ಕ್, 1 ಸಾವಿರ ಬ್ಯಾಡ್ಜ್‌ಗಳು, 120 ಶಾಲು, 420 ಸ್ಟಿಕ್ಕರ್ ಸೇರಿದಂತೆ ಒಟ್ಟು 2,720 ವಸ್ತುಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಎಸ್‌ಆರ್‌ ಪಾಟೀಲ ಭಾವಚಿತ್ರವಿರುವ ಗೋಡೆ ಗಡಿಯಾರ

25 ಕುಕ್ಕರ್, 41 ಹೋಳಿಗೆಯಂತ್ರ ವಶ (ಯರಗಟ್ಟಿ ವರದಿ) (ಬೆಳಗಾವಿ ಜಿಲ್ಲೆ): ಮತದಾರರಿಗೆ ಹಂಚಲು ಗೋದಾಮಿನಲ್ಲಿ ಸಂಗ್ರಹಿಸಿ ಇಟ್ಟಿದ್ದ 25 ಕುಕ್ಕರ್ ಹಾಗೂ 41 ಹೋಳಿಗೆ ಯಂತ್ರಗಳನ್ನು ಚುನಾವಣೆ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಇವುಗಳ ಮೇಲೆ ಸವದತ್ತಿ ಮತಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿ ಬಸವರಾಜ ಪಟ್ಟಣಶೆಟ್ಟಿ ಅವರ ಭಾವಚಿತ್ರ ಇವೆ. ಇವುಗಳ ಮೌಲ್ಯ ₹3.52 ಲಕ್ಷ ಎಂದು ಪೊಲೀಸರು ತಿಳಿಸಿದ್ದಾರೆ.

ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪ

ಎಂ.ಪಿ. ಕುಮಾರಸ್ವಾಮಿ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಮೂಡಿಗೆರೆ (ಚಿಕ್ಕಮಗಳೂರು ಜಿಲ್ಲೆ): ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಆರೋಪದ ಮೇರೆಗೆ ಶಾಸಕ ಎಂ.ಪಿ. ಕುಮಾರಸ್ವಾಮಿ ವಿರುದ್ಧ ಮೂಡಿಗೆರೆ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಿಸಲಾಗಿದೆ.

'ಶಾಸಕ ಎಂ.ಪಿ. ಕುಮಾರಸ್ವಾಮಿ ಅವರ ನಿವಾಸದ ಪಕ್ಕದಲ್ಲಿ ಗುರುವಾರ ಬೆಳಿಗ್ಗೆ ಸ್ವಸಹಾಯ ಸಂಘದ ನೂರಾರು ಮಹಿಳೆಯರು ಜಮಾಯಿಸಿದ್ದರು. ಅವರಿಗೆ ಉಪಾಹಾರ ನೀಡಲಾಗುತ್ತಿತ್ತು. ಮಾಹಿತಿ ದೊರೆತ ಕೂಡಲೇ ನಮ್ಮ ತಂಡ ಭೇಟಿ ನೀಡಿ ಪರಿಶೀಲಿಸಿತು. ಜನರನ್ನು ಗುಂಪುಗೂಡಿಸಿ ಉಪಾಹಾರ ನೀಡುವುದು ಕೂಡ ನೀತಿ ಸಂಹಿತೆ ಉಲ್ಲಂಘನೆಯಾಗಿದ್ದರಿಂದ ಪ್ರಕರಣ ದಾಖಲು ಮಾಡಲಾಗಿದೆ' ಎಂದು ಚುನಾವಣಾಧಿಕಾರಿ ಎಚ್.ಡಿ ರಾಜೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಚೆಕ್ ವಿತರಣೆ ಮಾಡಬೇಕೆಂದು ಎರಡು ದಿನಗಳ ಹಿಂದೆ ಅಧಿಕಾರಿಗಳಿಗೆ ಚೆಕ್ ತರಲು ತಿಳಿಸಿದ್ದೆ. ಆದರೆ ಬುಧವಾರ ನೀತಿ ಸಂಹಿತೆ ಜಾರಿಯಾಯಿತು. ಕಾರ್ಯಕ್ರಮ ರದ್ದಾಯಿತು. ಕೆಲವರಿಗೆ ಮಾಹಿತಿ ಸಿಗದೆ ಬೆಳಿಗ್ಗೆ ನನ್ನ ನಿವಾಸಕ್ಕೆ ಬಂದಿದ್ದರು. ಹಸಿವಿನಿಂದ ಬಂದಿದ್ದಾರೆಂದು ತಿಂಡಿ ನೀಡಲಾಯಿತೇ ಹೊರತು ಚುನಾವಣೆ ಪ್ರಚಾರ ನಡೆಸಿಲ್ಲ' ಎಂದು ಶಾಸಕ ಎಂ.ಪಿ ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ಮೂಡಿಗೆರೆ ತಾಲ್ಲೂಕಿನ ಕೆಲ್ಲೂರಿನಲ್ಲಿರುವ ಶಾಸಕ ಎಂ.ಪಿ ಕುಮಾರಸ್ವಾಮಿ ನಿವಾಸದ ಪಕ್ಕದಲ್ಲಿ ಗುರುವಾರ ಸೇರಿದ್ದ ನೂರಾರು ಮಹಿಳೆಯರು

ಸಚಿವೆ ಜೊಲ್ಲೆ ವಿರುದ್ಧವೂ ಪ್ರಕರಣ

ನಿಪ್ಪಾಣಿ (ಬೆಳಗಾವಿ ಜಿಲ್ಲೆ): ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದ ಮೇಲೆ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ ಅವರ ವಿರುದ್ಧ ನಿಪ್ಪಾಣಿ ಪೊಲೀಸ್ ಠಾಣೆಯಲ್ಲಿ ಗುರುವಾರ ಪ್ರಕರಣ ದಾಖಲಾಗಿದೆ.

ರಣರಾಗಿಣಿ ಮಹಿಳಾ ಸಂಘದಿಂದ ನಿಪ್ಪಾಣಿಯ ಮುನ್ಸಿಪಲ್ ಪ್ರೌಢಶಾಲೆ ಮೈದಾನದಲ್ಲಿ ಬುಧವಾರ ರಾತ್ರಿ ಅರಿಸಿನ ಕುಂಕುಮ ಕಾರ್ಯಕ್ರಮ ಆಯೋಜನೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಸಚಿವೆ ಶಶಿಕಲಾ ಜೊಲ್ಲೆ ಅವರೂ ಪಾಲ್ಗೊಂಡಿದ್ದರು. ವೇದಿಕೆ ಮೇಲೆ ಹಾಡು ಮೂಡಿಬಂದಾಗ ಬಿಜೆಪಿ ಚಿಹ್ನೆ ಹಾಗೂ ಧ್ವಜಗಳನ್ನು ಹಾರಿಸಲಾಯಿತು. ಸಂಸದ ಅಣ್ಣಾಸಾಹೇಬ ಜೊಲ್ಲೆ ಅವರ ಭಾವಚಿತ್ರವನ್ನೂ ಪ್ರದರ್ಶಿಸಲಾಯಿತು. ರಾತ್ರಿ 10ರ ಸುಮಾರಿಗೆ ಅಪಾರ ಸಂಖ್ಯೆಯ ಮಹಿಳೆಯರಿಗೆ ಊಟದ ವ್ಯವಸ್ಥೆಯನ್ನೂ ಮಾಡಲಾಗಿತ್ತು.

ಇದೆಲ್ಲವೂ ಮಾದರಿ ನೀತಿ ಸಂಹಿತೆಯ ಸ್ಪಷ್ಟ ಉಲ್ಲಂಘನೆಯಾಗಿದೆ. ಆದ್ದರಿಂದ ಸಚಿವೆ ಶಶಿಕಲಾ ಜೊಲ್ಲೆ ಹಾಗೂ ರಣರಾಗಿಣಿ ಮಹಿಳಾ ಮಂಡಳದ ಅಧ್ಯಕ್ಷೆ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಚುನಾವಣಾಧಿಕಾರಿಗಳು ತಿಳಿಸಿದ್ದಾರೆ.

'ಸ್ಕ್ರೀನಿಂಗ್ ಸಮಿತಿ ಸಭೆಯಲ್ಲಿ ಶಿವಲಿಂಗೇಗೌಡ ಭಾಗಿ

ಅಂತಿಮ ಹಂತದತ್ತ ಎರಡನೇ ಪಟ್ಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆಯ್ಕೆಮಾಡಲು ನೇಮಿಸಿರುವ 'ಸ್ಕ್ರೀನಿಂಗ್ ಸಮಿತಿ' ಗುರುವಾರ ತಡರಾತ್ರಿಯವರೆಗೂ ಸಭೆ ನಡೆಸಿದ್ದು, ಬಾಕಿ ಉಳಿದಿರುವ 100 ಕ್ಷೇತ್ರಗಳ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಬಹುತೇಕ ಅಂತಿಮಗೊಳಿಸಿದೆ.

ಮೊದಲ ಹಂತದಲ್ಲಿ 124 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಹೆಸರನ್ನು ಕಾಂಗ್ರೆಸ್ ಪ್ರಕಟಿಸಿದೆ. ಬಾಕಿ ಉಳಿದಿರುವ 100 ಕ್ಷೇತ್ರಗಳ ಪೈಕಿ 37 ಕ್ಷೇತ್ರಗಳ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಕಳೆದ ವಾರ ಅಂತಿಮಗೊಳಿಸಲಾಗಿತ್ತು. ಉಳಿದ 67 ಕ್ಷೇತ್ರಗಳ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸಲು ದೊಡ್ಡಬಳ್ಳಾಪುರ ಸಮೀಪದ ರೆಸಾರ್ಟ್‌ನಲ್ಲಿ ಗುರುವಾರ ಮಧ್ಯಾಹ್ನ 3 ಗಂಟೆಗೆ ಆರಂಭವಾದ ಸಭೆ ತಡರಾತ್ರಿಯವರೆಗೂ ನಡೆಯಿತು.

ಸ್ಕ್ರೀನಿಂಗ್ ಸಮಿತಿ ಅಧ್ಯಕ್ಷ ಮೋಹನ್ ಪ್ರಕಾಶ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ, ಪ್ರಣಾಳಿಕೆ ಸಮಿತಿ ಅಧ್ಯಕ್ಷ ಜಿ. ಪರಮೇಶ್ವರ್ ಸೇರಿದಂತೆ ಹಲವು ಪ್ರಮುಖ ನಾಯಕರು ಸಭೆಯಲ್ಲಿ ಪಾಲ್ಗೊಂಡಿದ್ದರು.

ಅರಸೀಕೆರೆಯ ಜೆಡಿಎಸ್ ಶಾಸಕ ಕೆ.ಎಂ. ಶಿವಲಿಂಗೇಗೌಡ ಅವರು ಕಾಂಗ್ರೆಸ್ 'ಸ್ಕ್ರೀನಿಂಗ್ ಸಮಿತಿ' ಸಭೆಗೆ ಹಾಜರಾಗಿದ್ದಾರೆ. ಕೂಡ್ಲಿಗಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಶಾಸಕ ಎನ್.ವೈ. ಗೋಪಾಲಕೃಷ್ಣ ಕಾಂಗ್ರೆಸ್‌ಗೆ ಮರಳಲು ನಿರ್ಧರಿಸಿದ್ದಾರೆ. ಅವರನ್ನು ಮೊಳಕಾಲ್ಮುರು ಕ್ಷೇತ್ರದಿಂದ ಕಣಕ್ಕಿಳಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆದಿದೆ. ಇತ್ತೀಚೆಗಷ್ಟೇ ಕಾಂಗ್ರೆಸ್‌ಗೆ ಮರಳಿರುವ ಬಾಬುರಾವ್ ಚಿಂಚನಸೂರ್ ಅವರನ್ನು ಗುರುಮಠಕಲ್‌ನಿಂದ ಕಣಕ್ಕಿಳಿಸುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ಗೊತ್ತಾಗಿದೆ.

ದೇವರ ಹಿಪ್ಪರಗಿಗೆ ಎಸ್.ಆರ್. ಪಾಟೀಲ, ಧಾರವಾಡ ಉತ್ತರಕ್ಕೆ ಮೋಹನ್ ಲಿಂಬಿಕಾಯಿ, ಬೊಮ್ಮನಹಳ್ಳಿಗೆ ನಿರ್ಮಾಪಕ ಉಮಾಪತಿ ಶ್ರೀನಿವಾಸ್, ಯಲಹಂಕಕ್ಕೆ ಕೇಶವ ರಾಜಣ್ಣ ಹೆಸರು ಮುಂಚೂಣಿಯಲ್ಲಿವೆ. ಪಿ.ಜಿ.ಆರ್. ಸಿಂಧ್ಯ ಅವರ ಹೆಸರನ್ನು ಪದ್ಮನಾಭನಗರ ಕ್ಷೇತ್ರಕ್ಕೆ ಶಿಫಾರಸು ಮಾಡಲು ನಿರ್ಧರಿಸಲಾಗಿದೆ ಎಂಬ ಮಾಹಿತಿ ಲಭಿಸಿದೆ.

'ಯುವ ಮತ' ಅಭಿಯಾನಕ್ಕೆ ಚಾಲನೆ

ಬೆಂಗಳೂರು: ಇದೇ ಮೊದಲ ಬಾರಿಗೆ ಮತ ಚಲಾಯಿಸಲಿರುವ 18ರಿಂದ 23 ವರ್ಷ ವಯಸ್ಸಿನ ಮತದಾರರನ್ನು ಉತ್ತೇಜಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷವು ಹಮ್ಮಿಕೊಂಡಿರುವ 'ಯುವ ಮತ' ಅಭಿಯಾನಕ್ಕೆ ಗುರುವಾರ ಚಾಲನೆ ನೀಡಲಾಗಿದೆ.

ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಮತ್ತು ರಾಜ್ಯದಲ್ಲಿ ಅಭಿಯಾನದ ಉಸ್ತುವಾರಿಯಾಗಿ ನೇಮಕಗೊಂಡಿರುವ ರಾಷ್ಟ್ರೀಯ ಯುವ ಕಾಂಗ್ರೆಸ್ ಸಮಿತಿ ಪ್ರಧಾನ ಕಾರ್ಯದರ್ಶಿ ರಕ್ಷಾ ರಾಮಯ್ಯ ಅವರು 'ಯುವ ಮತ' ಜಾಲತಾಣಕ್ಕೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅಭಿಷೇಕ್ ದತ್, 'ಇದೇ ಮೊದಲ ಬಾರಿಗೆ ಮತ ಚಲಾಯಿಸುವ ಅವಕಾಶ ಪಡೆದಿರುವವರನ್ನು ಗುರುತಿಸಿ, ಮತದಾನ ಮಾಡುವಂತೆ ಅವರನ್ನು ಉತ್ತೇಜಿಸುವ ಕೆಲಸವನ್ನು ಕಾಂಗ್ರೆಸ್ ಮಾಡಲಿದೆ. ನಿರುದ್ಯೋಗ ನಿವಾರಣೆ ಮತ್ತು ಜೀವನ ನಿರ್ವಹಣೆಗೆ ಕಾಂಗ್ರೆಸ್ ಪಕ್ಷವು ನೀಡಿರುವ ಭರವಸೆಗಳ ಅನುಷ್ಠಾನದ ಕುರಿತು ಅವರಲ್ಲಿ ವಿಶ್ವಾಸ ಮೂಡಿಸುವ ಕೆಲಸವನ್ನೂ ಮಾಡಲಾಗುವುದು' ಎಂದರು.

'ಶಾಸಕರನ್ನು ಕರೆದೊಯ್ಯುವಾಗ ನೈತಿಕತೆ ಎಲ್ಲಿತ್ತು?'

ಬೆಂಗಳೂರು: 'ಬಿಜೆಪಿ ಶಾಸಕರಿಗೆ ಕರೆಮಾಡಿ ಆಹ್ವಾನ ನೀಡುತ್ತಿದ್ದಾರೆ ಎಂದು ನಮ್ಮ ವಿರುದ್ಧ ಆರೋಪ ಮಾಡುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ, 18 ಶಾಸಕರ ಮನೆ ಬಾಗಿಲು ತಟ್ಟಿ ಕರೆದೊಯ್ಯುವಾಗ ನೈತಿಕತೆ ಎಲ್ಲಿ ಹೋಗಿತ್ತು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಗುಬ್ಬಿ ಮಾಜಿ ಶಾಸಕ ಎಸ್.ಆರ್. ಶ್ರೀನಿವಾಸ್ ಅವರ ಪಕ್ಷ ಸೇರ್ಪಡೆ ಸಂದರ್ಭದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ಬಿಜೆಪಿಗೆ ಬಹುಮತ ಇಲ್ಲದಿದ್ದರೂ 'ಆಪರೇಷನ್ ಕಮಲ' ನಡೆಸಿ ನಾಲ್ಕು ವರ್ಷ ಅಧಿಕಾರ ಅನುಭವಿಸಿದ್ದೀರಿ. ಈಗ ಜನರು ನಿಮ್ಮ ದುರಾಡಳಿತಕ್ಕೆ ಕೊನೆಹಾಡಲು ನಿರ್ಧರಿಸಿದ್ದಾರೆ' ಎಂದು ಕೇಳಿದರು.

ಜೆಡಿಎಸ್‌ನ ವಿಧಾನ ಪರಿಷತ್ ಸದಸ್ಯರಾಗಿದ್ದ ಕಾಂತರಾಜು, ಮನೋಹರ್, ಶಾಸಕ ಶ್ರೀನಿವಾಸ ಗೌಡ ಅವರು ಕಾಂಗ್ರೆಸ್ ಪಕ್ಷಕ್ಕೆ ಬಂದಿದ್ದಾರೆ. ಈಗ ಎಸ್.ಆರ್. ಶ್ರೀನಿವಾಸ್ ಪಕ್ಷ ಸೇರಿದ್ದಾರೆ. ಮಧು ಬಂಗಾರಪ್ಪ, ದೇವೇಂದ್ರಪ್ಪ ಕೂಡ ಕಾಂಗ್ರೆಸ್‌ಗೆ ಬಂದಿದ್ದಾರೆ. 2018ರ ವಿಧಾನಸಭಾ ಕ್ಷೇತ್ರದಲ್ಲಿ ಅಭ್ಯರ್ಥಿಗಳಾಗಿದ್ದ ಹಲವರು ಸೇರಿದಂತೆ ಜೆಡಿಎಸ್‌ನ 37 ಮುಖಂಡರು ಕಾಂಗ್ರೆಸ್ ಸೇರಲು ನಿರ್ಧರಿಸಿದ್ದಾರೆ. ಎಲ್ಲರನ್ನೂ ಹಂತ ಹಂತವಾಗಿ ಪಕ್ಷಕ್ಕೆ ಬರಮಾಡಿಕೊಳ್ಳಲಾಗುವುದು ಎಂದರು.

ಶಾಸಕ ಗೌರಿಶಂಕರ್ ಆಯ್ಕೆ ಅಸಿಂಧು

ಒಂದನೇ ಪುಟದಿಂದ

ಅನರ್ಹತೆ ಭೀತಿ: 'ಗೌರಿಶಂಕರ್ ಆಯ್ಕೆಯನ್ನು ಹೈಕೋರ್ಟ್ ಅನೂರ್ಜಿತಗೊಳಿಸಿರುವ ಕಾರಣ ಅವರನ್ನು ಪ್ರಜಾಪ್ರತಿನಿಧಿ ಕಾಯ್ದೆ–1951ರ ಅನ್ವಯ ಆರು ವರ್ಷಗಳ ಕಾಲ ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸಬಹುದು. ಹಾಗಾಗಿ, ಈಗ ಗೌರಿಶಂಕರ್ ಮುಂದಿರುವ ಆಯ್ಕೆ ಎಂದರೆ 30 ದಿನಗಳ ಒಳಗಾಗಿ ಅವರು ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಬೇಕು. ಅಲ್ಲಿ ಹೈಕೋರ್ಟ್ ತೀರ್ಪಿಗೆ ತಡೆ ಪಡೆದರೆ ಮಾತ್ರ ಗೌರಿಶಂಕರ್ ಪ್ರಸಕ್ತ ಚುನಾವಣೆಗೆ ಸ್ಪರ್ಧಿಸಲು ಅವಕಾಶವಿದೆ' ಎಂಬುದು ಕಾನೂನು ತಜ್ಞರ ಅಭಿಮತ.

ಏನಿದು ಪ್ರಕರಣ?: ರಾಜ್ಯದ 15ನೇ ವಿಧಾನಸಭೆಗೆ 2018ರಲ್ಲಿ ನಡೆದಿದ್ದ ಚುನಾವಣೆಯಲ್ಲಿ ಗೌರಿಶಂಕರ್ ಜಾತ್ಯತೀತ ಜನತಾ ದಳದಿಂದ (ಜೆಡಿಎಸ್) ಆಯ್ಕೆಯಾಗಿದ್ದಾರೆ ಎಂದು ಚುನಾವಣಾ ಅಧಿಕಾರಿ 2018ರ ಮೇ 15ರಂದು ಘೋಷಿಸಿದ್ದರು.

ಗೌರಿಶಂಕರ್ 82,740 ಮತಗಳನ್ನು ಪಡೆದಿದ್ದರೆ ಬಿಜೆಪಿ ಅಭ್ಯರ್ಥಿಯಾಗಿ ಸಮೀಪದ ಪ್ರತಿಸ್ಪರ್ಧಿ ಬಿ.ಸುರೇಶ್ ಗೌಡ 77,110 ಮತಗಳನ್ನು ಪಡೆದು 5,640 ಮತಗಳ ಅಂತರದಿಂದ ಸೋತಿದ್ದರು. 'ವಿಜೇತ ಅಭ್ಯರ್ಥಿ ಚುನಾವಣೆಯಲ್ಲಿ ಅಕ್ರಮ ಎಸಗಿ ಗೆಲುವು ಸಾಧಿಸಿದ್ದಾರೆ. ಹಾಗಾಗಿ, ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಸುರೇಶ್ ಗೌಡ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದರು.

ಸುರೇಶ್ ಗೌಡರ ಪರ ವಾದ ಮಂಡಿಸಿದ್ದ ಹಿರಿಯ ವಕೀಲೆ ನಳಿನಾ ಮಾಯೇಗೌಡ, 'ಗೌರಿಶಂಕರ್ ತಮ್ಮ ಕುಟುಂಬದ ಸದಸ್ಯರ ನಿಯಂತ್ರಣದಲ್ಲಿರುವ, ಕಮ್ಮಗೊಂಡನಹಳ್ಳಿ ಶ್ರೀ ಮಾರುತಿ ಸೇವಾ ಸಮಿತಿ (ಕೆಎಂಎಸ್‌ಎಸ್) ಮೂಲಕ ದಾಸರಹಳ್ಳಿಯಲ್ಲಿನ ಶನಿದೇವರ ದೇವಸ್ಥಾನದ ಜೀರ್ಣೋದ್ಧಾರಕ್ಕೆ ₹ 5 ಲಕ್ಷ ನೀಡಿರುವುದು, ಜೆಡಿಎಸ್ ಅಧಿಕಾರಕ್ಕೆ ಬಂದರೆ ಕೆಎಂಎಸ್‌ಎಸ್ ನಡೆಸುತ್ತಿರುವ ಎಂಜಿನಿಯರಿಂಗ್ ಕಾಲೇಜಿನಲ್ಲಿ 1 ಸಾವಿರ ಸೀಟುಗಳಿಗೆ ಉಚಿತ ಪ್ರವೇಶ ಒದಗಿಸಲಾಗುವುದು ಎಂಬ ಆಮಿಷ, ಮತದಾರರಿಗೆ ವೈದ್ಯಕೀಯ ನೆರವಿನ ವಿಮಾ ಬಾಂಡ್‌ಗಳನ್ನು ಹಂಚಿರುವುದು, ಚುನಾವಣಾ ಪ್ರಚಾರದ ವೇಳೆ ಹಣ ಹಂಚಿರುವುದೂ ಸೇರಿದಂತೆ ಗೌರಿಶಂಕರ್ ವ್ಯಾಪಕ ಅಕ್ರಮಗಳನ್ನು ಎಸಗಿ ಗೆಲುವು ಸಾಧಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ಆಯ್ಕೆಯನ್ನು ರದ್ದುಗೊಳಿಸಬೇಕು' ಎಂದು ಕೋರಿದ್ದರು.

ಲಿಂಗೇಶ್ ವಿರುದ್ಧ ಎಫ್‌ಐಆರ್‌ಗೆ ಆದೇಶ

ಒಂದನೇ ಪುಟದಿಂದ...

ಮಾಹಿತಿ ಹಕ್ಕು ಕಾಯ್ದೆಯಡಿ ಪಡೆಯಲಾದ ವಿವರಗಳಂತೆ, 'ಬೇಲೂರು ತಾಲ್ಲೂಕು ಕಸಬಾ ಹೋಬಳಿಯ ಪುರಸಭೆ ವ್ಯಾಪ್ತಿಯ 3 ಕಿ.ಮೀ ಒಳಗಿನ ಮಾವಿನಕೆರೆ, ಬಂಟೇನಹಳ್ಳಿ, ಡಣಾಯ್ಕನಹಳ್ಳಿ, ಮುದಿಗೆರೆ ಹಾಗೂ ರಾಯಪುರದ ಸರ್ವೆ ನಂಬರ್‌ಗಳ ಪೈಕಿ 18 ಜನರಿಗೆ ಕೋಟ್ಯಂತರ ರೂಪಾಯಿ ಮೌಲ್ಯದ ಸರ್ಕಾರಿ ಜಮೀನನ್ನು ಕಾನೂನು ಬಾಹಿರವಾಗಿ ಮಂಜೂರು ಮಾಡಲಾಗಿದೆ. 2016ರ ಅಕ್ಟೋಬರ್ 28ರಿಂದ 2022ರ ಡಿಸೆಂಬರ್ 11ರ ಮಧ್ಯದ ಅವಧಿಯಲ್ಲಿ ನಡೆದ ಭೂ ಸಕ್ರಮೀಕರಣದ 26 ಸಭೆಗಳಲ್ಲಿ ಒಟ್ಟು 1,430 ಅರ್ಜಿದಾರರ ಪೈಕಿ 2,750 ಎಕರೆ 86 ಗುಂಟೆ ಜಮೀನಿನ ಅಕ್ರಮ ಮಂಜೂರಾತಿ ಪ್ರಕ್ರಿಯೆ ಜರುಗಿದೆ' ಎಂದು ದೂರುದಾರರು ಆರೋಪಿಸಿದ್ದಾರೆ.

'ಹೇಮಾವತಿ, ಯಗಚಿ, ಜಲಾಶಯ ಯೋಜನೆಯಡಿ ಮುಳುಗಡೆ ಸಂತ್ರಸ್ತ ರೈತರು, ಯೋಧರಿಗೆ ಕಾಯ್ದಿರಿಸಿದ್ದ ಈ ಸರ್ಕಾರಿ ಜಮೀನಿಗೆ ನಕಲಿ ದಾಖಲೆ ಸೃಷ್ಟಿಸಲಾಗಿದೆ. ಇದನ್ನು ಬೆಂಗಳೂರು ಹಾಗೂ ಬೇರೆ ಬೇರೆ ತಾಲ್ಲೂಕಿನ, ಹೊರಗಿನ ನಿವಾಸಿಗಳಿಗೆ ಅಕ್ರಮವಾಗಿ ಮಂಜೂರು ಮಾಡಲಾಗಿದೆ. ಇದರಿಂದ ಸರ್ಕಾರದ ಖಜಾನೆಗೆ ಕೋಟ್ಯಂತರ ರೂಪಾಯಿ ನಷ್ಟವುಂಟಾಗಿದೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಗೌರಿಶಂಕರ್ ಅವರನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿ ಹೈಕೋರ್ಟ್ ಐತಿಹಾಸಿಕ ತೀರ್ಪು ನೀಡಿದೆ. ಇದೇ ವಿಚಾರ ಮುಂದಿಟ್ಟುಕೊಂಡು ಕ್ಷೇತ್ರದಲ್ಲಿ ಚುನಾವಣೆ ಎದುರಿಸಲಾಗುವುದು
ಬಿ.ಸುರೇಶ್‌ಗೌಡ, ಮಾಜಿ ಶಾಸಕ

ಸಿದ್ದರಾಮಯ್ಯ ವಿರುದ್ಧ ಎಚ್‌.ಡಿ.ಕುಮಾರಸ್ವಾಮಿ ಟೀಕೆ

'ಗೌಡರನ್ನು ಹೆದರಿಸಿಕೊಂಡಿದ್ದರು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್‌ನಲ್ಲಿದ್ದಾಗ ಸಿದ್ದರಾಮಯ್ಯ ಪಾಳೇಗಾರಿಕೆ ಮಾಡುತ್ತಾ ದೇವೇಗೌಡರನ್ನು ಹೆದರಿಸಿಟ್ಟುಕೊಂಡಿದ್ದರು. ಈಗ ಕಾಂಗ್ರೆಸ್ ಬಿಟ್ಟು ಬೇರೆ ಪಕ್ಷ ಕಟ್ಟಿ ಎರಡು ಸ್ಥಾನ ಗೆಲ್ಲಿಸಲಿ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಸವಾಲು ಹಾಕಿದರು.

ನಗರದಲ್ಲಿ ಗುರುವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬ್ಯಾನರ್‌ನಲ್ಲಿ ತಮ್ಮ ಭಾವಚಿತ್ರ ಇಲ್ಲ ಎಂಬ ಕಾರಣಕ್ಕೆ ಕಾರ್ಯಕ್ರಮಕ್ಕೆ ಬಂದಿರಲಿಲ್ಲ. ಇಕ್ಬಾಲ್ ಅನ್ಸಾರಿ ಅವರನ್ನು ಮಂತ್ರಿ ಮಾಡಬೇಡಿ ಅಂತ ಗಲಾಟೆ ಮಾಡಿದ್ದರು. ಸಭೆಯಿಂದ ಟವಲ್ ಕೊಡವಿಕೊಂಡು ಎದ್ದು ಹೋಗಿದ್ದರು. ಹೋಗುವಾಗ ಎಂಟು ಶಾಸಕರನ್ನು ಕರೆದುಕೊಂಡು ಹೋಗಿದ್ದರು. ಅವರಲ್ಲಿ ಎಷ್ಟು ಜನರನ್ನು ಗೆಲ್ಲಿಸಿಕೊಂಡರು? ಅವರಿಗೆ ಈ ಬಾರಿ ಜನರ ಮೂಲಕ ಉತ್ತರ ಕೊಡಿಸುತ್ತೇನೆ' ಎಂದರು.

ಕಾಂಗ್ರೆಸ್–ಬಿಜೆಪಿ ಒಟ್ಟಾಗಿ ಜೆಡಿಎಸ್ ವಿರುದ್ಧ ಷಡ್ಯಂತ್ರ ರೂಪಿಸುತ್ತಿವೆ. ಒಳ ಒಪ್ಪಂದ ಮಾಡಿಕೊಂಡು ಪರಸ್ಪರ ಎ ಟೀಂ, ಬಿ ಟೀಂಗಳಂತೆ ಕೆಲಸ ಮಾಡುತ್ತಿವೆ. ಹೈದರಾಬಾದ್‌ನಲ್ಲಿ ಕಾಂಗ್ರೆಸ್ ನಾಯಕರ ಜತೆ ಜೆಡಿಎಸ್ ಮಾತುಕತೆ ಮಾಡಿದೆ ಎಂದು ಮುಖ್ಯಮಂತ್ರಿ ಹೇಳುತ್ತಾರೆ. ಬಿಜೆಪಿ ಜತೆ ಒಳ ಒಪ್ಪಂದವಾಗಿದೆ ಎಂದು ಮೈಸೂರಿನಲ್ಲಿ ಸಿದ್ದರಾಮಯ್ಯ ಹೇಳಿಕೆ ನೀಡುತ್ತಾರೆ. ಎರಡೂ ಪಕ್ಷಗಳಿಗೆ ಬೇರೆ ವಿಷಯ ಇಲ್ಲವೇ ಎಂದು ಪ್ರಶ್ನಿಸಿದರು.

'ಗೌಡರ ಕುಟುಂಬವೇ ಅಂತಿಮ'

ಬೆಂಗಳೂರು: 'ಜೆಡಿಎಸ್ ಪಕ್ಷದಲ್ಲಿ ಎಚ್.ಡಿ. ದೇವೇಗೌಡರ ಕುಟುಂಬವೇ ಅಂತಿಮ. ಅಲ್ಲಿ ಸ್ವತಂತ್ರ ಅಭಿಪ್ರಾಯಕ್ಕೆ ಅವಕಾಶವಿಲ್ಲ' ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಆ ಪಕ್ಷದಲ್ಲಿ ದೇವೇಗೌಡರು, ಕುಮಾರಸ್ವಾಮಿ ಹೇಳಿದಂತೆ ಎಲ್ಲರೂ ಕೇಳಬೇಕು. ಸ್ವತಂತ್ರವಾಗಿ ಮಾತನಾಡಲು ಪ್ರಯತ್ನಿಸಿದರೆ ಪಕ್ಷದಿಂದ ಹೊರಹಾಕುತ್ತಾರೆ. ಅವರ ಕುಟುಂಬದ ವಿರುದ್ಧ ಮಾತನಾಡಿದರೆ ಪಕ್ಷದಲ್ಲಿ ಉಳಿಯಲು ಬಿಡುವುದಿಲ್ಲ. ಸ್ವತಂತ್ರ ಅಭಿಪ್ರಾಯ ವ್ಯಕ್ತಪಡಿಸಿದ್ದಕ್ಕಾಗಿ ನನ್ನನ್ನು ಹೊರಹಾಕಿದಂತೆ ಈಗ ಗುಬ್ಬಿ ಮಾಜಿ ಶಾಸಕ ಎಸ್.ಆರ್. ಶ್ರೀನಿವಾಸ್ ಅವರನ್ನೂ ಹೊರ ಕಳುಹಿಸಿದ್ದಾರೆ' ಎಂದರು.

ಒಳ ಮೀಸಲಾತಿ ಹಿಂಪಡೆಯದಿದ್ದರೆ ವಿವಿಧೆಡೆ ಚುನಾವಣೆ ಬಹಿಷ್ಕಾರದ ಎಚ್ಚರಿಕೆ

ತಲೆ ಬೋಳಿಸಿಕೊಂಡು ಶ್ರದ್ಧಾಂಜಲಿ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಗದಗ/ದಾವಣಗೆರೆ/ಕೊಪ್ಪಳ: ಒಳ ಮೀಸಲಾತಿ ವಿರೋಧಿಸಿ ಬಂಜಾರ, ಲಂಬಾಣಿ ವಡ್ಡರ, ಕೊರಚ, ಕೊರಮ ಸೇರಿದಂತೆ ಪರಿಶಿಷ್ಟ ಜಾತಿಯ ವಿವಿಧ ಸಮಾಜದವರು ರಾಜ್ಯದ ವಿವಿಧೆಡೆ ಗುರುವಾರವೂ ಪ್ರತಿಭಟಿಸಿದರು.

ಗದಗದಲ್ಲಿ ಬೃಹತ್ ಪ್ರತಿಭಟನೆ ನಡೆಸಿದ ಈ ಸಮುದಾಯಗಳ ಜನರು, 'ಸಮುದಾಯಕ್ಕೆ ಅನ್ಯಾಯವಾಗುತ್ತಿದ್ದರೂ ಶಾಸಕರು, ಸಂಸದರು ಚಕಾರ ಎತ್ತುತ್ತಿಲ್ಲ. ಇಂತಹ ಶಾಸಕರು ಸಮುದಾಯದ ಪಾಲಿಗೆ ಇಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿ, ಅವರೆಲ್ಲರಿಗೆ ಎಳ್ಳುನೀರು ಬಿಟ್ಟು, ತಲೆ ಬೋಳಿಸಿಕೊಂಡು ಶ್ರದ್ಧಾಂಜಲಿ ಅರ್ಪಿಸಿ ಪಿಂಡಪ್ರದಾನ ಮಾಡಿದರು.

ಕಿತ್ತೂರು ರಾಣಿ ಚೆನ್ನಮ್ಮನ ಪುತ್ಥಳಿ ಎದುರು ಜಮಾಯಿಸಿದ್ದ ಪ್ರತಿಭಟನಕಾರರು ಸರ್ಕಾರ ದಲಿತರನ್ನು ಒಡೆದು ಆಳುತ್ತಿದೆ ಎಂದು ಟೀಕಿಸಿದರು. ಒಳ ಮೀಸಲಾತಿ ಹಿಂಪಡೆಯದಿದ್ದರೆ ಎಲ್ಲ ತಾಂಡಾ, ಹಾಡಿ, ಹಟ್ಟಿಗಳಲ್ಲಿ ಚುನಾವಣೆ ಬಹಿಷ್ಕಾರ ಮಾಡುತ್ತೇವೆ ಎಂದು ಶಪಥ ಮಾಡಿದರು. ಬಳಿಕ ಜಿಲ್ಲಾಧಿಕಾರಿ ಮುಖಾಂತರ ರಾಜ್ಯ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಒಳಮೀಸಲಾತಿ ಕುರಿತು ಸಮುದಾಯದ ಶಾಸಕರು, ಸಂಸದರ ಮೌನ ಖಂಡಿಸಿ ಗದಗದಲ್ಲಿ ಪ್ರತಿಭಟನಕಾರರು ತಲೆ ಬೋಳಿಸಿಕೊಂಡು, ಶ್ರದ್ಧಾಂಜಲಿ ಅರ್ಪಿಸಿದರು

ಚುನಾವಣಾ ಬಹಿಷ್ಕಾರ ಎಚ್ಚರಿಕೆ (ಕನಕಗಿರಿ, ಕೊಪ್ಪಳ ಜಿಲ್ಲೆ):

ಒಳಮೀಸಲಾತಿ ಕುರಿತು ಸರ್ಕಾರದ ನಿರ್ಣಯವನ್ನು ವಿರೋಧಿಸಿ ಕನಕಗಿರಿ ತಾಲ್ಲೂಕಿನ ಅಡವಿಬಾವಿ ಚಿಕ್ಕತಾಂಡಾದ ಲಂಬಾಣಿಗರು ಚುನಾವಣಾ ಬಹಿಷ್ಕಾರ ಹಾಕುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಈ ಕುರಿತು ಗ್ರಾಮದಲ್ಲಿ ಬ್ಯಾನರ್‌ಗಳನ್ನು ಹಾಕಲಾಗಿದೆ. ಒಂದು ಬ್ಯಾನರ್‌ನಲ್ಲಿ 'ಬಿಜೆಪಿಯ ಎಲ್ಲಾ ನಾಯಕರ ಹಾಗೂ ಮುಖಂಡರ ಪ್ರವೇಶವನ್ನು ಗ್ರಾಮಕ್ಕೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ' ಎಂದು ಬರೆದಿದ್ದರೆ, ಮತ್ತೊಂದು ಬ್ಯಾನರ್‌ನಲ್ಲಿ,'ನಮ್ಮ ತಾಂಡಾಕ್ಕೆ ಎಲ್ಲಾ ಪಕ್ಷಗಳ ಮುಖಂಡರ ಪ್ರವೇಶ ನಿಷೇಧಿಸಲಾಗಿದೆ' ಎಂದು ಬರೆಯಲಾಗಿದೆ.

> **ಧರ್ಮಾಧಾರಿತ ಮೀಸಲಾತಿ ನೀಡದಂತೆ ಅಂಬೇಡ್ಕರ್ 1950ರಲ್ಲಿ ಹೇಳಿದ್ದಾರೆ. ಸಂವಿಧಾನ ಸರಿಯಾಗಿ ಓದಿಕೊಳ್ಳದೇ ಸರ್ಕಾರದ ನಿರ್ಧಾರವನ್ನು ವಿರೋಧಿಸಲಾಗುತ್ತಿದೆ**
> **ಕೆ. ಅಣ್ಣಾಮಲೈ**
> ಬಿಜೆಪಿಯ ತಮಿಳುನಾಡು ಘಟಕದ ಅಧ್ಯಕ್ಷ

'ಬಂಜಾರರು ಶೈಕ್ಷಣಿಕ, ಸಾಮಾಜಿಕ, ರಾಜಕೀಯ, ಆರ್ಥಿಕವಾಗಿ ಹಿಂದುಳಿದಿದ್ದಾರೆ. ಸದಾಶಿವ ಆಯೋಗದ ಶಿಫಾರಸು ಒಪ್ಪಿದರೆ, ಸಮುದಾಯಕ್ಕೆ ಅನ್ಯಾಯವಾಗಲಿದೆ' ಎಂದು ಶಿವಪ್ಪ ಚವ್ಹಾಣ ಹೇಳಿದರು.

'ಒಳ ಮೀಸಲಾತಿ ಮೂಲಕ ಬಿಜೆಪಿ ಸರ್ಕಾರ ಜಾತಿಗಳ ನಡುವೆ ಜಗಳ ಹಚ್ಚುವ ಕೆಲಸ ಮಾಡಲಾಗುತ್ತಿದೆ. ಬಂಜಾರ ಸಮುದಾಯದ ಬಿಜೆಪಿ ಶಾಸಕರು ಹಾಗೂ ಸಚಿವರು ಸರ್ಕಾರದ ಕ್ರಮವನ್ನು ಸಮರ್ಥಿಸಿಕೊಂಡು ಸಮಾಜದವರಿಗೆ ದ್ರೋಹ ಎಸಗಿದ್ದಾರೆ. ಸಚಿವ ಪ್ರಭು ಚವ್ಹಾಣ, ಸಂಸದ ಉಮೇಶ ಜಾಧವ ಹಾಗೂ ಶಾಸಕ ಪಿ. ರಾಜೀವ ಅವರಿಗೆ ಸಮಾಜದ ಬಗ್ಗೆ ನಿಜವಾದ ಕಾಳಜಿಯಿದ್ದರೆ ತಮ್ಮ ಸ್ಥಾನಗಳಿಗೆ ರಾಜೀನಾಮೆ ನೀಡಬೇಕಿತ್ತು' ಎಂದರು.

ದಾವಣಗೆರೆಯಲ್ಲೂ ಪ್ರತಿಭಟನೆ: ಒಳ ಮೀಸಲಾತಿ ಕುರಿತು ಸರ್ಕಾರದ ನಿರ್ಧಾರವನ್ನು ವಿರೋಧಿಸಿ ದಾವಣಗೆರೆ ಜಿಲ್ಲೆಯ ಚನ್ನಗಿರಿಯಲ್ಲಿ ತಾಲ್ಲೂಕು ಬಂಜಾರ, ಭೋವಿ, ಕೊರಚ, ಕೊರಮ ಮೀಸಲಾತಿ ಸಂರಕ್ಷಣಾ ಒಕ್ಕೂಟ ಪ್ರತಿಭಟನೆ ನಡೆಸಿತು.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ತಾಲ್ಲೂಕಿನ ಅಯ್ಯನಹಳ್ಳಿ ತಾಂಡಾದ ನಿವಾಸಿಗಳು ಒಳ ಮೀಸಲಾತಿ ವರ್ಗೀಕರಣ ವಿರೋಧಿಸಿ ಹಾಗೂ ತಾಂಡಾವನ್ನು ಕಂದಾಯ ಗ್ರಾಮವನ್ನಾಗಿ ಘೋಷಿಸದಿರುವುದನ್ನು ಖಂಡಿಸಿ ಪ್ರತಿಭಟಿಸಿದರು. ಮತದಾನ ಬಹಿಷ್ಕರಿಸುವುದಾಗಿ ಅವರು ಎಚ್ಚರಿಸಿದರು.

ಶಿವಮೊಗ್ಗ ಸಮೀಪದ ಮಲವಗೊಪ್ಪದಲ್ಲಿ ಬಂಜಾರ ಸಮಾಜದವರು ಬಿ.ಎಚ್. ರಸ್ತೆಯಲ್ಲಿ ಟೈರ್ ಸುಟ್ಟು ಪ್ರತಿಭಟಿಸಿದರು.

ಮುಸ್ಲಿಮರ ಆಕ್ರೋಶ

ಹೂವಿನಹಡಗಲಿ (ವಿಜಯನಗರ ಜಿಲ್ಲೆ): ಅಲ್ಪಸಂಖ್ಯಾತರ '2ಬಿ' ಮೀಸಲಾತಿ ರದ್ದುಗೊಳಿಸಿರುವುದನ್ನು ವಿರೋಧಿಸಿ ಮುಸ್ಲಿಂ ಸಮುದಾಯವರು ಗುರುವಾರ ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಶಾಸ್ತ್ರಿ ವೃತ್ತದಿಂದ ತಾಲ್ಲೂಕು ಕಚೇರಿವರೆಗೆ ಮೆರವಣಿಗೆ ನಡೆಸಿ, ಮೀಸಲಾತಿ ರದ್ದುಪಡಿಸಿದ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮೀಸಲಾತಿ ಯಥಾವತ್ತಾಗಿ ಮುಂದುವರಿಸಲು ಒತ್ತಾಯಿಸಿ ತಹಶೀಲ್ದಾರ್ ಕೆ.ಶರಣಮ್ಮ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಹಿರಿಯ ಮುಖಂಡ ಸಿ.ಚಾಂದಸಾಹೇಬ್ ಮಾತನಾಡಿ, 'ಮೀಸಲಾತಿ ನಮ್ಮ ಸಾಂವಿಧಾನಿಕ ಹಕ್ಕು. ಹೋರಾಟ ತೀವ್ರ ಸ್ವರೂಪ ಪಡೆಯುವ ಮುನ್ನ ಸರ್ಕಾರ ಎಚ್ಚೆತ್ತುಕೊಳ್ಳಲಿ' ಎಂದು ಆಗ್ರಹಿಸಿದರು.

ಒಳಮೀಸಲಾತಿಗೆ ವಿರೋಧ

ಬೆಂಗಳೂರು: ಪರಿಶಿಷ್ಟ ಜಾತಿಯಲ್ಲಿರುವ ಸಮುದಾಯಗಳನ್ನು ಸ್ಪೃಶ್ಯರು–ಅಸ್ಪೃಶ್ಯರು ಎಂಬ ಶಬ್ದಗಳಿಂದ ಕರೆಯುವ ಮೂಲಕ ಸರ್ಕಾರವೇ ಅಧಿಕೃತವಾಗಿ ಅಸ್ಪೃಶ್ಯತೆ ಆಚರಣೆಗೆ ಕರೆ ನೀಡಿದೆ ಎಂದು ಅಖಿಲ ಭಾರತ ಬಂಜಾರ ಸೇವಾ ಸಂಘ ಆರೋಪಿಸಿದೆ.

'ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಿ ಪರಿಶಿಷ್ಟ ಜಾತಿಗಳಲ್ಲಿ ಒಳಮೀಸಲಾತಿಯನ್ನು ಸರ್ಕಾರ ಹಂಚಿಕೆ ಮಾಡಿದೆ. ಆದರೆ, ಪರಿಶಿಷ್ಟ ಜಾತಿಗಳ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸ್ಥಿತಿಗತಿ ಅಂಶಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡದೇ ಮೀಸಲಾತಿ ಪ್ರಮಾಣದ ಹಂಚಿಕೆ ಮಾಡಿದೆ' ಎಂದು ಸಂಘದ ರಾಷ್ಟ್ರೀಯ ಅಧ್ಯಕ್ಷ ಬಾಬುರಾವ್ ಚವ್ಹಾಣ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

ಖಾರದಪುಡಿ ಮಹೇಶ್ ಪ್ರಕರಣ

₹ 54.18 ಕೋಟಿ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಖಾರದಪುಡಿ ಮಹೇಶ್

ಬೆಂಗಳೂರು: ಅಕ್ರಮ ಗಣಿಗಾರಿಕೆ, ಅದಿರು ಕಳ್ಳಸಾಗಣೆ, ಗಣಿ ಉದ್ಯಮಿಗಳಿಂದ ಹಫ್ತಾ ವಸೂಲಿ ಆರೋಪವಿರುವ, ವಿಜಯನಗರ ಜಿಲ್ಲೆ ಹೊಸಪೇಟೆ ನಿವಾಸಿ ಖಾರದಪುಡಿ ಮಹೇಶ್ ಮತ್ತು ಅವರ ನಿಕಟವರ್ತಿಗಳಿಗೆ ಸೇರಿದ ₹ 54.18 ಕೋಟಿ ಮೌಲ್ಯದ ಆಸ್ತಿಗಳನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಮುಟ್ಟುಗೋಲು ಹಾಕಿಕೊಂಡಿದೆ.

ಖಾರದಪುಡಿ ಮಹೇಶ್ ಮತ್ತು ಅವರ ಸಹಚರರ ವಿರುದ್ಧ ಲೋಕಾಯುಕ್ತದ ವಿಶೇಷ ತನಿಖಾ ತಂಡ (ಎಸ್‌ಐಟಿ) ಐಪಿಸಿ, ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ ಹಾಗೂ ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ನಡೆಸಿತ್ತು. ಎಸ್‌ಐಟಿ ವರದಿ ಆಧರಿಸಿ ಇ.ಡಿಯು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯದಲ್ಲಿ ಪ್ರತ್ಯೇಕ ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿತ್ತು.

'ಖಾರದಪುಡಿ ಮಹೇಶ್ ಮತ್ತು ಅವರ ಸಹೋದರರಾದ ಕೆ.ಗೋವಿಂದರಾಜ್, ಕೆ.ಸದಾಶಿವ, ಕೆ.ಕುಮಾರ್ ಮತ್ತು ಸಹಚರರು ನಕಲಿ ಪರವಾನಗಿ ಬಳಸಿ ಕಬ್ಬಿಣದ ಅದಿರು ಸಾಗಿಸಿದ್ದು ಬೊಕ್ಕಸಕ್ಕೆ ₹ 62.92 ಕೋಟಿ ನಷ್ಟ ಉಂಟು ಮಾಡಿದ್ದರು. ಇತರರಿಗೆ ಅದಿರು ಕಳ್ಳಸಾಗಣೆಗೆ ನೆರವು ನೀಡಲು 'ರಿಸ್ಕ್ ಮನಿ' ಹೆಸರಿನಲ್ಲಿ ₹ 40.93 ಕೋಟಿ ಹಫ್ತಾ ವಸೂಲಿ ಮಾಡಿದ್ದರು ಎಂಬುದು ತನಿಖೆಯಲ್ಲಿ ಪತ್ತೆಯಾಗಿತ್ತು. ಇವರಿಂದ ಬೊಕ್ಕಸಕ್ಕೆ ಒಟ್ಟು ₹ 103.85 ಕೋಟಿ ನಷ್ಟ ಉಂಟಾಗಿತ್ತು' ಎಂದು ಇ.ಡಿ ತಿಳಿಸಿದೆ.

ಆರೋಪಿಗಳು ಹಣವನ್ನು ಬಹುತೇಕ ನಗದು ರೂಪದಲ್ಲಿ ಪಡೆದಿದ್ದು ತಮ್ಮ, ಕುಟುಂಬದ ಸದಸ್ಯರ ಹೆಸರಿನಲ್ಲಿ ಸ್ಥಿರಾಸ್ತಿ ಖರೀದಿಗೆ ಬಳಸುತ್ತಿದ್ದರು ಎಂಬುದು ದೃಢಪಟ್ಟಿದೆ. ಜಮೀನು, ವಸತಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು ಸೇರಿ 30 ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ ಎಂದು ಇ.ಡಿ ಅಧಿಕಾರಿಗಳು ವಿವರಿಸಿದ್ದಾರೆ.

ಸಿ.ಎಂಗೆ ಸನ್ಮಾನ

ವೀರಶೈವ ಲಿಂಗಾಯತ ಸಮುದಾಯಕ್ಕೆ ಮೀಸಲಾತಿ ಪ್ರಮಾಣ ಹೆಚ್ಚಳ ಮಾಡಿದ ಸರ್ಕಾರದ ಆದೇಶ ಪತ್ರವನ್ನು ಪಡೆದ ಕೂಡಲ ಸಂಗಮ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಸಿದ್ದು ಸವದಿ ಇದ್ದರು

ಸಿದ್ಧಗಂಗಾ ಮಠದಲ್ಲಿ 116ನೇ ವರ್ಷದ ಗುರುವಂದನಾ ಮಹೋತ್ಸವ

ಶಿವಕುಮಾರ ಶ್ರೀಗಳ ಸ್ಮರಣೆ: ಗಾನೋತ್ಸವ ನಾಳೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ 116ನೇ ವರ್ಷದ ಗುರುವಂದನಾ ಮಹೋತ್ಸವ ಏ. 1ರಂದು ಮಠದ ಆವರಣದಲ್ಲಿ ವೈಭವದಿಂದ ನಡೆಯಲಿದೆ.

ಸ್ವಾಮೀಜಿ ಸ್ಮರಣೆಯಲ್ಲಿ 'ಶಿವ ಕುಮಾರ ಸ್ವಾಮೀಜಿ ಗಾನೋತ್ಸವ' ಎಂಬ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಖ್ಯಾತ ಗಾಯಕ ಹಂಸಲೇಖ ನೇತೃತ್ವದಲ್ಲಿ ನಾಡಿನ ಹಲವು ಖ್ಯಾತ ಕಲಾವಿದರು ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಈ ಕಾರ್ಯಕ್ರಮಕ್ಕೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗವಿದೆ.

ಏ. 1ರಂದು ಸಂಜೆ 5 ಗಂಟೆಗೆ ಮಠದ ಆವರಣದಲ್ಲಿ ಹಿನ್ನೆಲೆ ಗಾಯಕರಾದ ಕೆ.ಎಸ್. ಚಿತ್ರಾ, ಎಸ್.ಪಿ. ಚರಣ್, ಮಧು ಬಾಲಕೃಷ್ಣನ್,

ಶಿವಕುಮಾರ ಸ್ವಾಮೀಜಿ



ಹಂಸಲೇಖ

ಕೆ.ಎಸ್. ಚಿತ್ರಾ

ಹೇಮಂತ್ ಕುಮಾರ್, ಅನುರಾಧ ಭಟ್, ಲತಾ ಹಂಸಲೇಖ ಅವರು ಶಿವಕುಮಾರ ಸ್ವಾಮೀಜಿ ನೆನಪಿನಲ್ಲಿ ಗಾನಸುಧೆ ಹರಿಸಲಿದ್ದಾರೆ. ನಾಡಿನ ವಿವಿಧೆಡೆಗಳ ಸಾವಿರಾರು ಭಕ್ತರು, ವಿದ್ಯಾರ್ಥಿಗಳು ಗಾನಸುಧೆಯನ್ನು ಮನ ತುಂಬಿಕೊಳ್ಳಲಿದ್ದಾರೆ.

ಕೋವಿಡ್ ಕಾರಣಕ್ಕೆ ಕಳೆದ ಎರಡು ವರ್ಷಗಳಿಂದ ಶಿವಕುಮಾರ ಸ್ವಾಮೀಜಿ ಗುರುವಂದನಾ ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಗಿತ್ತು. ಮಠದಲ್ಲಿ ಪೂಜೆ, ಸ್ವಾಮೀಜಿ ಸಾಧನೆ ಸ್ಮರಣೆಗೆ ಸೀಮಿತಗೊಂಡಿತ್ತು. ಆದರೆ, ಈ ಬಾರಿ ದೊಡ್ಡ ಮಟ್ಟದಲ್ಲಿ ಗುರುವಂದನಾ ಆಚರಣೆಗೆ ಸಿದ್ಧತೆ ನಡೆದಿದ್ದು, ಈ ನಡುವೆಯೇ ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದೆ.

ಸಾಮಾನ್ಯವಾಗಿ ಸ್ವಾಮೀಜಿ ಸ್ಮರಿಸಿಕೊಳ್ಳಲು ರಾಜಕಾರಣಿಗಳು ಸೇರಿದಂತೆ ಹಲವು ಗಣ್ಯರು ಬರುತ್ತಿದ್ದರು. ಚುನಾವಣೆ ನೀತಿ ಸಂಹಿತೆಯಿಂದಾಗಿ ರಾಜಕಾರಣಿಗಳು ಬಂದರೂ ವೇದಿಕೆ ಏರದೆ ಸ್ವಾಮೀಜಿ ಗದ್ದುಗೆ ದರ್ಶನ ಪಡೆದು ತೆರಳಲಿದ್ದಾರೆ.

ಸಿದ್ಧಗಂಗಾ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ, ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತಿಪಟೂರು ಕೆರಗೋಡಿ ರಂಗಾಪುರ ಮಠದ ಗುರುಪರದೇಶಿಕೇಂದ್ರ ಸ್ವಾಮೀಜಿ ನೇತೃತ್ವದಲ್ಲಿ ಧಾರ್ಮಿಕ ಕಾರ್ಯಕ್ರಮ ನಡೆಯಲಿವೆ.

ಶಿವಕುಮಾರ ಸ್ವಾಮೀಜಿ ಗದ್ದುಗೆಯಲ್ಲಿ ಪೂಜೆ ನೆರವೇರಿದ ನಂತರ ಧಾರ್ಮಿಕ ಕಾರ್ಯಕ್ರಮ ಚಾಲನೆ ಪಡೆದುಕೊಳ್ಳಲಿವೆ. ವೇದಿಕೆಯಲ್ಲಿ ಸ್ವಾಮೀಜಿಗಳಷ್ಟೇ ಭಾಗವಹಿಸಲಿದ್ದಾರೆ. ರಾಜಕಾರಣಿಗಳಿಗೆ ಆಹ್ವಾನ ನೀಡಿಲ್ಲ. ಬಂದರೂ ವೇದಿಕೆಯಲ್ಲಿ ಅವಕಾಶ ಇರುವುದಿಲ್ಲ ಎಂದು ಮಠದ ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- **'ಪ್ರಜಾವಾಣಿ', 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಕಾರ್ಯಕ್ರಮ**
- **ಕೋವಿಡ್ ಕಾರಣದಿಂದ 2 ವರ್ಷದಿಂದ ಸರಳವಾಗಿ ಕಾರ್ಯಕ್ರಮ ಆಚರಣೆ**
- **ವೇದಿಕೆಯಲ್ಲಿ ಸ್ವಾಮೀಜಿಗಳಿಗಷ್ಟೇ ಅವಕಾಶ**

ಮೊಸರು ಪ್ಯಾಕೆಟ್ ಮೇಲೆ 'ದಹಿ': ಆದೇಶ ವಾಪಸ್

ಒಂದನೇ ಪುಟದಿಂದ...

ಎಫ್‌ಎಸ್‌ಎಸ್‌ಎಐ ಗುರುವಾರ ತನ್ನ ಆದೇಶವನ್ನು ಪರಿಷ್ಕರಿಸಿದ್ದು, ಪ್ರಾದೇಶಿಕ ಭಾಷೆಗಳನ್ನು ಪ್ಯಾಕೆಟ್ ಮೇಲೆ ಮುದ್ರಿಸಲು ಅವಕಾಶ ಕಲ್ಪಿಸಿದೆ. ಇಂಗ್ಲಿಷ್ ಜತೆ ಯಾವುದೇ ಪ್ರಾದೇಶಿಕ ಭಾಷೆಯನ್ನು ಬಳಸಬಹುದಾಗಿದೆ.

ಉದಾಹರಣೆಗೆ ಇಂಗ್ಲಿಷ್‌ನಲ್ಲಿ curd ಜತೆ ಹಿಂದಿಯಲ್ಲಿ ದಹಿ, ಕನ್ನಡದಲ್ಲಿ ಮೊಸರು, ತಮಿಳಿನಲ್ಲಿ ಥೈರ್, ತೆಲುಗಿನಲ್ಲಿ ಪೆರುಗು ಎಂದು ಆವರಣದಲ್ಲಿ ಬಳಸಬಹುದಾಗಿದೆ.

ಕರ್ನಾಟಕ ಮತ್ತು ತಮಿಳುನಾಡಿನ ಹಾಲು ಒಕ್ಕೂಟಗಳಿಗೆ ಮಾರ್ಚ್ 10ರಂದು ನಿರ್ದೇಶನ ನೀಡಿದ್ದ ಎಫ್‌ಎಸ್‌ಎಸ್‌ಎಐ, 'ದಹಿ' ಎನ್ನುವ ಶಬ್ದವನ್ನೇ ಬಳಸಬೇಕು. ಆವರಣದಲ್ಲಿ ಮಾತ್ರ ಪ್ರಾದೇಶಿಕ ಭಾಷೆಯನ್ನು ನಮೂದಿಸುವಂತೆ ಸೂಚಿಸಿತ್ತು. ಉದಾಹರಣೆಗೆ ದಹಿ(ಮೊಸರು), ದಹಿ (ಪೆರುಗು) ಎಂದು ಆವರಣದಲ್ಲಿ ನಮೂದಿಸುವಂತೆ ಸೂಚಿಸಿತ್ತು.

ಕರ್ನಾಟಕ ಹಾಲು ಒಕ್ಕೂಟ (ಕೆಎಂಎಫ್) ಹಾಗೂ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಜಿಲ್ಲಾ ಹಾಲು ಒಕ್ಕೂಟಗಳಿಗೆ (ಬಮುಲ್) ಹಾಗೂ ತಮಿಳುನಾಡು ಸಹಕಾರ ಹಾಲು ಒಕ್ಕೂಟ ಮತ್ತು ಹ್ಯಾಟ್ಸನ್ ಆಗ್ರೊ ಪ್ರಾಡಕ್ಟ್ಸ್ ಸಂಸ್ಥೆಗಳಿಗೆ ಈ ಬಗ್ಗೆ ನಿರ್ದೇಶನವನ್ನು ನೀಡಲಾಗಿತ್ತು.

ತಮಿಳುನಾಡು ಸಹಕಾರ ಹಾಲು ಉತ್ಪಾದಕರ ಒಕ್ಕೂಟವು ಹಿಂದಿಯ 'ದಹಿ' ಶಬ್ದ ಬಳಸಲು ನಿರಾಕರಿಸಿತ್ತು. ತಮಿಳು ಶಬ್ದ 'ಥಯಿರ್' ಮಾತ್ರ ಬಳಸುವುದಾಗಿ ತಿಳಿಸಿತ್ತು.

'ಎಫ್‌ಎಸ್‌ಎಸ್‌ಎಐ ನಿರ್ದೇಶನ ಪಾಲಿಸುವುದಿಲ್ಲ. ನಮ್ಮ ರಾಜ್ಯಗಳಲ್ಲೇ ತಮಿಳು ಮತ್ತು ಕನ್ನಡವನ್ನು ನಿರ್ಲಕ್ಷಿಸಿ ಹಿಂದಿ ಬಳಸುವಂತೆ ಬಲವಂತದ ನಿರ್ದೇಶನ ನೀಡಲಾಗುತ್ತಿದೆ. ಇಂತಹ ನಿರ್ದೇಶನ ನೀಡಲು ಜವಾಬ್ದಾರಿಯಾಗಿರುವವರನ್ನು ಶಾಶ್ವತವಾಗಿಯೇ ದಕ್ಷಿಣದಿಂದ ನಿಷೇಧಿಸಲಾಗುವುದು' ಎಂದು ತಮಿಳು ನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಬುಧವಾರ ಕಟುವಾಗಿ ಟೀಕಿಸಿದ್ದರು.

> **ನಾವು ಸುಮ್ಮನಿರದೆ ಧ್ವನಿ ಎತ್ತಿದರೆ ಎಲ್ಲವೂ ಸಾಧ್ಯ. ಹಿಂದಿ ಹೇರಿಕೆ ನಿಲ್ಲಲಿ**
> **ರೂಪೇಶ್ ರಾಜಣ್ಣ,**
> ಯುವ ಕರ್ನಾಟಕ ವೇದಿಕೆ

'ನಂದಿನಿ'ಗೆ ಕುಣಿಕೆ ಬಿಗಿಯುವ ದುಷ್ಕೃತ್ಯ ಸಹಿಸುವುದಿಲ್ಲ: ಕುಮಾರಸ್ವಾಮಿ

ಒಂದನೇ ಪುಟದಿಂದ...

ಸರಣಿ ಟ್ವೀಟ್ ಮಾಡಿರುವ ಅವರು, 'ಒಕ್ಕೂಟ ವ್ಯವಸ್ಥೆಯನ್ನು ಒಪ್ಪಿದ್ದೇವೆ ಎಂದರೆ ಇಷ್ಟ ಬಂದಹಾಗೆ ಒಳ ನುಸುಳುವುದಲ್ಲ, ಸೌಮ್ಯವಾಗಿದ್ದೇವೆ ಎಂದರೆ ಸುಮ್ಮನಿದ್ದೇವೆ ಎಂದಲ್ಲ. 'ನಂದಿನಿ' ಕನ್ನಡಿಗರ ಸ್ವಾಭಿಮಾನವೇ ಹೊರತು ಅಮುಲ್ ಅಡಿಯಾಳಲ್ಲ. ಕರ್ನಾಟಕ ಭಾರತ ಗಣರಾಜ್ಯದ ಒಂದು ಭಾಗವೇ ಹೊರತು ಗುಜರಾತಿನ ವಸಾಹತುವಲ್ಲ' ಎಂದು ಪ್ರತಿಪಾದಿಸಿದ್ದಾರೆ.

'ಈ ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಡ್ಯದ ಸಭೆಯೊಂದರಲ್ಲಿ, ಗುಜರಾತ್‌ನ ಅಮುಲ್ ಜತೆ 'ನಂದಿನಿ' ವಿಲೀನ ಮಾಡುವುದಾಗಿ ಹೇಳಿದ್ದರು. ಹಿಂದಿ ಪದ ಮುದ್ರಣ 'ನಂದಿನಿ' ಹೈಜಾಕಿನ ಆರಂಭವಾ' ಎಂದೂ ಪ್ರಶ್ನಿಸಿದ್ದಾರೆ.

ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರಕ್ಕೆ ಸ್ವಂತ ಖರ್ಚಿನಲ್ಲಿ ಡೆಸ್ಕ್ ವ್ಯವಸ್ಥೆ

2 ವರ್ಷಗಳಿಂದ ಸಮಸ್ಯೆ ಇದ್ದರೂ ಸರಿಪಡಿಸದ ಶಿಕ್ಷಣ ಇಲಾಖೆ

ಪ್ರಜಾವಾಣಿ ವಾರ್ತೆ

ಹಗರಿಬೊಮ್ಮನಹಳ್ಳಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಉಪನಾಯಕನಹಳ್ಳಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಎಸ್ಸೆಸ್ಸೆಲ್ಸಿ ಪರೀಕ್ಷಾ ಕೇಂದ್ರವಾಗಿ ಗುರುತಿಸಲಾಗಿದೆ. ಆದರೆ, ಅಲ್ಲಿ ಪರೀಕ್ಷೆ ಬರೆಯಲು ಡೆಸ್ಕ್‌ಗಳಿಲ್ಲದ ಕಾರಣ ಆರು ಶಾಲೆಗಳ ಮುಖ್ಯ ಶಿಕ್ಷಕರೇ ಖರ್ಚು ಭರಿಸಿ ಅದಕ್ಕೆ ವ್ಯವಸ್ಥೆ ಮಾಡಿಕೊಂಡಿದ್ದಾರೆ.

ಪರೀಕ್ಷಾ ಕೇಂದ್ರದಲ್ಲಿ ತಾಲ್ಲೂಕಿನ ಪಿಂಜಾರ್ ಹೆಗ್ಡಾಳ್ ಪ್ರೌಢಶಾಲೆಯ 52, ಹಂಪಾಪಟ್ಟಣದ 75, ಅಂಕಸಮುದ್ರದ 29, ಮಗಿಮಾವಿನಹಳ್ಳಿಯ 58 , ನಾರಾಯಣದೇವರಕೆರೆಯ 34 ಹಾಗೂ ಉಪನಾಯಕನಹಳ್ಳಿಯ ಸರ್ಕಾರಿ ಪ್ರೌಢಶಾಲೆಯ 71 ಹಾಗೂ ಮೊರಾರ್ಜಿ ವಸತಿ ಶಾಲೆಯ 48 ವಿದ್ಯಾರ್ಥಿಗಳು ಪರೀಕ್ಷೆ ಬರೆಯಬೇಕಿದೆ.

ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಉಪನಾಯಕನಹಳ್ಳಿಯ ಪರೀಕ್ಷಾ ಕೇಂದ್ರದಲ್ಲಿ ಡೆಸ್ಕ್ ಹಾಕಿರುವುದು

ಒಟ್ಟು 367 ವಿದ್ಯಾರ್ಥಿಗಳಿಗೆ ಕೇಂದ್ರದಲ್ಲಿ ಅಗತ್ಯ ಸಂಖ್ಯೆಯ ಡೆಸ್ಕ್‌ಗಳು ಇರದ ಕಾರಣ ಆಯಾ ಶಾಲೆಗಳ ಮುಖ್ಯ ಶಿಕ್ಷಕರೇ ವ್ಯವಸ್ಥೆ ಮಾಡಿಕೊಂಡಿದ್ದಾರೆ. ಕಳೆದೆರಡು ದಿನಗಳಿಂದ ಟ್ರ್ಯಾಕ್ಟರ್‌ಗಳಲ್ಲಿ ಡೆಸ್ಕ್‌ಗಳನ್ನು ತರಿಸಿಕೊಂಡಿದ್ದಾರೆ. ಡೆಸ್ಕ್‌ಗಳ ಸಾಗಣೆ ವೆಚ್ಚ ಅವರೇ ಭರಿಸಬೇಕಾಗಿದೆ. ಎರಡು ವರ್ಷಗಳಿಂದ ಇದೇ ರೀತಿ ನಡೆಯುತ್ತಿದೆ. ಆದರೆ, ಇಲಾಖೆ ಅದನ್ನು ಸರಿಪಡಿಸುವ ಗೋಜಿಗೆ ಹೋಗಿಲ್ಲ.

'ಟ್ರ್ಯಾಕ್ಟರ್ ಬಾಡಿಗೆ, ಕಾರ್ಮಿಕರ ಖರ್ಚು ಸೇರಿದರೆ ಸುಮಾರು ₹5 ಸಾವಿರಕ್ಕೂ ಹೆಚ್ಚು ಖರ್ಚು ಬರುತ್ತದೆ. ಶಾಲೆಯ ಮುಖ್ಯ ಶಿಕ್ಷಕರೇ ಭರಿಸಬೇಕಿದೆ. ಇದು ಸಂಬಂಧಿಸಿದ ಇಲಾಖೆಯ ಜವಾಬ್ದಾರಿ ಅಲ್ಲವೇ' ಎಂದು ಹೆಸರು ಹೇಳಲಿಚ್ಛಿಸದ ಶಾಲೆಯೊಂದರ ಮುಖ್ಯ-ಶಿಕ್ಷಕರು ಪ್ರಶ್ನಿಸಿದರು.

ಈ ಸಂಬಂಧ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಸಿ. ಆನಂದ ಅವರನ್ನು 'ಪ್ರಜಾವಾಣಿ' ಸಂಪರ್ಕಿಸಿದಾಗ, 'ಪರೀಕ್ಷೆಗೆ ಹೊಸ ಕೇಂದ್ರ ಆಗಿರುವುದರಿಂದ ಆಸನಗಳ ಕೊರತೆ ಇದೆ. ವಿವಿಧ ಗ್ರಾಮಗಳ ಪ್ರೌಢ ಶಾಲೆಗಳಿಂದ ಡೆಸ್ಕ್‌ಗಳನ್ನು ತರಿಸಲಾಗಿದೆ' ಎಂದು ಹೇಳಿದರು.

ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಶಿಕ್ಷಕರಿಂದಲೇ ಸಾರಿಗೆ ವ್ಯವಸ್ಥೆ

ಮಡಿಕೇರಿ: ಕಾಡಂಚಿನ ಭಾಗಗಳಲ್ಲಿ ವಾಸವಿರುವ ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಕ್ಕೆ ತೆರಳಲು ಶಿಕ್ಷಕರೇ ವಾಹನ ಸೌಕರ್ಯ ಕಲ್ಪಿಸಿಕೊಟ್ಟಿದ್ದಾರೆ.

'ಇಲ್ಲಿನ ಕಡಗದಾಳು ಸರ್ಕಾರಿ ಪ್ರೌಢಶಾಲೆಯ 24 ವಿದ್ಯಾರ್ಥಿಗಳಿಗೆ ಮಡಿಕೇರಿಯ ಪರೀಕ್ಷಾ ಕೇಂದ್ರಕ್ಕೆ ಬರಲು ಹಾಗೂ ಚೆಟ್ಟಳ್ಳಿಯ ಅನುದಾನಿತ ಸರ್ಕಾರಿ ಪ್ರೌಢಶಾಲೆಯ 36 ವಿದ್ಯಾರ್ಥಿಗಳಿಗೆ ಸಿದ್ದಾಪುರದ ಪರೀಕ್ಷಾ ಕೇಂದ್ರಕ್ಕೆ ಬರಲು ಆಯಾ ಶಾಲೆಯ ಶಿಕ್ಷಕರೇ ತಮ್ಮ ಖರ್ಚಿನಿಂದ ವಾಹನ ಸೌಲಭ್ಯ ಮಾಡಿಕೊಟ್ಟಿದ್ದಾರೆ' ಎಂದು ಡಿಡಿಪಿಐ ರಂಗಧಾಮಯ್ಯ 'ಪ್ರಜಾವಾಣಿ'ಗೆ ತಿಳಿಸಿದರು.

'ಬೇರೆ ಜಿಲ್ಲೆಗಳಿಗೆ ಹೋಲಿಸಿದರೆ ಕೊಡಗಿನಲ್ಲಿ ವಿದ್ಯುತ್ ವ್ಯತ್ಯಯ ಹೆಚ್ಚಿರುತ್ತದೆ. ಹೀಗಾಗಿ ಪರೀಕ್ಷೆ ಮುಗಿಯುವವರೆಗೂ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಮಾಡಬಾರದು ಎಂದು ಸೆಸ್ಕ್ ಅಧಿಕಾರಿಗಳಿಗೆ ಮನವಿ ಮಾಡಲಾಗಿದೆ' ಎಂದರು.

TNPL TAMILNADU NEWSPRINT AND PAPERS LIMITED
Kagithapuram - 639 136. Karur Dist. Tamil Nadu.
Ph.: 04324 - 277001 (10 Lines). Email: purchase.recycle@tnpl.co.in

NOTICE INVITING TENDER

Tender No.	Material Description	Due date
222313 007922	Procurement of 1000 MT ± 5% Office Waste Paper (White Records) in Bale form from Karnataka for TNPL Unit - I at Kagithapuram	06.04.2023

Corrigendum if any will be issued in TNPL Website & NIC Portal only. Detailed Terms & conditions tender fee, EMD, etc., are available in tender document at our websites: www.tnpl.com / www.tenders.tn.gov.in / https://tntenders.gov.in/nicgep/app

DIPR/1923/Tender/2023 *TNPL - Maker of bagasse based eco-friendly Paper*

"சோதனை கடந்து சுதந்திரம் அடைந்தோம், சாதனை புரிந்து சரித்திரம் படைப்போம்."

ಡಿಡಿಪಿಐಗಳಿಗೆ ಶಾಲಾ ಹೆಸರು ಬದಲಾವಣೆ ಹೊಣೆ

ಬೆಂಗಳೂರು: ಅನುದಾನಿತ ಹಾಗೂ ಅನುದಾನ ರಹಿತ ಖಾಸಗಿ ಶಾಲೆಗಳ ಹೆಸರು ಬದಲಾವಣೆಗೆ ಅನುಮತಿ ನೀಡುವ ಅಧಿಕಾರವನ್ನು ಆಯಾ ಜಿಲ್ಲೆಗಳ ಉಪ ನಿರ್ದೇಶಕರಿಗೆ (ಡಿಡಿಪಿಐ) ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸರ್ಕಾರದ 1999ರ ಆದೇಶದಂತೆ ಈ ಅಧಿಕಾರ ಪ್ರಾಥಮಿಕ ಹಾಗೂ ಪ್ರೌಢಶಾಲೆಯ ನಿರ್ದೇಶಕರು, ಹೆಚ್ಚುವರಿ ಆಯುಕ್ತರ ಕಚೇರಿಯ ನಿರ್ದೇಶಕರಿಗೆ ಇತ್ತು. 'ಇದರಿಂದ ಅನಗತ್ಯ ವಿಳಂಬ, ವೆಚ್ಚದಾಯಕವಾಗಿದೆ' ಎಂದು ಹಲವು ಶಾಲೆಗಳ ಆಡಳಿತ ಮಂಡಳಿಗಳು ಮನವಿ ಸಲ್ಲಿಸಿದ್ದವು. ಮನವಿಯನ್ನು ಪರಿಗಣಿಸಿದ ಶಿಕ್ಷಣ ಇಲಾಖೆಯು ಹೊಸ ಸುತ್ತೋಲೆಯಲ್ಲಿ ತಿಳಿಸಿದೆ.

ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ: ಪ್ರಾಂಶುಪಾಲ ಬಂಧನ



ವಿಜಯಕುಮಾರ ಅಂಗಡಿ

ರಾಯಚೂರು: ತಾಲ್ಲೂಕಿನ ಶಾಲೆಯೊಂದರಲ್ಲಿ 10ನೇ ತರಗತಿ ವಿದ್ಯಾರ್ಥಿನಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಶಾಲೆಯ ಪ್ರಾಂಶುಪಾಲ ವಿಜಯಕುಮಾರ ಅಂಗಡಿ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡು ಮಹಿಳಾ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ವಿದ್ಯಾರ್ಥಿನಿಯನ್ನು ಕೊಠಡಿಗೆ ಕರೆಸಿಕೊಂಡು ಕೈ,ಮೈ ಸ್ಪರ್ಶಿಸಿ 6 ತಿಂಗಳಿನಿಂದ ಅಸಭ್ಯವಾಗಿ ವರ್ತಿಸುತ್ತಿದ್ದ. 15 ದಿನಗಳ ಹಿಂದೆ ಆಕೆಯನ್ನು ಕರೆಸಿಕೊಂಡು ಮುಂದಿನ ಶಿಕ್ಷಣಕ್ಕೆ ಎಲ್ಲಾ ರೀತಿಯ ನೆರವು ನೀಡುವುದಾಗಿ ಹೇಳಿದ. ಲೈಂಗಿಕ ಕಿರುಕುಳ ನೀಡಿ, ಯಾರಿಗೂ ಹೇಳದಂತೆ ಜೀವ ಬೆದರಿಕೆ ಒಡ್ಡಿದ. ಇದರಿಂದ ಭಯಗೊಂಡ ವಿದ್ಯಾರ್ಥಿನಿ ಮತ್ತು ಆಕೆಯ ತಾಯಿ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ನಾಲ್ವರು ಐಎಎಸ್ ಅಧಿಕಾರಿಗಳ ವರ್ಗ

ಬೆಂಗಳೂರು: ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಗುರುವಾರ ಆದೇಶ ಹೊರಡಿಸಿದೆ.

ವರ್ಗಾವಣೆಗೊಂಡವರ ವಿವರ: ಡಾ.ಬಗಾದಿ ಗೌತಮ್–ಪ್ರಾದೇಶಿಕ ಆಯುಕ್ತ, ಬೆಳಗಾವಿ. ಎಂ.ಜಿ.ಹಿರೇಮಠ್–ವ್ಯವಸ್ಥಾಪಕ ನಿರ್ದೇಶಕ, ಕೆಆರ್‌ಐಡಿಸಿ. ಟಿ.ಕೆ.ಸ್ವರೂಪ– ಸಿಇಒ, ಜಿಲ್ಲಾ ಪಂಚಾಯಿತಿ, ಧಾರವಾಡ. ಸುರೇಶ್ ಇಟ್ನಾಳ್–ಸಿಇಒ, ಜಿಲ್ಲಾ ಪಂಚಾಯಿತಿ, ದಾವಣಗೆರೆ.

shop.bajajelectricals.com | +91 70399 20000 | ಫ್ರೀ ಹೋಮ್ ಸರ್ವಿಸ್^ 022 4128 0000 | consumercare@bajajelectricals.com

^ನಿಯಮ ಮತ್ತು ಷರತ್ತುಗಳು ಅನ್ವಯ. ಉತ್ಪನ್ನದ ಚಿತ್ರಗಳು ಪ್ರಾತಿನಿಧಿಕವಾಗಿವೆ. *ಪಂಪ್‌ನ ಮೇಲೆ ಮಾತ್ರ ಅನ್ವಯಿಸುತ್ತದೆ. 2-ವರ್ಷ ಪಂಪ್ ವಾರಂಟಿಯು 1ನೇ ಫೆಬ್ರವರಿ 2023ರಿಂದ ಖರೀದಿಸಿದ ಕೂಲರ್‌ನ ಮೇಲೆ ಮಾತ್ರ ಅನ್ವಯವಾಗುತ್ತದೆ. ಬಜಾಜ್ ಡ್ಯುರಾಮರೀನ್™ ಇದು ಬಜಾಜ್ ಇಲೆಕ್ಟ್ರಿಕಲ್ಸ್ ಲಿಮಿಟೆಡ್‌ನ ಟ್ರೇಡ್‌ಮಾರ್ಕ್ ಆಗಿದೆ. ಹೆಚ್ಚಿನ ವಿವರಗಳಿಗಾಗಿ ಭೇಟಿ ನೀಡಿರಿ : www.bajajelectricals.com/terms-and-conditions/2023

SCAN TO KNOW MORE

‘ಜನ್ಮಭೂಮಿ ವಿವಾದ: ಸ್ಥಿತಿಗತಿ ವರದಿ ಸಲ್ಲಿಸಿ’

ಮಥುರಾ (ಪಿಟಿಐ): ಶ್ರೀಕೃಷ್ಣ ಜನ್ಮಭೂಮಿ ಮತ್ತು ಶಾಹಿ ಈದ್ಗಾ ಮಸೀದಿ ವಿವಾದಕ್ಕೆ ಸಂಬಂಧಿಸಿದಂತೆ ಸ್ಥಿತಿಗತಿಗಳ ವರದಿ ಸಲ್ಲಿಸುವಂತೆ ಇಲ್ಲಿನ ನ್ಯಾಯಾಲಯವೊಂದು ಉತ್ತರಪ್ರದೇಶದ ಕಂದಾಯ ಇಲಾಖೆಗೆ ನಿರ್ದೇಶನ ನೀಡಿದೆ.

13.37 ಎಕರೆ ವ್ಯಾಪ್ತಿಯ ವಿವಾದಿತ ಭೂಮಿಯ ಸ್ಥಿತಿಗತಿಗಳ ವರದಿ ಸಲ್ಲಿಸುವಂತೆ ನಿರ್ದೇಶಿಸಿದ ನ್ಯಾಯಾಲಯವು, ಮುಂದಿನ ವಿಚಾರಣೆಯನ್ನು ಏಪ್ರಿಲ್ 17ಕ್ಕೆ ನಿಗದಿ ಪಡಿಸಿದೆ.

ಸ್ಥಿತಿಗತಿಗಳ ವರದಿ ಸಲ್ಲಿಸುವಂತೆ ನ್ಯಾಯಾಲಯವು ಕಳೆದ ಡಿಸೆಂಬರ್ 22ರಂದು ಕಂದಾಯ ಇಲಾಖೆಗೆ ನಿರ್ದೇಶನ ನೀಡಿತ್ತು. ಆದರೆ ಇದಕ್ಕೆ ಪ್ರತಿವಾದಿಯು ವಿರೋಧ ವ್ಯಕ್ತಪಡಿಸಿದ್ದ ಕಾರಣ ಆ ಆದೇಶವನ್ನು ರದ್ದುಗೊಳಿಸಲಾಗಿತ್ತು.

‘ಹಿಂದೂ ಸೇನಾ ರಾಷ್ಟ್ರೀಯ ಅಧ್ಯಕ್ಷ ವಿಷ್ಣು ಗುಪ್ತಾ ಮತ್ತು ಸುರ್ಜಿತ್ ಸಿಂಗ್ ಯಾದವ್ ಅವರು ಡಿಸೆಂಬರ್ 4ರಂದು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಾಲಯವು ಬುಧವಾರ ನಡೆಸಿದೆ’ ಎಂದು ದೂರುದಾರರ ಪರ ವಕೀಲ ಶೈಲೇಶ್ ದುಬೆ ಅವರು ತಿಳಿಸಿದ್ದಾರೆ.

ಇಂದೋರ್: ರಾಮ ನವಮಿ ಉತ್ಸವ ನಡೆಯುತ್ತಿದ್ದ ದೇವಸ್ಥಾನದಲ್ಲಿ ಅವಘಡ

ಬಾವಿ ಚಾವಣಿ ಕುಸಿದು 11 ಸಾವು

ಭೋಪಾಲ್/ಇಂದೋರ್ (ಪಿಟಿಐ): ನಗರದ ದೇವಸ್ಥಾನವೊಂದರಲ್ಲಿ ಗುರುವಾರ ರಾಮ ನವಮಿ ಉತ್ಸವ ನಡೆಯುತ್ತಿದ್ದ ವೇಳೆ, ಆವರಣದಲ್ಲಿರುವ ಪುರಾತನ ಬಾವಿಯ ಚಾವಣಿ ಕುಸಿದ ಪರಿಣಾಮ 11 ಮಂದಿ ಸಾವನ್ನಪ್ಪಿದ್ದಾರೆ.

‘ಈ ಘಟನೆಯಲ್ಲಿ 10 ಮಂದಿ ಮಹಿಳೆಯರು ಹಾಗೂ ಒಬ್ಬ ಪುರುಷ ಮೃತಪಟ್ಟಿದ್ದು, ಕೆಲ ಮಕ್ಕಳು ನಾಪತ್ತೆಯಾಗಿದ್ದಾರೆ. ಕಾಣೆಯಾದವರ ಪತ್ತೆಗಾಗಿ ಬಾವಿಯ ನೀರನ್ನು ಪಂಪ್ ಮಾಡಲಾಗಿದೆ’ ಎಂದು ಗೃಹ ಸಚಿವ ನರೋತ್ತಮ ಮಿಶ್ರಾ ಹೇಳಿದ್ದಾರೆ.

‘ಬಾವಿಯಲ್ಲಿ ಬಿದ್ದವರ ಪೈಕಿ 15ಕ್ಕೂ ಅಧಿಕ ಜನರನ್ನು ರಕ್ಷಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ಡಾ.ಇಳೈರಾಜ ತಿಳಿಸಿದ್ದಾರೆ.

ಇಲ್ಲಿನ ಪಟೇಲನಗರದ ಬೇಲೇಶ್ವರ ಮಹಾದೇವ ಝೂಲೇಲಾಲ್ ಎಂಬ ದೇವಸ್ಥಾನದಲ್ಲಿ ಈ ಅವಘಡ ಸಂಭವಿಸಿದೆ. 30–35 ಮಂದಿ ಬಾವಿಯೊಳಗೆ ಬಿದ್ದರು ಎಂದು ಪ್ರತ್ಯಕ್ಷದರ್ಶಿಯೊಬ್ಬರು ನೀಡಿರುವ ಮಾಹಿತಿ ಉಲ್ಲೇಖಿಸಿ ಪೊಲೀಸ್ ಕಮಿಷನರ್ ಮಕರಂದ್ ದೇವಸ್ಕರ್ ವಿವರ ನೀಡಿದರು.

‘ಹವನ ಸೇರಿದಂತೆ ಧಾರ್ಮಿಕ ವಿಧಿಗಳು ನಡೆಯುತ್ತಿದ್ದವು. ಆಗ, ಬಾವಿಯ ಮೇಲೆ ಭಾರಿ ಸಂಖ್ಯೆಯಲ್ಲಿ ಜನರು ಜಮಾಯಿಸಿದ್ದರು. ಜನರ ಭಾರದಿಂದಾಗಿ ಚಾವಣಿ ಕುಸಿಯಿತು’ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ದೂರು: ಘಟನೆ ನಂತರ, ಗಾಯಾಳುಗಳನ್ನು ಆಸ್ಪತ್ರೆಗೆ ಕರೆದೊಯ್ಯಲು ವ್ಯವಸ್ಥೆ ಮಾಡಲಿಲ್ಲ. ಅವಘಡ ಕುರಿತು ಅಧಿಕಾರಿಗಳಿಗೆ ಮಾಹಿತಿ ನೀಡಿ ಗಂಟೆಯಾದರೂ ಆಂಬುಲೆನ್ಸ್ ಬರಲಿಲ್ಲ ಎಂದು ಪಟೇಲನಗರ ನಿವಾಸಿಗಳ ಸಂಘದ ಅಧ್ಯಕ್ಷ ಕಾಂತಿಭಾಯ್ ಪಟೇಲ್ ಹೇಳಿದ್ದಾರೆ.

‘ಪುರಾತನ ಬಾವಿ ಮೇಲೆ ಸ್ಲ್ಯಾಬ್ ಹಾಕಿ, ಅದರ ಮೇಲೆ ದೇವಸ್ಥಾನ ನಿರ್ಮಿಸಲಾಗಿದೆ’ ಎಂದು ನಿವಾಸಿಗಳು ತಿಳಿಸಿದ್ದಾರೆ.

ಪರಿಹಾರ ಘೋಷಣೆ: ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರು, ಈ ದುರ್ಘಟನೆಯಲ್ಲಿ ಮೃತಪಟ್ಟವರ ಕುಟುಂಬಕ್ಕೆ ತಲಾ ₹ 5 ಲಕ್ಷಹಾಗೂ ಗಾಯಗೊಂಡವರ ಕುಟುಂಬಕ್ಕೆ ತಲಾ ₹ 50,000 ಪರಿಹಾರ ಘೋಷಿಸಿದ್ದಾರೆ.

ಪ್ರಧಾನಿ ಕಳವಳ: ‘ಇಂದೋರ್‌ನಲ್ಲಿ ಸಂಭವಿಸಿರುವ ದುರ್ಘಟನೆಯಿಂದ ನೋವಾಗಿದೆ. ಮುಖ್ಯಮಂತ್ರಿ ಶಿವರಾಜ್ ಚೌಹಾಣ್ ಅವರ ಜೊತೆ ಮಾತನಾಡಿ, ಅಲ್ಲಿನ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿರುವೆ’ ಎಂದು ಪ್ರಧಾನಿ ನರೇಂದ್ರ ಮೋದಿ ಟ್ವೀಟ್ ಮಾಡಿದ್ದಾರೆ.

‘ರಾಜ್ಯ ಸರ್ಕಾರವು ಕ್ಷಿಪ್ರವಾಗಿ ರಕ್ಷಣಾ ಕಾರ್ಯ ಕೈಗೆತ್ತಿಕೊಂಡಿದೆ. ಸಂತ್ರಸ್ತರು ಹಾಗೂ ಅವರ ಕುಟುಂಬಗಳ ಸುರಕ್ಷತೆಗಾಗಿ ಪ್ರಾರ್ಥಿಸುವೆ’ ಎಂದೂ ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಇಂದೋರ್‌ನ ಪಟೇಲನಗರದ ದೇವಸ್ಥಾನದಲ್ಲಿ ಗುರುವಾರ ರಾಮನವಮಿ ಉತ್ಸವ ನಡೆಯುತ್ತಿದ್ದ ಸಂದರ್ಭದಲ್ಲಿ ಬಾವಿಯ ಚಾವಣಿ ಕುಸಿದ ಹಿನ್ನೆಲೆಯಲ್ಲಿ ರಕ್ಷಣಾ ಕಾರ್ಯ ಕೈಗೊಳ್ಳಲಾಗಿತ್ತು –ಪಿಟಿಐ ಚಿತ್ರ

ರಾಮ ನವಮಿ: ಹೌರಾದಲ್ಲಿ ಹಿಂಸಾಚಾರ

ಹೌರಾ, ಪಶ್ಚಿಮ ಬಂಗಾಳ (ಪಿಟಿಐ): ನಗರದಲ್ಲಿ ಗುರುವಾರ ರಾಮ ನವಮಿ ನಿಮಿತ್ತ ಮೆರವಣಿಗೆ ನಡೆಯುತ್ತಿದ್ದ ಸಂದರ್ಭದಲ್ಲಿ ಎರಡು ಗುಂಪುಗಳ ನಡುವಿನ ಘರ್ಷಣೆ ಹಿಂಸಾಚಾರಕ್ಕೆ ತಿರುಗಿತು.

ಕೆಲ ಕಾರುಗಳು ಹಾಗೂ ಪೊಲೀಸರ ವಾಹನಗಳಿಗೆ ದುಷ್ಕರ್ಮಿಗಳು ಬೆಂಕಿ ಹಚ್ಚಿದರಲ್ಲದೇ, ನೂರಾರು ಅಂಗಡಿಗಳನ್ನು ಧ್ವಂಸಗೊಳಿಸಿದ್ದಾರೆ. ಘಟನೆಗೆ ಸಂಬಂಧಿಸಿ ಹಲವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ನಾಲ್ಕು ಅಗ್ನಿಶಾಮಕ ವಾಹನಗಳನ್ನು ನಿಯೋಜಿಸಿ ಬೆಂಕಿಯನ್ನು ನಂದಿಸಲಾಯಿತು.

ಔರಂಗಾಬಾದ್: ಕಲ್ಲು ತೂರಾಟ– 10 ಪೊಲೀಸರಿಗೆ ಗಾಯ

ಔರಂಗಾಬಾದ್, ಮಹಾರಾಷ್ಟ್ರ (ಪಿಟಿಐ): ಔರಂಗಾಬಾದ್ ನಗರದ ಕಿರಾಡಪುರ ಪ್ರದೇಶದಲ್ಲಿನ ರಾಮಮಂದಿರ ಸಮೀಪ ಕೆಲ ಯುವಕರ ಮಧ್ಯೆ ಘರ್ಷಣೆ ನಡೆದಿದೆ. ನಂತರ 500ರಷ್ಟು ಜನರಿದ್ದ ಗುಂಪು ಕಲ್ಲು ತೂರಾಟ, ಪೆಟ್ರೋಲ್ ತುಂಬಿದ ಬಾಟಲಿಗಳನ್ನು ಎಸೆದಿದ್ದು, ಈ ಘಟನೆಯಲ್ಲಿ 10 ಪೊಲೀಸರು ಸೇರಿ 12 ಮಂದಿ ಗಾಯಗೊಂಡಿದ್ದಾರೆ.

13 ವಾಹನಗಳಿಗೆ ಕಿಡಿಗೇಡಿಗಳು ಬೆಂಕಿ ಹಚ್ಚಿದ್ದಾರೆ. ಉದ್ರಿಕ್ತರನ್ನು ಚದುರಿಸಲು ಪೊಲೀಸರು ಅಶ್ರುವಾಯು ಸಿಡಿಸಿದರು ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

‘ಬುಧವಾರ ರಾತ್ರಿ ತಲಾ ಐದು ಜನರಿದ್ದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದಿದೆ. ನಂತರ, ಒಂದು ಗುಂಪು ಜಾಗ ತೊರೆದಿದೆ. ಒಂದು ಗಂಟೆ ಬಳಿಕ ಬಹಳಷ್ಟು ಜನರಿದ್ದ ಮತ್ತೊಂದು ಗುಂಪು ಸ್ಥಳಕ್ಕೆ ಬಂತು. ಕಲ್ಲುಗಳು, ಪೆಟ್ರೋಲ್ ತುಂಬಿದ್ದ ಬಾಟಲಿಗಳನ್ನು ತಂದಿದ್ದ ಗುಂಪು, ಅವುಗಳನ್ನು ಪೊಲೀಸರತ್ತ ಎಸೆಯಿತು’ ಎಂದು ಪೊಲೀಸ್ ಕಮಿಷನರ್ ನಿಖಿಲ್ ಗುಪ್ತ ತಿಳಿಸಿದ್ದಾರೆ.

ದುಷ್ಕರ್ಮಿಗಳು ಬೀದಿದೀಪಗಳನ್ನು ನಾಶ ಮಾಡಿದ್ದರಿಂದ ಸ್ಥಳದಲ್ಲಿ ಕತ್ತಲು ಆವರಿಸಿತ್ತು. ಹೆಚ್ಚುವರಿ ಪೊಲೀಸರನ್ನು ಕರೆಸಿಕೊಂಡು, ಗುಂಪನ್ನು ಚದುರಿಸಬೇಕಾಯಿತು ಎಂದೂ ಅವರು ಹೇಳಿದ್ದಾರೆ.

‘ದಾಳಿ ನಡೆಸಿದವರ ಪತ್ತೆಗಾಗಿ ಎಂಟು ತಂಡಗಳನ್ನು ರಚಿಸಲಾಗಿದೆ. ಶಾಂತಿ–ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಹೆಚ್ಚುವರಿ ಸಿಬ್ಬಂದಿಯನ್ನು ಕರೆಸಿಕೊಂಡಿದ್ದು, ನಗರದಲ್ಲಿ ನಿಯೋಜಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಆಧಾರ್ ಸಂಖ್ಯೆ ಜೊತೆಗೆ ನಿಗದಿತ ಗಡುವಿನಲ್ಲಿ ಪ್ಯಾನ್ ಕಾರ್ಡ್ ಸಂಖ್ಯೆ ಜೋಡಿಸದಿದ್ದರೆ ವಿಧಿಸಲು ಉದ್ದೇಶಿಸಿರುವ ದಂಡದ ಶುಲ್ಕ ದುಬಾರಿ ಎಂದು ನೀವು ಭಾವಿಸುವಿರಾ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಅಮೃತಪಾಲ್ ಸಿಂಗ್ ಪತ್ತೆಗಾಗಿ ಡ್ರೋನ್ ನಿಯೋಜನೆ

ಹೋಶಿಯಾರ್‌ಪುರ, ಪಂಜಾಬ್ (ಪಿಟಿಐ): ಸಿಖ್ ಮೂಲಭೂತವಾದಿ ಪ್ರಚಾರಕ ಅಮೃತಪಾಲ್ ಸಿಂಗ್ ಪತ್ತೆಗಾಗಿ ಕಾರ್ಯಾಚರಣೆ ಮುಂದುವರಿದಿದೆ. ಈ ನಡುವೆ, ಕೆಲ ಶಂಕಿತ ವ್ಯಕ್ತಿಗಳು ತಮ್ಮ ಕಾರುಗಳನ್ನು ಬಿಟ್ಟು ಹೋಗಿರುವ ಹಿನ್ನೆಲೆಯಲ್ಲಿ ಪೊಲೀಸರು ಗ್ರಾಮವೊಂದರಲ್ಲಿ ಗುರುವಾರ ಡ್ರೋನ್ ನಿಯೋಜನೆ ಮಾಡಿದ್ದಾರೆ.

ಹೋಶಿಯಾರ್‌ಪುರ ಜಿಲ್ಲೆಯ ಮರ್ನಿಯಾ ಗ್ರಾಮದಲ್ಲಿ ಡ್ರೋನ್ ನಿಯೋಜಿಸುವ ಮೂಲಕ ಶೋಧ ಕಾರ್ಯವನ್ನು ಚುರುಕುಗೊಳಿಸಿರುವ ಪೊಲೀಸರು, ಗ್ರಾಮದ ಮೂಲಕ ಹಾದು ಹೋಗುತ್ತಿರುವ ವಾಹನಗಳನ್ನು ಸಹ ತೀವ್ರ ತಪಾಸಣೆಗೆ ಒಳಪಡಿಸುತ್ತಿದ್ದಾರೆ ಎಂದು ಮೂಲಗಳು ಹೇಳಿವೆ.

ಗ್ರಾಮದಲ್ಲಿ ಹಾಗೂ ಸುತ್ತಮುತ್ತ ಅರೆಸೇನಾ ಪಡೆಗಳ ಸಿಬ್ಬಂದಿಯನ್ನು ಸಹ ನಿಯೋಜನೆ ಮಾಡಲಾಗಿದೆ.

ಅಮೃತಪಾಲ್ ಸಿಂಗ್ ಹಾಗೂ ಆತನ ಸಹಚರರು ಪ್ರಯಾಣಿಸುತ್ತಿದ್ದರು ಎಂಬ ಮಾಹಿತಿ ಮೇರೆಗೆ ಪೊಲೀಸರು ಕಾರೊಂದನ್ನು ಮಂಗಳವಾರ ರಾತ್ರಿ ಬೆನ್ನಟ್ಟಿದ್ದರು. ಆದರೆ, ಕಾರನ್ನು ಗ್ರಾಮದ ಬಳಿಯೇ ಬಿಟ್ಟು, ಅದರಲ್ಲಿದ್ದವರು ಪರಾರಿಯಾಗಿದ್ದರು ಎಂದು ಮೂಲಗಳು ಹೇಳಿವೆ.

ಬಿಡುಗಡೆ: ‘ಅಮೃತಪಾಲ್ ಸಿಂಗ್ ವಿರುದ್ಧ ನಡೆದ ಕಾರ್ಯಾಚರಣೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವಶಕ್ಕೆ ಪಡೆದಿದ್ದ 360 ಜನರ ಪೈಕಿ 348 ಮಂದಿಯನ್ನು ಬಿಡುಗಡೆ ಮಾಡಲಾಗಿದೆ ಎಂದು ಪಂಜಾಬ್ ರಾಜ್ಯ ಸರ್ಕಾರವು ಅಕಾಲ್ ತಖ್ತ್‌ಗೆ ಮಾಹಿತಿ ನೀಡಿದೆ.

‘ಸರ್ಬತ್ ಖಾಲ್ಸಾ’ಕ್ಕೆ ಆಗ್ರಹ: ಅಮೃತಪಾಲ್‌ಸಿಂಗ್ ಗುರುವಾರ ಮತ್ತೊಂದು ವಿಡಿಯೊ ಸಂದೇಶ ಹರಿಬಿಟ್ಟಿದ್ದಾರೆ. ತಾನು ಶರಣಾಗಲು ಪ್ರಯತ್ನಿಸುತ್ತಿದ್ದೇನೆ ಎಂಬ ಊಹಾಪೋಹಗಳನ್ನು ತಳ್ಳಿ ಹಾಕಿದ್ದಾರೆ. ‘ಕೂಡಲೇ ‘ಸರ್ಬತ್ ಖಾಲ್ಸಾ’ (ಸಭೆ) ಆಯೋಜಿಸಬೇಕು ಹಾಗೂ ಸಂಘಟನೆಯ ಮುಖ್ಯಸ್ಥರು (ಜಾತೇದಾರ್) ನೀವೇ ಎಂಬುದನ್ನು ಸಭೆಯಲ್ಲಿ ಸಾಬೀತುಪಡಿಸಬೇಕು’ ಎಂದು ಅವರು ಸಿಖ್ಖರ ಅತ್ಯುನ್ನತ ಧಾರ್ಮಿಕ ಸಂಘಟನೆ ಅಕಾಲ್ ತಖ್ತ್‌ಗೆ ಈ ವಿಡಿಯೊದಲ್ಲಿ ಆಗ್ರಹಿಸಿದ್ದಾರೆ.

ಮೀಸಲಾತಿ ಮರುಹಂಚಿಕೆ: ಆದೇಶ ಪ್ರಕಟ

ಒಂದನೇ ಪುಟದಿಂದ

ರಾಜ್ಯ ಹಿಂದುಳಿದ ವರ್ಗಗಳ ಆಯೋಗವು 2022ರ ಡಿಸೆಂಬರ್ 21ರಂದು ಸಲ್ಲಿಸಿರುವ ಮಧ್ಯಂತರ ವರದಿ ಆಧಾರದಲ್ಲಿ ಹಿಂದುಳಿದ ವರ್ಗಗಳ ಮೀಸಲಾತಿ ಮರುಹಂಚಿಕೆ ಮಾಡಿ ಮತ್ತೊಂದು ಆದೇಶ ಹೊರಡಿಸಲಾಗಿದೆ. ಮುಸ್ಲಿಮರನ್ನು ಇಡಬ್ಲ್ಯುಎಸ್ ಪ್ರವರ್ಗಕ್ಕೆ ಸ್ಥಳಾಂತರ ಮಾಡಿರುವುದರಿಂದ ಉಳಿಯುವ ಶೇ 4ರಷ್ಟು ಮೀಸಲಾತಿಯನ್ನು ಸೇರಿಸಿ ಮರುಹಂಚಿಕೆ ಮಾಡಲಾಗಿದೆ. ಹೊಸದಾಗಿ ಸೃಜಿಸಿರುವ ಪ್ರವರ್ಗ 2–ಸಿ ಮತ್ತು 2–ಡಿಗಳೂ ಸೇರಿದಂತೆ ನಾಲ್ಕು ಪ್ರವರ್ಗಗಳಿಗೆ ಒಟ್ಟು ಶೇ 32ರಷ್ಟು ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ.

ಪ್ರವರ್ಗ 1ಕ್ಕೆ ಶೇ 4ರಷ್ಟು, ಪ್ರವರ್ಗ 2–ಎಗೆ ಶೇ 15ರಷ್ಟು ಮೀಸಲಾತಿಯನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳಲಾಗಿದೆ. ಪ್ರವರ್ಗ 2–ಬಿಗೆ ಯಾವುದೇ ಮೀಸಲಾತಿ ಕಲ್ಪಿಸಿಲ್ಲ. ಪ್ರವರ್ಗ 2–ಸಿಗೆ ಶೇ 6ರಷ್ಟು ಮತ್ತು ಪ್ರವರ್ಗ 2–ಡಿಗೆ ಶೇ 7ರಷ್ಟು ಮೀಸಲಾತಿ ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ಈ ಎರಡೂ ಆದೇಶಗಳ ಅನುಸಾರ ಶಿಕ್ಷಣ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

ಎಸ್‌ಸಿ: ಯಾರಿಗೆ ಎಷ್ಟು ಒಳ ಮೀಸಲು

ಪರಿಶಿಷ್ಟ ಜಾತಿಗೆ ನೀಡಿರುವ ಶೇಕಡ 17ರಷ್ಟು ಮೀಸಲಾತಿಯನ್ನು 101 ಜಾತಿಗಳಿಗೆ ಮರುಹಂಚಿಕೆ ಮಾಡಿ ಒಳ ಮೀಸಲಾತಿ ಕಲ್ಪಿಸುವುದಕ್ಕೂ ಸಮಾಜ ಕಲ್ಯಾಣ ಇಲಾಖೆ ಸೋಮವಾರ ಆದೇಶವನ್ನು ಹೊರಡಿಸಿದೆ.

ಮೊದಲ ಗುಂಪಿನಲ್ಲಿ ಆದಿ ದ್ರಾವಿಡ, ಭಾಂಭಿ, ಮಾದಿಗ, ಸಮಗಾರ ಜಾತಿಗಳಿಗೆ ಶೇ 6ರಷ್ಟು, ಎರಡನೇ ಗುಂಪಿನಲ್ಲಿ ಆದಿ ಕರ್ನಾಟಕ, ಛಲವಾದಿ, ಚೆನ್ನದಾಸರ/ಹೊಲೆಯ ದಾಸರ, ಮಹರ್/ತರಲ್/ ಧೇಗುಮೇಗು ಜಾತಿಗಳಿಗೆ ಶೇ 5.5ರಷ್ಟು, ಮೂರನೇ ಗುಂಪಿನಲ್ಲಿ ಬಂಜಾರ/ಲಂಬಾಣಿ, ಭೋವಿ, ಕೊರಮ, ಕೊರಚ ಜಾತಿಗಳಿಗೆ ಶೇ 4.5ರಷ್ಟು ಮತ್ತು ನಾಲ್ಕನೇ ಗುಂಪಿನಲ್ಲಿ ಆದಿ ಆಂಧ್ರ, ಆದಿಯಾ, ಅಜಿಲರು ಸೇರಿದಂತೆ 89 ಸಮುದಾಯಗಳಿಗೆ ಶೇ 1ರಷ್ಟು ಮೀಸಲಾತಿ ಹಂಚಿಕೆ ಮಾಡಲಾಗಿದೆ.

‘ಮೋದಿ ಇಳಿಸಿ, ದೇಶ ಉಳಿಸಿ’: ಎಎಪಿ ಅಭಿಯಾನ

ನವದೆಹಲಿ (ಪಿಟಿಐ): ‘ಆಮ್ ಆದ್ಮಿ ಪಕ್ಷವು (ಎಎಪಿ) ‘ಮೋದಿ ಇಳಿಸಿ, ದೇಶ ಉಳಿಸಿ’ (ಮೋದಿ ಹಟಾವೋ, ದೇಶ್ ಬಚಾವೋ) ಎನ್ನುವ ಭಿತ್ತಿಪತ್ರ ಅಭಿಯಾನವನ್ನು ಗುರುವಾರ ದೇಶದಾದ್ಯಂತ ಹಮ್ಮಿಕೊಂಡಿತ್ತು. 22 ರಾಜ್ಯಗಳಲ್ಲಿ ವಿವಿಧ ಭಾಷೆಗಳಲ್ಲಿ ಈ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ’ ಎಂದು ದೆಹಲಿ ಘಟಕದ ಸಂಚಾಲಕ, ಸಚಿವ ಗೋಪಾಲ್ ರೈ ಅವರು ತಿಳಿಸಿದ್ದಾರೆ.

‘ಬಿಜೆಪಿಯು ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸಿಲ್ಲ ಎಂಬ ಸಂದೇಶವನ್ನು ದೇಶದಾದ್ಯಂತ ಜನರಿಗೆ ತಿಳಿಸುವ ಉದ್ದೇಶದಿಂದ ಈ ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ರೈತರಿಗೆ ನೀಡಿದ್ದ ಭರವಸೆಯನ್ನೂ ಕೇಂದ್ರ ಈವರೆಗೂ ಈಡೇರಿಸಿಲ್ಲ’ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಜರ್ಮನಿ ಹೇಳಿಕೆಗೆ ದಿಗ್ವಿಜಯ್ ಸಿಂಗ್ ಪ್ರತಿಕ್ರಿಯೆ

ಬಿಜೆಪಿ, ಕಾಂಗ್ರೆಸ್ ನಡುವೆ ವಾಕ್ಸಮರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಸಂಸದ ಸ್ಥಾನದಿಂದ ಅನರ್ಹಗೊಳಿಸಿದ್ದರ ಕುರಿತು ಜರ್ಮನಿ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸುವ ಮೂಲಕ ಪಕ್ಷವು ಇಕ್ಕಟ್ಟಿಗೆ ಸಿಲುಕುವಂತೆ ಪಕ್ಷದ ಮುಖಂಡ ದಿಗ್ವಿಜಯ್ ಸಿಂಗ್ ಮಾಡಿದ್ದಾರೆ. ಬಿಜೆಪಿ ಇದಕ್ಕೆ ಕಟುವಾದ ಪ್ರತಿಕ್ರಿಯೆ ನೀಡಿದೆ. ಭಾರತದ ಆಂತರಿಕ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ವಿದೇಶಿ ಶಕ್ತಿಗಳನ್ನು ಕಾಂಗ್ರೆಸ್ ಆಹ್ವಾನಿಸುತ್ತಿದೆ ಎಂದು ಬಿಜೆಪಿ ಆರೋಪಿಸಿದೆ.

ಕಾಂಗ್ರೆಸ್ ಪಕ್ಷವು ದಿಗ್ವಿಜಯ್ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿದೆ.

‘(ಪ್ರಧಾನಿ ನರೇಂದ್ರ) ಮೋದಿ ಅವರು ಸಂಸ್ಥೆಗಳಿಗೆ ಕೊಟ್ಟ ಹೊಡೆತ, ಅವರ ದ್ವೇಷ ರಾಜಕಾರಣ, ಬೆದರಿಕೆ, ಕಿರುಕುಳಗಳಿಂದಾಗಿ ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಬೆದರಿಕೆಯನ್ನು ನಿರ್ವಹಿಸಲು ಭಾರತದ ಪ್ರಜಾಸತ್ತಾತ್ಮಕ ಪ್ರಕ್ರಿಯೆಗಳೇ ಸಾಕು ಎಂಬುದನ್ನು ಕಾಂಗ್ರೆಸ್ ದೃಢವಾಗಿ ನಂಬಿದೆ. ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳು ಅವರನ್ನು ನಿರ್ಭೀತಿಯಿಂದ ಎದುರಿಸಲಿವೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಟ್ವೀಟ್ ಮಾಡಿದ್ದಾರೆ.

ಆದರೆ, ಬಿಜೆಪಿ ಅಷ್ಟು ಹೊತ್ತಿಗಾಗಲೇ ಪ್ರಮುಖ ನಾಯಕರನ್ನು ಕಣಕ್ಕೆ ಇಳಿಸಿ ಟೀಕೆ ಆರಂಭಿಸಿತ್ತು. ಸಾಮಾಜಿಕ ಜಾಲತಾಣಗಳಲ್ಲಿಯೂ ಇದು ತೀವ್ರ ಚರ್ಚೆಗೆ ಒಳಗಾಗಿದೆ. ರಾಹುಲ್ ಅವರು ಸೇಡು ತೀರಿಸಿಕೊಳ್ಳುವುದಕ್ಕಾಗಿ ವಿದೇಶಿ ಶಕ್ತಿಗಳನ್ನು ಆಹ್ವಾನಿಸುತ್ತಿದ್ದಾರೆ. ಮೊದಲು ಅವರು ಅದನ್ನು ಸಂಸತ್ತಿನಲ್ಲಿ ಮಾಡಿದರು ಎಂದು ಬಿಜೆಪಿ ಹೇಳಿದೆ.

ಜರ್ಮನಿಯ ಪತ್ರಿಕೆ ‘ಡಾಯ್‌ಚು ವೆಲ್ಲೆ’ ಅಂತರರಾಷ್ಟ್ರೀಯ ಸಂಪಾದಕ ರಿಚರ್ಡ್ ವಾಕರ್ ಅವರ ಹೇಳಿಕೆಗೆ ದಿಗ್ವಿಜಯ್ ಅವರು ಕೃತಜ್ಞತೆ ಸಲ್ಲಿಸುವುದರೊಂದಿಗೆ ಈಗಿನ ವಿವಾದ ಆರಂಭವಾಯಿತು. ‘ರಾಹುಲ್ ಗಾಂಧಿಗೆ ಕಿರುಕುಳ ನೀಡುವ ಮೂಲಕ ಭಾರತದಲ್ಲಿ ಪ್ರಜಾಪ್ರಭುತ್ವಕ್ಕೆ ಹೇಗೆ ಧಕ್ಕೆಯಾಗಿದೆ ಎಂಬುದನ್ನು ಗಮನಿಸಿದ್ದೇವೆ’ ಎಂದಿದ್ದರು.

ಜರ್ಮನಿಯ ವಿದೇಶಾಂಗ ವಕ್ತಾರರ ವಿಡಿಯೊವೊಂದನ್ನು ದಿಗ್ವಿಜಯ್ ಅವರು ಟ್ವೀಟ್‌ಗೆ ಟ್ಯಾಗ್ ಮಾಡಿದ್ದಾರೆ. ‘ಭಾರತದ ವಿರೋಧ ಪಕ್ಷದ ರಾಜಕಾರಣಿ ರಾಹುಲ್ ಗಾಂಧಿ ಅವರಿಗೆ ಪ್ರಕಟಿಸಿದ ಶಿಕ್ಷೆ ಮತ್ತು ಸದಸ್ಯತ್ವದಿಂದ ಅವರನ್ನು ಅನರ್ಹ ಮಾಡಿರುವುದನ್ನು ಗಮನಿಸಿದ್ದೇವೆ’ ಎಂದು ಅಲ್ಲಿನ ವಿದೇಶಾಂಗ ಸಚಿವೆ ಹೇಳಿದ್ದು ವಿಡಿಯೊದಲ್ಲಿ ಇದೆ.

‘ನಮಗೆ ತಿಳಿದಿರುವ ಪ್ರಕಾರ, ರಾಹುಲ್ ಅವರು ಮೇಲ್ಮನವಿ ಸಲ್ಲಿಸಲು ಅವಕಾಶ ಇದೆ. ಮೇಲ್ಮನವಿಯ ನಂತರ, ಸದಸ್ಯತ್ವ ಅನರ್ಹತೆಗೆ ಏನಾದರೂ ಆಧಾರ ಇದೆಯೇ ಎಂಬುದು ತಿಳಿಯುತ್ತದೆ. ರಾಹುಲ್ ಅವರ ವಿಚಾರಣೆಯಲ್ಲಿ ನ್ಯಾಯಾಂಗದ ಸ್ವಾತಂತ್ರ್ಯ ಮತ್ತು ಮೂಲಭೂತ ಪ್ರಜಾಸತ್ತಾತ್ಮಕ ತತ್ವಗಳು ಅನ್ವಯ ಆಗಬೇಕು ಎಂದು ಜರ್ಮನಿ ಬಯಸುತ್ತದೆ’ ಎಂದೂ ಅವರು ಹೇಳಿದ್ದಾರೆ.

ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಅವರು ದಿಗ್ವಿಜಯ್ ಟ್ವೀಟ್‌ಗೆ ಪ್ರತಿಕ್ರಿಯಿಸಿ, ಭಾರತದ ಆಂತರಿಕ ವ್ಯವಹಾರಗಳಲ್ಲಿ ವಿದೇಶವೊಂದು ಹಸ್ತಕ್ಷೇಪ ನಡೆಸಬೇಕು ಎಂದು ಕಾಂಗ್ರೆಸ್ ಬಯಸಿದೆ ಎಂದಿದ್ದಾರೆ.

ದಿಗ್ವಿಜಯ್ ಅವರ ಟ್ವೀಟ್‌ನ ಸ್ಕ್ರೀನ್‌ಶಾಟ್ ಅನ್ನು ರಿಜಿಜು ಅವರು ಟ್ವೀಟ್‌ಗೆ ಟ್ಯಾಗ್ ಮಾಡಿದ್ದಾರೆ. ‘ಭಾರತದ ವ್ಯವಹಾರಗಳಲ್ಲಿ ವಿದೇಶಿ ಶಕ್ತಿಗಳ ಹಸ್ತಕ್ಷೇಪಕ್ಕೆ ಆಹ್ವಾನ ನೀಡಿದ್ದಾಕ್ಕಾಗಿ ರಾಹುಲ್ ಗಾಂಧಿ ಅವರಿಗೆ ಕೃತಜ್ಞತೆ. ಆದರೆ, ಭಾರತದ ನ್ಯಾಯಾಂಗದ ಮೇಲೆ ವಿದೇಶಿ ಹಸ್ತಕ್ಷೇಪ ಪರಿಣಾಮ ಬೀರದು. ಈಗ ಭಾರತದ ಪ್ರಧಾನಿ ನರೇಂದ್ರ ಮೋದಿ. ಹಾಗಾಗಿ, ವಿದೇಶಿ ಪ್ರಭಾವವನ್ನು ಭಾರತವು ಸಹಿಸಿಕೊಳ್ಳುವುದಿಲ್ಲ’ ಎಂದು ರಿಜಿಜು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ಆದರೆ, ಕಾಂಗ್ರೆಸ್‌ನ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ತಿರುಗೇಟು ನೀಡಿದ್ದಾರೆ. ‘ಮುಖ್ಯ ವಿಚಾರದಿಂದ ಗಮನ ಬೇರೆಡೆ ಸೆಳೆಯುವ ಕೆಲಸ ಏಕೆ ಮಾಡುತ್ತಿದ್ದೀರಿ? ರಾಹುಲ್ ಗಾಂಧಿ ಅವರು ಅದಾನಿ ಕುರಿತಂತೆ ಕೇಳಿದ ಪ್ರಶ್ನೆಗಳಿಗೆ ಪ್ರಧಾನಿಗೆ ಉತ್ತರಿಸಲು ಆಗುತ್ತಿಲ್ಲ ಎಂಬುದೇ ಇಲ್ಲಿನ ಮುಖ್ಯ ವಿಚಾರ’ ಎಂದಿದ್ದಾರೆ.

ದಿಗ್ವಿಜಯ್ ಅವರು ಹೇಳಿಕೆಗಳ ಮೂಲಕ ವಿವಾದ ಸೃಷ್ಟಿಸಿದ್ದು ಇದೇ ಮೊದಲಲ್ಲ. ರಾಹುಲ್ ಅವರು ‘ಭಾರತ್ ಜೋಡೊ ಯಾತ್ರೆ’ ನಡೆಸುತ್ತಿದ್ದಾಗ ಬಾಲಾಕೋಟ್ ದಾಳಿಯನ್ನು ಪ್ರಶ್ನಿಸಿ ದಿಗ್ವಿಜಯ್ ಅವರು ವಿವಾದ ಸೃಷ್ಟಿಸಿದ್ದರು. ಜಮ್ಮುವಿನಲ್ಲಿ ನಡೆದ ರ‍್ಯಾಲಿಯಲ್ಲಿ ಮಾತನಾಡಿದ್ದ ಅವರು ‘ಅವರು (ಕೇಂದ್ರ ಸರ್ಕಾರ) ನಿರ್ದಿಷ್ಟ ದಾಳಿ ಕುರಿತು ಮಾತನಾಡುತ್ತಿದ್ದಾರೆ. ಹಲವು ಉಗ್ರರನ್ನು ಕೊಂದಿದ್ದೇವೆ ಎನ್ನುತ್ತಾರೆ. ಆದರೆ ಅದಕ್ಕೆ ಸಾಕ್ಷ್ಯ ಎಲ್ಲಿದೆ’ ಎಂದು ಪ್ರಶ್ನಿಸಿದ್ದರು. ಇದಕ್ಕೂ ಬಿಜೆಪಿ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು.

> ಮೋದಿ ಉಪನಾಮ ಅವಹೇಳನದ ವಿಚಾರದಲ್ಲಿ ನಾನು ದಾಖಲಿಸಿರುವ ಪ್ರಕರಣದಲ್ಲೂ ರಾಹುಲ್ ವಿರುದ್ಧ ತೀರ್ಪು ಬರಬೇಕು. ನ್ಯಾಯಾಲಯ ವಿಚಾರಣೆ ನಡೆಸಲಿದೆ
> **ಸುಶೀಲ್ ಮೋದಿ,** ಬಿಜೆಪಿ ರಾಜ್ಯಸಭಾ ಸದಸ್ಯ

> ರಾಹುಲ್ ವಿರುದ್ಧ ಪ್ರಕರಣ ದಾಖಲಿಸಲು ವಿಜಯ್ ಮಲ್ಯ, ನೀರವ್ ಮೋದಿ, ಮೆಹುಲ್ ಚೋಕ್ಸಿ ಮೇಲೆ ಒತ್ತಡ ಹೆಚ್ಚಾಗಲಿದೆ
> **ಪವನ್ ಖೇರಾ,** ಕಾಂಗ್ರೆಸ್ ವಕ್ತಾರ

ಬ್ರಿಟನ್ ನ್ಯಾಯಾಲಯದಲ್ಲಿ ರಾಹುಲ್ ವಿರುದ್ಧ ಪ್ರಕರಣ: ಲಲಿತ್ ಮೋದಿ

ಲಂಡನ್ (ಪಿಟಿಐ): ಮೋದಿ ಉಪನಾಮ ಅವಹೇಳನ ಮಾಡಿರುವ ರಾಹುಲ್ ಗಾಂಧಿಯ ವಿರುದ್ಧ ಬ್ರಿಟನ್ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುತ್ತೇನೆ ಎಂದು ಐಪಿಎಲ್ ಆಯೋಜನೆಯಲ್ಲಿ ಅಕ್ರಮ ನಡೆಸಿದ ಆರೋಪ ಹೊತ್ತಿರುವ ಲಲಿತ್ ಮೋದಿ ಹೇಳಿದ್ದಾರೆ.

ಐಪಿಎಲ್ ಅಕ್ರಮ ಆರೋಪದ ಬೆನ್ನಲ್ಲೇ 2010ರಲ್ಲಿ ಭಾರತದಿಂದ ಪರಾರಿಯಾಗಿದ್ದ ಲಲಿತ್ ಮೋದಿ, ಲಂಡನ್‌ನಲ್ಲಿ ನೆಲೆಸಿದ್ದಾರೆ. 2019ರಲ್ಲಿ ಕೋಲಾರದಲ್ಲಿ ನಡೆದ ಪ್ರಚಾರ ಸಭೆಯಲ್ಲಿ ಎಲ್ಲ ಕಳ್ಳರ ಹೆಸರಲ್ಲೂ ಮೋದಿ ಇರುವುದೇಕೆ ಎಂದು ಕೇಳಿದ್ದ ರಾಹುಲ್, ಲಲಿತ್ ಮೋದಿಯ ಹೆಸರನ್ನೂ ಉಲ್ಲೇಖಿಸಿದ್ದರು.

ರಾಹುಲ್ ವಿರುದ್ಧ ಲಲಿತ್ ಮೋದಿ ಮಾಡಿರುವ ಸರಣಿ ಟ್ವೀಟ್‌ಗಳಲ್ಲಿ ವ್ಯಾಕರಣ ದೋಷಗಳೇ ತುಂಬಿವೆ ಎಂದು ಪಿಟಿಐ ವರದಿ ಮಾಡಿದೆ. ನಾನು ದೇಶದಿಂದ ಪರಾರಿಯಾಗಿದ್ದೇನೆ ಎಂದು ಗಾಂಧಿಯ ಅನುಯಾಯಿಗಳು ಪದೇ–ಪದೇ ಹೇಳುತ್ತಿದ್ದಾರೆ. ಆದರೆ, ನನಗೆ ಯಾವುದೇ ಶಿಕ್ಷೆಯಾಗಿಲ್ಲವಲ್ಲ. ಈಗ ಸಾಮಾನ್ಯ ಮನುಷ್ಯನಂತಾಗಿರುವ ಪಪ್ಪು ಅಲಿಯಾಸ್ ರಾಹುಲ್ ಗಾಂಧಿ ಅದನ್ನು ಹೇಳುತ್ತಿದ್ದಾರೆ. ಆದರೆ, ಅದನ್ನೇ ಹೇಳುತ್ತಿರುವ ಎಲ್ಲಾ ವಿಪಕ್ಷಗಳ ನಾಯಕರಿಗೆ ಬೇರೆ ಕೆಲಸ ಇಲ್ಲ ಎನಿಸುತ್ತಿದೆ. ರಾಹುಲ್ ಗಾಂಧಿಯನ್ನು ಇಲ್ಲಿನ ನ್ಯಾಯಾಲಯಕ್ಕೆ ಎಳೆಯುತ್ತೇನೆ. ಆತ ಮುಟ್ಠಾಳ ಎಂದು ತೋರಿಸಲು ಕಾತರನಾಗಿದ್ದೇನೆ ಎಂದು ಲಲಿತ್ ಮೋದಿ ಟ್ವೀಟ್ ಮಾಡಿದ್ದಾರೆ.

‘ಗಾಂಧಿ ಕುಟುಂಬ ದೇಶಕ್ಕೆ ಮಾಡಿರುವುದಕ್ಕಿಂತ ಹೆಚ್ಚಿನದನ್ನು ಮೋದಿ ಕುಟುಂಬ ಮಾಡಿದೆ. ನಾನು ದೇಶಕ್ಕಾಗಿ ಈ ಅದ್ಭುತವಾದ ಕ್ರೀಡಾಕೂಟವನ್ನು ರೂಪಿಸಿದ್ದೇನೆ. ಅದರಿಂದ ಲಕ್ಷಾಂತರ ಕೋಟಿ ಆದಾಯ ಬರುತ್ತಿದೆ’ ಎಂದು ಅವರು ಟ್ವೀಟ್‌ನಲ್ಲಿ ಹೇಳಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

Ref. VTU/BGM/SAP/CW1/T-618/2022-23/7651 dtd.30-03-2023

ಟೆಂಡರ ಪ್ರಕಟಣೆ – 2ನೇ ಕರೆ

ಕುಲಸಚಿವರು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಕ್ಕೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟಂಡರ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಅಹ್ವಾನಿಸಲಾಗಿದೆ. ಕೆಲಸದ ಹೆಸರು: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಸ್ನಾತಕೊತ್ತರ ಕೇಂದ್ರ, ಮುದ್ದೇನಹಳ್ಳಿಯ ಇಸಿಇ ವಿಭಾಗಕ್ಕೆ ಸಂಶೋಧನಾ ಉಪಕರಣಗಳನ್ನು ವಿಜಿಎಎಸ್‌ಟಿ–ಕೆ–ಫಿಸ್ಟ ಎಲ್–2 ಅನುಧಾನದಲ್ಲಿ ಪೂರೈಸುವುದು. ಟೆಂಡರಿಗಿಟ್ಟ ಮೊತ್ತ: ರೂ.24,42,680/– ಮುಂಗಡ ಠೇವಣಿ: ರೂ.49,000/–, ಟೆಂಡರ ಸಲ್ಲಿಸಲು ಕೊನೆಯ ದಿನಾಂಕ:13–04–2023 ರ 2.30 ರ ವರೆಗೆ. ಟೆಂಡರ ತೆರೆಯುವ ದಿನಾಂಕ:17–04–2023 ರ 11.00 ಘಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.

ಸಹಿ/– ಕುಲಸಚಿವರು,

DIPR/BGM/RO-NO-2190/KSMCA/2022-23

ಪುರಸಭಾ ಕಾರ್ಯಾಲಯ, ಶ್ರೀರಂಗಪಟ್ಟಣ–571438,
E-Mail:itstaff_ulb_srirangapatna.yahoo.co.in
Website:www.srirangapatnatown.mrc.gov.in
ಕಛೇರಿ ದೂರವಾಣಿ:08236/252229/253030
ಸಂಖ್ಯೆ:ಪುಕಾಶ್ರೀ/ತಾಂ.ಶಾ/ಚುನಾವಣೆ/ಟೆಂ:01/2022–23
ದಿನಾಂಕ:29.03.2023

ಅಲ್ಪಾವಧಿ ಇ–ಪ್ರಕ್ಯೂರಮೆಂಟ್‌ನಲ್ಲಿ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚಾರ ಪಡಿಸುವುದೇನೆಂದರೆ, ಶ್ರೀರಂಗಪಟ್ಟಣ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಸಂಬಂಧ ಶ್ರೀರಂಗಪಟ್ಟಣ ತಾಲ್ಲೂಕು ತಹಶೀಲ್ದಾರ್‌ರವರ ಪರವಾಗಿ ಶ್ರೀರಂಗಪಟ್ಟಣ ವಿಧಾನ ಸಭಾ ಕ್ಷೇತ್ರಕ್ಕೆ ಅಗತ್ಯವಿರುವ ಈ ಕೆಳಕಂಡ ಚುನಾವಣೆಗೆ ಸಂಬಂಧಿಸಿದ ಸೇವೆ ಮತ್ತು ಪರಿಕರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 1999, ನಿಯಮಗಳು 2000ರಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಸೂಚನೆಗಳು ಹಾಗೂ ನಿಬಂಧನೆಗೊಳಪಟ್ಟಂತೆ ಅರ್ಹ ಟೆಂಡರ್‌ದಾರರು/ ಸರಬರಾಜುದಾರರುಗಳಿಂದ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಇ–ಪ್ರಕ್ಯೂರ್‌ಮೆಂಟ್‌ನಲ್ಲಿ ಟೆಂಡರ್‌ನ್ನು ಸಲ್ಲಿಸಲು **ದಿನಾಂಕ:05.04.2023ರ ಸಂಜೆ 5.30 ಗಂಟೆಗೆ** ಕೊನೆಗೊಳಿಸಲಾಗಿದೆ. ಹಾಗೂ ಟೆಂಡರ್‌ನ್ನು ದಿನಾಂಕ **: 06.04.2023ರ ಬೆಳಗ್ಗೆ 11.00 ಗಂಟೆಗೆ** ತೆರೆಯಲಾಗುವುದು.

ಕ್ರ ಸಂ	ಇಂಡೆಂಟ್ ನಂ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)
1	Assembly Election 2023/Video Camera, CCTV	35.00	35000.00
2	SRP/Assembly Election 2023/Stationaries	8.00	8000.00
3	SRP/Assembly Election 2023/Food	15.00	15000.00
4	SRP/Assembly Election 2023/Shamiyana&Li	18.00	18000.00
5	SRP/Assembly Election 2023/Goods & Close	3.00	3000.00
6	SRP/Assembly Election/ Strong Room	4.00	4000.00

ಸೂಚನೆ:– ಹೆಚ್ಚಿನ ವಿವರಗಳನ್ನು ತಾಲ್ಲೂಕು ಕಛೇರಿಯ ಚುನಾವಣಾ ಶಾಖೆಯಲ್ಲಿ ಪಡೆಯಬಹುದು. ಕಾರಣಾಂತರಗಳಿಂದ ಟೆಂಡರ್ ವೇಳಾಪಟ್ಟಿ ಷರತ್ತು ಮತ್ತು ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು.

ಸಹಿ/–ಮುಖ್ಯಾಧಿಕಾರಿ,
ಪುರಸಭೆ, ಶ್ರೀರಂಗಪಟ್ಟಣ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/858/2022–23

ತ್ರಿಪುರಾ ವಿಧಾನಸಭೆ: ಅಶ್ಲೀಲ ಚಿತ್ರ ವೀಕ್ಷಿಸಿದ ಬಿಜೆಪಿ ಶಾಸಕ

ಅಗರ್ತಲಾ (ಪಿಟಿಐ): ತ್ರಿಪುರಾ ವಿಧಾನಸಭೆ ಅಧಿವೇಶನದ ವೇಳೆ ಮೊಬೈಲ್ ಫೋನ್‌ನಲ್ಲಿ ಅಶ್ಲೀಲ ಚಿತ್ರ ವೀಕ್ಷಣೆ ಮಾಡಿದ ಬಿಜೆಪಿ ಶಾಸಕ ಜದಾಬ್ ಲಾಲ್ ನಾಥ್ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಪ್ರತಿಪಕ್ಷಗಳು ಗುರುವಾರ ಒತ್ತಾಯಿಸಿವೆ.

ಬಜೆಟ್ ಅಧಿವೇಶನದ ಕೊನೆ ದಿನವಾದ ಬುಧವಾರ ವಿಧಾನಸಭೆ ಕಲಾಪಗಳು ನಡೆಯುತ್ತಿರುವ ವೇಳೆ ಈ ಘಟನೆ ನಡೆದಿದ್ದು, ಚಿತ್ರ ವೀಕ್ಷಣೆ ಮಾಡಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.

ಉತ್ತರ ತ್ರಿಪುರಾ ಜಿಲ್ಲೆಯ ಬಾಗ್‌ಬಾಸ್ ಕ್ಷೇತ್ರದ ಶಾಸಕ ಜದಾಬ್ ಲಾಲ್ ನಾಥ್ ಅವರು ಮೊಬೈಲ್ ಕರೆ ಸ್ವೀಕರಿಸುತ್ತಿದ್ದಂತೆ ಅಶ್ಲೀಲ ವಿಡಿಯೊಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿವೆ.

‘ಸದನದಲ್ಲಿ ಮೊಬೈಲ್ ಫೋನ್ ಬಳಕೆ ನಿಷೇಧಿಸಲಾಗಿದೆ ಎಂಬುದು ತಿಳಿದಿದೆ. ಪದೇ ಪದೇ ಕರೆ ಬರುತ್ತಿದ್ದಂತೆ ಅದನ್ನು ಸ್ವೀಕರಿಸಿದೆ. ನಂತರ ನನ್ನ ಮೊಬೈಲ್‌ನಲ್ಲಿ ಅಶ್ಲೀಲ ವಿಡಿಯೊಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು’ ಎಂದು ಸುದ್ದಿಸಂಸ್ಥೆಗೆ ಕಮಲ್‌ನಾಥ್ ಹೇಳಿದರು.

‘ಈ ವಿಷಯದ ಬಗ್ಗೆ ರಾಜ್ಯ ಬಿಜೆಪಿ ಘಟಕದ ಅಧ್ಯಕ್ಷ ರಾಜೀಬ್ ಭಟ್ಟಾಚಾರ್ಯ ಅವರೊಂದಿಗೆ ಮಾತನಾಡಿದ್ದು, ಅವರು ಸ್ವಲ್ಪ ತಾಳ್ಮೆ ವಹಿಸುವಂತೆ ಸೂಚಿಸಿದರು’ ಎಂದರು.

ಇದೊಂದು ನಾಚಿಕೆಗೇಡಿನ ಘಟನೆ. ಇದಕ್ಕಾಗಿ ಕಮಲ್ ನಾಥ್ ಅವರನ್ನು ಶಿಕ್ಷಿಸಬೇಕು ಎಂದು ಕಾಂಗ್ರೆಸ್ ಹೇಳಿದೆ.

‘ಈ ಘಟನೆಯು ಶಾಸಕರ ವರ್ಚಸ್ಸಿಗೆ ಕಳಂಕ ತಂದಿದೆ. ಅವರಿಗೆ ಸೂಕ್ತ ಶಿಕ್ಷೆಯಾಗಬೇಕು. ವಿಧಾನಸಭೆಯಲ್ಲಿ ಮೊಬೈಲ್ ಫೋನ್ ಬಳಕೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಅಶ್ಲೀಲ ಚಿತ್ರ ಹೇಗೆ ವೀಕ್ಷಿಸಲು ಸಾಧ್ಯ?’ ಎಂದು ರಾಜ್ಯ ಕಾಂಗ್ರೆಸ್ ಘಟಕದ ಅಧ್ಯಕ್ಷ ಬಿರಾಜಿತ್ ಸಿನ್ಹಾ ಪ್ರಶ್ನಿಸಿದರು.

ದೇಶದಲ್ಲಿ 3,106 ಹೊಸ ಕೋವಿಡ್ ಪ್ರಕರಣ

ನವದೆಹಲಿ (ಪಿಟಿಐ): ದೇಶದಾದ್ಯಂತ ಕಳೆದ 24 ಗಂಟೆಗಳಲ್ಲಿ 3,016 ಕೋವಿಡ್ ಪ್ರಕರಣಗಳು ವರದಿಯಾಗಿದ್ದು, ಆರು ತಿಂಗಳಲ್ಲಿ ದಾಖಲಾದ ಅತ್ಯಧಿಕ ಪ್ರಕರಣವಾಗಿದೆ. ಈ ಮೂಲಕ ಒಟ್ಟು ಸಕ್ರಿಯ ಪ್ರಕರಣಗಳ ಸಂಖ್ಯೆ 13,059ಕ್ಕೆ ಏರಿಕೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.

2022ರ ಅಕ್ಟೋಬರ್ 2ರಂದು ಒಂದೇ ದಿನದಲ್ಲಿ 3,375 ಕೋವಿಡ್ ಪ್ರಕರಣಗಳು ವರದಿಯಾಗಿದ್ದವು.

‘ಮತ್ತೊಂದು ದೆಹಲಿ ಚಲೋ’

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿರುದ್ಧ ಕೇಂದ್ರದ ತಾರತಮ್ಯ ನೀತಿ ಖಂಡಿಸಿ ಅಹೋರಾತ್ರಿ ಧರಣಿ ನಡೆಸುತ್ತಿರುವ ಟಿಎಂಸಿ ಮುಖ್ಯಸ್ಥೆ, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಬಿಜೆಪಿಯನ್ನು ಅಧಿಕಾರದಿಂದ ಕಿತ್ತೊಗೆಯಲು ‘ದೆಹಲಿಗೆ ಮತ್ತೊಂದು ಚಲೋ’ಗೆ ಕರೆ ನೀಡಿದ್ದಾರೆ.

ಧರಣಿ ಸ್ಥಳದಲ್ಲಿ ನೆರೆದಿದ್ದ ಬೆಂಬಲಿಗರ ಸಮ್ಮುಖದಲ್ಲಿ ಮುಖ್ಯಮಂತ್ರಿ ಅವರು ಇಲ್ಲಿನ ಡಾ.ಬಿ. ಆರ್.ಅಂಬೇಡ್ಕರ್ ಅವರ ಪ್ರತಿಮೆ ಸ್ಥಳದಲ್ಲಿ ಮತ್ತೊಮ್ಮೆ ದೆಹಲಿ ಚಲೋಗೆ ಕರೆ ನೀಡಿದರು.

2,533 ಕಿ.ಮೀ. ಮಾರ್ಗದ ಪೈಕಿ 722 ಕಿ.ಮೀ. ಕಾಮಗಾರಿ ಮಾತ್ರ ಪೂರ್ಣ

ರೈಲ್ವೆ ವಿದ್ಯುದೀಕರಣ ಕಾಮಗಾರಿ ನಿಧಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ರಾಜ್ಯದಲ್ಲಿ ರೈಲು ಮಾರ್ಗಗಳ ವಿದ್ಯುದೀಕರಣ ಕಾಮಗಾರಿ ಆಮೆಗತಿಯಲ್ಲಿ ಸಾಗಿದೆ.

ರಾಜ್ಯದಲ್ಲಿ ರೈಲ್ವೆ ಇಲಾಖೆಯು 12 ಮಾರ್ಗಗಳ ವಿದ್ಯುದೀಕರಣ ಕಾಮಗಾರಿ ಕೈಗೆತ್ತಿಕೊಂಡಿದೆ. 2,533 ಕಿ.ಮೀ. ಮಾರ್ಗದ ಪೈಕಿ ಈ ವರೆಗೆ ಪೂರ್ಣ ಆಗಿರುವುದು 722 ಕಿ.ಮೀ. ಮಾತ್ರ. 12 ಮಾರ್ಗಗಳ ಕಾಮಗಾರಿ ಪೂರ್ಣಗೊಳಿಸಲು ₹3,887 ಕೋಟಿ ಬೇಕು. ಈವರೆಗೆ ಇಲಾಖೆ ₹1,207 ಕೋಟಿ ವೆಚ್ಚ ಮಾಡಿದೆ.

ದೇಶದ ರೈಲು ಮಾರ್ಗಗಳ ವಿದ್ಯುದೀಕರಣ ಕಾಮಗಾರಿಗಳ ಕುರಿತು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ರಾಜ್ಯಸಭೆಯಲ್ಲಿ ಲಿಖಿತ ಉತ್ತರ ನೀಡಿದ್ದು, ಕರ್ನಾಟಕ (12), ರಾಜಸ್ಥಾನ (12) ಹಾಗೂ ಗುಜರಾತ್‌ನಲ್ಲಿ (11) ಹೆಚ್ಚಿನ ಸಂಖ್ಯೆಯ ಕಾಮಗಾರಿಗಳು ಬಾಕಿ ಇವೆ ಎಂದು ಮಾಹಿತಿ ನೀಡಿದ್ದಾರೆ.

‘ಕರ್ನಾಟಕದಲ್ಲಿ ₹49,087 ಕೋಟಿ ವೆಚ್ಚದ 4,330 ಕಿ.ಮೀ. ರೈಲ್ವೆ ಕಾಮಗಾರಿಗಳು ವಿವಿಧ ಹಂತದಲ್ಲಿವೆ. ಇದರಲ್ಲಿ 21 ಹೊಸ ಯೋಜನೆಗಳು ಹಾಗೂ 11 ದ್ವಿಪಥ ಕಾಮಗಾರಿಗಳು ಸೇರಿವೆ. ₹16,258 ಕೋಟಿ ವೆಚ್ಚದ 1,305 ಕಿ.ಮೀ. ಕಾಮಗಾರಿಗಳು ಪೂರ್ಣಗೊಂಡಿವೆ’ ಎಂದಿದ್ದಾರೆ.

‘ಕರ್ನಾಟಕದಲ್ಲಿ ಹೊಸ ಮಾರ್ಗಗಳ ನಿರ್ಮಾಣ, ದ್ವಿಪಥ, ಗೇಜ್ ಪರಿವರ್ತನೆ, ವಿದ್ಯುದೀಕರಣ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಒದಗಿಸುತ್ತಿರುವ ಹಣ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದೆ. 2014–19ನೇ ಸಾಲಿನಲ್ಲಿ ಪ್ರತಿವರ್ಷ ₹2,702 ಕೋಟಿ ಒದಗಿಸಲಾಗಿದೆ. 2019–20ರಲ್ಲಿ ₹3,386 ಕೋಟಿ, 2020–21ರಲ್ಲಿ ₹4,220 ಕೋಟಿ, 2021–22ರಲ್ಲಿ ₹4,227, 2022–23ರಲ್ಲಿ ₹6,091 ಕೋಟಿ ಒದಗಿಸಲಾಗಿದೆ. ಈ ವರ್ಷದ ಬಜೆಟ್‌ನಲ್ಲಿ ₹7,561 ಕೋಟಿ ನೀಡಲಾಗಿದೆ. ಇದು 2009-14ರ ಅವಧಿಯಲ್ಲಿ ಒದಗಿಸಿರುವ ಅನುದಾನಕ್ಕೆ ಹೋಲಿಸಿದರೆ ಶೇ 806 ಪಟ್ಟು ಅಧಿಕ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಇತ್ತೀಚಿನ ವರ್ಷಗಳಲ್ಲಿ ರೈಲ್ವೆ ವಿದ್ಯುದೀಕರಣ ಕಾಮಗಾರಿಗಳಿಗೆ ಹೆಚ್ಚಿನ ಅನುದಾನ ಒದಗಿಸಿರಲಿಲ್ಲ. ಮಾರ್ಗಗಳ ವಿದ್ಯುದೀಕರಣ ಕಾಮಗಾರಿಯಲ್ಲಿ ಕರ್ನಾಟಕ ಹಿಂದೆ ಇತ್ತು. ಈ ಸಲದ ಬಜೆಟ್‌ನಲ್ಲಿ ಹೊಸ ಯೋಜನೆಗಳ ಜತೆಗೆ ದ್ವಿಪಥ ಹಾಗೂ ವಿದ್ಯುದೀಕರಣ ಕಾಮಗಾರಿಗೆ ಹೆಚ್ಚಿನ ಅನುದಾನ ಒದಗಿಸಿದ್ದಾರೆ. ಈ ಅನುದಾನವನ್ನು ಬಳಸಿಕೊಂಡು 2024ರ ಒಳಗೆ ಈ ಕಾಮಗಾರಿಗಳನ್ನು ಪೂರ್ಣಗೊಳಿಸಬಹುದು’ ಎಂದು ರೈಲ್ವೆ ಹೋರಾಟಗಾರ ಕೃಷ್ಣಪ್ರಸಾದ್ ತಿಳಿಸಿದರು.

‘ಈ ವರ್ಷದ ಕೇಂದ್ರ ಬಜೆಟ್‌ನಲ್ಲಿ ರಾಜ್ಯದ 9 ರೈಲು ಮಾರ್ಗಗಳ ವಿದ್ಯುದೀಕರಣಕ್ಕೆ ₹725 ಕೋಟಿ ಒದಗಿಸಲಾಗಿದೆ. ಇದರಿಂದಾಗಿ, ವಿದ್ಯುದೀಕರಣ ಕಾಮಗಾರಿಗೆ ಇನ್ನಷ್ಟು ವೇಗ ಸಿಗಲಿದೆ’ ಎಂದು ರೈಲ್ವೆ ಇಲಾಖೆಯ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದರು.

‘ದಕ್ಷಿಣ’ದಲ್ಲಿ ರೈಲ್ವೆ ವಿದ್ಯುದ್ದೀಕರಣ (ವೆಚ್ಚ ₹ಕೋಟಿಗಳಲ್ಲಿ)

ರಾಜ್ಯ	ಯೋಜನೆ	ಒಟ್ಟು ಉದ್ದ (ಕಿ.ಮೀ)	ಪೂರ್ಣ ಆಗಿದ್ದು (ಕಿ.ಮೀ)	ಬಾಕಿ (ಕಿ.ಮೀ)	ಒಟ್ಟು ವೆಚ್ಚ	ಈವರೆಗೆ ವೆಚ್ಚ
ಆಂಧ್ರಪ್ರದೇಶ	1	228	176	52	239	57
ಗೋವಾ	1	346	260	86	744	535
ಕರ್ನಾಟಕ	12	2533	772	1761	3887	1207
ಕೇರಳ	1	66	0	66	90	1
ತಮಿಳುನಾಡು	6	973	520	453	1339	402

ರೈಲ್ವೆ ವಿದ್ಯುದೀಕರಣ

ಮಾರ್ಗ	ಬಾಕಿ (ಕಿ.ಮೀ)	ಈ ವರ್ಷ ಮೀಸಲಿಟ್ಟ ಮೊತ್ತ (₹ಕೋಟಿಗಳಲ್ಲಿ)
ಗದಗ–ಹೊಟ್ಗಿ	90	110
ಚಿಕ್ಕಬಾಣಾವರ–ಹುಬ್ಬಳ್ಳಿ	92	128
ಬೀರೂರು–ತಾಳಗುಪ್ಪ	96	56
ಮೈಸೂರು–ಹಾಸನ–ಮಂಗಳೂರು	347	134
ಮೀರಜ್–ಲೋಂಡಾ	118	182
ಹೊಸಪೇಟೆ–ವಾಸ್ಕೊ	40	20
ಚಿಕ್ಕಬಾಣಾವರ–ಹಾಸನ	133	77
ಕಡೂರು– ಚಿಕ್ಕಮಗಳೂರು	46	6
ಬಂಗಾರಪೇಟೆ–ಯಲಹಂಕ	36	8.50

ಮಾಲೆಗಾಂವ್ ಪ್ರಕರಣ: ಪುರೋಹಿತ್ ಅರ್ಜಿ ವಜಾ

ನವದೆಹಲಿ (ಪಿಟಿಐ): ಮಾಲೆಗಾಂವ್ ಸ್ಫೋಟ (2008) ಪ್ರಕರಣದ ಆರೋಪಿ ಲೆಫ್ಟಿನೆಂಟ್ ಕರ್ನಲ್ ಪ್ರಸಾದ್ ಶ್ರೀಕಾಂತ್ ಪುರೋಹಿತ್ ಅವರು ಪ್ರಕರಣದಿಂದ ಬಿಡುಗಡೆಗೊಳಿಸಲು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಈ ಸಂಬಂಧ ತಮ್ಮ ಮೇಲ್ಮನವಿಯನ್ನು ತಿರಸ್ಕರಿಸಿದ್ದ ಬಾಂಬೆ ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಪುರೋಹಿತ್ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಬಿಜೆಪಿ ಸಂಸದೆ ಪ್ರಜ್ಞಾ ಸಿಂಗ್ ಠಾಕೂರ್, ಪುರೋಹಿತ್ ಸೇರಿದಂತೆ ಆರು ಮಂದಿ ಈ ಪ್ರಕರಣದಲ್ಲಿ ವಿಚಾರಣೆ ಎದುರಿಸಿದ್ದು, ಈ ಎಲ್ಲ ಆರೋಪಿಗಳೂ ಸದ್ಯ ಜಾಮೀನಿನ ಮೇಲೆ ಹೊರಗಿದ್ದಾರೆ.

ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೃಷಿಕೇಶ್ ರಾಯ್ ಮತ್ತು ಮನೋಜ್ ಮಿಶ್ರಾ ಅವರ ಪೀಠವು ಹೈಕೋರ್ಟ್ ಆದೇಶದಲ್ಲಿ ಮಧ್ಯ ಪ್ರವೇಶಿಸಲು ನಿರಾಕರಿಸಿತು.

ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯ ಮಾಲೆಗಾಂವ್‌ನಲ್ಲಿ 2008ರ ಸೆಪ್ಟೆಂಬರ್ 29ರಂದು ನಡೆದ ಸ್ಫೋಟ ಪ್ರಕರಣದಲ್ಲಿ ಆರು ಮಂದಿ ಮೃತಪಟ್ಟು, ನೂರಕ್ಕೂ ಹೆಚ್ಚು ಜನರು ಗಾಯಗೊಂಡಿದ್ದರು.

ಸಿನಿಮಾ ಪುರವಣಿ

ನಾನಿಯ ಹಳ್ಳಿಗಾಡಿನ 'ದಸರಾ'

ನಾನಿ

ತೆಲುಗಿನ ನ್ಯಾಚುಲರ್ ಸ್ಟಾರ್ ನಾನಿ ಮತ್ತು ಕೀರ್ತಿ ಸುರೇಶ್ ಅಭಿನಯದ 'ದಸರಾ' ಸಿನಿಮಾ ಮಾರ್ಚ್ 30ರಂದು ತೆರೆಗೆ ಬಂದಿದೆ. ಈ ಚಿತ್ರದ ಕುರಿತು ಒಂದಷ್ಟು ವಿಶೇಷ ಸಂಗತಿಗಳನ್ನು ನಾನಿ 'ಪ್ರಜಾವಾಣಿ'ಯೊಂದಿಗೆ ಹಂಚಿಕೊಂಡಿದ್ದಾರೆ.

15 ವರ್ಷದ ಸಿನಿಪಯಣದಲ್ಲಿ ತಮ್ಮ ಪಾಲಿಗೆ ಇದೊಂದು ಮಹತ್ವದ ಚಿತ್ರ ಎನ್ನುತ್ತಲೇ ಮಾತು ಪ್ರಾರಂಭಿಸಿದರು ನಾನಿ.

'ನಟನೊಬ್ಬನಿಗೆ ಅಭಿನಯಿಸುವ ಪ್ರತಿ ಚಿತ್ರವೂ ಮಹತ್ವದ್ದು. ಆದರೆ ಕೆಲವು ಚಿತ್ರಗಳು ಅತ್ಯಂತ ಮಹತ್ವದ್ದು. ವೃತ್ತಿ ಬದುಕಿನಲ್ಲಿ ಬಹಳ ನಿರೀಕ್ಷೆ ಇಟ್ಟುಕೊಂಡು ದೇಶದಾದ್ಯಂತ ಸಂಚರಿಸಿ ಪ್ರಚಾರ ಮಾಡಿರುವ ಚಿತ್ರ 'ದಸರಾ'. ಮೈಸೂರು ದಸರಾಕ್ಕೆ ಜನಪ್ರಿಯ. ಕರುನಾಡಿಗೆ ಈ ಹಬ್ಬದೊಂದಿಗೆ ವಿಶೇಷ ನಂಟಿದೆ. ಹೀಗಾಗಿ ತೆಲುಗು ಜೊತೆ ಕನ್ನಡದಲ್ಲಿಯೂ ಚಿತ್ರ ಬಿಡುಗಡೆಯಾಗುತ್ತಿದೆ' ಎನ್ನುತ್ತಾರೆ ನಾನಿ.

'ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ಸಂಹಾರ ಮಾಡುವುದೇ ದಸರಾ ಹಬ್ಬದ ವಿಶೇಷ. ತೆಲಂಗಾಣದ ಗ್ರಾಮೀಣ ಭಾಗದಲ್ಲಿ ಈ ಹಬ್ಬವನ್ನು ಅತ್ಯಂತ ಸಂಭ್ರಮದಿಂದ ಅದ್ದೂರಿಯಾಗಿ ಆಚರಿಸುತ್ತಾರೆ. ಇದೊಂದು ಸಂಪೂರ್ಣ ಹಳ್ಳಿಗಾಡಿನ ಕಥೆ. ಅಲ್ಲಿನ ಜನ ಹೇಗೆ ದಸರಾ ಆಚರಿಸುತ್ತಾರೆ. ಅದರ ಹಿಂದಿನ ಸಂಭ್ರಮ, ಸಿದ್ಧತೆ, ಭಾವನೆಗಳ ಕುರಿತಾಗಿ ಚಿತ್ರ ಮಾತನಾಡುತ್ತದೆ. ಹೀಗಾಗಿ ಚಿತ್ರಕ್ಕೆ 'ದಸರಾ'ಕ್ಕಿಂತ ಉತ್ತಮ ಶೀರ್ಷಿಕೆ ಇರಲಿಲ್ಲ' ಎಂಬುದು ನಾನಿ ಮನದಾಳದ ಮಾತು.

ಚಿತ್ರದ ಕುರಿತು ನಾನಿ ಬಹಳ ಆತ್ಮವಿಶ್ವಾಸ ಹೊಂದಿದ್ದಾರೆ. ಆಂಧ್ರ, ತೆಲಂಗಾಣದ ಗಡಿ ದಾಟಿ ಉತ್ತರದ ದೆಹಲಿಯಲ್ಲಿಯೂ ಚಿತ್ರ ಅಬ್ಬರಿಸಬೇಕು ಎಂಬ ಕನಸು ಹೊಂದಿದ್ದಾರೆ. ಕೆಜಿಎಫ್, ಆರ್‌ಆರ್‌ಆರ್, ಕಾಂತಾರದ ನಂತರ 'ದಸರಾ' ಪ್ಯಾನ್ ಇಂಡಿಯಾ ಪರಿಕಲ್ಪನೆಯ ಚಿತ್ರ ಎಂಬುದು ಅವರ ಮಾತುಗಳಲ್ಲಿ ಪ್ರತಿಧ್ವನಿಸುತಿತ್ತು. ಉತ್ತರದ ರಾಜ್ಯಗಳಲ್ಲಿ ಅಬ್ಬರದ ಪ್ರಚಾರವನ್ನು ನಡೆಸಿದ್ದಾರೆ.

ಮಾಸ್ ಹೀರೋ ಎಂಬುದರ ಜತೆಗೆ ಪ್ರೇಮ ಕಥೆಗಳಿಂದಲೂ ಪ್ರೇಕ್ಷಕರ ಮನಗೆದ್ದಿರುವ ನಾನಿಗೆ ತೆಲುಗಿನಲ್ಲಿ ಬಹುದೊಡ್ಡ ಅಭಿಮಾನಿ ಬಳಗವಿದೆ. 'ಅಲಾ ಮೊದಲೈಂದಿ' ಚಿತ್ರದಿಂದ ಪ್ರಾರಂಭಿಸಿ ಸಾಕಷ್ಟು ಸೂಪರ್ ಹಿಟ್ ಚಿತ್ರಗಳನ್ನು ಕೊಟ್ಟ ನಾನಿ ಅವರಿಗೆ 'ದಸರಾ'ದಲ್ಲಿ ಕೀರ್ತಿ ಸುರೇಶ್ ನಾಯಕಿಯಾಗಿದ್ದಾರೆ. ಈ ಹಿಂದೆ ಈ ಜೋಡಿ 'ನೇನು ಲೋಕಲ್' ಎಂಬ ಹಿಟ್ ಚಿತ್ರ ನೀಡಿತ್ತು.

ಮತ್ತೆ ಜತೆಯಾದ ಮಹಾನಟಿ!: 'ಕೀರ್ತಿ ಸುರೇಶ್ ಈ ಚಿತ್ರದಲ್ಲಿ ವೆನೆಲಾ ಎಂಬ ಪಾತ್ರ ಮಾಡಿದ್ದಾರೆ. ಒಂದು ಗಟ್ಟಿಯಾದ ಪಾತ್ರ. ಹಳ್ಳಿಗಾಡಿನ ಹುಡುಗಿಯಾಗಿ ನಾಯಕನ ಬದುಕಿನಲ್ಲಿ ಪ್ರವೇಶ ಪಡೆಯುವ ಇವರು ಕಥೆಯ ಮುಖ್ಯ ಭಾಗವಾಗಿ ಸಾಗುತ್ತಾರೆ. ಕೀರ್ತಿ ಅದ್ಭುತ ನಟಿ. ಎಂಥ ಪಾತ್ರಕ್ಕಾದರೂ ಜೀವ ತುಂಬಬಲ್ಲವರು. ಕಣ್ಣುಗಳಿಂದಲೇ ಸೆಳೆಯುವ ಕೀರ್ತಿ ಜತೆಗೆ ಮತ್ತೆ ನಟಿಸಿರುವುದು ಖುಷಿಯ ಸಂಗತಿ. ಖಂಡಿತ ಚಿತ್ರ ತೆರೆಗೆ ಬಂದ ನಂತರ ಕೀರ್ತಿ ಪ್ರೇಕ್ಷಕರ ಮನಸಿನಲ್ಲಿ ಉಳಿಯುತ್ತಾರೆ. ಅಂತಹ ಸೆಳೆತದ ಪಾತ್ರ ಅವರದ್ದು' ಎಂಬುದು ನಾನಿ ಅಭಿಮತ.

ಇಲ್ಲಿವರೆಗೆ ನಟಿಸಿದ ಚಿತ್ರಗಳಲ್ಲಿ 'ದಸರಾ'ಚಿತ್ರದ ಅನುಭವ ಅತ್ಯಂತ ಭಿನ್ನ. ಇದೊಂಥರ ಕನಸಿನ ಸಿನಿಮಾ. ಹೀಗಾಗಿ ಚಿತ್ರೀಕರಣ ಬಹಳ ಬಿಗಿಯಾಗಿತ್ತು. ಹಗಲು–ರಾತ್ರಿ ಲೆಕ್ಕಿಸದೆ ಈ ಚಿತ್ರಕ್ಕಾಗಿ ಕೆಲಸ ಮಾಡಿದ್ದೇವೆ. ಚಿತ್ರದ ಬಹುಭಾಗ ಗಣಿಯಲ್ಲಿ ಚಿತ್ರೀಕರಣಗೊಂಡಿದೆ ಎಂದ ಅವರು, 'ಕೆಜಿಎಫ್ ರೀತಿಯೇ ಚಿನ್ನದ ಗಣಿಯ ಸುತ್ತ ಹೆಣೆದಿರುವ ಕಥೆಯಾ ಎಂಬ ಪ್ರಶ್ನೆಗೆ ಚಿತ್ರದಲ್ಲಿಯೇ ನೋಡಿ' ಎಂಬ ನಾಜೂಕಿನ ಉತ್ತರ ನೀಡಿದರು. ❖

ರಾಮಾಚಾರಿಯ 2ನೇ ಅವತಾರ!

ಪ್ರಜಾವಾಣಿ ನೋಡಿಯೊ **ಸಿನಿಮಾತು** ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

'ರಾಮಾಚಾರಿ' ನೆನಪಾಗುವುದು ವಿಷ್ಣುವರ್ಧನ್ ಅವರ ನಾಗರಹಾವು ಚಿತ್ರದಿಂದ. ಬಳಿಕ ಕ್ರೇಜಿಸ್ಟಾರ್ ರವಿಚಂದ್ರನ್ 'ರಾಮಾಚಾರಿ'ಯಾದರು. ನಟ ಯಶ್ 'ಮಿಸ್ಟರ್ ಆಂಡ್ ಮಿಸೆಸ್ ರಾಮಚಾರಿ'ಯಲ್ಲಿ ಕಂಡರು. 'ರಾಮಾಚಾರಿ 2.0' ಏಪ್ರಿಲ್ 7ರಂದು ತೆರೆ ಮೇಲೆ ಅವತರಿಸಲಿದ್ದಾನೆ. ಈ ಬಗ್ಗೆ ನಟ, ನಿರ್ದೇಶಕ ತೇಜ್ ಮಾತನಾಡಿದ್ದಾರೆ.

ವಿನಾಯಕ ಕೆ.ಎಸ್.

ಕೌಸ್ತುಭಮಣಿ, ತೇಜ್

- **'ರಾಮಾಚಾರಿ 2.0' ಎಂಬ ಶೀರ್ಷಿಕೆಯನ್ನೇ ಏಕೆ ಆಯ್ಕೆ ಮಾಡಿಕೊಂಡಿದ್ದೀರಿ?**

ಇಲ್ಲಿ ತಾತನ ಹೆಸರು ರಾಮಾಚಾರಿ. ಕಥೆಯ ನಾಯಕ, ರಾಮಾಚಾರಿಯ ಮೊಮ್ಮಗ ಸಿಟ್ಟಿನಿಂದ ಕೂಡಿರುವ (ಆ್ಯಂಗ್ರಿ ಯಂಗ್ ಮ್ಯಾನ್) ಯುವಕ. ಆತ ಬುದ್ಧಿವಂತನಾಗಿದ್ದರೆ ಹೇಗಿರುತ್ತದೆ ಎಂಬುದೇ ಕಥೆ. ಭವಿಷ್ಯವನ್ನು ಹ್ಯಾಕ್ ಮಾಡುವ ಮೊಮ್ಮಗ. ತಾತ ಮತ್ತು ಮೊಮ್ಮಗ ನಡುವಿನ ಭಿನ್ನವಾದ ಪಯಣದಲ್ಲಿ ನಾನು ಮೊಮ್ಮಗನ ಪಾತ್ರ ಮಾಡಿದ್ದೇನೆ. ಕರ್ಮದ ಫಲವನ್ನು ಚಿತ್ರದಲ್ಲಿ ಹೇಳಲಾಗಿದೆ. ತಾತ, ಅಪ್ಪನಿಂದ ನಮಗೆ ಭೌತಿಕವಾದ ಆಸ್ತಿ, ಮನೆ, ಅಂತಸ್ತು ಸಿಗುತ್ತದೆ. ಅಜ್ಜ, ಅಪ್ಪ ಮಾಡಿಟ್ಟ ಕರ್ಮವೂ ಅದರ ಜತೆಗೆ ಬರುತ್ತದೆ. ಸುಮಾರು ಜನ ಈ ಶೀರ್ಷಿಕೆಗೆ ಅರ್ಜಿ ಹಾಕಿದ್ದರು. ಆದರೆ ಅಂತಿಮವಾಗಿ ನನಗೆ ಸಿಕ್ಕಿದ್ದು ನನ್ನ ಪುಣ್ಯ.

- **ಕನ್ನಡದ ಬಹುತೇಕ ಚಿತ್ರಗಳಿಗೆ ಜನವೇ ಬಾರದ ಹೊತ್ತಿನಲ್ಲಿ ಈ ಚಿತ್ರದ ಕುರಿತು ಎಷ್ಟು ನಿರೀಕ್ಷೆಯಿದೆ?**

ನನ್ನ ಹಿಂದಿನ ರಿವೈಂಡ್ ಆರ್ಥಿಕವಾಗಿ ಉತ್ತಮ ಗಳಿಕೆ ಕಂಡಿದೆ. ಚಿತ್ರಮಂದಿರಲ್ಲಿಯೂ ತಕ್ಕಮಟ್ಟಿನ ಯಶಸ್ಸು ಸಾಧಿಸಿತ್ತು. ಚಿತ್ರದ ಎಲ್ಲ ಹಕ್ಕುಗಳೂ ಮಾರಾಟವಾಗಿವೆ. ಅದರ ಆತ್ಮವಿಶ್ವಾಸದಿಂದಲೇ ರಾಮಾಚಾರಿ 2.0 ಚಿತ್ರ ಮಾಡಿದ್ದೇನೆ. ಒಳ್ಳೆ ಕಂಟೆಂಟ್ ಜತೆಗೆ ಕಮರ್ಷಿಯಲ್ ಟಚ್ ಹೊಂದಿರುವ ಸಿನಿಮಾ. ಸೈನ್ಸ್ ಫಿಕ್ಷನ್‌ಗೆ ಮಾಸ್ ಟಚ್ ನೀಡಿದ್ದೇನೆ. ನಾವು ಪೂರ್ವಜನ್ಮದ, ನಮಗಿಂತ ಮೊದಲಿನ ತಲೆಮಾರಿನ ಕರ್ಮ ನಮ್ಮೊಂದಿಗೆ ಬರುತ್ತದೆ ಎಂದು ನಂಬುತ್ತೇವೆ. ಅದರ ಕಥೆಯನ್ನೇ ಇಲ್ಲಿ ಹೇಳುವ ಪ್ರಯತ್ನ ಮಾಡಿದ್ದೇನೆ.

- **ರಾಘವೇಂದ್ರ ರಾಜಕುಮಾರ್ ಅವರ ಪಾತ್ರವೇನು?**

ರಾಘಣ್ಣ ನಾಯಕನ ತಂದೆಯ ಪಾತ್ರದಲ್ಲಿ ನಟಿಸಿದ್ದಾರೆ. ಒಂದು ಭಿನ್ನವಾದ ಪಾತ್ರ. ತಾತ ಮತ್ತು ಮೊಮ್ಮಗನ ನಡುವೆ ನಿಲ್ಲುವ ತಂದೆ ಪ್ರೇಕ್ಷಕರಿಗೆ ಬೇರೆಯದೇ ಕಥೆಯನ್ನು ಹೇಳುತ್ತಾರೆ. ರಾಜ್‌ಕುಮಾರ್ ಕಾಲದಿಂದ, ಶಂಕರ್‌ನಾಗ್ ಯುಗದಿಂದ ಇಲ್ಲಿತನಕ ಬಹುತೇಕ ಹೊಸ ಪ್ರಯತ್ನಗಳು ಬಂದಿದ್ದು ಕನ್ನಡದಲ್ಲಿ.

- **'ಗಾಡ್' ಸಿನಿಮಾ ಬಗ್ಗೆ?**

ಇದೇ ತಿಂಗಳಿನಿಂದ 'ಗಾಡ್' ಚಿತ್ರೀಕರಣ ಪ್ರಾರಂಭವಾಗುತ್ತದೆ. ಇದೊಂದು ಪ್ಯಾನ್ ಇಂಡಿಯಾ ಸಿನಿಮಾ. ಇದರಲ್ಲಿಯೂ ರಾಘವೇಂದ್ರ ರಾಜ್‌ಕುಮಾರ್ ಮಹತ್ವದ ಪಾತ್ರ ಮಾಡಿದ್ದಾರೆ. ಈ ಚಿತ್ರದ ಬಳಿಕ 'ಆಟೋರಾಜ ರಿಟರ್ನ್ಸ್' ಎಂಬ ಸಿನಿಮಾ ಮಾಡುತ್ತಿರುವೆ. 'ಸನ್ ಆಫ್ ಆಟೋರಾಜ' ಎಂಬ ಅಡಿಬರಹ ಈ ಚಿತ್ರಕ್ಕಿದೆ. ಆಟೋರಾಜ ತೀರಿಕೊಳ್ಳುತ್ತಾರೆ. ಅಮೆರಿಕದಲ್ಲಿ ಕೆಲಸ ಮಾಡಿ ಭಾರತಕ್ಕೆ ವಾಪಸ್ ಬರುವ ಅವರ ಮಗ ಹೇಗೆ ಭ್ರಷ್ಟಾಚಾರದ ವಿರುದ್ಧ ಹೋರಾಡುತ್ತಾನೆ ಎಂಬುದೇ ಇದರ ಕಥೆ. ಪೊಲಿಟಿಕಲ್ ಥ್ರಿಲ್ಲರ್ ಮಾಸ್ ಸಿನಿಮಾವಿದು. ಈ ಚಿತ್ರವನ್ನು ಶಂಕರ್‌ನಾಗ್ ಅವರಿಗೆ ಅರ್ಪಣೆ ಮಾಡಿದ್ದೇನೆ.

- **ನಿಮ್ಮ ಸಿನಿಮಾಗಳಿಗೆ ನೀವೇ ನಾಯಕ, ನಿರ್ದೇಶಕ, ನಿರ್ಮಾಪಕ ಏಕೆ?**

ಮೊದಲನೆಯದಾಗಿ ಬೇರೆ ಉತ್ತಮ ನಿರ್ದೇಶಕರು ನನ್ನನ್ನು ಗುರುತಿಸಿಲ್ಲ. ರಿವೈಂಡ್ ಸಿನಿಮಾದಲ್ಲಿ ಅಪ್ಪನ ಪಾತ್ರ ಮಾಡಿದ್ದೆ. 'ರಾಮಾಚಾರಿ'ಯಲ್ಲಿ ಲವರ್ ಬಾಯ್, ಹಳ್ಳಿ ಹುಡುಗ. ಆದರೆ 'ಗಾಡ್' ಸಿನಿಮಾದಲ್ಲಿ ನನ್ನದು ನಿರ್ದೇಶನದ ಜತೆಗೆ ವಿಲನ್ ಪಾತ್ರ. ಎರಡನೆಯದಾಗಿ ಇಲ್ಲಿವರೆಗೆ ಗಳಿಸಿದ ಬ್ರ್ಯಾಂಡ್ ಕಳೆದುಕೊಳ್ಳಬಾರದೆಂಬ ಎಚ್ಚರಿಕೆಯಿಂದ ನನ್ನ ಸಿನಿಮಾ ನಾನೇ ಮಾಡಿಕೊಳ್ಳುತ್ತೇನೆ. ನನ್ನ ನಿರೀಕ್ಷೆಗೆ ತಕ್ಕ ಕಥೆ ಸಿಕ್ಕರೆ ಬೇರೆಯವರ ಜತೆ ಸಿನಿಮಾ ಮಾಡುವೆ. ಸದ್ಯ ಒಂದು ತಮಿಳು ಸಿನಿಮಾ ಒಪ್ಪಿಕೊಂಡಿದ್ದೇನೆ.

- **'ರಾಮಾಚಾರಿ 2.0' ಚಿತ್ರದಿಂದ ಪ್ರೇಕ್ಷಕ ಏನನ್ನು ನಿರೀಕ್ಷಿಸಬಹುದು?**

ಒಂದು ಮನೋರಂಜನಾತ್ಮಕ ಚಿತ್ರ. ಒಳ್ಳೆಯದನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಕೆಟ್ಟದ್ದನ್ನು ಮಾಡಿದರೂ ಕರ್ಮ ಫಲ ಕಾಡುತ್ತದೆ ಎಂಬ ಗಟ್ಟಿಯಾದ ಸಂದೇಶವಿದೆ. ಎಲ್ಲಕ್ಕಿಂತ ಹೆಚ್ಚಾಗಿ ರಾಮಾಚಾರಿ ಎಂಬ ಶೀರ್ಷಿಕೆಗೆ ಸಾಕಷ್ಟು ಅಭಿಮಾನಿಗಳಿದ್ದಾರೆ. ಜನರ ಪ್ರೀತಿಯಿದೆ. ಹೀಗಾಗಿ ಚಿತ್ರಮಂದಿರದಲ್ಲಿ ಉತ್ತಮ ಆರಂಭ ಸಿಗಬಹುದೆಂಬ ನಂಬಿಕೆ ಇದೆ.

- **ಚಿತ್ರದಲ್ಲಿನ ಇತರ ಪಾತ್ರವರ್ಗದ ಕುರಿತು?**

ರಾಘವೇಂದ್ರ ರಾಜ್‌ಕುಮಾರ್ ಚಿತ್ರದ ಪ್ರಮುಖ ಆಕರ್ಷಣೆ. ಶ್ರೀರಸ್ತು ಶುಭಮಸ್ತು' ಧಾರಾವಾಹಿ ನಾಯಕಿ ಚಂದನಾ ಅವರು ಈ ಸಿನಿಮಾದಲ್ಲಿ ನಟಿಸುತ್ತಿದ್ದಾರೆ. 'ನನ್ನರಸಿ ರಾಧೆ' ಧಾರಾವಾಹಿ ನಟಿ ಕೌಸ್ತುಭ ಮಣಿ ಅವರು ಕೂಡ ಈ ಸಿನಿಮಾದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ❖

ತೇಜ್
ಚಿತ್ರ: ಕೆ.ಎನ್. ನಾಗೇಶ್ ಕುಮಾರ್

ಮನೆಯೊಳಗೆ 'ರಾಣಿ'ವಾಸ

ಕಿರುತೆರೆ

ಮನೆಯೊಳಗೆ 'ರಾಣಿ' ಬರುತ್ತಿದ್ದಾಳೆ. ಏಪ್ರಿಲ್ 3ರಿಂದ ಸೋಮವಾರದಿಂದ ಶನಿವಾರದವರೆಗೆ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಪ್ರತಿದಿನ ಸಂಜೆ 6.30ಕ್ಕೆ 'ರಾಣಿ' ಹೊಸ ಧಾರಾವಾಹಿ ಪ್ರಸಾರವಾಗಲಿದೆ. ರಾಮ್‌ಜೀ ಅವರು ಈ ಧಾರಾವಾಹಿಗೆ ಕಥೆ ಬರೆದು ನಿರ್ಮಾಣ ಮಾಡಿದ್ದಾರೆ.

'ರಾಣಿ' ಹೇಗಿದ್ದಾಳೆ?

'ಒಂದಿಷ್ಟು ಸಿನಿಮಾಗಳ ಪ್ರೇರಣೆಯಿಂದ ಈ ಕಥೆಗೆ ಪಾತ್ರಗಳನ್ನು ತೆಗೆದುಕೊಳ್ಳಲಾಗಿದೆ. ಈ ಕಥೆಯಲ್ಲಿ ನಾಯಕಿಗೆ ಕಿವಿ ಕೇಳುವುದಿಲ್ಲ. ಹಾಗಾಗಿ ನಾವು ತೆರೆ ಮೇಲೆ ಶ್ರವಣ ದೋಷ ಉಳ್ಳವರಿಗೂ ಅರ್ಥವಾಗುವಂತೆ ಹಾವ-ಭಾವದ ಮೂಲಕ ತಿಳಿಸುವ ಪ್ರಯತ್ನ ಮಾಡಿದ್ದೇವೆ. 'ರಾಣಿ'ಯಲ್ಲಿ ಚೆರ್ರಿ ಪಾತ್ರ ವಿಶೇಷವಾಗಿ ಬರಲಿದೆ' ಎಂದರು ರಾಮ್‌ಜಿ.

ಚಂದನಾ ಎಂ. ರಾವ್ ಈ ಧಾರಾವಾಹಿಯಲ್ಲಿ ರಾಣಿಯ ಪಾತ್ರ ನಿರ್ವಹಿಸಿದ್ದಾರೆ. ಈ ಪಾತ್ರ ಸವಾಲಿನದ್ದಾಗಿತ್ತಂತೆ. ಅವರಿಗೆ ಕುರಿಯ ಜೊತೆ ನಟಿಸಬೇಕು ಎಂದಾಗ ಭಯವೂ ಆಗಿತ್ತಂತೆ. ಆದರೆ, ತಂಡ ಬೆಂಬಲವಾಗಿ ನಿಂತಿತು ಎಂದು ಹೇಳಿದರು ಅವರು. ಪ್ರವೀಣ್ ಅಥರ್ವ ಈ ಧಾರಾವಾಹಿಯಲ್ಲಿ 'ಅರ್ಜುನ' ಹೆಸರಿನ ನಾಯಕ ಪಾತ್ರದಲ್ಲಿದ್ದಾರೆ. ಸ್ವಾತಿ ನಾಯಕನ ತಾಯಿ ಪಾತ್ರದಲ್ಲಿದ್ದಾರೆ. ಮಾನಸಾ ಕೂಡಾ ಮುಖ್ಯಪಾತ್ರವೊಂದರಲ್ಲಿದ್ದಾರೆ.

ಬಾನಿಜಿ ಏಷಿಯಾ ಸಂಸ್ಥೆ ನಿರ್ಮಿಸುತ್ತಿರುವ 'ರಾಣಿ' ಧಾರಾವಾಹಿ ಹಳ್ಳಿಯಲ್ಲಿ ಬೆಳೆದ ಹುಡುಗಿಯ ಕಥೆ ಒಳಗೊಂಡಿದೆ. ತನ್ನೊಂದಿಗಿರುವ ಕುರಿ ಮರಿ ಚೆರ್ರಿ ಅಂದರೆ ರಾಣಿಗೆ ಪಂಚಪ್ರಾಣ. ತಂದೆಯ ಪೋಷಣೆಯಲ್ಲಿ ಬೆಳೆದಿರುವ ಈಕೆ ಚಿಕ್ಕಂದಿನಲ್ಲಿ ಆಕಸ್ಮಿಕವಾಗಿ ನಡೆದ ಘಟನೆಯಿಂದಾಗಿ ತನ್ನ ತಾಯಿ ಹಾಗೂ ಅಣ್ಣನನ್ನು ಕಳೆದುಕೊಂಡಿರುತ್ತಾಳೆ. ಈಕೆಯ ಮಾತು ಸಿಡಿಲಿನಂತೆ. ಮನಸು ಮಾತ್ರ ತಾಯಿಯ ಮಡಿಲಿನಂತೆ. ಇಂತಹ ಮುದ್ದು ಹುಡುಗಿಗೆ ಶ್ರವಣ ದೋಷವಿದೆ. ಈ ನಡುವೆ ಒಂದಿಷ್ಟು ಸೇಡು, ದ್ವೇಷ ಕಾರುವಿಕೆ ಎಲ್ಲವೂ ಇದೆ. ಅಂತೂ ಕುತೂಹಲ ಹಿಡಿದಿಟ್ಟಿದೆ 'ರಾಣಿ'. ❖

ರಾಣಿ
ಚಂದನಾ ಎಂ. ರಾವ್, ಪ್ರವೀಣ್ ಅಥರ್ವ

ವೀಕೆಂಡ್ ವೇದಿಕೆಯಲ್ಲಿ ಪ್ರಭುದೇವ ಹೆಜ್ಜೆಗಳು

ಜೀ ವಾಹಿನಿಯ ಜನಪ್ರಿಯ ಕಾರ್ಯಕ್ರಮ ವೀಕೆಂಡ್ ವಿತ್ ರಮೇಶ್‌ನ ಐದನೇ ಆವೃತ್ತಿಯಲ್ಲಿ ಬಂದಿದ್ದಾರೆ ಡ್ಯಾನ್ಸ್‌ಕಿಂಗ್ ಪ್ರಭುದೇವ. ಈ ಶನಿವಾರ (ಏಪ್ರಿಲ್ 1) ರಾತ್ರಿ 9ಕ್ಕೆ ಈ ವಿಶೇಷ ಕಾರ್ಯಕ್ರಮ ವೀಕ್ಷಕರ ಮನ ತಣಿಸಲಿದೆ.

ಕಾರ್ಯಕ್ರಮದಲ್ಲಿ ಏನೇನಿದೆ?

ಹಳೆಯ ನೆನಪುಗಳು ಮರುಕಳಿಸುವಂತೆ ಮಾಡುವಂತಹ ಆ ಸ್ಥಳಗಳನ್ನು ಪ್ರಭುದೇವ ಅವರ ಸ್ಮೃತಿಪಟಲದಿಂದ ಹೆಕ್ಕಿ ತೆಗೆದಿದ್ದಾರೆ ರಮೇಶ್ ಅರವಿಂದ್. ಸ್ಟಾರ್ ಆಗಿದ್ದರೂ ಯಾವುದೇ ಹಮ್ಮು–ಬಿಮ್ಮುಗಳಿಲ್ಲದ ಸರಳ ವ್ಯಕ್ತಿತ್ವ ಈ ಕಾರ್ಯಕ್ರಮದಲ್ಲಿ ಅನಾವರಣಗೊಂಡಿದೆ.

ಪ್ರಭುದೇವ ಹಾಗೂ ಅವರ ತಂದೆಯವರು 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು' ಎನ್ನುವ ಹಾಡಿಗೆ ಹೆಜ್ಜೆ ಹಾಕಿದ್ದಾರೆ. ಸ್ನೇಹಿತರು, ರಮೇಶ್ ಅರವಿಂದ್ ಅವರ ಜೊತೆಯಲ್ಲಿ ಪ್ರಭುದೇವ ಅವರು 'ಗೋಲಿ ಆಟ', 'ಗಾಲಿ ಆಡಿಸೋ ಆಟ' ಆಡಿದ್ದಾರೆ. ಪ್ರಭುದೇವ ಅವರಿಗೆ ಹಪ್ಪಳ ಅಂದರೆ ತುಂಬ ಇಷ್ಟವಂತೆ. ರುಚಿಯಾದ ತಿಂಡಿಗಳನ್ನು ಹೆಚ್ಚಾಗಿಯೇ ಸವಿಯುತ್ತಾರಂತೆ.

ಪ್ರಭುದೇವ ನಮ್ಮ ನಾಡಿಗೆ ಹೆಚ್ಚು ಹತ್ತಿರವಾಗುತ್ತಾರೆ. ಏಕೆಂದರೆ ಕರ್ನಾಟಕ ಅವರ ತವರುಮನೆ. ಪ್ರಭುದೇವ ಅವರ ತಂದೆ ಕೊರಿಯೋಗ್ರಾಫರ್ ಮೂಗೂರು ಸುಂದರಂ. ಅವರು ಮೈಸೂರಿನ ಟಿ. ನರಸಿಂಹಪುರ ತಾಲ್ಲೂಕಿನ ಮೂಗೂರಿನವರು. ಪ್ರಭುದೇವ ಅವರ ತಾಯಿಯು ಈ ಊರನ್ನು ಇಷ್ಟಪಟ್ಟಿದ್ದಾರೆ. ಹಾಗಾಗಿ ಅಲ್ಲಿಯೇ ಒಂದು ಫಾರ್ಮ್‌ಹೌಸ್ ಮಾಡಲಾಗಿದೆ. ಇಡೀ ಕುಟುಂಬ ವರ್ಷಕ್ಕೆ ಮೂರು ಬಾರಿ ಅಲ್ಲಿಗೆ ಭೇಟಿ ಕೊಡುತ್ತಿದೆ. ಪ್ರತಿ ಸಲ ಊರಿಗೆ ಬಂದಾಗ ಪ್ರಭುದೇವ ಅವರು ಎಲ್ಲ ಸ್ಟಾರ್‌ಪಟ್ಟವನ್ನು ಪಕ್ಕಕ್ಕಿಟ್ಟು ಅಲ್ಲಿನ ಹಳ್ಳಿ ಮಕ್ಕಳ ಜೊತೆ ಮಗುವಾಗಿ ಕ್ರಿಕೆಟ್ ಆಡುತ್ತಾರೆ. ಸ್ನೇಹಿತರ ಜೊತೆಗೂ ಹೀಗೆಯೇ ಬೆರೆಯುತ್ತಾರೆ.

ತೆಲುಗಿನ ಮೆಗಾಸ್ಟಾರ್ ಚಿರಂಜೀವಿ ಅವರಿಗೆ ಕೊರಿಯೊಗ್ರಫಿ ಮಾಡಿದ ಅಗ್ಗಳಿಕೆ ಅವರದ್ದು. ಮುಂದೆ 'H2o' ಸಿನಿಮಾ ಮೂಲಕ ಪ್ರಭುದೇವ ಅವರು ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟರು. ಆಮೇಲೆ ಅವರು 'ಮನಸೆಲ್ಲಾ ನೀನೆ', '123' ಸಿನಿಮಾಗಳಲ್ಲಿ ನಟಿಸಿದರು. ಪುನೀತ್ ರಾಜ್‌ಕುಮಾರ್ ಅವರ ಜೊತೆ 'ಲಕ್ಕಿ ಮ್ಯಾನ್' ಸಿನಿಮಾದಲ್ಲಿ ಪ್ರಭುದೇವ ಅವರು ಭರ್ಜರಿಯಾಗಿ ಹೆಜ್ಜೆ ಹಾಕಿದ್ದರು. ಪ್ರಸ್ತುತ ಪ್ರಭುದೇವ ಅವರು 'ಕರಟಕ ದಮನಕ' ಎನ್ನುವ ಚಿತ್ರದಲ್ಲಿ ಡಾ.ಶಿವರಾಜ್‌ಕುಮಾರ್ ಜೊತೆಯಲ್ಲಿ ನಟಿಸುತ್ತಿದ್ದು, ಯೋಗರಾಜ್ ಭಟ್ ಅವರು ಈ ಚಿತ್ರಕ್ಕೆ ನಿರ್ದೇಶನ ಮಾಡುತ್ತಿದ್ದಾರೆ.

36 ವರ್ಷಗಳಲ್ಲಿ 100ಕ್ಕೂ ಅಧಿಕ ಸಿನಿಮಾಗಳಿಗೆ ನೃತ್ಯನಿರ್ದೇಶನ ಮಾಡಿರುವ ಪ್ರಭುದೇವ ಅವರು 61 ಚಿತ್ರಗಳಲ್ಲಿ ನಟಿಸಿದ್ದಾರೆ, 15 ಸಿನಿಮಾಗಳನ್ನು ನಿರ್ದೇಶಿಸಿದ್ದಾರೆ. 3 ಸಿನಿಮಾಗಳ ನಿರ್ಮಾಣ ಮಾಡಿದ್ದಾರೆ. ಚಿರಂಜೀವಿ, ರಜನಿಕಾಂತ್, ವಿಜಯ್, ಸಲ್ಮಾನ್ ಖಾನ್, ಶಾರುಖ್ ಖಾನ್, ಸಂಜಯ್ ದತ್, ಅಕ್ಷಯ್ ಕುಮಾರ್ ಮುಂತಾದ ಸ್ಟಾರ್ ನಟರಿಗೆ ನಿರ್ದೇಶನ ಮಾಡಿದ ಖ್ಯಾತಿ ಪ್ರಭುದೇವ ಅವರದ್ದು. ಪ್ರಭುದೇವ ಅವರಿಗೆ 'ಪದ್ಮಶ್ರೀ' ಜೊತೆಗೆ 2 ರಾಷ್ಟ್ರ ಪ್ರಶಸ್ತಿ ಲಭಿಸಿವೆ.

ಇನ್ನಷ್ಟು ತಿಳಿದುಕೊಳ್ಳಬೇಕೇ? ತಪ್ಪದೇ ಜೀ ಕನ್ನಡದ ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮ ನೋಡಿ. ಪ್ರತಿ ಶನಿವಾರ ಮತ್ತು ಭಾನುವಾರ ರಾತ್ರಿ 9ಕ್ಕೆ ಪ್ರಸಾರವಾಗುತ್ತಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್ ❖

ವೀಕೆಂಡ್ ವಿತ್ ರಮೇಶ್ ಕಾರ್ಯಕ್ರಮದಲ್ಲಿ ರಮೇಶ್ ಅರವಿಂದ್, ಪ್ರಭುದೇವ

ಪರಿಚಯ ಟೀಸರ್‌ನಲ್ಲಿ ಅಬ್ಬರಿಸಿದ 'ಲಂಕಾಸುರ'

ಲಂಕಾಸುರ
ವಿನೋದ್ ಪ್ರಭಾಕರ್

'ಲಂಕಾಸುರ' ಪರಿಚಯಾತ್ಮಕ ಟೀಸರ್‌ನಲ್ಲಿ ಭರ್ಜರಿಯಾಗಿ ಅಬ್ಬರಿಸಿದ್ದಾನೆ. ಅಂದಹಾಗೆ ಈ ಚಿತ್ರ ಟೈಗರ್ ಪ್ರಭಾಕರ್ ಅವರ ಪುತ್ರ ವಿನೋದ್ ಪ್ರಭಾಕರ್ ನಾಯಕ ನಟನೆಯದ್ದು. ನಾಯಕನ ಪರಿಚಯದ ದೃಶ್ಯ ಟೀಸರ್‌ನಲ್ಲಿದೆ. ಹೊಡೆದಾಟ, ಬಡಿದಾಟ ಸ್ವಲ್ಪ ಹೆಚ್ಚೇ ಅನಿಸುವಷ್ಟಿದೆ. ಇಡೀ ಚಿತ್ರದ ನೋಟವನ್ನು ಕಟ್ಟಿಕೊಟ್ಟಿದೆ. ದೇವರಾಜ್, ಲೂಸ್ ಮಾದ ಯೋಗಿ, ಹನುಮಂತೇಗೌಡ ಮತ್ತಿತರರು ಕಾಣಿಸಿಕೊಂಡಿದ್ದಾರೆ.

ಇಂದು (ಮಾರ್ಚ್ 30) ಟೈಗರ್ ಪ್ರಭಾಕರ್ ಅವರ ಹುಟ್ಟುಹಬ್ಬ. ಆ ದಿನದಂದೇ ವಿನೋದ್ ಪ್ರಭಾಕರ್ ಅವರ ನಿರ್ಮಾಣ ಸಂಸ್ಥೆ ಟೈಗರ್ ಟಾಕೀಸ್ ಈ ಟೀಸರನ್ನು ಬಿಡುಗಡೆ ಮಾಡಿದೆ. ಟೈಗರ್ ಟಾಕೀಸ್ ನಿರ್ಮಾಣದ ಮೊದಲ ಚಿತ್ರವಿದು.

'ನಾವು ಈ ಚಿತ್ರ ಪ್ರಾರಂಭಿಸಿದ ದಿನದಿಂದಲೂ ನಮಗೆ ನೀವು ನೀಡುತ್ತಿರುವ ಪ್ರೋತ್ಸಾಹಕ್ಕೆ ನಾವು ಚಿರಋಣಿ. ನಮಗೆ ನಿಮ್ಮ ಬೆಂಬಲ ಸದಾ ಹೀಗೆ ಇರಲಿ' ಎಂದು ವಿನೋದ್ ಪ್ರಭಾಕರ್ ಮತ್ತು ಅವರ ಪತ್ನಿ ನಿಶಾ ವಿನೋದ್ ಪ್ರಭಾಕರ್ ಕೋರಿದ್ದಾರೆ.

ಅನುಭವಿ ಕಲಾವಿದರ ಅಭಿನಯ ಹಾಗೂ ಉತ್ತಮ ತಂತ್ರಜ್ಞರ ಕಾರ್ಯವೈಖರಿಯಲ್ಲಿ 'ಲಂಕಾಸುರ' ಚಿತ್ರ ಅದ್ದೂರಿಯಾಗಿ ಮೂಡಿಬಂದಿದೆ ಎಂದಿದ್ದಾರೆ ವಿನೋದ್. ❖

ಸುಭಾಷಿತ
ಮೂರ್ಖರು ಅದೃಷ್ಟದ ದಿನಕ್ಕಾಗಿ ಕಾಯುತ್ತಾರೆ, ಆದರೆ ಒಬ್ಬ ಶ್ರಮಜೀವಿಗೆ ಪ್ರತಿದಿನವೂ ಅದೃಷ್ಟದ ದಿನವೇ ಆಗಿರುತ್ತದೆ. **–ಗೌತಮ ಬುದ್ಧ**

ತಾಪಮಾನ ಏರಿಕೆ ತಡೆಗೆ ಪರಿಣಾಮಕಾರಿ ಕ್ರಮ ಜರೂರು

ಹವಾಮಾನ ಬದಲಾವಣೆಗೆ ಸಂಬಂಧಿಸಿದ 'ಇಂಟರ್‌ಗವರ್ನಮೆಂಟಲ್ ಸಮಿತಿಯು (ಐಪಿಸಿಸಿ) ಆರನೇ ಹವಾಮಾನ ವಿಶ್ಲೇಷಣೆ ಸರಣಿಯ ಕೊನೆಯ ವರದಿಯನ್ನು ಕಳೆದ ವಾರ ಬಿಡುಗಡೆ ಮಾಡಿದೆ. ಈ ಹಿಂದೆ ನೀಡಿದ್ದ ಮುನ್ನೆಚ್ಚರಿಕೆಗಳನ್ನು ಪುನರುಚ್ಚರಿಸಿದ್ದಲ್ಲದೆ, ಜೀವಸಂಕುಲದ ಮನೆಬಾಗಿಲಿಗೆ ಬಂದು ನಿಂತಿರುವ ಹವಾಮಾನ ಮಹಾದುರಂತಕ್ಕೆ ಸಂಬಂಧಿಸಿ ಹೊಸ ಎಚ್ಚರಿಕೆಗಳನ್ನೂ ನೀಡಿದೆ. ಐದುವರ್ಷದ ಅವಧಿಯ ಅಧ್ಯಯನ ಆಧರಿಸಿ ಎನಿಸಿರುವ ಹವಾಮಾನ ಮಹಾದುರಂತದತ್ತ ಜಗತ್ತು ಸಾಗುವ ವೇಗವನ್ನು ಕಡಿಮೆಗೊಳಿಸಲು ಈಗ ಕೈಗೊಂಡಿರುವ ಕ್ರಮಗಳು ಏನೇನೂ ಸಾಲುವುದಿಲ್ಲ ಎಂದು ಈ ಹಿಂದೆ ನೀಡಿದ್ದ ವರದಿಗಳಲ್ಲಿ ಹೇಳಲಾಗಿತ್ತು. ಈ ಶತಮಾನದ ಕೊನೆಯ ಹೊತ್ತಿಗೆ ಉಷ್ಣತೆಯು ಕೈಗಾರಿಕೀಕರಣಪೂರ್ವ ಯುಗದ ಉಷ್ಣತೆಗೆ ಹೋಲಿಸಿದರೆ 1.5 ಡಿಗ್ರಿ ಸೆಲ್ಸಿಯಸ್‌ನಷ್ಟು ಮಾತ್ರ ಏರಿಕೆಯಾಗಬೇಕು ಎಂಬ ಗುರಿ ಸಾಧಿಸುವುದು ಸಾಧ್ಯವಿಲ್ಲ ಎಂದು ಐಪಿಸಿಸಿ 2018ರಲ್ಲಿ ಹೇಳಿತ್ತು. ಏಕೆಂದರೆ, ಇಂಗಾಲ ಹೊರಸೂಸುವಿಕೆಯ ಪ್ರಮಾಣವನ್ನು 2030ರ ಹೊತ್ತಿಗೆ 2010ರಲ್ಲಿ ಇದ್ದುದರ ಅರ್ಧಕ್ಕೆ ಇಳಿಸುವ ದಿಸೆಯಲ್ಲಿ ಕೆಲಸ ಮಾಡಲು ಜಗತ್ತು ವಿಫಲವಾಗಿದೆ. ಹವಾಮಾನ ಬದಲಾವಣೆಯನ್ನು ತಡೆಯುವುದಕ್ಕಾಗಿ ವಿವಿಧ ಕ್ರಮಗಳನ್ನು ಕೈಗೊಳ್ಳುವ ಭರವಸೆಯನ್ನು ಹಲವು ದೇಶಗಳು ನೀಡಿವೆ.

ಇಂಗಾಲ ಹೊರಸೂಸುವಿಕೆಯನ್ನು ಕಡಿಮೆಗೊಳಿಸುವ ಪ್ರಯತ್ನವು ಹೆಚ್ಚಿನ ವೇಗ ಪಡೆದುಕೊಳ್ಳಬೇಕು

ಇಂಗಾಲ ಹೊರಸೂಸುವಿಕೆಯನ್ನು ಸಂಪೂರ್ಣ ನಿಲ್ಲಿಸುವುದಾಗಿಯೂ ಕೆಲವು ದೇಶಗಳು ಹೇಳಿವೆ. ಆದರೆ, ಇಂಗಾಲದ ಹೊರಸೂಸುವಿಕೆ ಹೆಚ್ಚುತ್ತಲೇ ಸಾಗಿದೆ. ಜಾಗತಿಕವಾಗಿ 'ಇಂಧನಕ್ಕೆ ಸಂಬಂಧಿಸಿದ ಇಂಗಾಲ ಹೊರಸೂಸುವಿಕೆಯ ಏರಿಕೆಯು 2021ಕ್ಕೆ ಹೋಲಿಸಿದರೆ ಕಡಿಮೆಯಾಗಿದೆ. ಹಾಗಿದ್ದರೂ ಒಟ್ಟು ಪ್ರಮಾಣವು ಅಪಾಯಕಾರಿ ಎನಿಸುವಷ್ಟು ಹೆಚ್ಚು ಇದೆ. ಸರಿಪಡಿಸಲು ಸಾಧ್ಯವಾದ ಮಟ್ಟವನ್ನು ಹವಾಮಾನ ಬಿಕ್ಕಟ್ಟು 2025ರ ಹೊತ್ತಿಗೆ ಮೀರಲಿದೆ ಎಂಬ ಎಚ್ಚರಿಕೆಯನ್ನು ವರದಿಯು ನೀಡಿದೆ. ತಾಪಮಾನ ಏರಿಕೆಯನ್ನು 1.5 ಡಿಗ್ರಿ ಸೆಲ್ಸಿಯಸ್‌ನ ಒಳಗೆ ಇರಿಸಬೇಕಿದ್ದರೆ 2025ರವರೆಗೆ ಇಂಗಾಲ ಹೊರಸೂಸುವಿಕೆಯ ಕಡಿತಗೊಳಿಸುವಿಕೆಯು ಗರಿಷ್ಠ ಪ್ರಮಾಣದಲ್ಲಿ ಇರಬೇಕು ಮತ್ತು ಮುಂದಿನ ಐದು ವರ್ಷಗಳಲ್ಲಿ ಕಡಿತವು ಶೇ 43ರಷ್ಟಿರಬೇಕು. ಇದು ಬಹುತೇಕ ಅಸಾಧ್ಯ ಎಂಬಂತೆ ಕಾಣಿಸುತ್ತಿದೆ. ಹಾಗಾಗಿಯೇ ಇಂಗಾಲ ಹೊರಸೂಸುವಿಕೆಯನ್ನು ಕಡಿಮೆಗೊಳಿಸುವ ಪ್ರಯತ್ನವು ಹೆಚ್ಚಿನ ವೇಗ ಪಡೆದುಕೊಳ್ಳಬೇಕು. ಈ ವಿಚಾರದಲ್ಲಿ ಯಾರಿಗೂ ಭಿನ್ನಮತ ಇಲ್ಲ. ಆದರೆ ಈ ಪ್ರಯತ್ನ ಕಷ್ಟಕರವಾದುದರಿಂದ ಅದಕ್ಕಾಗಿ ಕೆಲಸ ಮಾಡಲು ಯಾರೂ ಸಿದ್ಧರಿಲ್ಲ. ಈ ಕಷ್ಟವನ್ನು ಸಹಿಸಿಕೊಳ್ಳದೇ ಇದ್ದರೆ ಮುಂದಿನ ದಿನಗಳಲ್ಲಿ ಇನ್ನೂ ದೊಡ್ಡ ಕಷ್ಟಕ್ಕೆ ಒಳಗಾಗಬೇಕಾಗುತ್ತದೆ ಎಂಬ ವಿವೇಕವು ಯಾರಲ್ಲಿಯೂ ಕಾಣಿಸುತ್ತಿಲ್ಲ. ದೊಡ್ಡ ವಿಪತ್ತು ಎನ್ನುವಂತಹ ಘಟನೆಗಳು ಈಗಾಗಲೇ ನಡೆಯುವುದು ಸಾಮಾನ್ಯವಾಗಿದೆ. ಇಂತಹ ಘಟನೆಗಳ ಪ್ರತಿಧ್ವನಿಯಾಗಿ ಕಾಣಿಸಿಕೊಳ್ಳುತ್ತಿವೆ. ಜೀವಿಗಳು ಸಾಧ್ಯವಾದಷ್ಟು ಸ್ಥಿತ್ಯಂತರ ಹೊಂದುತ್ತಿವೆ. ಈ ಜಗತ್ತು ವಾಲುತ್ತಿದೆ ಎಂಬುದನ್ನು ಮುಂಗಾರು ಋತು, ಬೇಸಿಗೆಯ ಬಿಸಿ ಹೆಚ್ಚಳ, ಚಂಡಮಾರುತ, ಕಾಳ್ಗಿಚ್ಚು, ಬರಗಾಲ, ಪ್ರವಾಹ, ಸಮುದ್ರ ಮಟ್ಟ ಏರಿಕೆ ಮತ್ತು ವಿವಿಧ ರೀತಿಯ ನೈಸರ್ಗಿಕ ವಿಕೋಪಗಳು ಸೂಚಿಸುತ್ತಿವೆ. ಸಮಾಜ, ರಾಜಕಾರಣ, ಅರ್ಥ ವ್ಯವಸ್ಥೆ ಮತ್ತು ಜನಜೀವನದ ಎಲ್ಲ ಆಯಾಮಗಳ ಮೇಲೆ ಉಂಟಾಗುವ ಪರಿಣಾಮವು ಅಪಾರ ಮತ್ತು ಅತ್ಯಂತ ಅಸಹನೀಯವಾದುದು.

ಇಂಗಾಲ ಹೊರಸೂಸುವಿಕೆ ಕಡಿತ ಮಾಡಲು ದೇಶಗಳು ಹಾಕಿಕೊಂಡಿರುವ ಗುರಿಗಳನ್ನು 2030ರ ಬಳಿಕ ಇನ್ನಷ್ಟು ಹೆಚ್ಚಿಸದೇ ಇದ್ದರೆ 2100ನೇ ಇಸವಿಯ ಹೊತ್ತಿಗೆ ಉಷ್ಣತೆಯ ಏರಿಕೆಯು 2.8 ಡಿಗ್ರಿ ಸೆಲ್ಸಿಯಸ್‌ನಷ್ಟಾಗಬಹುದು. ಉಷ್ಣತೆಯಲ್ಲಿ 3.2 ಡಿಗ್ರಿ ಸೆಲ್ಸಿಯಸ್ ಏರಿಕೆ ಉಂಟಾಗಬಹುದು ಎಂಬುದನ್ನೂ ತಳ್ಳಿಹಾಕುವಂತಿಲ್ಲ. ಅಳವಡಿಕೆ ಮತ್ತು ತಡೆ ಎರಡಕ್ಕೂ ಹಣ ಹೊಂದಿಸುವುದು ಬಹಳ ಮುಖ್ಯ; ತಾಂತ್ರಿಕ ಕ್ರಮಗಳು ನಿರ್ಣಾಯಕ. ಹಾಗಾಗಿ, ಈ ವಿಚಾರದಲ್ಲಿ ಶ್ರೀಮಂತ ದೇಶಗಳ ಹೊಣೆಗಾರಿಕೆ ಹೆಚ್ಚು. ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗೆ ಅಭಿವೃದ್ಧಿ ಹೊಂದಿದ ದೇಶಗಳು ಮತ್ತು ಇತರ ಮೂಲಗಳಿಂದ ಹೆಚ್ಚಿನ ಹಣಕಾಸಿನ ನೆರವು ಒದಗಿಸಬೇಕು ಎಂದು ವರದಿಯಲ್ಲಿ ಹೇಳಲಾಗಿದೆ. ಹವಾಮಾನ ಬದಲಾವಣೆಯು ಮಾನವ ಕುಲಕ್ಕೆ ಎದುರಾಗಿರುವ ಅತ್ಯಂತ ಗಂಭೀರವಾದ ಬೆದರಿಕೆಯಾಗಿದೆ. ಹಾಗಿದ್ದರೂ ಅದನ್ನು ತಡೆಯುವುದಕ್ಕೆ ಸಮಂಜಸ ಮತ್ತು ಪರಿಣಾಮಕಾರಿಯಾದ ಕ್ರಮಗಳನ್ನು ಕೈಗೊಂಡಿಲ್ಲ ಎಂಬುದು ದುರದೃಷ್ಟಕರ. ವಿಶ್ವಸಂಸ್ಥೆಯ ಹವಾಮಾನ ಬದಲಾವಣೆ ತಡೆ ಸಮಾವೇಶದ 28ನೇ ಸಭೆಯಲ್ಲಿ ಮುಂದಿನ ಮೌಲ್ಯಮಾಪನವು ನಡೆಯಲಿದೆ. ಅದು ಈ ವರ್ಷ ದುಬೈಯಲ್ಲಿ ನಡೆಯಲಿದೆ. ಈ ಬಾರಿಯ ಸಭೆಯು ಹೆಚ್ಚು ಫಲಪ್ರದವಾದ ಕ್ರಮಗಳಿಗೆ ಸಾಕ್ಷಿಯಾಗಬಹುದು ಎಂಬ ಭರವಸೆ ಇರಿಸಿಕೊಳ್ಳೋಣ.

ಪಕ್ಷಗಳ ನಡುವೆ ವಿಮರ್ಶಾತ್ಮಕ ನೋಟವಿಟ್ಟು ನಾವು ಮಾಡುವ ಆಯ್ಕೆ ಬಹು ಮಹತ್ವದ್ದು

ಪ್ರಜಾತಂತ್ರ ಮತ್ತು ಚುನಾವಣೆ

ವಿಶ್ಲೇಷಣೆ

ರಾಜಾರಾಮ ತೋಳ್ಪಾಡಿ
ನಿತ್ಯಾನಂದ ಬಿ. ಶೆಟ್ಟಿ

ರಾಜ್ಯದಲ್ಲಿ ಚುನಾವಣೆ ಘೋಷಣೆಯಾಗಿದೆ. ಪ್ರಜಾತಂತ್ರದ ಒಂದು ಭಾಗವಾಗಿರುವ ಚುನಾವಣಾ ರಾಜಕೀಯದ ಪ್ರಕ್ರಿಯೆಯನ್ನು ರಣರಂಗವೆಂದೂ ಚುನಾವಣೆಯ ಗೆಲುವಿಗಾಗಿ ರಾಜಕೀಯ ಧುರೀಣರು ಹೆಣೆಯುವ ಯೋಜನೆಯನ್ನು ರಣತಂತ್ರವೆಂದೂ ನಮ್ಮ ಕೆಲವು ಮಾಧ್ಯಮಗಳು ಬಣ್ಣಿಸುತ್ತಿವೆ. ರಾಜಕೀಯ ಪಕ್ಷಗಳು ಚುನಾವಣಾ ರಾಜಕಾರಣದ ಮೂಲಕ ಅಧಿಕಾರ ರಾಜಕಾರಣದ ಪಡಸಾಲೆಗೆ ಕಾಲಿಡುವುದಕ್ಕಾಗಿ ನಡೆಸುವ ರಣತಂತ್ರ- ಪ್ರತಿತಂತ್ರಗಳ ಮಧ್ಯೆ ಪ್ರಜಾತಂತ್ರದ ಕಥೆಯೇನು ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ.

ಪ್ರಜಾತಂತ್ರದ ಕುರಿತು ಇಂದು ನಡೆಯುತ್ತಿರುವ ಚರ್ಚೆಯಲ್ಲಿ, ಅದರ ಸ್ವರೂಪಕ್ಕೆ ಸಂಬಂಧಿಸಿದಂತೆ ಮಹತ್ವದ ವ್ಯತ್ಯಾಸವೊಂದಿದೆ. ಅದೇನೆಂದರೆ, ಒಂದು ತಾತ್ವಿಕ ಚಿಂತನೆಯಾಗಿ ಪ್ರಜಾತಂತ್ರ ಪ್ರತಿನಿಧಿಸುವ ಸ್ವಾತಂತ್ರ್ಯ, ಸಮಾನತೆ, ಸಹೋದರತೆ, ಅಹಿಂಸೆ, ಬಹುತ್ವದಂತಹ ಮೌಲ್ಯಗಳನ್ನು ಪ್ರಜಾತಂತ್ರದ ತಿರುಳು, ಸಾರಸತ್ವ ಎಂದು ಗುರುತಿಸಲಾಗುತ್ತದೆ. ಹಾಗೆಯೇ ಚುನಾವಣೆ- ರಾಜಕೀಯ ಪಕ್ಷಗಳು, ಶಾಸನಸಭೆಯಂತಹ ದಶಮುಖಗಳನ್ನು ಒಳಗೊಂಡ ಅದರ ರಾಜಕೀಯ ರಚನೆಯನ್ನು ಪ್ರಜಾತಂತ್ರದ ಕ್ರಿಯಾಚರಣೆಯ ಭಾಗ ಎಂದು ಪರಿಗಣಿಸಲಾಗುತ್ತದೆ. ಪ್ರಜಾತಂತ್ರದ ಅಂತರಂಗದ ಈ ಮೌಲ್ಯಾತ್ಮಕ ತಿರುಳು ಮತ್ತು ಬಹಿರಂಗದ ಅದರ ಕ್ರಿಯಾಶೀಲ ಅಂಗೋಪಾಂಗಗಳ ನಡುವಿನ ಅರ್ಥಪೂರ್ಣ ಸಮನ್ವಯದಲ್ಲಿ ಪ್ರಜಾತಂತ್ರದ ವಿಶ್ವರೂಪ ದರ್ಶನವಾಗುತ್ತದೆ. ಸುದೀರ್ಘವಾದ, ಸಂಕೀರ್ಣವಾದ ಹಾಗೂ ಅತ್ಯಂತ ಪ್ರಯಾಸದ ಸ್ವಾತಂತ್ರ್ಯ ಹೋರಾಟದ ಮೂಲಕ ನಾವು, ಇಷ್ಟು ಉನ್ನತವಾದ ಪ್ರಜಾತಾಂತ್ರಿಕ ರಾಜಕೀಯ ವ್ಯವಸ್ಥೆಯನ್ನು ನಮ್ಮದನ್ನಾಗಿಸಿಕೊಂಡಿದ್ದೇವೆ.

ಪ್ರಜಾತಂತ್ರದ ಕುರಿತು ಚಿಂತನೆ ನಡೆಸಿದ ಪ್ರಮುಖ ಚಿಂತಕರು, ಪ್ರಜಾತಾಂತ್ರಿಕ ರಾಜಕಾರಣದಲ್ಲಿ ಮೂಲಭೂತ ಪರಿವರ್ತನೆಯನ್ನು ಸಾಧಿಸಬಯಸಿದ ಧೀಮಂತ ನೇತಾರರು ಪ್ರಜಾತಂತ್ರ ಪ್ರತಿನಿಧಿಸುವ ತಾತ್ವಿಕತೆ ಮತ್ತು ಈ ತಾತ್ವಿಕತೆಯನ್ನು ಜಾರಿಗೊಳಿಸುವ ಸಂಘ ಸಂಸ್ಥೆಗಳ ನಡುವೆ ಸಾಮರಸ್ಯ ಬೇಕು ಎಂಬುದನ್ನು ಪ್ರತಿಪಾದಿಸಿದ್ದರು. ಇವುಗಳ ನಡುವೆ ಅಸಮತೋಲನವಾದರೆ ಪ್ರಜಾತಂತ್ರ ಉಳಿಯುವುದಿಲ್ಲ ಎಂಬ ಎಚ್ಚರಿಕೆಯನ್ನೂ ಕೊಟ್ಟಿದ್ದರು. ಹಾಗಾಗಿ ಪ್ರಜಾತಂತ್ರದ ತಾತ್ವಿಕ ಆಶಯಗಳ ಕುರಿತು ಎಚ್ಚರ ಮತ್ತು ಪ್ರಜಾತಂತ್ರದ ಕ್ರಿಯಾಚರಣೆಗಳಲ್ಲಿ ಸಕ್ರಿಯ ಭಾಗವಹಿಸುವಿಕೆ ಇದ್ದಾಗ ಮಾತ್ರ ನಮ್ಮದು ಅರ್ಥಪೂರ್ಣ ಪ್ರಜಾಸತ್ತಾತ್ಮಕ ಸಮಾಜ ಆಗುತ್ತದೆ. ಪ್ರಜಾತಂತ್ರದ ಯಶಸ್ಸಿಗೆ ಒಂದು 'ವಿಚಾರಶೀಲ ಸಾರ್ವಜನಿಕ ವಲಯ' ಇರಲೇಬೇಕು ಎಂಬುದನ್ನು ಪ್ರಜಾತಂತ್ರದ ಸಂಕಥನದಲ್ಲಿ ಮತ್ತೆಮತ್ತೆ ಪ್ರತಿಪಾದಿಸಲಾಗಿದೆ. ಈ ವಿಚಾರಶೀಲ ಸಾರ್ವಜನಿಕ ವಲಯ, ಜನ ಸಮುದಾಯಗಳಲ್ಲಿ ಹಕ್ಕು ಹಾಗೂ ಕರ್ತವ್ಯಗಳ ಕುರಿತು ಸಂವೇದನಾಶೀಲತೆಯನ್ನು ಉದ್ದೀಪಿಸುತ್ತದೆ. ಹಾಗೆಯೇ ಜನಸಮುದಾಯಗಳಲ್ಲಿ ಪ್ರಜಾತಂತ್ರ ಪ್ರತಿನಿಧಿಸುವ ಮೌಲ್ಯಗಳನ್ನು ಬಿತ್ತುವ ಹಾಗೂ ಪ್ರಜಾತಾಂತ್ರಿಕ ಕ್ರಿಯಾಚರಣೆಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿಸುವ ಜವಾಬ್ದಾರಿಯನ್ನೂ ನಿರ್ವಹಿಸುತ್ತದೆ. ಚಿಂತನಶೀಲ ಸಾರ್ವಜನಿಕ ವಲಯ ಎಲ್ಲಿ ಗೈರುಹಾಜರಾಗಿರುತ್ತದೋ ಅಲ್ಲಿ ಪ್ರಜಾತಂತ್ರದ ಆಶಯಗಳಿಗೆ ಧಕ್ಕೆ ಬರುತ್ತದೆ. ಹಾಗೆಯೇ ಪ್ರಜಾತಂತ್ರದ ತತ್ವ ಮತ್ತು ಸತ್ವದ ಅರಿವಿಲ್ಲದೆ ನಡೆಯುವ ಪ್ರಜಾತಾಂತ್ರಿಕ ಕ್ರಿಯಾಚರಣೆಗಳಾದ ಚುನಾವಣೆಗಳು, ರಾಜಕೀಯ ಪಕ್ಷಗಳ ಸೆಣಸಾಟಗಳು, ಶಾಸನಸಭೆ ಕಲಾಪಗಳು ಅಸಂಬದ್ಧ ಪ್ರಲಾಪಗಳಾಗುತ್ತವೆ.

ಪ್ರಜಾತಂತ್ರ ಯಾವಾಗ ತನ್ನ ತಿರುಳನ್ನು ಕಳೆದುಕೊಂಡು, ತೊಗಟೆಯನ್ನಷ್ಟೇ ಉಳಿಸಿಕೊಳ್ಳುತ್ತದೋ ಆಗ ಅದು ಅರ್ಥಹೀನ ಕಟ್ಟುಕಟ್ಟಲೆಯಾಗಿ ರೂಪಾಂತರಗೊಳ್ಳುತ್ತದೆ ಎಂಬ ದುರಂತವನ್ನು ಅನೇಕ ಪ್ರಾಜ್ಞರು ತಮ್ಮ ಮುಂಗಾಣ್ಕೆಯ ಬಲದಿಂದ ಗುರುತಿಸಿದ್ದಾರೆ. ಭಾರತದ ಪ್ರಜಾತಂತ್ರ 'ಬರೀ ಸಂಸದೀಯತೆ'ಯಾಗಿ ತೆಳುಗೊಳ್ಳುತ್ತಿರುವ ಪರಿಯನ್ನು ನಾವು ಈಗ ಕಾಣುತ್ತಿದ್ದೇವೆ. ಭಾರತೀಯ ಪ್ರಜಾತಂತ್ರ 'ಬರೀ ಸಂಸದೀಯತೆ'ಯಾಗುವುದರ ಜೊತೆಗೆ 'ಬಹುಸಂಖ್ಯಾತವಾದ'ವೂ ಆಗಿ ಪರಿವರ್ತನೆಗೊಳ್ಳುತ್ತಿರುವ ವಿಷಮ ಸನ್ನಿವೇಶದಲ್ಲಿದೆ. ಬಹುಸಂಖ್ಯಾತವಾದವು ಪ್ರಜಾತಂತ್ರದ ಬಹುದೊಡ್ಡ ಆಂತರಿಕ ಶತ್ರು. ಈ ಬಹುಸಂಖ್ಯಾತವಾದವೇ ಫ್ಯಾಸೀವಾದವಾಗಿ ಪರಿವರ್ತನೆ ಹೊಂದಿ ಪ್ರಜಾತಂತ್ರದ ಮೌಲಿಕ ತಳಹದಿಯನ್ನು ಧ್ವಂಸಗೊಳಿಸಿದ್ದನ್ನು ನಾವು ಇತಿಹಾಸದಲ್ಲಿ ಗಮನಿಸಿದ್ದೇವೆ.

ಇದನ್ನು ನಮ್ಮ ಕಾಲದಲ್ಲಿ ಎಲ್ಲರಿಗೂ ಮನಗಾಣಿಸುವ ಪ್ರಯತ್ನವನ್ನು ಮಾಡಿದವರು ರಾಹುಲ್ ಗಾಂಧಿ. ಅವರು ತಮ್ಮ 'ಭಾರತ್ ಜೋಡೊ' ಯಾತ್ರೆಯಲ್ಲಿ ಜನಸಾಮಾನ್ಯರು ಮಾತನಾಡುವುದನ್ನು ಆಲಿಸುವ ಮೂಲಕ, ಜನಸಮುದಾಯಗಳ ಭಿನ್ನಭಿನ್ನ ಗುಂಪುಗಳ ಜೊತೆಗೆ ಚರ್ಚಿಸುವ ಮೂಲಕ ಪ್ರಜಾತಂತ್ರದ ತಿರುಳಿಗೆ ಕಸುವು ತುಂಬುವ ಪ್ರಯತ್ನವನ್ನು ಮಾಡಿದರು. ಭಾರತದ ರಾಜಕಾರಣದಲ್ಲಿ ಇದೀಗ ಪ್ರವರ್ಧಮಾನಕ್ಕೆ ಬರುತ್ತಿರುವ ಯುವ ತಲೆಮಾರು ಈ ಬಗೆಯಲ್ಲಿ 'ಕೇಳುವುದನ್ನು ಕಲಿಯುವ' (ಲರ್ನಿಂಗ್ ಟು ಲಿಸನ್) ಪ್ರಕ್ರಿಯೆಯಲ್ಲಿ ತೊಡಗಿರುವುದು ಭಾರತದ ಪ್ರಜಾತಂತ್ರಕ್ಕೆ ಮತ್ತು ಚುನಾವಣಾ ರಾಜಕಾರಣಕ್ಕೆ ಹೊಸ ದಿಕ್ಕು-ದೆಸೆ ನೀಡಬಹುದು.

ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಚುನಾವಣೆ ಎನ್ನುವುದು ನಿರಾಕರಿಸಲಾಗದ ರಾಜಕೀಯ ಕ್ರಿಯಾಚರಣೆ. ಚುನಾವಣೆಗಳ ಮೂಲಕವೇ ಜನಪ್ರತಿನಿಧಿಗಳನ್ನು ಆರಿಸಬೇಕಾಗಿದೆ ಮತ್ತು ಈ ಪ್ರತಿನಿಧಿಗಳು ಜನರ ಹೆಸರಿನಲ್ಲಿ ಆಡಳಿತ ನಡೆಸುತ್ತಾರೆ. ಪ್ರಜಾತಂತ್ರದಲ್ಲಿ ಕಾಲಕಾಲಕ್ಕೆ ನಡೆಯುವ ಚುನಾವಣೆಯ ಮೂಲಕ ಸಂಭವಿಸುವ ಅಧಿಕಾರ ಹಸ್ತಾಂತರದ ಪ್ರಕ್ರಿಯೆಯೇ ರಾಜಕೀಯ ಪರಿವರ್ತನೆಯ ಮೂಲ ಸೆಲೆ.

ಚುನಾವಣೆಗಳು, ಅಧಿಕಾರ ಪಲ್ಲಟದ ಯಾಂತ್ರಿಕ ಚಟುವಟಿಕೆಯಾಗದೆ ಮೂಲಭೂತ ರಾಜಕೀಯ ಪರಿವರ್ತನೆಯ ಪ್ರಕ್ರಿಯೆಯಾಗಬೇಕಾದರೆ ಮತದಾರ ತನ್ನ ಹಕ್ಕು ಹಾಗೂ ಬಾಧ್ಯತೆಗಳನ್ನು ಎಚ್ಚರದಿಂದ ನಿರ್ವಹಿಸಬೇಕು. ಬರೀ ಮತ ಚಲಾವಣೆಗಷ್ಟೇ ಅವನ ಕ್ರಿಯೆ ಸೀಮಿತವಾಗದೆ ತಾನು ಯಾರಿಗೆ ಮತ್ತು ಯಾಕೆ ಮತ ನೀಡುತ್ತಿದ್ದೇನೆ ಎನ್ನುವ ಕುರಿತು ಚಿಂತನೆ ನಡೆಸಬೇಕು. ಇಲ್ಲವಾದರೆ 'ರಾಜಕಾರಣ' ಎಂದು ಕರೆಯಲಾಗುವ ದಂಧೆಯ ರಿಜಿಸ್ಟರ್ಡ್ ಕಂಪನಿಗಳಾಗಿರುವ ನಮ್ಮ ರಾಜಕೀಯ ಪಕ್ಷಗಳು ಅಧಿಕಾರ ಗ್ರಹಣ ಮಾಡುವುದಕ್ಕಾಗಿ ಚುನಾವಣೆ ಎನ್ನುವ ವ್ಯಾಪಾರದಲ್ಲಿ ತೊಡಗುವುದಕ್ಕೂ ಪ್ರಜಾತಂತ್ರ ಎಂದು ನಾವು ಆರಾಧಿಸುವ ಜೀವನಧರ್ಮಕ್ಕೂ ಅರ್ಥಾರ್ಥ ಸಂಬಂಧವೇ ಇಲ್ಲದಂತೆ ಆಗುತ್ತದೆ.

ಸದ್ಯದ ನಮ್ಮ ದೇಶ ಮತ್ತು ಪ್ರದೇಶದ ಸಮಸ್ಯೆ, ಸವಾಲುಗಳ ಬಗೆಗಿನ ವಿಮರ್ಶಾತ್ಮಕ ನೋಟದಲ್ಲಿ ನಾವು ಪಕ್ಷಗಳ ನಡುವೆ ಮಾಡುವ ಆಯ್ಕೆ ಬಹು ಮಹತ್ವದ್ದಾಗಿರುತ್ತದೆ. ಸ್ವಾತಂತ್ರ್ಯ ಹೋರಾಟದ ಮೂಲಕ ಕಷ್ಟಪಟ್ಟು ಗಳಿಸಿಕೊಂಡ ಪ್ರಜಾತಂತ್ರವನ್ನು ಉಳಿಸಿಕೊಳ್ಳುವ ಅಥವಾ ಕಳೆದುಕೊಳ್ಳುವ ನಮ್ಮ ಆಯ್ಕೆಯಾಗಿಯೇ ಇನ್ನು ಮುಂದಿನ ಚುನಾವಣೆಗಳಲ್ಲಿ ನಾವು ಮತ ಚಲಾಯಿಸಬೇಕಾಗಿದೆ. ಯಾವ ಪಕ್ಷದ ಸರ್ಕಾರ ಬೇಕು ಎನ್ನುವುದಕ್ಕಿಂತಲೂ ನಮ್ಮ ಸಮಾಜವು ಪ್ರಜಾಸತ್ತಾತ್ಮಕ ಸಮಾಜವಾಗಿ ಉಳಿಯಬೇಕೇ ಅಥವಾ ಹಿಂಸೆ, ಅಸಹನೆ, ಮತೀಯ ಕ್ರೌರ್ಯಗಳ ಬರ್ಬರ ರಣಭೂಮಿಯಾಗಿ ಉಳಿಯಬೇಕೇ ಎಂಬ ನೇರ ಆಯ್ಕೆಯನ್ನು ಬರಲಿರುವ ಚುನಾವಣೆಗಳು ಜನರಿಗೆ ನೀಡಲಿವೆ.

ಚುನಾವಣೆಯ ಸಂದರ್ಭದಲ್ಲಿ ನಡೆಯುವ ಲೇವಾದೇವಿಗಳು ಎಷ್ಟೇ ಕಲುಷಿತವಾಗಿದ್ದರೂ ಪ್ರಜಾತಾಂತ್ರಿಕ ಸಮಾಜದ ಜವಾಬ್ದಾರಿಯುತ ಸದಸ್ಯರಾಗಿ ನಾವು ನಮ್ಮ ಮತವನ್ನು ಅತ್ಯಂತ ವಿವೇಚನೆಯಿಂದ ಚಲಾಯಿಸಬೇಕಾಗಿದೆ. ಇದರ ಜೊತೆಗೆ, ಮತ ಯಾಚನೆಗಾಗಿ ಬರುವ ಕಾರ್ಯಕರ್ತರಿಗೆ, ಅಭ್ಯರ್ಥಿಗಳಿಗೆ ಮತ್ತು ನೇತಾರರಿಗೆ ಇಂದು ನಮ್ಮೀ ನಾಡು ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕಠಿಣವಾದ ಪ್ರಶ್ನೆಗಳನ್ನು ಕೇಳಬೇಕಾಗಿದೆ. ಅವುಗಳಿಗೆ ಅವರು ನೀಡಬಹುದಾದ ಉತ್ತರಗಳನ್ನು, ಸಮಜಾಯಿಷಿಗಳನ್ನು ಎಚ್ಚರದಿಂದ ಪರಿಶೀಲಿಸಬೇಕಾಗಿದೆ. ಭಾರತೀಯ ಮತದಾರ ಸಿರಿವಂತ ರಾಜಕೀಯ ಪಕ್ಷಗಳ ಪ್ರಚಾರದ ಅಬ್ಬರಕ್ಕೆ ತಲೆದೂಗುವ ಮತಿಹೀನನಲ್ಲ. ಆತ ತನ್ನ ಕ್ಷೇತ್ರ, ಪ್ರದೇಶ, ದೇಶ, ವಿಶ್ವದ ಬಗ್ಗೆ ಅರಿವು ಹಾಗೂ ಕಾಳಜಿಯನ್ನು ಇರಿಸಿಕೊಂಡ ಸಂವೇದನಾಶೀಲ ಪೌರ ಎನ್ನುವ ಅಂಶವನ್ನು ರಾಜಕಾರಣ ನಡೆಸುವವರಿಗೆ ಇನ್ನಾದರೂ ನಾವು ಮನದಟ್ಟು ಮಾಡಬೇಕಾಗಿದೆ.

ಚುರುಮುರಿ

ಜೋಡ್ಸೋದು ಅಂದ್ರೆ...

• ಬಿ.ಎನ್.ಮಲ್ಲೇಶ್

'ಏನೋ ಗುಡ್ಡೆ, ಪ್ಯಾನ್‌ಗೆ ಆಧಾರ್ ಜೋಡಿಸಿದ್ಯಾ? ಆಮೇಲೆ ಪ್ರಾಬ್ಲಂ ಆಗ್ತತಿ ನೋಡು' ಹರಟೆಕಟ್ಟೆಯಲ್ಲಿ ಗುಡ್ಡೆಯನ್ನು ದುಬ್ಬೀರ ಎಚ್ಚರಿಸಿದ.

'ಮಗನ ಸ್ಕೂಲ್ ಫೀಜಿಗೆ ರೊಕ್ಕ ಜೋಡಿಸೋದೇ ಒಜ್ಜಿಯಾಗೇತಿ ನಂಗೆ, ಇವನೊಬ್ಬ... ಆಧಾರಂತೆ, ಪ್ಯಾನಂತೆ...' ಗುಡ್ಡೆ ತಲೆ ಕೊಡವಿದ.

'ನಿನ್ನವು ನೂರಿರ್ತಾವು, ಹಂಗಂತ ರೂಲ್ಸು ಬಿಡಾಕಾಗುತ್ತಾ? ಜೋಡ್ಸೋದು ಅಂದ್ರೆ ಏನಂತ ತಿಳಿದಿದಿ?' ದುಬ್ಬೀರ ರೇಗಿದ.

'ಜೋಡ್ಸೋದು ಅಂದ್ರೆ ನನ್ನಂತ ಮಧ್ಯಮ ವರ್ಗದೋರಿಗೆ ಹಾಲಿಗೆ, ಕರೆಂಟಿಗೆ, ಮನಿ ಬಾಡಿಗೆಗೆ, ಗ್ಯಾಸ್‌ಗೆ ರೊಕ್ಕ ಜೋಡ್ಸೋದು ಅಂತ ಅರ್ಥ. ನೀ ಏನಂತ ತಿಳಿದಿದಿ?' ಗುಡ್ಡೆಗೂ ಸಿಟ್ಟು ಬಂತು.

'ಲೇಯ್ ನಿಂದಿರ್ಲಿ, ದೇಶದ ಬಗ್ಗೆ ಸ್ವಲ್ಪ ಚಿಂತಿ ಮಾಡು. ದೊಡ್ಡೋರು ನದಿ ಜೋಡ್ಸೋಕೆ, ಜಾತಿ- ಧರ್ಮ ಜೋಡ್ಸೋಕೆ, ಭಾರತ ಜೋಡ್ಸೋಕೆ ಎಷ್ಟು ಕಷ್ಟಪಡ್ತಿದಾರೆ, ನೀನು ಜುಜುಬಿ ಆಧಾರ್- ಪ್ಯಾನ್ ಜೋಡ್ಸೋಕೆ ಎಷ್ಟು ಮಾತಾಡ್ತಿಯಲ್ಲಲೆ...' ತೆಪರೇಸಿ ಆಕ್ಷೇಪಿಸಿದ.

'ಮತ್ತೇನ್ ಮಾಡ್ಲಿ? ಜೋಡ್ಸೋಕೆ ರೊಕ್ಕ ಬೇಕಲ್ಲ, ಈಗ ಎರಡು ಸಾವಿರ ಬೇಕು, ನೀವು ಕೊಡ್ತೀರಾ?' ಗುಡ್ಡೆ ಪ್ರಶ್ನೆಗೆ ಯಾರೂ ಪಿಟಕ್ಕನ್ನಲಿಲ್ಲ.

'ಈ ರಾಜಕಾರಣಿಗಳು ಕುಕ್ಕರ್ರು, ಸೀರೆ ಜೊತೆಗೆ ಇದನ್ನೂ ಒಂದು ಜೋಡ್ಸಿ ಕೊಟ್ಟಿದ್ರೆ ಏನ್ ಗಂಟು ಹೋಗ್ತಿತ್ತಾ?' ಪರ್ಮೇಶಿಗೂ ಕೋಪ.

ಅದುವರೆಗೆ ಏನೂ ಮಾತಾಡದೆ ಸುಮ್ಮನೆ ಕೂತಿದ್ದ ಕೊಟ್ರೇಶಿಯನ್ನು ಕಂಡು ತೆಪರೇಸಿ 'ಯಾಕಲೆ ಕೊಟ್ರ ಏನೂ ಮಾತಾಡ್ತಿಲ್ಲ, ಕೈಯಾಗೆ ಏನದು ಪ್ಯಾಕೆಟ್ಟು?' ಎಂದ.

'ಇದಾ? ಸೈಡ್ಸು... ಮಸಾಲ ಶೇಂಗಾ, ಚಿಪ್ಸು'.

'ಅವನ್ಯಾಕೆ ಇಟ್ಕಂಡು ಕುಂತಿದಿ?'

'ಈ ಸೈಡ್ಸ್‌ಗೆ 'ಮೇನ್ಸ್' ಜೋಡಿಸ್ಬೇಕಿತ್ತು... ಏನ್ಮಾಡ್ಲಿ ರೊಕ್ಕಿಲ್ಲ' ಅಂದ.

ಕೊಟ್ರೇಶಿ ಮಾತಿಗೆ, ಕಾವೇರಿದ್ದ ಹರಟೆಕಟ್ಟೆಯಲ್ಲಿ ಒಮ್ಮೆಗೇ ನಗುವಿನ ಅಲೆ ತೇಲಿತು.

ದಿನದ ಟ್ವೀಟ್

ಪ್ರಜಾತಂತ್ರದ ಶಕ್ತಿಗೆ ಸಾಕ್ಷ್ಯ

ಭಾರತದ ಪ್ರಜಾತಂತ್ರದ ಶಕ್ತಿ ಏನೆಂಬುದಕ್ಕೆ, ಮೋದಿ ಅವರ ಟೀಕಾಕಾರರು ಪರಿಣಾಮಗಳ ಭಯ ಇಲ್ಲದೆ ಮೋದಿ ಅವರ ಮೇಲೆ ವಾಗ್ದಾಳಿ ನಡೆಸುವುದಕ್ಕಿಂತ ಹೆಚ್ಚಿನ ಸಾಕ್ಷ್ಯ ಬೇಕಿಲ್ಲ. ಟ್ರಂಪ್ ಅಮೆರಿಕದ ಅಧ್ಯಕ್ಷರಾಗಿದ್ದಾಗ ಅವರು 'ಸರ್ವಾಧಿಕಾರಿ ಆಗುತ್ತಿದ್ದಾರೆ' ಎಂದು ಅಲ್ಲಿನ ಟೀಕಾಕಾರರು ಹೇಳುತ್ತಿದ್ದ ರೀತಿಯಲ್ಲೇ ಮೋದಿ ಅವರ ಟೀಕಾಕಾರರು ತಮ್ಮ ಮಿತಿಗಳನ್ನು ಮೀರುತ್ತಾರೆ, ಅವರಿಗೆ 'ಸರ್ವಾಧಿಕಾರಿ' ಎಂಬ ಹಣೆಪಟ್ಟಿ ಅಂಟಿಸುತ್ತಾರೆ.

ಬ್ರಹ್ಮ ಚೆಲ್ಲಾನಿ, ಲೇಖಕ

ಕಿಡಿನುಡಿ

ಭಾರತದ ರಾಜಕೀಯದಲ್ಲಿ ಧರ್ಮವು ಎಂದಿನಿಂದಲೂ –ಸ್ವಾತಂತ್ರ್ಯಪೂರ್ವ ಕಾಲದಿಂದಲೂ– ನಿರ್ಣಾಯಕ ಪಾತ್ರ ವಹಿಸುತ್ತಾ ಬಂದಿದೆ. ನಮ್ಮನ್ನು ವಿಭಜಿಸಲು ಧರ್ಮವನ್ನು ಬಳಸಿಕೊಳ್ಳುವ ಈ ಸ್ವಾರ್ಥಿ ಮತ್ತು ದುರಾಸೆಯ ರಾಜಕಾರಣಿಗಳನ್ನು ನಂಬುವುದನ್ನು ಬಿಡಬೇಕು. ನಮ್ಮನ್ನು ವಿಭಜಿಸಲು ಧರ್ಮ ಬಳಸಿಕೊಳ್ಳುವುದನ್ನು ಅವರು ಎಂದಿಗೂ ಬಿಡಲಾರರು. #HateSpeech #SupremeCourtOfIndia

ಪೂನಂ ಜೋಷಿ, ಪತ್ರಕರ್ತೆ

25 ವರ್ಷಗಳ ಹಿಂದೆ
ಮಂಗಳವಾರ, 31-3-1998

● **ವಿಧಾನಸೌಧ, ಸರ್ಕಾರಿ ಕಚೇರಿ ಪ್ರವೇಶ ನಿರ್ಬಂಧ**

ಬೆಂಗಳೂರು, ಮಾರ್ಚ್ 30– ವಿಧಾನಸೌಧ ಮತ್ತು ಬಹುಮಹಡಿ ಕಟ್ಟಡಗಳಲ್ಲಿರುವ ಸರ್ಕಾರಿ ಕಚೇರಿಗಳಿಗೆ ಸಾರ್ವಜನಿಕರ ಪ್ರವೇಶವನ್ನು ನಿರ್ಬಂಧಿಸಿ ಸರ್ಕಾರ ಸುತ್ತೋಲೆ ಹೊರಡಿಸಿದೆ.

'ವಿಧಾನಸೌಧ ಹಾಗೂ ಬಹುಮಹಡಿ ಕಟ್ಟಡಗಳಲ್ಲಿರುವ ಸಚಿವರ ಮತ್ತು ಕಾರ್ಯದರ್ಶಿಗಳ ಕಚೇರಿಗಳಿಗೆ ಸಾರ್ವಜನಿಕರು ಎಲ್ಲ ಸಮಯದಲ್ಲೂ ತಂಡೋಪತಂಡವಾಗಿ ಪ್ರವೇಶಿಸುತ್ತಿರುವುದರಿಂದ ಸಚಿವರು ಮತ್ತು ಅಧಿಕಾರಿಗಳ ದೈನಂದಿನ ಕಾರ್ಯಗಳಿಗೆ ಅಡ್ಡಿಯುಂಟಾಗುತ್ತಿರುವ ಹಿನ್ನೆಲೆಯಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ' ಎಂದು ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್.ಎ.ಮುತ್ತಣ್ಣ ಅವರು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

● **ಟಿಡಿಪಿ–ಎಡಪಕ್ಷ ಮೈತ್ರಿ ಅಂತ್ಯ ಸನ್ನಿಹಿತ**

ಹೈದರಾಬಾದ್, ಮಾರ್ಚ್ 30 (ಪಿಟಿಐ)– ಚಂದ್ರಬಾಬು ನಾಯ್ಡು ನೇತೃತ್ವದ ತೆಲುಗುದೇಶಂ ಪಕ್ಷ (ಟಿಡಿಪಿ) ಹಾಗೂ ಅದರ ಮಿತ್ರಪಕ್ಷಗಳಾದ ಸಿಪಿಐ ಹಾಗೂ ಸಿಪಿಎಂ ನಡುವಿನ ಸಂಬಂಧ ಮುರಿದುಬೀಳುವ ಹಂತ ತಲುಪಿದೆ.

'ಬಿಜೆಪಿ ನೇತೃತ್ವದ ಸರ್ಕಾರವನ್ನು ಬೆಂಬಲಿಸುವ ಮೂಲಕ ಜಾತ್ಯತೀತ ಶಕ್ತಿಗಳಿಗೆ ಭಾರಿ ಪೆಟ್ಟು ಕೊಟ್ಟಿರುವ ಟಿಡಿಪಿ ವಿರುದ್ಧ ನಾವು ರಾಜಕೀಯ ಯುದ್ಧ ಆರಂಭಿಸುತ್ತೇವೆ' ಎಂದು ಸಿಪಿಎಂ ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ
ಶನಿವಾರ, 31-3-1973

● **ದಿನಬಳಕೆ ವಸ್ತುಗಳ ವ್ಯಾಪಾರ, ಹಂಚಿಕೆ ಹೆಚ್ಚು ಸರ್ಕಾರದ ಕೈಗೆ**

ಬೆಂಗಳೂರು, ಮಾರ್ಚ್ 30– ದಿನಬಳಕೆ ವಸ್ತುಗಳ ವ್ಯಾಪಾರ ಮತ್ತು ಹಂಚಿಕೆಯಲ್ಲಿ ವ್ಯಾಪಾರಿಗಳಿಂದ ಬಳಕೆದಾರರ ಶೋಷಣೆ ತಪ್ಪಿಸಲು ಈ ಕ್ಷೇತ್ರದಲ್ಲಿ ಸರ್ಕಾರೀಕರಣ ಮತ್ತು ಸರ್ಕಾರಿ ಹಂಚಿಕೆಯನ್ನು ಗಣನೀಯವಾಗಿ ವಿಸ್ತರಿಸಲು ಉದ್ದೇಶಿಸಲಾಗಿದೆ ಎಂದು ಮುಖ್ಯಮಂತ್ರಿ ಶ್ರೀ ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಪ್ರಕಟಿಸಿದರು.

ಇಂದಿನ ದೊಡ್ಡ ಸಮಸ್ಯೆಯಾಗಿರುವ ಬೆಲೆಗಳ ಏರಿಕೆ ಪ್ರವೃತ್ತಿ ಹಾಗೂ ಬೆಲೆಗಳ ಕುರಿತು ಸರ್ಕಾರದ ನೀತಿಯನ್ನು ಸಮಗ್ರವಾಗಿ ವಿಶ್ಲೇಷಿಸಿದ ಶ್ರೀ ಅರಸು ಅವರು ಈ ದಿಸೆಯಲ್ಲಿ ಸರ್ಕಾರದ ನಿಲುವು ಹಾಗೂ ಭಾವೀ ಕಾರ್ಯಕ್ರಮಗಳ ಕುರಿತ ಹೇಳಿಕೆಯೊಂದನ್ನು ಪ್ರಥಮ ಬಾರಿಗೆ ಸದನಕ್ಕೆ ಒಪ್ಪಿಸಿದರು.

● **ಭುಟ್ಟೊ ಸರ್ಕಾರ ಬುಡಮೇಲು ಯತ್ನ**

ರಾವಲ್ಪಿಂಡಿ, ಮಾರ್ಚ್ 30– ಪಾಕಿಸ್ತಾನ ಸರ್ಕಾರವನ್ನು ಬುಡಮೇಲು ಮಾಡುವ ಚಟುವಟಿಕೆಗಳಲ್ಲಿ ನಿರತರಾಗಿದ್ದ ಕೆಲವು ನಾಗರಿಕರು ಮತ್ತು ಸೇನಾಧಿಕಾರಿಗಳ ತಂಡ ಒಂದನ್ನು ಬಂಧಿಸಿರುವುದಾಗಿ ಇಂದು ರಾತ್ರಿ ಇಲ್ಲಿ ಅಧಿಕೃತವಾಗಿ ಪ್ರಕಟಿಸಲಾಯಿತು.

ಕಳೆದ ವರ್ಷ ನಿವೃತ್ತರಾದ ಇಬ್ಬರು ಸೇನಾಧಿಕಾರಿಗಳೂ ಸೇರಿದಂತೆ ಸೈನಿಕರ ತಂಡವೊಂದು ಸರ್ಕಾರಕ್ಕೆ ನಿಷ್ಠೆಯಿಂದಿರುವ ಕೆಲವು ಸೈನಿಕರನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನಕ್ಕೆ ಕೈ ಹಾಕಿತ್ತೆಂದು ರಕ್ಷಣಾ ಸಚಿವರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಗತ

ವಿಶ್ವಾಸ ಕಾಯ್ದುಕೊಳ್ಳುವ ಸವಾಲು

ಲಂಚ ಪ್ರಕರಣದಿಂದ ಕೆಎಸ್‌ಡಿಎಲ್‌ನ ವಿಶ್ವಾಸಾರ್ಹತೆಗೆ ಆಗಬಹುದಾದ ಧಕ್ಕೆಯತ್ತಲೂ ಚರ್ಚೆ ವಾಲಬೇಕಲ್ಲವೇ?

• ಎಚ್.ಕೆ.ಶರತ್

ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಅಧ್ಯಕ್ಷರಾಗಿದ್ದ ಶಾಸಕ ಕೆ.ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆಯಲ್ಲಿ ಲೋಕಾಯುಕ್ತ ದಾಳಿ ನಡೆದ ವೇಳೆ ₹ 6.10 ಕೋಟಿ ಹಣ ಪತ್ತೆಯಾದದ್ದು ರಾಷ್ಟ್ರಮಟ್ಟದಲ್ಲಿ ಸುದ್ದಿಯಾಯಿತು. ತಮ್ಮ ಪುತ್ರ ಪ್ರಶಾಂತ್ ಮಾಡಾಳ್ ಲಂಚ ಪಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ವಿರೂಪಾಕ್ಷಪ್ಪ ಅವರು ಮೊದಲಿಗೆ ತಲೆಮರೆಸಿಕೊಂಡು ಆನಂತರ ನಿರೀಕ್ಷಣಾ ಜಾಮೀನು ಪಡೆದದ್ದು ಕೂಡ ಚರ್ಚೆಗೆ ಗ್ರಾಸವಾಯಿತು. ಇದೀಗ ನಿರೀಕ್ಷಣಾ ಜಾಮೀನು ರದ್ದಾಗಿ ಬಂಧನದಲ್ಲಿರುವ ವಿರೂಪಾಕ್ಷಪ್ಪ ಅವರಿಂದ ಬಿಜೆಪಿಗೆ ಆಗಲಿರುವ ಮುಜುಗರದ ಕುರಿತು ಕೂಡ ಬಹಳಷ್ಟು ವಿಶ್ಲೇಷಣೆ ನಡೆದಿದೆ.

ಕಾಂಗ್ರೆಸ್ ಆಡಳಿತಾವಧಿಯ ಭ್ರಷ್ಟಾಚಾರದ ಕುರಿತು ಅತಿ ಉತ್ಸಾಹದಿಂದ ಮಾತನಾಡುವ ಪ್ರಧಾನಿ ನರೇಂದ್ರ ಮೋದಿ ಅವರನ್ನೂ ಒಳಗೊಂಡಂತೆ ಬಿಜೆಪಿಯ ಪ್ರಮುಖ ನಾಯಕರು, ಮುಂಬರುವ ಕರ್ನಾಟಕ ವಿಧಾನಸಭೆ ಚುನಾವಣೆ ವೇಳೆ ಭ್ರಷ್ಟಾಚಾರದ ಕುರಿತು ಮಾತನಾಡಲು ಆರಂಭಿಸಿದರೆ, ಗುತ್ತಿಗೆದಾರರು ಮಾಡಿದ 40 ಪರ್ಸೆಂಟ್ ಲಂಚದ ಆರೋಪ ಜನರಿಗೆ ನೆನಪಾಗುವುದು ನಿಶ್ಚಿತ. ಜೊತೆಗೆ ವಿರೂಪಾಕ್ಷಪ್ಪನವರ ಕೋಣೆಯಲ್ಲಿದ್ದ ನೋಟಿನ ಕಂತೆಗಳೂ ಕಣ್ಮುಂದೆ ಬರುವ ಸಾಧ್ಯತೆಯಂತೂ ಇದ್ದೇ ಇದೆ.

ಮೈಸೂರು ಸ್ಯಾಂಡಲ್ ಸೋಪು ಸೇರಿದಂತೆ ಕೆಎಸ್‌ಡಿಎಲ್‌ನ ಉತ್ಪನ್ನಗಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಹೆಸರಿದೆ. ದೀರ್ಘಾವಧಿಯಿಂದ ಕೆಎಸ್‌ಡಿಎಲ್ ಉತ್ಪನ್ನಗಳ ಗುಣಮಟ್ಟದ ಮೇಲೆ ವಿಶ್ವಾಸವಿರಿಸಿ ಬಳಸುತ್ತಿರುವ ಗ್ರಾಹಕರ ಮೇಲೆ ಮಾಡಾಳ್ ಪ್ರಕರಣ ಯಾವುದೇ ಪರಿಣಾಮ ಬೀರುವುದಿಲ್ಲವೇ? ಲೋಕಾಯುಕ್ತ ಪೊಲೀಸರು ನಡೆಸುತ್ತಿರುವ ತನಿಖೆಯಿಂದ ಹೊರಬೀಳುತ್ತಿರುವ ಮಾಹಿತಿ, 'ಮೈಸೂರು ಸ್ಯಾಂಡಲ್' ಎಂಬ ಬ್ರ್ಯಾಂಡಿನ ವಿಶ್ವಾಸಾರ್ಹತೆಗೆ ನೀಡುತ್ತಿರುವ ಪೆಟ್ಟಿನ ಅಗಾಧತೆ ಕುರಿತು ಕೂಡ ಚಿಂತಿಸಬೇಕಲ್ಲವೇ?

1916ರಲ್ಲಿ ಸ್ಥಾಪನೆಯಾಗಿ ಇದುವರೆಗೂ ಮಾರುಕಟ್ಟೆಯಲ್ಲಿ ತನ್ನದೇ ಆದ ಛಾಪು ಮೂಡಿಸುವಲ್ಲಿ ಯಶಸ್ವಿಯಾಗಿರುವ ಸಂಸ್ಥೆಯ ವಿಶ್ವಾಸಾರ್ಹತೆಗೆ ಒದಗಬಹುದಾದ ಧಕ್ಕೆ ದೀರ್ಘಾವಧಿಯದ್ದು. ಕೆಎಸ್‌ಡಿಎಲ್‌ಗೆ ಕಚ್ಚಾವಸ್ತುಗಳನ್ನು ಪೂರೈಸುವ ಸಂಸ್ಥೆಗಳಿಂದ ಮಾಡಾಳ್ ವಿರೂಪಾಕ್ಷಪ್ಪ ಮತ್ತು ಅವರ ಮಗ ಪ್ರಶಾಂತ್ ಲಂಚ ಪಡೆಯುತ್ತಿದ್ದರು ಎನ್ನುವ ಮಾಹಿತಿ ಲೋಕಾಯುಕ್ತ ಪೊಲೀಸರಿಗೆ ಲಭಿಸಿದೆ ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಕೋಟಿಗಟ್ಟಲೆ ಲಂಚ ನೀಡುವ ಪೂರೈಕೆದಾರರಿಂದ ಸರಬರಾಜಾಗುವ ಕಚ್ಚಾವಸ್ತುಗಳ ಗುಣಮಟ್ಟ ಹೇಗಿರಬಹುದು? ಕೆಎಸ್‌ಡಿಎಲ್‌ನಲ್ಲಿನ ಭ್ರಷ್ಟಾಚಾರದಿಂದ ಉತ್ಪನ್ನದ ಗುಣಮಟ್ಟ ಕುಸಿದಿರಬಹುದು; ಇಲ್ಲವಾದರೆ ಉತ್ಪನ್ನಗಳಿಗೆ ದುಬಾರಿ ಬೆಲೆ ನಿಗದಿಪಡಿಸುವ ಮೂಲಕ ಸೋರಿಕೆಯಾಗುತ್ತಿರುವ ಹಣವನ್ನು ಸರಿದೂಗಿಸಿಕೊಳ್ಳುತ್ತಿರಬಹುದು. ಇದರಿಂದಾಗಿ ನಷ್ಟವಾಗುತ್ತಿರುವುದು ಗ್ರಾಹಕರು ಮತ್ತು ಕೆಎಸ್‌ಡಿಎಲ್ ಸಂಸ್ಥೆಗಲ್ಲವೇ?

ಯಾವುದೇ ಉತ್ಪನ್ನವು ಮಾರುಕಟ್ಟೆಯಲ್ಲಿ ಯಶಸ್ಸು ಕಂಡುಕೊಳ್ಳಲು 'ಗುಣಮಟ್ಟ' ಮತ್ತು 'ಬೆಲೆ'ಯ ಕುರಿತು ಕಾಳಜಿ ವಹಿಸಬೇಕಿರುವುದು ಅತ್ಯಗತ್ಯ. ಗ್ರಾಹಕರು ಯಾವಾಗಲೂ ಕಡಿಮೆ ಬೆಲೆಗೆ ಉತ್ತಮ ಗುಣಮಟ್ಟದ ಉತ್ಪನ್ನದ ಹುಡುಕಾಟದಲ್ಲಿರುತ್ತಾರೆ. ಖಾಸಗಿ ಸಂಸ್ಥೆಗಳ ಉತ್ಪನ್ನಗಳೊಂದಿಗೆ ಸ್ಪರ್ಧಿಸಿ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಬೇಡಿಕೆ ಕಂಡುಕೊಳ್ಳುವುದು, ಮತ್ತದನ್ನು ಕಾಯ್ದುಕೊಳ್ಳುವುದು ದೊಡ್ಡ ಸವಾಲಿನ ಸಂಗತಿ. ಈ ಸವಾಲು ಎದುರಿಸುವಲ್ಲಿ ಕೆಎಸ್‌ಡಿಎಲ್ ಇದುವರೆಗೂ ಯಶಸ್ವಿಯಾಗಿದೆ.



ಕೆಎಸ್‌ಡಿಎಲ್ ಸಂಸ್ಥೆ ಭ್ರಷ್ಟಾಚಾರದ ಕಾರಣಕ್ಕೆ ಉತ್ಪನ್ನಗಳ ಗುಣಮಟ್ಟದಲ್ಲಿ ರಾಜಿ ಮಾಡಿಕೊಂಡರೆ ಅಥವಾ ವಿವೇಚನಾರಹಿತವಾಗಿ ಹೆಚ್ಚು ಬೆಲೆ ನಿಗದಿಪಡಿಸಿದರೆ ಸಹಜವಾಗಿಯೇ ಗ್ರಾಹಕರು ಬೇರೆ ಕಂಪನಿಯ ಉತ್ಪನ್ನಗಳತ್ತ ಮುಖಮಾಡುತ್ತಾರೆ. ತಯಾರಿಕಾ ಸಂಸ್ಥೆಯೊಂದರ ಆಡಳಿತ ಪಾರದರ್ಶಕವಾಗಿಲ್ಲವೆಂಬ ವಿಚಾರ ಬಹಿರಂಗವಾದರೆ, ಸಹಜವಾಗಿಯೇ ಅದರ ಉತ್ಪನ್ನಗಳ ಮೇಲಿನ ಗ್ರಾಹಕರ ವಿಶ್ವಾಸಕ್ಕೂ ಕುಂದುಂಟಾಗಲಿದೆ. ಮಾಡಾಳ್ ವಿರೂಪಾಕ್ಷಪ್ಪನವರ ಪ್ರಕರಣದಿಂದ ತನಗಾಗಿರುವ ಮುಜುಗರದಿಂದ ತಪ್ಪಿಸಿಕೊಳ್ಳುವ ಸಲುವಾಗಿ ವಿಷಯಾಂತರ ಮಾಡಲು ಬಿಜೆಪಿ ಎದುರು ಬಹಳಷ್ಟು ದಾರಿಗಳಿವೆ. ಆದರೆ ಈ ಪ್ರಕರಣದಿಂದ ಕೆಎಸ್‌ಡಿಎಲ್ ಸಂಸ್ಥೆ ಮತ್ತು ಅದರ ಉತ್ಪನ್ನಗಳಿಗೆ ಮೆತ್ತಿಕೊಳ್ಳಬಹುದಾದ ಕಳಂಕ ತೊಳೆಯುವ ಉತ್ಸಾಹ ಆಳುವವರಲ್ಲಿ ಇರಲಿದೆಯೇ?

ಸಚಿವ ಸ್ಥಾನ ಸಿಗಲಿಲ್ಲವೆಂದು ಅಸಮಾಧಾನಗೊಳ್ಳುವ ಶಾಸಕರನ್ನು ಸಮಾಧಾನಪಡಿಸಲು ಅವರನ್ನು ನಿಗಮ- ಮಂಡಳಿಗಳಿಗೆ ಅಧ್ಯಕ್ಷರನ್ನಾಗಿ ನೇಮಿಸುವುದೇ ಹೆಚ್ಚು. ಸೀಮಿತ ಅಧಿಕಾರ ಮತ್ತು ಸಂಪನ್ಮೂಲಗಳಷ್ಟೇ ಲಭ್ಯವಾಗುವ ಇಂತಹ ಸ್ಥಾನಗಳಿಗೆ ಶಾಸಕರನ್ನು ನೇಮಿಸಿ ಅವರನ್ನು ತೃಪ್ತಿಪಡಿಸಲು ಕಸರತ್ತು ಮಾಡುವ ರಾಜಕೀಯ ಪಕ್ಷಗಳು, ತಾವು ಅಧಿಕಾರಕ್ಕೆ ಬಂದರೆ ಕೆಎಸ್‌ಡಿಎಲ್ ಒಳಗೊಂಡಂತೆ ಸರ್ಕಾರಿ ಸ್ವಾಮ್ಯದ ಉದ್ದಿಮೆ ಸಂಸ್ಥೆಗಳು ಹಾಗೂ ನಿಗಮ ಮಂಡಳಿಗಳಲ್ಲಿ ಭ್ರಷ್ಟಾಚಾರಕ್ಕೆ ಅನುವು ಮಾಡಿಕೊಡುವುದಿಲ್ಲ ಎನ್ನುವ ಭರವಸೆ ನೀಡುತ್ತವೆಯೇ? ಆನಂತರ ನುಡಿದಂತೆ ನಡೆಯುವ ಇಚ್ಛಾಶಕ್ತಿ ಪ್ರದರ್ಶಿಸುವ ಸ್ಥಿತಿಯಲ್ಲಿವೆಯೇ? ಮಾಡಾಳ್ ವಿರೂಪಾಕ್ಷಪ್ಪನವರ ಲಂಚ ಪ್ರಕರಣದಿಂದ ಕೆಎಸ್‌ಡಿಎಲ್‌ಗೆ ಆಗಿರುವುದು ಆರ್ಥಿಕ ನಷ್ಟ ಮಾತ್ರವೇ?

ವಾಚಕರ ವಾಣಿ

ಕಿರಿಯ ಮೇಯರ್ ಮಾಡಲಿ ಹಿರಿಯ ಸಾಧನೆ

ಕಿರಿಯ ಮೇಯರ್ ಎಂಬ ಖ್ಯಾತಿಗೆ ಪಾತ್ರರಾಗಿರುವ ಬಳ್ಳಾರಿಯ ತ್ರಿವೇಣಿ ಅವರಿಗೆ ಬರೀ 23 ವರ್ಷ. ಇಷ್ಟು ಚಿಕ್ಕ ವಯಸ್ಸಿನಲ್ಲೇ ದೊಡ್ಡ ಜವಾಬ್ದಾರಿ ವಹಿಸಿಕೊಂಡಿರುವ ಅವರ ಮುಂದೆ ದೊಡ್ಡ ದೊಡ್ಡ ಸವಾಲುಗಳೇ ಇರಬಹುದು. ಬಹುಮುಖ್ಯವಾಗಿ, ಬಳ್ಳಾರಿಯಂತಹ ಬಹುಮುಖ್ಯವಾದ ನಗರದಲ್ಲಿ ಜನರಿಗೆ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ.

ಅತಿ ಹೆಚ್ಚು ಅಧಿಕಾರವನ್ನೇನೂ ಹೊಂದಿರದ ಮೇಯರ್ ಹುದ್ದೆ ಅಲಂಕಾರಿಕವಾದುದಾದರೂ ಅದರ ಕಿಮ್ಮತ್ತು ಆ ಹುದ್ದೆಯನ್ನು ಅಲಂಕರಿಸುವವರನ್ನು ಅವಲಂಬಿಸಿದೆ. ನಗರದ ಪ್ರಥಮ ಪ್ರಜೆ ಎಂದು ಕರೆಸಿಕೊಳ್ಳುವ ಮೇಯರ್‌ಗಳಲ್ಲಿ ಕೆಲವರು ತಮ್ಮ ಸೀಮಿತವಾದ ಅಧಿಕಾರ ವ್ಯಾಪ್ತಿಯಲ್ಲಿಯೇ ಅನೇಕ ಜನೋಪಯೋಗಿ ಕಾರ್ಯಗಳ ಮೂಲಕ ಒಳ್ಳೆಯ ಹೆಸರು ಗಳಿಸಿದ್ದಾರೆ. ಇದೀಗ ತ್ರಿವೇಣಿ ಅವರು ಇಂತಹವರ ಸಾಲಿಗೆ ಸೇರಲಿ ಎಂದು ಹಾರೈಸೋಣ.

ಕೆ.ವಿ.ವಾಸು, ಮೈಸೂರು

ಮೀಸಲಾತಿ: ಅನ್ಯಾಯ ಸರಿಪಡಿಸಿ

ಮುಸ್ಲಿಂ ಸಮುದಾಯವು ಬಡತನ, ಅನಕ್ಷರತೆ, ನಿರುದ್ಯೋಗ ಸಮಸ್ಯೆಗಳಿಂದ ಈಗಲೂ ಬಳಲುತ್ತಿದೆ. ಕರ್ನಾಟಕಕ್ಕೆ ಸಂಬಂಧಿಸಿದಂತೆ ಈ ಸಮುದಾಯದ ಹಿಂದುಳಿದಿರುವಿಕೆಯನ್ನು ಗಮನಿಸಿದ ಎಚ್.ಡಿ.ದೇವೇಗೌಡ ಅವರು ತಾವು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಶೇಕಡ 4ರಷ್ಟು ಮೀಸಲಾತಿಯನ್ನು ನೀಡಿದ್ದರು. ಈಗ ಸರ್ಕಾರ ಅದನ್ನು ಕಿತ್ತುಕೊಂಡಿರುವುದು ಅನ್ಯಾಯದ ತೀರ್ಮಾನವಾಗಿದೆ.

ಬೇರೆ ಸಮುದಾಯಗಳಿಗೆ ಮೀಸಲಾತಿ ಹೆಚ್ಚಿಸುವುದರ ಬಗೆಗೆ ಸರ್ಕಾರ ಪರ್ಯಾಯವಾಗಿ ಯೋಚಿಸಿ ಕ್ರಮ ಕೈಗೊಳ್ಳಬೇಕು. ಮುಸ್ಲಿಂ ಸಮುದಾಯದಿಂದ ಕಿತ್ತುಕೊಳ್ಳಲಾದ ಈ ಸೌಲಭ್ಯವನ್ನು ಪುನಃ ಅವರಿಗೆ ನೀಡಿ ಅನ್ಯಾಯವನ್ನು ಸರಿಪಡಿಸಬೇಕು.

ಡಾ. ಸರ್ಜಾಶಂಕರ್ ಹರಳಿಮಠ, ಶಿವಮೊಗ್ಗ

ಎಚ್ಚರ... ಬರುತ್ತಿದ್ದಾರೆ ರಂಗೋಲಿ ಕೆಳಗೆ ತೂರುವವರು!

ಚುನಾವಣಾ ಆಯೋಗವು ನೀತಿ ಸಂಹಿತೆ ಜಾರಿ ಮಾಡಿದೆ. ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳು ಇಷ್ಟೇ ಮಿತಿಯೊಳಗೆ ಖರ್ಚುವೆಚ್ಚ ಮಾಡಬೇಕೆಂದು ತಿಳಿಸಿದೆ. ಆದರೆ ಹಿಂದಿನಿಂದಲೂ ಬಹಳಷ್ಟು ಅಭ್ಯರ್ಥಿಗಳು ಮತದಾರರಿಗೆ ಎಗ್ಗಿಲ್ಲದೇ ಆಮಿಷ ತೋರಿಸಿ, ಮದ್ಯ, ಮಾಂಸ, ಭೂರಿ ಭೋಜನ, ಇದಲ್ಲದೆ ಕುಕ್ಕರ್, ಮಿಕ್ಸಿ, ಸೀರೆ, ಒಡವೆ, ದುಡ್ಡು ಹಂಚಿ ಚುನಾವಣೆ ನಡೆಸಿಕೊಂಡು ಬರುತ್ತಿದ್ದಾರೆ. ಹೊರನೋಟಕ್ಕೆ ನೀತಿ ಸಂಹಿತೆ. ಅನೇಕ ಪ್ರಜ್ಞಾವಂತ ನಾಗರಿಕರು ತಿಳಿದೂ ತಿಳಿಯದಂತೆ ವರ್ತಿಸುತ್ತಿದ್ದಾರೆ.

ಇಲ್ಲಿ ಚುನಾವಣಾ ಆಯೋಗ, ಪೊಲೀಸ್ ಸಿಬ್ಬಂದಿ ಮಾತ್ರವೇ ಇಂತಹ ಕೃತ್ಯಗಳನ್ನು ತಡೆಯಬೇಕು ಎನ್ನುವ ತೀರ್ಮಾನ ತಪ್ಪು. ಎಲ್ಲಿ ಆಮಿಷ ಒಡ್ಡುವ ಕೃತ್ಯಗಳು ನಡೆಯುತ್ತವೋ ಅಂತಲ್ಲಿ ಆಯೋಗಕ್ಕೆ, ಪೊಲೀಸ್ ಇಲಾಖೆಗೆ ಸುದ್ದಿ ಮುಟ್ಟಿಸುವ ಜವಾಬ್ದಾರಿ ಎಲ್ಲ ನಾಗರಿಕರ ಮೇಲಿದೆ. ಚುನಾವಣಾ ಆಯೋಗದ ಕಣ್ಣು ತಪ್ಪಿಸಿ ಇಂತಹ ಕೃತ್ಯಗಳನ್ನು ನಡೆಸುವ ಅಭ್ಯರ್ಥಿಗಳ ಮೇಲೆ ಅತಿ ಸೂಕ್ಷ್ಮ ಕಣ್ಣಿಟ್ಟಿರಬೇಕು. ಇಲ್ಲದಿದ್ದಲ್ಲಿ ದುಡ್ಡಿದ್ದವರು ಚುನಾವಣೆ ಗೆಲ್ಲಲು ರಂಗೋಲಿ ಕೆಳಗೆ ತೂರುತ್ತಾರೆ.

ಎಂ.ಪರಮೇಶ್ವರ, ಮದ್ದಿಹಳ್ಳಿ, ಹಿರಿಯೂರು

ಐಪಿಎಲ್ ಟೂರ್ನಿ: ಕಾಯುವಿಕೆ ಕೊನೆಯಾಗುವುದೇ?

ಇದೀಗ ಐಪಿಎಲ್ ಟೂರ್ನಿ ಆರಂಭವಾಗಿದೆ. ಪ್ರತಿವರ್ಷದಂತೆ 'ಈ ಸಲ ಕಪ್ ನಮ್ದೇ' ಎಂಬ ಆತ್ಮವಿಶ್ವಾಸದ ಮಾತಿನೊಂದಿಗೆ ಆರ್‌ಸಿಬಿ ತಂಡದ ಕೋಟ್ಯಂತರ ಅಭಿಮಾನಿಗಳು ಐಪಿಎಲ್ ವೀಕ್ಷಣೆಗೆ ಕಾಯುತ್ತಿದ್ದಾರೆ. ಹಿಂದಿನ ಹದಿನೈದು ವರ್ಷಗಳಿಂದ ಕಪ್ ಗೆಲ್ಲದಿದ್ದರೂ ತನ್ನದೇ ಆದ ಅಭಿಮಾನಿ ಬಳಗ ಸಂಪಾದಿಸಿರುವ ಆರ್‌ಸಿಬಿ ಈ ಬಾರಿ ಕಪ್ ಎತ್ತಿ ಹಿಡಿಯಲಿ. ಅಭಿಮಾನಿಗಳ ಕಾಯುವಿಕೆ ಕೊನೆಯಾಗಲಿ. ಅಭಿಮಾನಿಗಳು ಸಹ ಬೆಟ್ಟಿಂಗ್ ಕಡೆಗೆ ಹೋಗದೆ, ಕ್ರಿಕೆಟ್ ಪಂದ್ಯಗಳನ್ನು ಮನರಂಜನೆಗಾಗಿ ಮಾತ್ರ ನೋಡುವಂತೆ ಆಗಲಿ.

ಅಂಬಿಕಾ ಬಿ.ಟಿ., ತುಮಕೂರು

ಉಚಿತ ಕೊಡುಗೆ: ನಡೆಯಲಿ ಚಿಂತನೆ

ಐದನೆಯ ಶತಮಾನದ ಆರಂಭದಲ್ಲಿ ಭಾರತಕ್ಕೆ ಭೇಟಿ ನೀಡಿದ್ದ ಹ್ಯುಯೆನ್‌ತ್ಸಾಂಗ್ ಮತ್ತು ಫಾಹಿಯಾನ ಎಂಬ ಚೀನಾದ ಇತಿಹಾಸಕಾರರು ಭಾರತದಾದ್ಯಂತ ಸಂಚರಿಸಿದರೂ ಒಬ್ಬನೇ ಒಬ್ಬ ಭಿಕ್ಷುಕನನ್ನೂ ಕಂಡಿರಲಿಲ್ಲ. ಭಾರತ ಅತ್ಯಂತ ಸುಭಿಕ್ಷವಾದ ನಾಡಾಗಿತ್ತು ಎಂದು ಅವರು ಬರೆದಿದ್ದಾರೆ. ಸ್ವಾತಂತ್ರ್ಯದ ನಂತರ ಸರ್ಕಾರಗಳು ಬಡತನ ನಿವಾರಣೆಯ ವಿವಿಧ ಯೋಜನೆಗಳನ್ನು ಕೈಗೊಂಡ ನಂತರವೂ ಬಡತನ ಹಾಗೆಯೇ ಉಳಿದಿದೆ. ಇಂದಿಗೂ ದೇಶದಲ್ಲಿ ದೀರ್ಘಾವಧಿ ಅನುಕೂಲಗಳನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಮತ ಹಾಕುವುದಕ್ಕಿಂತ ಅಲ್ಪಾವಧಿ ಖುಷಿಯ ಸಂಗತಿಗಳಿಗೆ ಮನಸೋತು ಮತ ಹಾಕುವವರ ಸಂಖ್ಯೆ ಗಣನೀಯ ಪ್ರಮಾಣದಲ್ಲಿದೆ. ಹೀಗಾಗಿಯೇ ರಾಜಕಾರಣಿಗಳು ಇದನ್ನು ದುರ್ಬಳಕೆ ಮಾಡಿಕೊಂಡು ಚುನಾವಣೆ ವೇಳೆ ಉಚಿತ ಕೊಡುಗೆಗಳ ಬಗ್ಗೆ ಹೇಳಿ ಮತ ಬಾಚುತ್ತಾರೆ. ಹೀಗಾಗುವುದನ್ನು ತಡೆಯಲು ಚುನಾವಣಾ ಆಯೋಗಕ್ಕೆ ಕೇಂದ್ರ ಸರ್ಕಾರ ಹೆಚ್ಚಿನ ಕಾನೂನು ಬಲ ನೀಡಬೇಕು.

ವೈವಿಧ್ಯಮಯ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯುಳ್ಳ ದೇಶದಲ್ಲಿ ಜನರ ನೆರವಿಗೆ ಕೆಲ ಕೊಡುಗೆಗಳನ್ನು ಘೋಷಿಸಬಹುದು. ಆದರೆ ಎಲ್ಲದಕ್ಕೂ ಒಂದು ಮಿತಿ ಇರಬೇಕು. ಹಾಗೆಯೇ ಇಂಥ ಘೋಷಣೆಗಳಿಗೆ ತಾರ್ಕಿಕ ನೆಲೆಗಟ್ಟು ಸಹ ಇರಬೇಕಾಗುತ್ತದೆ ಹಾಗೂ ಅವುಗಳನ್ನು ಈಡೇರಿಸಲು ಹೇಗೆ ಹಣ ಒದಗಿಸಲಾಗುವುದು ಎಂಬುದನ್ನೂ ಸ್ಪಷ್ಟವಾಗಿ ಘೋಷಿಸಿರಬೇಕು. ಈ ಉಚಿತ ಕೊಡುಗೆಗಳು ಸರ್ಕಾರಗಳ ಬೊಕ್ಕಸಕ್ಕೆ ದೊಡ್ಡ ಹೊರೆಯಾಗಿ ಅಭಿವೃದ್ಧಿ ಕಾರ್ಯಗಳಿಗೆ ಹಣ ವಿನಿಯೋಗ ಕಡಿಮೆಯಾಗುತ್ತದೆ. ಸರ್ಕಾರಗಳು ಉದ್ಯೋಗ ಸೃಷ್ಟಿ, ಮೂಲ ಸೌಕರ್ಯ ಹೆಚ್ಚಳಕ್ಕೆ ಹೆಚ್ಚಿನ ಹಣ ವಿನಿಯೋಗಿಸಬೇಕು. ಉಚಿತ ಕೊಡುಗೆ ಕೊಡುವುದೇ ಜನರ ಅಭಿವೃದ್ಧಿ ಎಂದು ಬಿಂಬಿಸಿ ಮತದಾರರ ದಿಕ್ಕು ತಪ್ಪಿಸುತ್ತಿರುವ ಸಮಯಸಾಧಕ ರಾಜಕಾರಣಿಗಳ ಬಗ್ಗೆ ಜನಜಾಗೃತಿ ಮೂಡಿಸಬೇಕಾದ ಅಗತ್ಯ ಇದೆ.

ಉದಯ ಮ. ಯಂಡಿಗೇರಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶೇ 12.12ರವರೆಗೆ ಹೆಚ್ಚಳಕ್ಕೆ ಅವಕಾಶ; ನಾಳೆಯಿಂದಲೇ ಜಾರಿ

ಔಷಧ ದರ ಜನರಿಗೆ ಪ್ರಹಾರ

ದುಬಾರಿಯಾಗಲಿರುವ ಔಷಧಗಳು

- ನೋವು ನಿವಾರಕಗಳಾದ ಡೈಕ್ಲೊಫಿನಿಕ್, ಐಬ್ರೂಫಿನ್, ಮೆಫೆನಮಿಕ್ ಆ್ಯಸಿಡ್, ಪ್ಯಾರಾಸಿಟಾಮಲ್, ಮಾರ್ಫಿನ್ ಇತ್ಯಾದಿ
- ಆ್ಯಂಟಿಬಯಾಟಿಕ್‌ಗಳಾದ ಅಮಾಕ್ಸಲಿನ್, ಆಂಪಿಸಿಲಿನ್, ಬೆನ್‌ಝೈಲ್‌ಪೆನ್ಸಿಲಿನ್, ಸೆಫಡ್ರೊಕ್ಸಿಲ್, ಸೆಫಝೋಲಿನ್ ಇತ್ಯಾದಿ
- ಕೋವಿಡ್ ನಿರ್ವಹಣೆಗೆ ಸಂಬಂಧಿಸಿದ ಔಷಧಗಳು
- ಪಾರ್ಕಿನ್‌ಸನ್ ಮತ್ತು ಡಿಮೆನ್ಷಿಯಾ ಔಷಧಗಳು
- ಆ್ಯಂಟಿ ಕಾನ್ವಲೆಂಟ್ ಔಷಧಗಳು
- ಟಿಬಿ ಚಿಕಿತ್ಸೆಯಲ್ಲಿ ಬಳಸುವ ಅಮಿಕಾಸಿನ್ ಮೊದಲಾದ ಔಷಧಗಳು
- ಆ್ಯಂಟಿ ಫಂಗಲ್ ಔಷಧಗಳು
- ಆ್ಯಂಟಿ ವೈರಲ್ ಔಷಧ ಆಸಿಕ್ಲೊವಿರ್ ಹಾಗೂ ಇತರೆ
- ಮಲೇರಿಯಾ ಚಿಕಿತ್ಸೆಗೆ ಬಳಸುವ ಔಷಧಗಳು
- ಕ್ಯಾನ್ಸರ್ ಚಿಕಿತ್ಸೆಗೆ ನೆರವಾಗುವ ಔಷಧ
- ರಕ್ತಹೀನತೆ ಗುಣಪಡಿಸುವ ಔಷಧಗಳಾದ ಫೋಲಿಕ್ ಆ್ಯಸಿಡ್ ಹಾಗೂ ಇತರೆ
- ಹೃದ್ರೋಗಕ್ಕೆ ಸಂಬಂಧಿಸಿದ ಡಿಲಿಟಝೆಮ್, ಮೆಟೊಪ್ರೊಲಿಲ್ ಇತ್ಯಾದಿ

ಪ್ರಜಾವಾಣಿ ವಾರ್ತೆ

ಕೋವಿಡ್ ಸಾಂಕ್ರಾಮಿಕದಿಂದ ಉಂಟಾಗಿದ್ದ ಬಿಕ್ಕಟ್ಟಿನಿಂದ ಈಗಷ್ಟೇ ಹೊರಬಂದು ಒಂದಿಷ್ಟು ಚೇತರಿಕೆ ಕಾಣುತ್ತಿರುವ ದೇಶದ ಜನರಿಗೆ ಔಷಧಗಳ ಬೆಲೆ ಏರಿಕೆ ಪ್ರಹಾರ ಶುರುವಾಗಿದೆ. ಅಗತ್ಯ ಔಷಧಗಳ ಬೆಲೆಯನ್ನು ಶೇ 12.12ರವರೆಗೆ ಏರಿಕೆ ಮಾಡಲು ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರ (ಎನ್‌ಪಿಪಿಎ) ಅವಕಾಶ ನೀಡಿದೆ. ಏಪ್ರಿಲ್ 1ರಿಂದ ಹೊಸ ದರನೀತಿ ಜಾರಿಯಾಗುತ್ತಿದೆ. ನೋವು ನಿವಾರಕ ಔಷಧಗಳು, ಆ್ಯಂಟಿಬಯಾಟಿಕ್ಸ್, ಸೋಂಕು ನಿವಾರಕಗಳು, ಹೃದ್ರೋಗದ ಔಷಧವೂ ಸೇರಿದಂತೆ ಸುಮಾರು 384 ಔಷಧಗಳ ದರ ಏರಿಕೆಯಾಗಬಹುದು. ದರ ಏರಿಕೆ ನಿರ್ಧಾರದಿಂದ ಮಧುಮೇಹ, ರಕ್ತದೊತ್ತಡ, ಹೃದಯ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಇನ್ನು ಮುಂದೆ ಔಷಧಕ್ಕಾಗಿ ಹೆಚ್ಚುವರಿ ಹಣವನ್ನು ತೆರಬೇಕಿದೆ.

2 ವರ್ಷದಲ್ಲಿ ಶೇ 22ರಷ್ಟು ದರ ಏರಿಕೆಗೆ ಅವಕಾಶ: ಅಗತ್ಯ ಔಷಧಗಳ ದರ ಏರಿಕೆ ಮಾಡಿದ್ದು ಇದೇ ಮೊದಲಲ್ಲ. ಔಷಧಗಳ ದರವನ್ನು ಪ್ರತೀ ವರ್ಷವೂ ಪರಿಷ್ಕರಿಸಲಾಗುತ್ತದೆ. ಕಳೆದ ವರ್ಷ ಶೇ 10.7ರವರೆಗೆ ಏರಿಕೆ ಮಾಡಲಾಗಿತ್ತು. ಈ ವರ್ಷ ಶೇ 12.12ರವರೆಗೆ ಹೆಚ್ಚಳಕ್ಕೆ ಅವಕಾಶ ಕೊಡಲಾಗಿದೆ. ಅಂದರೆ ಈ ಎರಡು ವರ್ಷಗಳ ಅವಧಿಯಲ್ಲಿ ಅಗತ್ಯ ಔಷಧಗಳ ದರದಲ್ಲಿ ಶೇ 22.8ರವರೆಗೆ ಏರಿಕೆಯಾಗಿದೆ. ಇದು ಈವರೆಗಿನ ದಾಖಲೆಯ ಏರಿಕೆಯ ಅವಕಾಶ ಎನ್ನಲಾಗಿದೆ.

ರಾಷ್ಟ್ರೀಯ ಔಷಧ ದರ ನಿಗದಿ ಪ್ರಾಧಿಕಾರ (ಎನ್‌ಪಿಪಿಎ) ಔಷಧಗಳ ದರ ನಿಯಂತ್ರಿಸುವ ಕೆಲಸ ಮಾಡುತ್ತದೆ. ಜನರ ಜೀವಕ್ಕೆ ಅತೀ ಅಗತ್ಯ ಎನಿಸುವ ಔಷಧಗಳ ದರವನ್ನು ಪ್ರಾಧಿಕಾರವು ನಿಯಂತ್ರಿಸುತ್ತದೆ. '2013ರ ಔಷಧ ದರ ನಿಯಂತ್ರಣ ಆದೇಶ'ದಲ್ಲಿ ಈ ವಿಧಾನವನ್ನು ಸ್ಪಷ್ಟಪಡಿಸಲಾಗಿದೆ. ಅಗತ್ಯವಲ್ಲದ ಔಷಧಗಳ ದರ ನಿಯಂತ್ರಣವು ಈ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿಲ್ಲ. ಅಗತ್ಯವಲ್ಲದ ಔಷಧಗಳ ದರವು ಪ್ರತೀ ವರ್ಷ ಸುಮಾರು ಶೇ 10ರಷ್ಟು ಏರಿಕೆಯಾಗುತ್ತದೆ. ಅಚ್ಚರಿಯೆಂದರೆ, ಸತತ ಎರಡು ವರ್ಷಗಳಿಂದ, ಅಗತ್ಯವಲ್ಲದ ಔಷಧಗಳ ಬೆಲೆಗಿಂತಲೂ ಅಗತ್ಯ ಔಷಧಗಳ ಬೆಲೆ ಹೆಚ್ಚಳವಾಗಿ ದಾಖಲೆ ನಿರ್ಮಿಸಿವೆ.

ಡಬ್ಲ್ಯುಪಿಐ ಮಾನದಂಡ: ಒಂದು ವರ್ಷದಲ್ಲಿ ದರ ಏರಿಕೆ ಯಾವ ಪ್ರಮಾಣದಲ್ಲಿರಬೇಕು ಎಂದು ನಿರ್ಧರಿಸಲು ಮಾನದಂಡವೊಂದನ್ನು ಅನುಸರಿಸಲಾಗುತ್ತದೆ. ಸಗಟು ಬೆಲೆ ಸೂಚ್ಯಂಕದ (ಡಬ್ಲ್ಯುಪಿಐ) ಆಧಾರದಲ್ಲಿ ಅಗತ್ಯ ಔಷಧಗಳ ದರ ಏರಿಕೆಯ ಗರಿಷ್ಠ ಮಿತಿಯನ್ನು ನಿಗದಿ ಮಾಡಲಾಗುತ್ತದೆ. ಕೇಂದ್ರ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನೀಡುವ ಸಗಟು ದರ ಸೂಚ್ಯಂಕವೇ ಔಷಧಗಳ ಬೆಲೆ ಏರಿಕೆ ಪ್ರಮಾಣದ ನಿರ್ಣಾಯಕ ಅಂಶ.

2022ರಲ್ಲಿ ಸಗಟು ದರ ಸೂಚ್ಯಂಕವು ಶೇ 12.12ರಷ್ಟು ಇದೆ ಎಂದಿರುವ ಪ್ರಾಧಿಕಾರವು, ಔಷಧಗಳ ದರ ಏರಿಕೆಯ ಗರಿಷ್ಠ ಮಿತಿ ಅದುವೇ ಎಂದು ಪ್ರಕಟಿಸಿದೆ. ಇದೇ ಮಾರ್ಚ್ 27ರಂದು ಹೊರಡಿಸಿರುವ ಸುತ್ತೋಲೆಯಲ್ಲಿ 2023-24ನೇ ಆರ್ಥಿಕ ವರ್ಷಕ್ಕೆ ಗರಿಷ್ಠ ದರದ ಏರಿಕೆಯನ್ನು ಪ್ರಸ್ತಾಪಿಸಿದೆ. ಬೆಲೆ ನಿಗದಿಯಲ್ಲಿ ಸರ್ಕಾರದ ಪಾತ್ರವಿಲ್ಲ ಎಂದು ಹೇಳಲಾಗುತ್ತದೆಯಾದರೂ, ಪ್ರಾಧಿಕಾರವು ಏರಿಕೆ ದರ ನಿಗದಿಪಡಿಸಲು ಅನುಸರಿಸುವ ಮಾನದಂಡವು ಕೇಂದ್ರ ಸರ್ಕಾರದ ದತ್ತಾಂಶಗಳನ್ನೇ ಆಧರಿಸಿದೆ ಎಂಬುದು ಗಮನಿಸಬೇಕಾದ ಅಂಶ.

ಔಷಧ ಕಂಪನಿಗಳು ಶೇ 12.12ರವರೆಗೂ ಬೆಲೆ ಏರಿಕೆ ಮಾಡಲು ಅವಕಾಶವಿದೆ. ಆದರೆ, ಕಳೆದ ವರ್ಷ ಶೇ 10.7ರಷ್ಟು ಗರಿಷ್ಠ ಬೆಲೆ ಏರಿಕೆ ನಿಗದಿ ಮಾಡಿದಾಗ, ಕೆಲವು ಕಂಪನಿಗಳು ಶೇ 0.5ರಿಂದ ಶೇ 5ರವರೆಗೆ ಬೆಲೆ ಹೆಚ್ಚಿಸಿದ್ದವು. ಗರಿಷ್ಠ ಮಿತಿ ಇದ್ದ ಮಾತ್ರಕ್ಕೆ ಅಲ್ಲಿಯವರೆಗೆ ಹೆಚ್ಚಿಸಲು ಅವಕಾಶವಿದ್ದರೂ, ಕೆಲವು ಕಂಪನಿಗಳು ಹಾಗೆ ಮಾಡುವುದಿಲ್ಲ. ಮಾರುಕಟ್ಟೆಯ ಒತ್ತಡ, ಪ್ರತಿಸ್ಪರ್ಧಿ ಕಂಪನಿಗಳ ಸ್ಪರ್ಧೆ, ಮಾರುಕಟ್ಟೆಗೆ ಪೂರೈಕೆಯಾಗುವ ಸರಕಿನ ಪ್ರಮಾಣವನ್ನು ಆಧರಿಸಿ, ಕಂಪನಿಗಳು ದರ ನಿರ್ಧರಿಸುತ್ತವೆ. ಈ ವರ್ಷ ಇದೇ ಪರಿಪಾಟ ಮುಂದುವರಿಯುವ ಸಾಧ್ಯತೆಯಿದೆ ಎಂದು ತಜ್ಞರು ಹೇಳಿದ್ದಾರೆ. ಆದರೂ ಗರಿಷ್ಠ ಮಿತಿಯವರೆಗೂ ದರ ಹೆಚ್ಚಿಸಲು ಕಂಪನಿಗಳಿಗೆ ಅವಕಾಶವಂತೂ ಇದೆ.

'ಸರ್ಕಾರ ಮಾಡಬೇಕಾದದ್ದು ಬಹಳಷ್ಟಿದೆ'

ಭಾರತದಲ್ಲಿ ತಯಾರಿಸಲಾಗುವ ಅತ್ಯಗತ್ಯದ ಔಷಧಗಳಿಗೆ ಅಗತ್ಯವಿರುವ ಕಚ್ಚಾ ವಸ್ತುಗಳಿಗಾಗಿ (ಆ್ಯಕ್ಟಿವ್ ಫಾರ್ಮಾಸ್ಯುಟಿಕಲ್ ಇಂಗ್ರೀಡಿಯಂಟ್-ಎಪಿಐ) ವಿದೇಶಗಳನ್ನೇ ಅವಲಂಬಿಸಬೇಕಾಗಿದೆ. ಭಾರತಕ್ಕೆ ಪ್ರತಿ ವರ್ಷ ಆಮದಾಗುವ ಎಪಿಐಗಳಲ್ಲಿ ಚೀನಾದಿಂದ ಬರುವ ಎಪಿಐಗಳ ಪ್ರಮಾಣ ಶೇ 60ರಷ್ಟನ್ನು ದಾಟುತ್ತದೆ. ಆದರೆ, ದೇಶೀಯವಾಗಿ ಎಪಿಐಗಳ ತಯಾರಿಕೆಯಲ್ಲಿ ಪ್ರಗತಿ ಸಾಧಿಸದೇ ಇರುವುದೇ ವಿದೇಶಗಳ ಮೇಲಿನ ಅವಲಂಬನೆ ಮತ್ತು ವಿಪರೀತ ಬೆಲೆ ಏರಿಕೆಗೆ ಪ್ರಮುಖ ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ.

₹2,534 ಕೋಟಿ
2022–23ರಲ್ಲಿ (2023ರ ಜನವರಿ ಅಂತ್ಯದವರೆಗೆ) ಆಮದು ಮಾಡಿಕೊಳ್ಳಲಾದ ಎಪಿಐಗಳ ಒಟ್ಟು ಮೌಲ್ಯ

₹1,502 ಕೋಟಿ
2022–23ರಲ್ಲಿ (2023ರ ಜನವರಿ ಅಂತ್ಯದವರೆಗೆ) ಚೀನಾದಿಂದ ಆಮದು ಮಾಡಿಕೊಳ್ಳಲಾದ ಎಪಿಐಗಳ ಒಟ್ಟು ಮೌಲ್ಯ

ಭಾರತದಲ್ಲಿ ತಯಾರಿಸಲಾಗುವ ಔಷಧಗಳಿಗೆ 56 ಸ್ವರೂಪದ ಎಪಿಐಗಳ ಅಗತ್ಯವಿದೆ. ಇವುಗಳಲ್ಲಿ ಕೆಲವನ್ನು ಬಿಟ್ಟರೆ ಉಳಿದೆಲ್ಲವನ್ನೂ ಚೀನಾದಿಂದಲೇ ಆಮದು ಮಾಡಿಕೊಳ್ಳಲಾಗುತ್ತಿದೆ. ಕೋವಿಡ್ ಸಾಂಕ್ರಾಮಿಕದ ನಂತರದ ವರ್ಷಗಳಲ್ಲಿ ಎಪಿಐಗಳ ದರವನ್ನು ಚೀನಾ ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದೆ. 2021-22ನೇ ಸಾಲಿನಲ್ಲಿ ಚೀನಾದಿಂದ ಆಮದು ಮಾಡಿಕೊಂಡ ಪ್ರತಿ ಟನ್ ಎಪಿಐಗೆ ಸರಾಸರಿ ₹6.56 ಲಕ್ಷ ಪಾವತಿಸಲಾಗಿತ್ತು. 2022-23ನೇ ಸಾಲಿನಲ್ಲಿ ಇದೇ ಬೆಲೆ ₹9.64 ಲಕ್ಷಕ್ಕೆ ಏರಿಕೆಯಾಗಿದೆ.

ಎಪಿಐಗಳಿಗಾಗಿ ಚೀನಾದ ಅವಲಂಬನೆಯನ್ನು ತಗ್ಗಿಸಲು ಕೇಂದ್ರ ಸರ್ಕಾರವು ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಆದರೆ, ಅವು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ಬರದೇ ಇರುವುದು, ವಿದೇಶಗಳ ಮೇಲಿನ ಅವಲಂಬನೆ ತಗ್ಗದೇ ಇರುವುದಕ್ಕೆ ಕಾರಣವಾಗಿದೆ. ಅತ್ಯಗತ್ಯದ 56 ಎಪಿಐಗಳಲ್ಲಿ 35 ಎಪಿಐಗಳನ್ನು ದೇಶೀಯವಾಗಿಯೇ ತಯಾರಿಸಲು ಕೇಂದ್ರ ಸರ್ಕಾರವು ಅನುಮತಿ ನೀಡಿತ್ತು. ಇದಕ್ಕಾಗಿ ಕೆಲವಾರು ನಿಯಮಗಳನ್ನು ಸಡಿಲ ಮಾಡಿತ್ತು. ಸರ್ಕಾರಿ-ಖಾಸಗಿ ಸಹಭಾಗಿತ್ವದಲ್ಲಿ ಎಪಿಐ ತಯಾರಿಕಾ ಘಟಕಗಳನ್ನು ಆರಂಭಿಸಲಾಗಿತ್ತು. ಆದರೆ, ಇಲ್ಲಿ ತಯಾರಿಸಲಾದ ಎಪಿಐಗಳ ದರವು, ಚೀನಾದಿಂದ ಆಮದು ಮಾಡಿಕೊಂಡ ಎಪಿಐಗಳ ದರಕ್ಕಿಂತ ದುಬಾರಿಯಾಗಿತ್ತು. ಇದರಿಂದಾಗಿ ಔಷಧ ತಯಾರಕರು ಆಮದು ಎಪಿಐಗಳನ್ನೇ ಖರೀದಿಸಿದರು. ಪರಿಣಾಮವಾಗಿ ದೇಶೀಯ ಎಪಿಐ ಘಟಕಗಳು ಮುಚ್ಚಿದವು. ಎಪಿಐಗಳ ತಯಾರಿಕೆಗೆ ಅಗತ್ಯವಿರುವ ಮೂಲವಸ್ತುಗಳನ್ನು ದೇಶೀಯವಾಗಿ ತಯಾರಿಸದೆ, ವಿದೇಶದಿಂದ ಆಮದು ಮಾಡಿಕೊಳ್ಳುವುದಕ್ಕೆ ಆದ್ಯತೆ ನೀಡಲಾಯಿತು. ಈ ಕಾರಣದಿಂದಲೇ ದೇಶೀಯವಾಗಿ ತಯಾರಿಸಲಾದ ಎಪಿಐಗಳ ದರ ದುಬಾರಿಯಾಯಿತು ಎಂದು ವಿಶ್ಲೇಷಿಸಲಾಗಿದೆ.

ಔಷಧಗಳ ದರವನ್ನು ನಿಯಂತ್ರಣದಲ್ಲಿ ಇಡಲು ಸರ್ಕಾರವು ಹಲವು ಹಂತಗಳಲ್ಲಿ ಕೆಲಸ ಮಾಡಬೇಕಿದೆ ಎಂಬುದು ತಜ್ಞರ ಅಭಿಪ್ರಾಯ. ಕಾರ್ಮಿಕರ ವೇತನ, ಕಚ್ಚಾವಸ್ತುಗಳ ಲಭ್ಯತೆ, ಮೂಲಸೌಕರ್ಯ ಮತ್ತು ಆರ್ಥಿಕ ನೆರವು, ಎಪಿಐಗಳ ಬೆಲೆಯನ್ನು ನಿರ್ಧರಿಸುವ ಅಂಶಗಳಾಗಿವೆ. ಚೀನಾಕ್ಕಿಂತ ಭಾರತದಲ್ಲಿ ಕಡಿಮೆ ವೇತನಕ್ಕೆ ಕಾರ್ಮಿಕರು ಲಭ್ಯವಿದ್ದಾರೆ. ಆದರೆ, ದೇಶೀಯ ಕಚ್ಚಾವಸ್ತುಗಳ ಪೂರೈಕೆ ಇಲ್ಲ. ಎಪಿಐಗಳ ತಯಾರಿಕೆಗೆ ಅಗತ್ಯವಿರುವ ಗುಣಮಟ್ಟದ ಸುಣ್ಣದ ಗಣಿಗಳು ಭಾರತದಲ್ಲಿ ಇಲ್ಲ. ಜತೆಗೆ, ಭಾರತದಲ್ಲಿನ ಪೆಟ್ರೊಕೆಮಿಕಲ್ಸ್ ಸಂಸ್ಕರಣ ಘಟಕಗಳು ಎಪಿಐ ತಯಾರಿಕೆಗೆ ಅಗತ್ಯವಾದ ರಾಸಾಯನಿಕ ವಸ್ತುಗಳನ್ನು ಸಂಸ್ಕರಿಸುವುದಿಲ್ಲ. ಈ ದಿಸೆಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು ಎಂದು ಪ್ರಾಕ್ಸಿಸ್ ಗ್ಲೋಬಲ್ ಅಲಯನ್ಸ್ (ಪಿಜಿಎ) ತನ್ನ ಅಧ್ಯಯನ ವರದಿಯಲ್ಲಿ ಹೇಳಿದೆ.

ಇದಲ್ಲದೆ, ಭಾರತದಲ್ಲಿ ವಿದ್ಯುತ್ ಲಭ್ಯತೆ ಮತ್ತು ಪೂರೈಕೆಯಲ್ಲಿ ಸ್ಥಿರತೆ ಇಲ್ಲ. ಪೂರೈಕೆಯಲ್ಲಿನ ನಷ್ಟದ ಹೊರೆಯನ್ನು ಬಳಕೆದಾರರ ಮೇಲೆ ಹೇರಲಾಗುತ್ತದೆ. ಇದರಿಂದ ವಿದ್ಯುತ್‌ಗಾಗಿ ಎಪಿಐ ತಯಾರಕರು ಹೆಚ್ಚು ಹಣ ವ್ಯಯ ಮಾಡಬೇಕಾಗುತ್ತದೆ. ಈ ಎಲ್ಲಾ ಅಡೆತಡೆಗಳನ್ನು ಮೊದಲು ನಿವಾರಿಸಬೇಕು. ಆನಂತರ ಎಪಿಐಗಳನ್ನು ದೇಶೀಯವಾಗಿ ತಯಾರಿಸಲು ಒತ್ತು ನೀಡಬೇಕು. ಆಗ ಮಾತ್ರ ದೇಶೀಯವಾಗಿ ಕಡಿಮೆ ವೆಚ್ಚದಲ್ಲಿ ಎಪಿಐ ತಯಾರಿಸಲು ಸಾಧ್ಯವಾಗುತ್ತದೆ ಎಂದು ವರದಿ ಹೇಳಿದೆ.

ಹಲವು ತೆರಿಗೆಗಳ ಹೊರೆ

ಆಮದು ಎಪಿಐಗಳ ದರ ಏರಿಕೆಯಾಗಲು ಸರ್ಕಾರದ ತೆರಿಗೆ ನೀತಿಯೂ ಒಂದು ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಬಹುತೇಕ ಎಪಿಐಗಳ ಮೇಲೆ ಶೇ7.5ರಷ್ಟು ಆಮದು ಸುಂಕ ವಿಧಿಸಲಾಗುತ್ತಿದೆ. ಜೀವರಕ್ಷಕ ಔಷಧಗಳ ತಯಾರಿಕೆಯಲ್ಲಿ ಬಳಸಲಾಗುವ ಕೆಲವು ಎಪಿಐಗಳಿಗೆ ಆಮದು ಸುಂಕದಿಂದ ವಿನಾಯಿತಿ ನೀಡಲಾಗಿದೆ. ಕೆಲವು ಎಪಿಐಗಳ ಮೇಲೆ ಶೇ 10ರಷ್ಟು ಆಮದು ಸುಂಕ ವಿಧಿಸಲಾಗುತ್ತಿದೆ.

ಆಮದು ಸುಂಕ ಹೊರತುಪಡಿಸಿ, ಗರಿಷ್ಠ ಶೇ 18ರಷ್ಟು ಜಿಎಸ್‌ಟಿಯನ್ನು ಎಪಿಐಗಳ ಮೇಲೆ ವಿಧಿಸಲಾಗುತ್ತಿದೆ. ಕೆಲವು ಎಪಿಐಗಳಿಗೆ ಜಿಎಸ್‌ಟಿಯಿಂದ ವಿನಾಯಿತಿ ನೀಡಿದ್ದರೆ, ಕೆಲವಕ್ಕೆ ಶೇ 5ರಷ್ಟು ಜಿಎಸ್‌ಟಿ ವಿಧಿಸಲಾಗುತ್ತಿದೆ. ಜಿಎಸ್‌ಟಿ ಜಾರಿಗೂ ಮುನ್ನ ಶೇ 12.5ರಷ್ಟು ಮೌಲ್ಯವರ್ಧಿತ ತೆರಿಗೆ ವಿಧಿಸಲಾಗುತ್ತಿತ್ತು. ಜಿಎಸ್‌ಟಿ ಜಾರಿ ನಂತರ ಅದನ್ನು ಶೇ 18ರವರೆಗೂ ಏರಿಕೆ ಮಾಡಲಾಯಿತು. ಇದರಿಂದ ಎಪಿಐಗಳ ಮೇಲೆ ತೆರಿಗೆಯ ಹೊರೆ ಹೆಚ್ಚಳವಾಯಿತು. ಆಮದು ಎಪಿಐಗಳ ಮೇಲೆ ಶೇ 10ರಷ್ಟು ಸರ್ಚಾರ್ಜ್ ಸಹ ವಿಧಿಸಲಾಗುತ್ತಿದೆ. 2022ರ ಆಗಸ್ಟ್‌ನಲ್ಲಿ ಕೆಲವು ಆಮದು ಎಪಿಐಗಳ ಮೇಲೆ ಶೇ 10ರಷ್ಟು 'ಆ್ಯಂಟಿ ಡಂಪಿಂಗ್ ಡ್ಯೂಟಿ' ವಿಧಿಸಲಾಗುತ್ತಿದೆ. ದೇಶೀಯವಾಗಿ ಲಭ್ಯವಿದ್ದರೂ, ಕಡಿಮೆ ಬೆಲೆಗೆ ಆಮದು ಮಾಡಿಕೊಳ್ಳಲು ಸಾಧ್ಯವಿರುವ ಎಪಿಐಗಳ ಆಮದನ್ನು ಕಡಿಮೆ ಮಾಡಲು ಈ ಸ್ವರೂಪದ ತೆರಿಗೆ ವಿಧಿಸಲಾಗುತ್ತದೆ. ಈಗ ಈ ತೆರಿಗೆ ಸಹ ಜಾರಿಯಲ್ಲಿರುವ ಕಾರಣ, ಆಮದು ಎಪಿಐಗಳ ಬೆಲೆ ವಿಪರೀತ ಪ್ರಮಾಣದಲ್ಲಿ ಏರಿಕೆಯಾಗಿದೆ. ಪರಿಣಾಮವಾಗಿ ಔಷಧಗಳ ಬೆಲೆಯಲ್ಲೂ ಏರಿಕೆಯಾಗಲಿದೆ.

ಆಧಾರ: ರಾಷ್ಟ್ರೀಯ ಔಷಧ ಬೆಲೆ ಪ್ರಾಧಿಕಾರ, ಪಿಟಿಐ, ವಾಣಿಜ್ಯ ಸಚಿವಾಲಯದ ಆಮದು-ರಫ್ತು ದತ್ತಾಂಶ ಬ್ಯಾಂಕ್, ಪ್ರಾಕ್ಸಿಸ್ ಗ್ಲೋಬಲ್ ಅಲಯನ್ಸ್‌ನ 'ಚೀನಾದ ಎಪಿಐ ಅವಲಂಬನೆ ತಗ್ಗಿಸಲು ಭಾರತಕ್ಕಿರುವ ದಾರಿಗಳು' ವರದಿ

ಓದು, ಬರಹ ಕೌಶಲ ಮೌಲ್ಯಮಾಪನ

ಸಾಕ್ಷರತಾ ಪರೀಕ್ಷೆಯಲ್ಲಿ 22 ಲಕ್ಷ ಜನ ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಮಾರ್ಚ್ ಆರಂಭದಲ್ಲಿ ನಡೆಸಿದ್ದ, 15ರಿಂದ 80 ವರ್ಷದೊಳಗಿನ ವಯಸ್ಕರ 'ಮೂಲ ಸಾಕ್ಷರತಾ ಪರೀಕ್ಷೆ'ಯಲ್ಲಿ ದೇಶದ 22.7 ಲಕ್ಷ ಜನರು ಭಾಗಿಯಾಗಿದ್ದರು. ಈ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಯಸ್ಕರನ್ನು ಸಾಕ್ಷರರು ಎಂಬುದಾಗಿ ಪರಿಗಣಿಸಲು ಇದೇ ಮೊದಲ ಬಾರಿಗೆ ಸಾಕ್ಷರತೆ ಹಾಗೂ ಸಂಖ್ಯಾಶಾಸ್ತ್ರದ ಮೌಲ್ಯಮಾಪನ ಪರೀಕ್ಷೆಯನ್ನು ನಡೆಸಲಾಗಿತ್ತು.

ಮಧ್ಯಪ್ರದೇಶದಲ್ಲಿ ಅತಿಹೆಚ್ಚು ಅಂದರೆ, 9.25 ಲಕ್ಷ ಜನರು ವಯಸ್ಕರು ಭಾಗಿಯಾಗಿದ್ದರು. ಈ ಪೈಕಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆಯೇ ಐದು ಲಕ್ಷಕ್ಕೂ ಅಧಿಕವಿತ್ತು. ವಯಸ್ಕರಿಗೆ ಅಕ್ಷರ ಕಲಿಸುವ ಪ್ರಕ್ರಿಯೆಯಲ್ಲಿ ಸ್ವಯಂಸೇವಕರಾಗಿ ತೊಡಗಿಸಿಕೊಳ್ಳಲು ಶಾಲೆ ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸರ್ಕಾರ ಪ್ರೋತ್ಸಾಹ ನೀಡಿತ್ತು.

ಕೇಂದ್ರ ಶಿಕ್ಷಣ ಸಚಿವಾಲಯವು ಹತ್ತು ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಇದೇ 19ರಂದು ಪರೀಕ್ಷೆ ನಡೆಸಿತ್ತು. ಓದು, ಬರಹ ಹಾಗೂ ಸಂಖ್ಯಾ ಕೌಶಲವವನ್ನು ತಿಳಿದುಕೊಳ್ಳುವುದು ಪರೀಕ್ಷೆಯ ಉದ್ದೇಶವಾಗಿತ್ತು. 15 ವರ್ಷ ವಯೋಮಾನಕ್ಕಿಂತ ಮೇಲ್ಪಟ್ಟ ಅನಕ್ಷರಸ್ಥರನ್ನು ಗುರಿಯಾಗಿಸಿಕೊಂಡು ಈ ಕಾರ್ಯಕ್ರಮ ರೂಪಿಸಲಾಗಿದೆ. ಅದರಲ್ಲೂ ಮಹಿಳೆಯರು ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ರಾಜ್ಯಗಳನ್ನೇ ಗುರಿ ಮಾಡಿಕೊಳ್ಳಲಾಗಿತ್ತು.

ಸಚಿವಾಲಯದ ಅಧಿಕಾರಿಗಳ ಪ್ರಕಾರ, ದೇಶದಲ್ಲಿ 15–20 ಕೋಟಿ ಅನಕ್ಷರಸ್ಥರಿದ್ದು, ಪ್ರತೀ ವರ್ಷ ಒಂದು ಕೋಟಿ ಅನಕ್ಷರಸ್ಥರನ್ನು ಈ ಕಾರ್ಯಕ್ರಮದ ವ್ಯಾಪ್ತಿಗೆ ತರುವ ಗುರಿಯನ್ನು ಸರ್ಕಾರ ಹಾಕಿಕೊಂಡಿದೆ.

ಸಮುದಾಯಗಳ ಸ್ವಯಂಸೇವಕ ಶಿಕ್ಷಕರು, ಶಾಲೆ ಹಾಗೂ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು, ಶಿಕ್ಷಕರ ತರಬೇತಿ ಸಂಸ್ಥೆಗಳ ಶಿಕ್ಷಕರ ಮೂಲಕ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವು ಎಲ್ಲ ವಿಶ್ವವಿದ್ಯಾಲಯಗಳ ಕುಲಪತಿಗಳು ಹಾಗೂ ಕಾಲೇಜುಗಳ ಪ್ರಾಂಶುಪಾಲರಿಗೆ ಈ ಸಂಬಂಧ ಜನವರಿ 27ರಂದು ಸೂಚನೆ ನೀಡಿತ್ತು. ಸ್ವಯಂಸೇವಕರಾಗಿ ತೊಡಗಿಸಿಕೊಂಡ ಎಲ್ಲ ವಿದ್ಯಾರ್ಥಿಗಳಿಗೆ ಕೃಪಾಂಕ ನೀಡುವ ವ್ಯವಸ್ಥೆ ಜಾರಿಗೆ ತರಬೇಕು ಎಂದು ಸೂಚಿಸಿತ್ತು. ಶಿಕ್ಷಕ ತರಬೇತಿ ಸಂಸ್ಥೆಗಳ ಎಲ್ಲ ವಿದ್ಯಾರ್ಥಿಗಳ ಪಾಲ್ಗೊಳ್ಳುವಿಕೆಯನ್ನು ಕಡ್ಡಾಯ ಮಾಡಲಾಗಿತ್ತು. ಐವರು ವಯಸ್ಕ ಅಭ್ಯರ್ಥಿಗಳಿಗೆ ಒಬ್ಬ ವಿದ್ಯಾರ್ಥಿಯನ್ನು ನೇಮಿಸಲಾಗಿತ್ತು. ಸ್ವಯಂಸೇವಕರಾಗಿ ಕೆಲಸ ಮಾಡಿದ ವಿದ್ಯಾರ್ಥಿಗಳು ತಲಾ 2 ಕೃಪಾಂಕಗಳನ್ನು ಪಡೆಯಲಿದ್ದಾರೆ ಎಂದು ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪರೀಕ್ಷೆಯ ವಿವರ

- ಮಧ್ಯಪ್ರದೇಶದಲ್ಲಿ ಪರೀಕ್ಷೆ ತೆಗೆದುಕೊಂಡ 9.25 ಲಕ್ಷ ಅಭ್ಯರ್ಥಿಗಳಲ್ಲಿ 5.91 ಲಕ್ಷ ಮಹಿಳಾ ಅಭ್ಯರ್ಥಿಗಳಿದ್ದರು. ಆರಂಭದಲ್ಲಿ 5.35 ಲಕ್ಷ ಅನಕ್ಷರಸ್ಥರಿಗೆ ಅಕ್ಷರ ಕಲಿಸುವ ಗುರಿ ಹಾಕಿಕೊಳ್ಳಲಾಗಿತ್ತು. ಬುಡಕಟ್ಟು ಜಿಲ್ಲೆ ಝಬುವಾದಲ್ಲಿ 58,470 ಮಂದಿ ಪರೀಕ್ಷೆ ಬರೆದಿದ್ದಾರೆ. ಈ ಪೈಕಿ ಮದುಮಗನೊಬ್ಬ ತನ್ನ ಮದುವೆಯ ಹಿಂದಿನ ದಿನ ಪರೀಕ್ಷೆಗೆ ಹಾಜರಾಗಿದ್ದ
- ರಾಜಸ್ಥಾನದ 33 ಜಿಲ್ಲೆಗಳಲ್ಲಿ 3.98 ಲಕ್ಷ ಮಹಿಳೆಯರೂ ಸೇರಿದಂತೆ 5.48 ಲಕ್ಷ ಮಂದಿ ಪರೀಕ್ಷೆ ಬರೆದಿದ್ದರು
- ತಮಿಳುನಾಡಿನಲ್ಲಿ 92,371 ಪುರುಷರು ಸೇರಿದಂತೆ 5.28 ಲಕ್ಷ ಅಭ್ಯರ್ಥಿಗಳು ಹಾಜರಾಗಿದ್ದರು. 13 ಜಿಲ್ಲೆಗಳಲ್ಲಿ ತೃತೀಯಲಿಂಗಿ ಅಭ್ಯರ್ಥಿಗಳೂ ಇದ್ದರು
- ಉತ್ತರ ಪ್ರದೇಶದ ಎಲ್ಲ 75 ಜಿಲ್ಲೆಗಳಿಂದ 1.46 ಲಕ್ಷ ವಯಸ್ಕರು ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು
- ಲಡಾಖ್‌ನಿಂದ 7,366 ಜನರು ಪರೀಕ್ಷಾ ಕೇಂದ್ರದಲ್ಲಿ ಹಾಜರಿದ್ದರು
- ಒಡಿಶಾ, ಜಾರ್ಖಂಡ್, ಪಂಜಾಬ್ ಹಾಗೂ ಮೇಘಾಲಯ, ಚಂಡೀಗಡದಲ್ಲೂ ಸಾಕ್ಷರತಾ ಪರೀಕ್ಷೆ ನಡೆದಿತ್ತು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಬುರ್ಖಾಧಾರಿ ಹುಡುಗಿಯರು ಹಾಡೊಂದಕ್ಕೆ ಹುರುಪಿನಿಂದ ಹೆಜ್ಜೆ ಹಾಕಿದ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಹಾಡಿನಲ್ಲಿ 'ಜೈಶ್ರೀರಾಮ್' ಎಂಬ ಉಲ್ಲೇಖ ಕೇಳಿಸುತ್ತದೆ. ಬುರ್ಖಾ ಧರಿಸಿರುವ ಹುಡುಗಿಯರ ಜತೆ ಕೆಂಪು ದಿರಿಸಿನಲ್ಲಿರುವ ಮಹಿಳೆಯೂ ನೃತ್ಯ ಮಾಡುವುದು ಕಾಣಿಸುತ್ತದೆ. 'ಶಿಕ್ಷಕಿಯು ಖಟ್ಟರ್ ಹಿಂದೂ ಆಗಿದ್ದಾಗ ಮಾತ್ರ ಇದು ಸಾಧ್ಯ' ಎಂದು ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ವಿಡಿಯೊ ಜೊತೆ ಉಲ್ಲೇಖಿಸಿದ್ದಾರೆ. ಆದರೆ ಇದು ತಿರುಚಲಾದ ವಿಡಿಯೊ.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ವಿಡಿಯೊ ತಿರುಚಿದ್ದು ಎಂದು 'ಇಂಡಿಯಾಟುಡೇ' ವರದಿ ಮಾಡಿದೆ. ಬಾಂಗ್ಲಾದೇಶದ ಢಾಕಾ ವಲಯದ ಮದರಿಪುರ ಬಾಲಕಿಯರ ಪ್ರೌಢಶಾಲೆಯ ವಾರ್ಷಿಕೋತ್ಸವದ ವೇಳೆ ಹುಡುಗಿಯರು ನೃತ್ಯ ಮಾಡಿದ ವಿಡಿಯೊ ಇದಾಗಿದೆ. ಆದರೆ ಮೂಲ ವಿಡಿಯೊದಲ್ಲಿ 'ಅಮರ್ ಮೊಂಟಾ ಜೆ ಆಜ್ ಎಮೊಲೆಲೊ' ಎಂಬ ಬಂಗಾಳಿ ಗೀತೆಯನ್ನು ಬಳಸಲಾಗಿದೆ. ಮೂಲ ವಿಡಿಯೊದ ಗೀತೆಯನ್ನು ಮ್ಯೂಟ್ ಮಾಡಿ, ಬೇರೊಂದು ಗೀತೆಯನ್ನು ಸೇರಿಸಿ ತಿರುಚಲಾಗಿದೆ ಎಂದು ವೆಬ್‌ಸೈಟ್ ವರದಿ ಮಾಡಿದೆ.

ಬೆರಗಿನ ಬೆಳಕು
ಗುರುರಾಜ ಕರಜಗಿ

ಸುಖ ಸರ್ವರಲ್ಲಿ

ಸಾರ್ವಲೌಕಿಕಸೌಖ್ಯ ನೆಲಸುವನ್ನೆಗಮಿಳೆಯೊ - |
ಳೊರ್ವನುಂ ಸುಖಿಯಲ್ಲು, ದಿಟದಿ, ಪೂರ್ಣದಲಿ ||
ರ್ವನುಬ್ಬಸದ ಬಿಸಿ ವಿಷಯವಾಯುವಾಗಿ ತಾ |
ನುರ್ವರೆಯ ಮುಸುಕೀತು – ಮಂಕುತಿಮ್ಮ || 853 ||

ಪದ-ಅರ್ಥ: ಸಾರ್ವಲೌಕಿಕಸೌಖ್ಯ = ಸಾರ್ವ(-ಸರ್ವರ) + ಲೌಕಿಕ + ಸೌಖ್ಯ, ನೆಲಸುವನ್ನೆಗ-ಮಿಳೆಯೊಳೊ ರ್ವನುಂ = ನೆಲಸುವನ್ನೆಗಂ(ನೆಲೆ-ಸುವುದಾದರೆ) + ಇಳೆಯೊಳ್(ಭೂಮಿಯಲ್ಲಿ) + ರ್ವನುಂ(ಒಬ್ಬನು), ಒರ್ವನುಬ್ಬಸದ-ಒರ್ವನ(ಒ-ಬ್ಬನ) + ಉಬ್ಬಸದ, ತಾನುರ್ವರೆಯ = ತಾನು- + ಉರ್ವರೆಯ(ಭೂಮಿಯ).

ವಾಚ್ಯಾರ್ಥ: ಪ್ರಪಂಚದಲ್ಲಿ ಸರ್ವರಿಗೂ ಲೌಕಿಕ ಸೌಖ್ಯ ದೊರಕಬೇಕಾದರೆ ಒಬ್ಬನೇ ಪೂರ್ಣವಾಗಿ, ನಿಜವಾಗಿ ಸುಖಿಯಾಗಿರಲಾರ. ಒಬ್ಬನ ಸಂಕಟದ ಬಿಸಿ ವಿಷಯವಾಯುವಿನಂತೆ ಜಗತ್ತನ್ನೇ **ಮುಸುಕೀತು.**

ವಿವರಣೆ: ಒಂದು ಶಾಲೆಯಲ್ಲಿ ತರಗತಿ ನಡೆಯುತ್ತಿತ್ತು. ಶಿಕ್ಷಕಿ 'ಸರ್ವೇ ಜನಾ: ಸುಖಿನೋ ಭವಂತು' ಎಂಬ ಸೂಕ್ತದ ಅರ್ಥ ಹೇಳುತ್ತ ಪ್ರಪಂಚ ಸುಖಿಯಾಗಿರಬೇಕಾದರೆ ಎಲ್ಲರೂ ಶ್ರಮಿಸಬೇಕು. ಇಡೀ ಪ್ರಪಂಚದ ವಾತಾವರಣ ಎಲ್ಲರ ಪ್ರಯತ್ನದಿಂದ ಮಾತ್ರ ಸಾಧ್ಯ. ಒಬ್ಬನಿಂದ ಏನನ್ನೂ ಮಾಡಲು ಸಾಧ್ಯವಿಲ್ಲ ಎಂದು ವಿವರಿಸುತ್ತಿದ್ದರು. ಆಗ ನಾಗೇಶ ಎದ್ದು ನಿಂತ. "ಮ್ಯಾಡಂ, ನೀವು ಹೇಳಿದ್ದು ಸ್ವಲ್ಪ ಮಟ್ಟಿಗೆ ಸರಿ. ಆದರೆ ಬಹುತೇಕ ಸಮಾಜದ ಸಂತೋಷ ಒಬ್ಬನನ್ನೇ ಅವಲಂಬಿಸಿ-ರುತ್ತದೆ" ಎಂದ. "ಅದು ಹೇಗೆ?" ಎಂದು ಶಿಕ್ಷಕಿ ಕೇಳಿದಾಗ, ನಾಗೇಶ ಸರಸರನೆ ಮುಂದೆ ಬಂದು ಶಿಕ್ಷಕಿಯ ಪಕ್ಕ ನಿಂತ. ಅವನ ಮುಂದಿನ ಬೆಂಚಿನ ಮೇಲೆ ಇಬ್ಬರು ಹುಡುಗಿಯರು. ನಾಗೇಶ ಎಲ್ಲರೂ ನೋಡುತ್ತಿರುವಂತೆ ಒಂದು ಹೆಜ್ಜೆ ಮುಂದಿಟ್ಟು ಬೆಂಚಿನ ಮೇಲೆ ಕುಳಿತಿದ್ದ ಹುಡುಗಿಯೊಬ್ಬಳ ಕೆನ್ನೆಗೆ ಛಟೀರೆಂದು ಹೊಡೆದು ಬಿಟ್ಟ. ತರಗತಿ ಸ್ತಬ್ಧವಾಯಿತು. ಹುಡುಗಿ ಅಳತೊಡಗಿದಳು. ಶಿಕ್ಷಕಿ ಕೋಪದಿಂದ, "ನಾಗೇಶಾ, ಯಾಕೆ ಅವಳನ್ನು ಹೊಡೆದೆ?" ಎಂದು ಕಿರಿಚಿದರು. ಹುಡುಗರು ಹೋ ಎಂದು ಬೊಬ್ಬಿರಿದರು. ನಾಗೇಶ ಕೈ ಮುಗಿದು ಆ ಹುಡುಗಿಯ ಕ್ಷಮೆ ಕೇಳಿದ. ನಂತರ ಹೇಳಿದ, "ಮ್ಯಾಡಂ, ಮೊದಲು ಇಡೀ ಕ್ಲಾಸು ಸಂತೋಷವಾಗಿತ್ತು, ನಗು ತುಂಬಿತ್ತು. ನನ್ನ ಒಂದು ಕ್ರಿಯೆಯಿಂದ ಇಡೀ ತರಗತಿಯ ವಾತಾವರಣ ಕೆಟ್ಟು ಹೋಯಿತು. ಒಬ್ಬನಿಂದಲೇ ತಾನೇ ಇಡೀ ತರಗತಿಯ ವಾತಾವರಣ ಬದಲಾದದ್ದು?" ಕಗ್ಗ ಈ ಮಾತನ್ನು ಸುಂದರವಾಗಿ ಹೇಳುತ್ತದೆ. ಇಡೀ ಪ್ರಪಂಚ ಸುಖಿಯಾಗಿರಬೇಕಾದರೆ, ಕೇವಲ ಒಬ್ಬನೇ ಸುಖಿಯಾದರೆ ಸಾಲದು. ಎಲ್ಲರೂ ಸುಖಿಯಾಗಿರಬೇಕು. ಒಬ್ಬನೇ ಒಬ್ಬ ಅಸಂತೃಪ್ತನಾ-ಗಿದ್ದರೆ, ದು:ಖಸಂತೋಷಿಯಾಗಿದ್ದರೆ ಅವನ ನಡತೆ ವಿಷವಾಯುವಿನಂತೆ ಪ್ರಪಂಚವನ್ನೇ ಆವರಿಸುತ್ತದೆ. ಇತಿಹಾಸದಲ್ಲಿ ಕಂಡಿಲ್ಲವೇ? ಒಬ್ಬ ಅಲೆಗ್ಝಾಂಡರ್‌ನ ಅಧಿಕಾರ, ಸಾಮ್ರಾಜ್ಯ ದಾಹ ಅದೆಷ್ಟು ಜನರನ್ನು ಸಂಕಟಕ್ಕೆ ತಳ್ಳಿತು? ಒಬ್ಬ ಭಯೋತ್ಪಾದಕನ ರಕ್ತದಾಹ ವಿಮಾನದಲ್ಲಿದ್ದ ನೂರಾರು ಅಮಾಯಕರ ಪ್ರಾಣಕ್ಕೆ ಎರವಾಯಿತು. ಒಬ್ಬ ರಾಜಕಾರಣಿಯ ಅಧಿಕಾರ, ಧನದಾಹ ಸಾವಿರಾರು ಹಸಿದ ಬಾಯಿಗಳಿಗೆ ಹಾಕಬೇಕಾದದ್ದನ್ನು ನುಂಗಿಬಿಡುತ್ತದೆ. ಆದ್ದರಿಂದ ಲೋಕದಲ್ಲಿ ಬದುಕಿರುವ ಯಾರೂ ತಾನೇ ಸುಖಿ, ಸಂಪೂರ್ಣ ತನ್ನಿಂದಾಗಿಯೇ ಸುಖಿಯಾಗಿದ್ದೇನೆ ಎಂದು ಭಾವಿಸುವುದು ಸಾಧ್ಯವಿಲ್ಲ. ನನ್ನ ಸುಖಕ್ಕೆ ದು:ಖಕ್ಕೆ ನಾನು ಮಾತ್ರ ಕಾರಣನಲ್ಲ ಎಂಬ ಅರಿವು ತುಂಬ ಒಳ್ಳೆಯದು.

ಗುಂಡಣ್ಣ

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮಾರ್ಚ್ 31, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ದಶಮಿ ಗಂ. 25-59 ನಕ್ಷತ್ರ: ಪುಷ್ಯ ಗಂ. 25-57, ಮಳೆ ನಕ್ಷತ್ರ: ಉತ್ತರಭಾದ್ರಾ, ಯೋಗ: ಸುಕರ್ಮ ಗಂ. 25-56, ಕರಣ: ತೈತಿಲ ಗಂ. 12-45, ಮೀನ ಮಾಸದ 16 ನೇ ದಿನ. ರಾಹುಕಾಲ : ಬೆಳಿಗ್ಗೆ 10-30 –12-00
ಸೂರ್ಯೋದಯ : 06-31 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 08 ರಂಜಾನ್
ಅದೃಷ್ಟ ಸಂಖ್ಯೆ : 9, 5

ಮೇಷ: ಹಿಂದುಸ್ತಾನಿ ಸಂಗೀತಗಾರರು ಭಾವಪರವಶರಾಗಿ ಹಾಡಿದ ವಿರಹ ರಾಗಕ್ಕೆ ಅಭಿಮಾನಿಗಳು ಮರುಳಾಗುತ್ತಾರೆ. ಮಾತು ಬಹಳ ಮುಖ್ಯವಾಗಿರುವುದರಿಂದ ಕಡಿಮೆ ಹಾಗೂ ತೂಕದ ಮಾತನಾಡಿ.

ವೃಷಭ: ಮನೆಯ ಕಾರ್ಮಿಕರು ನಿಮಗಾಗಿ ಶ್ರಮಿಸುವುದರಿಂದ ಅವರನ್ನು ಗೌರವದಿಂದ ಕಾಣಿ. ಯಾವುದೇ ಆಹಾರವಾಗಲಿ ಹಿತವಾಗಿ ಹಾಗೂ ಮಿತವಾಗಿ ಸೇವಿಸುವುದು ಉತ್ತಮಕರ.

ಮಿಥುನ: ವ್ಯವಸ್ಥಾಪಕರ ಜತೆ ಧೈರ್ಯದ ಮಾತುಗಳು ಇಂದಿನ ಜವಾಬ್ದಾರಿಯನ್ನು ಉತ್ತಮ ಗುಣಮಟ್ಟದ್ದಾಗಿಸುತ್ತದೆ. ಯಕ್ಷಪ್ರಶ್ನೆಯೇ ಆಗಿ ಉಳಿದಿದ್ದ ಹಲವು ಕುಟುಂಬದ ಪ್ರಶ್ನೆಗಳಿಗೆ ಉತ್ತರ ದೊರೆಯುತ್ತದೆ.

ಕರ್ಕಾಟಕ: ಕೆಲವೊಂದು ದುರಭ್ಯಾಸಗಳು ಮಕ್ಕಳ ಮೇಲೆ ಪರಿಣಾಮ ಬೀರುತ್ತಿರುವುದು ಪ್ರತ್ಯಕ್ಷವಾಗಿ ಗೋಚರವಾಗುತ್ತದೆ. ತೆಗೆದುಕೊಳ್ಳುವ ಆಹಾರದ ವಿಚಾರವಾಗಿ ನಿರ್ಲಕ್ಷ್ಯ ಒಳ್ಳೆಯದಲ್ಲ.

ಸಿಂಹ: ಬದ್ಧವೈರಿಗಳ ಮನೆಯ ಕಷ್ಟವನ್ನು ನೋಡಿ ಮನಸ್ಸು ಕರಗಿ ಸಹಾಯ ಮಾಡುವ ಸಾಧ್ಯತೆಗಳಿವೆ. ಮನ ಗೆದ್ದ ಸಂಬಂಧ ಮನೆಯವರ ಮನಸ್ಸನ್ನು ಮುದಗೊಳಿಸುತ್ತದೆ. ಯಾವುದಕ್ಕೂ ಆತುರಗೊಳ್ಳದಿರಿ.

ಕನ್ಯಾ: ಗೆಲುವು ಅತ್ಯಂತ ಸಮೀಪ ಇರುವುದು ಬಹಳ ದೂರ ಇದ್ದಂತೆ ಭಾಸವಾಗಿ ಕೈಬಿಡದಿರಿ. ಕಾಲ ಕಳೆದಂತೆ ಪ್ರಕೃತಿ ಬದಲಾಗುವ ಹಾಗೆ ನಿಮ್ಮ ಮನಸ್ಸು ತಿಳಿಗೊಂಡು ಸಾಮಾನ್ಯ ಸ್ಥಿತಿಗೆ ಬರುವಿರಿ.

ತುಲಾ: ವಯಸ್ಸು ಹಾಗೂ ಉತ್ಸಾಹ ಇರುವಾಗ ಮಾತ್ರ ಸಮಾಜ ಸೇವೆ ಮಾಡ-ಬಹುದೆನ್ನುವುದನ್ನು ಗಮನದಲ್ಲಿಟ್ಟು ಸೇವೆ ಸಲ್ಲಿಸಿ. ದುರ್ಲಭವಾದಂತಹ ವಸ್ತುಗಳ ಸಂಪಾದನೆಯಲ್ಲಿ ಹೆಚ್ಚು ಸಮಯ ಸವೆಸದಿರಿ.

ವೃಶ್ಚಿಕ: ಗುರುಗಳ ಮಾತನ್ನು ಮೀರುವುದರಲ್ಲಿ ಶ್ರೇಯಸ್ಸು ಇರುವುದಿಲ್ಲ. ಮನೆಯಲ್ಲಿನ ಪದ್ಧತಿಗಳನ್ನು ನಡೆಸಿಕೊಂಡು ಹೋಗಲು ಹಿರಿಯರಾಗಿದ್ದಲ್ಲಿ ಸಂಪೂರ್ಣ ಗಮನ ವಹಿಸಬೇಕು. ರಾತ್ರಿಯ ವೇಳೆಯ ಪ್ರಯಾಣ ತಡೆಗಟ್ಟಿರಿ.

ಧನು: ಊರಿನ ಗೌರವಾನ್ವಿತ ವ್ಯಕ್ತಿಗಳೊಂದಿಗೆ ವ್ಯವಹಾರದ ಬಗ್ಗೆ ಹೇಳಿಕೊಂಡು ಅವರೊಂದಿಗೆ ಜಂಟಿ ಕಾರ್ಯಗಳನ್ನು ನಡೆಸಬಹುದು. ಹೊಸ ವಸ್ತ್ರ ಖರೀದಿ ಮಾಡುವಿರಿ. ಮಕ್ಕಳೊಂದಿಗೆ ಸಮಯ ಕಳೆಯುವಿರಿ.

ಮಕರ: ಮಂಗಳದ್ರವ್ಯ ಮಾರಾಟಗಾರರಿಗೆ ಲಾಭದಾಯಕ ದಿನ. ಯೋಗಿಗಳ ದರ್ಶನ ಹಾಗೂ ಮಾರ್ಗದರ್ಶನದ ಅವಶ್ಯಕತೆ ಇರುತ್ತದೆ. ಪ್ರಾಕೃತ ಭಾಷಾತಜ್ಞರಿಗೆ ಬೇಡಿಕೆ ಬರುವಂತಹ ಸಾಧ್ಯತೆಗಳಿವೆ.

ಕುಂಭ: ಧಾರ್ಮಿಕ ಕಾರ್ಯಕ್ರಮಗಳ ನಿರ್ವಹಣೆಯಲ್ಲಿ ಲೋಪದೋಷವನ್ನು ಮಾಡದೆ ಅತ್ಯಂತ ಎಚ್ಚರಿಕೆ ವಹಿಸಿ. ಹೂವು ಹಣ್ಣುಗಳ ಬೆಳೆಗಾರರಿಗೆ ಲಾಭ ನಷ್ಟಗಳೆರೆಡರ ಅನುಭವ ಆಗಬಹುದು. ತಲೆ ನೋವು ಕಾಣಿಸಿಕೊಳ್ಳಬಹುದು.

ಮೀನ: ಶಿಸ್ತಿನ ದಿನಚರಿಯು ಕಿರಿಯರ ಆದರ್ಶ ಆಗಲಿದೆ. ಸಿದ್ಧಿಸಿದ ಕಲೆಯನ್ನು ಹಣದ ಮುಖ ನೋಡಿ ಅನರ್ಥಕಾರಿಯನ್ನಾಗಿ ಮಾಡಿಕೊಳ್ಳಬೇಡಿ. ಮನದ ಆಸೆ ಪೂರೈಸಿಕೊಳ್ಳಲು ಹಣ ಖರ್ಚು ಮಾಡುವಿರಿ.

ಪದಬಂಧ 5274
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಸ್ಯಗಳಿಂದ ದೊರೆಯುವಆಹಾರವನ್ನುಮಾತ್ರ ತಿನ್ನುವವನು (4)
2.ನಡುವೆ ಬೆಲೆಯಿಟ್ಟು ತೋರಿದ ಗೌರವ (4)
4.ಮನಸ್ಸಿಗೆ ಸಂಬಧಿಸಿದ್ದು (4)
6.ತತ್ಪರತೆಯಿಂದ ಮಾಡುವ ವಿದ್ಯಾಭ್ಯಾಸ (3)
7.ಕನಸಲ್ಲಿರುವ ಕೊಳೆಕಾಣುತ್ತಿದೆಯೇ? (2)
9.ಪಶುವಿನತ್ತ ಬೀಸಿರುವ ಕೊಡಲಿ! (3)
11.ವರನಿಗೆ ಕೇಳಿಸಿದ ಧ್ವನಿ (2)
13. ವಿರುದ್ಧವಾದುದನ್ನು ಹೀಗೆ ಹೇಳಿ (3)
14.ಕನ್ನ ಕೊರೆದವನ ಚಾಳೀಸು (4)
16. ಪುಷ್ಪದ ಸಿಹಿ ರಸ (4)
17.ಕರ ನಡುವಿಟ್ಟಾಗಿನ ಸಂದರ್ಭ (4)

ಮೇಲಿಂದ ಕೆಳಕ್ಕೆ
1.ಉಷ್ಣದ ಪ್ರಮಾಣವನ್ನು ಕಂಡು ಹಿಡಿಯುವ ಸಾಧನ (5)
2.ಆಸ್ತಿಕನ ಸ್ವಾಧೀನದಲ್ಲಿರುವ ವಸ್ತು (2)
3.ನೆತ್ತರು ಪ್ರವಹಿಸುವಿಕೆ (5)
5.ಬಹುಮಾನವಾಗಿ ಸಿಕ್ಕ ಬಿಲ್ಲೆ ತಿರುವು ಮುರುವಾಗಿದೆ (3)
8.ಜೊತೆಯಲ್ಲಿ ಆಲೋಚಿಸುವವನು (5)
10.ಇದು ಬೊಗಳಿದರೆ ದೇವಲೋಕ ಹಾಳಾಗದು! (3)
12.ಮಾನಸಿಕ ಪ್ರಭಾವ ಬೀರಿ ವಶಪಡಿಸಿ ಕೊಳ್ಳುವುದು (5)
15.ಮೋದಕ ತಿಂದಾಗಲೇ ಈ ಸಂತೋಷ!



5273ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜಠರ 6.ಜವಾಬುದಾರಿ
7.ನಸರಿ 10.ಚರಮವಾಕ್ಯ
14.ಸಂಗತಿ 16.ಮಾರ್ಗದರ್ಶಕ
17.ಕವನ

ಮೇಲಿಂದ ಕೆಳಕ್ಕೆ:
1.ಜಡಿಮಳೆ 2.ರಸನ
3.ಗುಜರಿ 4.ಅಂಬುಧಿ
5.ಹರಿವಾಣ 8.ಸಕಾರಣ
9.ಕವಾಡಿಗ 11.ಅನುಮಾನ
12.ಮತಿಹೀನ 13.ಸಂದಣಿ
14.ಸಂಕರ 15.ತಿಲಕ

ಸುಡೊಕು 5660

	7			3		1		6
4		9						
	1		7		2		5	4
		3	5		6	4		
	4			2			6	7
		5	1		7	3		
	8		6		5	2		3
2		6						
	3	4		7		6	1	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5659 ಸುಡೊಕು

5	2	9	1	3	8	4	7	6
4	7	1	5	6	2	9	8	3
3	6	8	9	4	7	2	5	1
1	9	7	3	5	4	6	2	8
6	3	2	7	8	9	1	4	5
8	5	4	2	1	6	3	9	7
7	8	6	4	2	1	5	3	9
2	1	3	8	9	5	7	6	4
9	4	5	6	7	3	8	1	2

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ
ಶ್ರೀಮತಿ ಭಾರತಿ ಸುರೇಶ್ ಹೊನ್ನಪ್ಪನವರ್
ಸುರೇಶ್ ಜಿ.ಎಚ್.ರವರ ಧರ್ಮಪತ್ನಿ, ಹರ್ತಿಗ್ರಾಮ, ಗದಗ ತಾ॥
ಇವರು ದಿ: 30.03.2023 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಅಂತ್ಯಕ್ರಿಯೆಯನ್ನು ದಿ:31.03.2023ರ ಬೆಳಿಗ್ಗೆ 11 ಗಂಟೆಯ ನಂತರ, ಸ್ವಗ್ರಾಮ ಹರ್ತಿಗ್ರಾಮ, ಗದಗ ತಾ॥ ಇಲ್ಲಿ ನಡೆಸಲಾಗುವುದು.
ದುಃಖತಪ್ತರು: ಪತಿ–ಸುರೇಶ್ ಜಿ.ಎಚ್. ಮತ್ತು ಕುಟುಂಬದವರು–ಬಂಧುಗಳು
ಫೋ: 9844024414 / 9845175212

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀ ಜಿ. ವಿ. ಹನುಮಯ್ಯ ನವರು
ನಿವೃತ್ತ ಹಿರಿಯ ಸಹಾಯಕ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ (ವಾಣಿಜ್ಯ ಶಿಕ್ಷಣ),
ದಿನಾಂಕ: 22.03.2023 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಉತ್ತರ ಕ್ರಿಯಾಧಿಗಳನ್ನು ದಿನಾಂಕ: 02.04.2023 ರಂದು ಬೆಳಗ್ಗೆ 10.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.
ದುಃಖತಪ್ತರು,
ಮೃತರ ಪತ್ನಿ, ಮಕ್ಕಳು ಮತ್ತು ಕುಟುಂಬ ವರ್ಗದವರು
ಮೊ: 9448559405/9449975382

ಎಚ್ 1 ಬಿ ವೀಸಾ: ಅಮೆರಿಕದ ಜಿಲ್ಲಾ ನ್ಯಾಯಾಧೀಶೆ ತಾನ್ಯಾ ಆದೇಶ

ಸಂಗಾತಿಗೂ ನೌಕರಿ ಅವಕಾಶ

ವಾಷಿಂಗ್ಟನ್ (ಪಿಟಿಐ): ಎಚ್ -1ಬಿ ವೀಸಾ ಹೊಂದಿರುವ ಉದ್ಯೋಗಿಗಳ ಸಂಗಾತಿ ಕೂಡ ಅಮೆರಿಕದಲ್ಲಿ ನೌಕರಿ ಮಾಡಬಹುದು ಎಂಬ ಮಹತ್ವದ ತೀರ್ಪನ್ನು ಇಲ್ಲಿನ ನ್ಯಾಯಾಲಯ ನೀಡಿದೆ.

ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತೀಯ ಉದ್ಯೋಗಿಗಳಿಗೆ ಈ ತೀರ್ಪಿನಿಂದ ಸಾಕಷ್ಟು ಅನುಕೂಲವಾಗಲಿದೆ ಎಂದು ನಿರೀಕ್ಷಿಸಲಾಗಿದೆ.

'ಸೇವ್ ಜಾಬ್ಸ್ ಯುಎಸ್‌ಎ' ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸಿರುವ ಅಮೆರಿಕದ ಜಿಲ್ಲಾ ನ್ಯಾಯಾಲಯದ ನ್ಯಾಯಾಧೀಶೆ ತಾ ನ್ಯಾ ಚುಟ್ಕನ್ ಈ ತೀರ್ಪು ನೀಡಿದ್ದಾರೆ.

ಎಚ್ -1 ಬಿ ವೀಸಾ ಹೊಂದಿರುವ ವಿದೇಶಗಳ ನುರಿತ ತಂತ್ರಜ್ಞರು, ಶೈಕ್ಷಣಿಕ ವಲಯದ ವೃತ್ತಿಪರರು, ನಿರ್ದಿಷ್ಟ ಕ್ಷೇತ್ರದ ವಿಶೇಷ ಪರಿಣತರ ಸಂಗಾತಿಗಳು ಅಮೆರಿಕದಲ್ಲಿ ಉದ್ಯೋಗ ಮಾಡಲು ಒಬಾಮ ಆಡಳಿತಾವಧಿಯಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಇದನ್ನು ವಿರೋಧಿಸಿ 'ಸೇವ್ ಜಾಬ್ಸ್ ಯುಎಸ್‌ಎ' ನ್ಯಾಯಾಲಯದ ಮೊರೆಹೋಗಿತ್ತು. ಮಾಹಿತಿ ತಂತ್ರಜ್ಞಾನ ಕಂಪನಿ ಅಮೆಜಾನ್, ಆಪಲ್, ಗೂಗಲ್ ಮತ್ತು ಮೈಕ್ರೊಸಾಫ್ಟ್ ಇದನ್ನು ಹಿಂದೆಯೂ ವಿರೋಧಿಸಿದ್ದವು. ಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ಯೋಜಿಸಿರುವುದಾಗಿ 'ಸೇವ್ ಜಾಬ್ಸ್ ಯುಎಸ್‌ಎ' ಸಂಘಟನೆ ತಿಳಿಸಿದೆ.

ವಸ್ತುಸ್ಥಿತಿ ಚರ್ಚೆ:'26/11' ಆರೋಪಿಯಿಂದ ಅರ್ಜಿ

ವಾಷಿಂಗ್ಟನ್: ಮುಂಬೈನಲ್ಲಿ 2008ರಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ ಪ್ರಕರಣದಲ್ಲಿ ಬೇಕಾಗಿರುವ, ಪಾಕಿಸ್ತಾನ ಮೂಲದ ಕೆನಡಾ ಉದ್ಯಮಿ ತಹಾವ್ವುರ್ ರಾಣಾ, ಭಾರತಕ್ಕೆ ಒಪ್ಪಿಸಬೇಕು ಎಂಬ ಪ್ರಕರಣದ ವಿಚಾರಣೆ ಪೂರ್ವದಲ್ಲಿ ನ್ಯಾಯಮೂರ್ತಿಗಳ ಜೊತೆ ಚರ್ಚೆಗೆ ಅವಕಾಶ ಕೋರಿ ಸ್ಥಳೀಯ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾನೆ.

ಮುಂಬೈ ಪ್ರಕರಣದ ಸಂಬಂಧ ಈತನನ್ನು ಒಪ್ಪಿಸಬೇಕು ಎಂದು ಭಾರತ ಕೋರಿದೆ. ಈ ಸಂಬಂಧ ಕಳೆದ ವರ್ಷ ಜೂನ್ 10ರಂದು ಈತನನ್ನು ಬಂಧಿಸಲಾಗಿತ್ತು. ಪ್ರಕರಣದ ಸಂಬಂಧ ಈತ ತಲೆಮರೆಸಿಕೊಂಡಿದ್ದಾನೆ ಎಂದು ಭಾರತ ಘೋಷಿಸಿದೆ. 2008ರಲ್ಲಿ ನಡೆದಿದ್ದ ಕೃತ್ಯದಲ್ಲಿ ಅಮೆರಿಕದ ಎಂಟು ಮಂದಿ ಸೇರಿ 166 ಜನ ಮೃತಪಟ್ಟಿದ್ದರು.

ಅಮೆರಿಕದ ಲಾಸ್ ಏಂಜಲೀಸ್‌ನಲ್ಲಿರುವ ಡಿಸ್ಟ್ರಿಕ್ಟ್ ಕೋರ್ಟ್‌ನಲ್ಲಿ ಕಡೆಯದಾಗಿ ಈ ಪ್ರಕರಣದ ವಿಚಾರಣೆ ಜೂನ್ 2021ರಲ್ಲಿ ನಡೆದಿತ್ತು. ರಾಣಾನನ್ನು ಭಾರತಕ್ಕೆ ಒಪ್ಪಿಸಬೇಕು ಎಂದು ಅಮೆರಿಕ ಸರ್ಕಾರವು ಮನವಿ ಮಾಡಿದ್ದು, ಕೋರ್ಟ್ ಈ ಸಂಬಂಧ ತನ್ನ ಆದೇಶವನ್ನು ಪ್ರಕಟಿಸಬೇಕಾಗಿದೆ.

ತನ್ನ ವಕೀಲರ ಮೂಲಕ ಸದ್ಯ ಸ್ಟೇಟಸ್ ಕಾನ್ಫರೆನ್ಸ್‌ಗೆ (ನ್ಯಾಯಾಧೀಶರ ಭೇಟಿ) ಅವಕಾಶ ಕೋರಿ ರಾಣಾ ಅರ್ಜಿ ಸಲ್ಲಿಸಿದ್ದಾನೆ. ಪ್ರಕರಣದ ವಸ್ತುಸ್ಥಿತಿ ಕುರಿತು ಚರ್ಚಿಸುವುದು ಅಗತ್ಯವಾಗಿದೆ ಎಂದು ಆತನ ವಕೀಲರು ತಿಳಿಸಿದ್ದಾರೆ.

ಸ್ಟೇಟಸ್ ಕಾನ್ಫರೆನ್ಸ್ ಅನ್ನು ಏಪ್ರಿಲ್ 25ರಂದು ನಿಗದಿಪಡಿಸಬೇಕು ಎಂದೂ ಆತನ ವಕೀಲರು ಕೋರಿದ್ದಾರೆ. ಈ ಕುರಿತ ಅರ್ಜಿಗೆ ಅಮೆರಿಕದ ಸರ್ಕಾರ ವಿರೋಧ ವ್ಯಕ್ತಪಡಿಸಿಲ್ಲ.

ಹಿಂದೂ ವಿ.ವಿ.ಗೆ ₹ 8.2 ಕೋಟಿ ನೆರವು

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಉದ್ಯಮಿ ರಮೇಶ್ ಭೂಟಡ ಅವರು ಫ್ಲಾರಿಡಾದಲ್ಲಿರುವ ಅಮೆರಿಕದ ಹಿಂದೂ ವಿಶ್ವವಿದ್ಯಾಲಯಕ್ಕೆ 1 ಮಿಲಿಯನ್ ಡಾಲರ್ (ಸುಮಾರು ₹ 8.2 ಕೋಟಿ) ನೆರವು ನೀಡಿದ್ದಾರೆ.

ಹಿಂದೂ ತತ್ವ, ಸಿದ್ಧಾಂತ ಆಧರಿಸಿದ ಶಿಕ್ಷಣವನ್ನು ಈ ವಿಶ್ವವಿದ್ಯಾಲಯ ನೀಡುತ್ತಿದೆ. 1989ರಲ್ಲಿ ವಿಶ್ವವಿದ್ಯಾಲಯ ಸ್ಥಾಪನೆಯಾಗಿದ್ದು, ಇದು ಈವರೆಗೆ ಪಡೆದಿರುವ ಅತ್ಯಧಿಕ ಮೊತ್ತದ ನೆರವಾಗಿದೆ.

ಭೂಟಡ ಅವರು ಹ್ಯೂಸ್ಟನ್ ಮೂಲದ ಸ್ಟಾರ್ ಪೈಪ್ ಉತ್ಪನ್ನಗಳ ಸಂಸ್ಥೆಯ ಸಿಇಒ. 'ಯುವಜನರು ಸಂತಸ ಮತ್ತು ಪರಿಪೂರ್ಣ ಬದುಕು ಸಾಗಿಸಲು ಹಿಂದುತ್ವವನ್ನು ಅರಿತುಕೊಳ್ಳಲು ನೆರವಾಗುವುದು ಈ ದೇಣಿಗೆಯ ಉದ್ದೇಶವಾಗಿದೆ ಎಂದು ಅವರು ಪ್ರತಿಕ್ರಿಯಿಸಿದರು. ವಿಶ್ವವಿದ್ಯಾಲಯದ ಪರವಾಗಿ ಭೂಟಡ ಅವರನ್ನು ಸನ್ಮಾನಿಸಲಾಯಿತು.

ಸುದ್ದಿ 2 ನಿಮಿಷ

ಚೀನಾದಲ್ಲಿ ಕೋವಿಡ್: ವಸ್ತುಸ್ಥಿತಿ ಪರಿಶೀಲನೆಗೆ ಸೂಚನೆ

ಬೀಜಿಂಗ್ (ರಾಯಿಟರ್ಸ್): ಕೋವಿಡ್ ಪರಿಸ್ಥಿತಿ ಎದುರಿಸಲು ಮೂಲಸೌಕರ್ಯಗಳ ಲಭ್ಯತೆ ಸೇರಿ ವಿವಿಧ ಆಸ್ಪತ್ರೆಗಳಲ್ಲಿನ ವಸ್ತುಸ್ಥಿತಿ ಪರಿಶೀಲಿಸಲು ಪ್ರಾಂತೀಯ ಸರ್ಕಾರಗಳಿಗೆ ಚೀನಾ ಸೂಚಿಸಿದೆ.

ಕೋವಿಡ್ ಸ್ಥಿತಿ ಗತಿಯ ನಿರ್ವಹಣೆಯಲ್ಲಿ ಹೆಚ್ಚಿನ ಪಾರದರ್ಶಕತೆ ಅಗತ್ಯ ಎಂದು ಜಾಗತಿಕವಾಗಿ ಕೇಳಿಬಂದ ಒತ್ತಾಯದ ಹಿನ್ನೆಲೆಯಲ್ಲಿ ಈ ನಿರ್ಧಾರಕ್ಕೆ ಬರಲಾಗಿದೆ ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಕೋವಿಡ್ ಮಾಹಿತಿಗೆ ಸಂಬಂಧಿಸಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು. ಸಾವು ಪ್ರಕರಣಗಳ ಮಾಹಿತಿ ಬಹಿರಂಗಪಡಿಸಬೇಕು ಎಂದು ವಿವಿಧ ರಾಷ್ಟ್ರಗಳು, ಆರೋಗ್ಯ ಕ್ಷೇತ್ರದ ಪ್ರಮುಖರು ಚೀನಾಗೆ ಒತ್ತಾಯಿಸಿದ್ದರು.

ವಿಶ್ವ ಆರೋಗ್ಯ ಸಂಘಟನೆಯ ಸಲಹೆಗಾರರೂ ಇತ್ತೀಚೆಗೆ ಕೋವಿಡ್ ರೋಗ, ಸಾಂಕ್ರಾಮಿಕದ ಉಗಮ ಕುರಿತ ಮಾಹಿತಿಗಳನ್ನು ಬಹಿರಂಗಪಡಿಸಬೇಕು ಎಂದು ಆಗ್ರಹಪಡಿಸಿದ್ದರು. ಚೀನಾದ ರಾಷ್ಟ್ರೀಯ ಆರೋಗ್ಯ ಆಯೋಗ ಪ್ರಾಂತೀಯ ಆಡಳಿತಗಳು ಆಸ್ಪತ್ರೆಗಳಲ್ಲಿ ನಿಯಮಿತವಾಗಿ ಪರಿಶೀಲಿಸಬೇಕು. ಸಮಗ್ರ ಮಾಹಿತಿ ನೀಡಬೇಕು ಎಂದು ಸೂಚಿಸಿದೆ

'ಸದರ್ನ್ ಗ್ರ್ಯಾಂಡ್ ಕಾಶಿ' ಅತಿಥಿ ಗೃಹ ಆರಂಭ

ವಾರಾಣಸಿ: ಪ್ರವಾಸೋದ್ಯಮ ಮತ್ತು ಆತಿಥ್ಯ ಸೇವೆ ಒದಗಿಸುವ ದೇಶದ ಪ್ರಮುಖ ಸಂಸ್ಥೆಗಳಲ್ಲಿ ಒಂದಾದ ಸದರ್ನ್ ಟ್ರಾವೆಲ್ಸ್, ವಾರಾಣಸಿಯ ಪ್ರತಿಷ್ಠಿತ ಕಾಶಿ ವಿಶ್ವನಾಥ ಕಾರಿಡಾರ್‌ನಲ್ಲಿ 'ಸದರ್ನ್ ಗ್ರ್ಯಾಂಡ್ ಕಾಶಿ' ಅತಿಥಿ ಗೃಹ ಆರಂಭಿಸುವುದರೊಂದಿಗೆ ತನ್ನ ಸೇವಾ ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಈಚೆಗೆ ಉದ್ಘಾಟನೆ ಮಾಡಿದ ಕಾಶಿ ವಿಶ್ವನಾಥ ಕಾರಿಡಾರ್‌ನಲ್ಲಿ ಭೀಮಾಶಂಕರ್ ಅತಿಥಿ ಗೃಹದ ಕಾರ್ಯನಿರ್ವಹಣೆಯ ಜವಾಬ್ದಾರಿಯನ್ನು ಕಂಪನಿಗೆ ವಹಿಸಲಾಯಿತು.

ಗಣ್ಯರ ಉಪಸ್ಥಿತಿಯಲ್ಲಿ ಮಂಗಳವಾರ ಅತಿಥಿ ಗೃಹವನ್ನು ಸದರ್ನ್ ಟ್ರಾವೆಲ್ಸ್ ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಮೋಹನ್, ಜಂಟಿ ವ್ಯವಸ್ಥಾಪಕ ನಿರ್ದೇಶಕ ಎ.ವಿ.ಪ್ರವೀಣ್ ಉದ್ಘಾಟಿಸಿದರು. ಹೊಸ ಹೋಟೆಲ್‌ನೊಂದಿಗೆ, ಸದರ್ನ್ ಟ್ರಾವೆಲ್ಸ್ ಪ್ರತಿ ವರ್ಷ ಲಕ್ಷಾಂತರ ಪ್ರಯಾಣಿಕರಿಗೆ ವಸತಿ ಸೌಕರ್ಯ ಒದಗಿಸಲಿದೆ.

'ಹೊಸ ಹೋಟೆಲ್‌ನಿಂದ ಪ್ರಯಾಣಿಕರಿಗೆ ಸಾಕಷ್ಟು ಅನುಕೂಲವಾಗಲಿದೆ. ಇದರೊಂದಿಗೆ ಆತಿಥ್ಯ ಕ್ಷೇತ್ರದಲ್ಲಿ ನಮ್ಮ ವ್ಯಾಪ್ತಿಯನ್ನು ವಿಸ್ತರಿಸಿದಂತಾಗಿದೆ' ಎಂದು ಸದರ್ನ್ ಟ್ರಾವೆಲ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಆಲಪತಿ ಕೃಷ್ಣ ಮೋಹನ್ ತಿಳಿಸಿದ್ದಾರೆ.

'ನಕಲಿ ಎನ್‌ಕೌಂಟರ್ ಪ್ರಕರಣ: ಮೋದಿ ಸಿಲುಕಿಸಲು ಸಿಬಿಐ ಒತ್ತಡ'

ನವದೆಹಲಿ (ಪಿಟಿಐ): 'ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರದ ಅವಧಿಯಲ್ಲಿ ಗುಜರಾತ್‌ನ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ನರೇಂದ್ರ ಮೋದಿ ಅವರನ್ನು ಸಿಲುಕಿಸಲು ತನಿಖಾ ಸಂಸ್ಥೆ ಸಿಬಿಐ ನನ್ನ ಮೇಲೆ ಒತ್ತಡ ಹೇರಿತ್ತು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಹೇಳಿದ್ದಾರೆ.

ನರೇಂದ್ರ ಮೋದಿ ಸರ್ಕಾರವು ಕೇಂದ್ರೀಯ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಿದೆ ಎಂಬ ಪ್ರತಿಪಕ್ಷಗಳ ಆರೋಪದ ಕುರಿತ ಪ್ರಶ್ನೆಗೆ 'ನ್ಯೂಸ್ 18 ರೈಸಿಂಗ್ ಇಂಡಿಯಾ' ಕಾರ್ಯಕ್ರಮದಲ್ಲಿ ಶಾ ಉತ್ತರಿಸಿದರು.

'ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ನಡೆದ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಮೋದಿ ಜಿ ಅವರ ಮೇಲೆ ಆರೋಪ ಹೊರಿಸಲು ಸಿಬಿಐ ನನ್ನ ಮೇಲೆ ಒತ್ತಡ ಹೇರಿತ್ತು, ಆದರೂ ಬಿಜೆಪಿ ಯಾವತ್ತೂ ಗದ್ದಲ ಎಬ್ಬಿಸಲಿಲ್ಲ' ಎಂದು ಅವರು ಹೇಳಿದರು.

ಸೂರತ್‌ನ ನ್ಯಾಯಾಲಯವು ಕ್ರಿಮಿನಲ್ ಮಾನನಷ್ಟ ಮೊಕದ್ದಮೆಯಲ್ಲಿ ರಾಹುಲ್ ಗಾಂಧಿಯವರಿಗೆ ಶಿಕ್ಷೆ ವಿಧಿಸಿರುವ ಕುರಿತು ಪ್ರತಿಕ್ರಿಯಿಸಿದ ಗೃಹ ಸಚಿವರು, ರಾಹುಲ್ ಗಾಂಧಿ ನ್ಯಾಯಾಲಯದಿಂದ ಶಿಕ್ಷೆಗೊಳಗಾಗಿ ಶಾಸಕಾಂಗದ ಸದಸ್ಯತ್ವವನ್ನು ಕಳೆದುಕೊಂಡ ಏಕೈಕ ರಾಜಕಾರಣಿ ಏನಲ್ಲ ಎಂದಿದ್ದಾರೆ.

ಉನ್ನತ ನ್ಯಾಯಾಲಯದ ಮೊರೆ ಹೋಗುವ ಬದಲು ರಾಹುಲ್ ಅಲವತ್ತುಕೊಳ್ಳುತ್ತಿದ್ದಾರೆ. ಅವರ ದುರ್ದೆಸಗೆ ಪ್ರಧಾನಿ ನರೇಂದ್ರ ಮೋದಿ ಅವರನ್ನು ದೂಷಿಸುತ್ತಿದ್ದಾರೆ ಎಂದು ಶಾ ಹೇಳಿದರು.

'ಕಾಂಗ್ರೆಸ್ ತಪ್ಪು ಮಾಹಿತಿಯನ್ನು ಹರಡುತ್ತಿದೆ. ನ್ಯಾಯಾಲಯ ದೋಷಿ ಎಂದು ನೀಡಿದ ತೀರ್ಪಿಗೆ ತಡೆ ನೀಡಲು ಬರುವುದಿಲ್ಲ, ಶಿಕ್ಷೆಗೆ ತಡೆ ನೀಡಬಹುದು' ಎಂದು ಅವರು ಅಭಿಪ್ರಾಯಪಟ್ಟರು.

ಶೇಖ್ ಖಾಲಿದ್ ಅಬುಧಾಬಿ ರಾಜಕುಮಾರ

ಶೇಖ್ ಖಾಲಿದ್

ದುಬೈ (ಎಎಫ್‌ಪಿ): ಸಂಯುಕ್ತ ಅರಬ್ ಸಂಸ್ಥಾನದ (ಯುಎಇಎ) ಅಧ್ಯಕ್ಷ ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಯ್ಯಾನ್ ಅವರು ತಮ್ಮ ಹಿರಿಯ ಪುತ್ರ, 41ರ ಹರೆಯದ ಶೇಖ್ ಖಾಲಿದ್ ಅವರನ್ನು ಅಬುಧಾಬಿಯ ರಾಜಕುಮಾರನಾಗಿ ನೇಮಿಸಿದ್ದಾರೆ.

ಬುಧವಾರ ತಡವಾಗಿ ಮಹತ್ವದ ಈ ಬೆಳವಣಿಗೆ ನಡೆದಿದೆ. ಸಮೃದ್ಧ ತೈಲದ ಕೊಲ್ಲಿ ಸಾಮ್ರಾಜ್ಯದ ರಾಜಪ್ರಭುತ್ವಕ್ಕೆ ತಮ್ಮ ಪ್ರೀತಿ ಪಾತ್ರ ಪುತ್ರನನ್ನು ಮುಂದಿನ ಉತ್ತರಾಧಿಕಾರಿಯನ್ನಾಗಿಸಿ ಕುಟುಂಬದಲ್ಲೇ ಅಧಿಕಾರ ಹಿಡಿದಿಟ್ಟುಕೊಳ್ಳಲು ಅಧ್ಯಕ್ಷರು ಈ ನಿರ್ಧಾರ ತೆಗೆದುಕೊಂಡಿದ್ದಾರೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಶೇಖ್ ಮೊಹಮ್ಮದ್ ಬಿನ್ ಝಾಯೆದ್ ಅಲ್ ನಯ್ಯಾನ್ ಅವರ ಸಹೋದರ ಶೇಖ್ ಮನ್ಸೂರ್ ಬಿನ್ ಝಾಯೆದ್ ಅವರನ್ನು ಉಪಾಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇವರು ಮ್ಯಾಂಚೆಸ್ಟರ್ ಸಿಟಿ ಫುಟ್‌ಬಾಲ್ ಕ್ಲಬ್ ಮಾಲೀಕರೂ ಹೌದು. ಯುಎಇ ಪ್ರಧಾನಿ ಮತ್ತು ದುಬೈನ ಆಡಳಿತಗಾರ ಶೇಖ್ ಮೊಹಮ್ಮದ್ ಬಿನ್ ರಶೀದ್ ಅಲ್ ಮಕ್ತೌಮ್ ಅವರಿಗೆ ಆಡಳಿತದಲ್ಲಿ ಶೇಖ್ ಮನ್ಸೂರ್ ಬಿನ್ ಝಾಯೆದ್ ಕೈಜೋಡಿಸಿದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕೊಳಚೆ ನೀರಿನ ಸಂಸ್ಕರಣೆ:ಕಳವಳ

ನವದೆಹಲಿ (ಪಿಟಿಐ): ಹಳ್ಳಿ, ಪಟ್ಟಣ ಹಾಗೂ ನಗರಗಳಲ್ಲಿ ಉತ್ಪತ್ತಿಯಾಗುತ್ತಿರುವ ಕೊಳಚೆ ನೀರಿನ ಸಂಸ್ಕರಣೆ ಕುರಿತು ಸುಪ್ರೀಂ ಕೋರ್ಟ್ ಗುರುವಾರ ಕಳವಳ ವ್ಯಕ್ತಪಡಿಸಿದೆ.

ರಾಜ್ಯದಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (ಎಸ್‌ಟಿಪಿ) ಸ್ಥಾಪಿಸುವ ಮೂಲಕ ಕೊಳಚೆ ನೀರಿನ ಸಂಸ್ಕರಣೆಯಲ್ಲಿ ಶೇ 100ರಷ್ಟು ಗುರಿ ಸಾಧಿಸಲು ಇನ್ನಷ್ಟು ಕಾಲಾವಕಾಶ ನೀಡುವಂತೆ ಕೋರಿ ಉತ್ತರಪ್ರದೇಶ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿತು.

'ಸಂಸ್ಕರಿಸದೇ ಇರುವ ತ್ಯಾಜ್ಯ ನೀರನ್ನು ನದಿ ಹಾಗೂ ಹಳ್ಳ, ಕೊಳ್ಳಗಳಿಗೆ ಹರಿಸಲಾಗುತ್ತಿದೆ. ಆ ಮೂಲಕ ಜಲಮೂಲಗಳನ್ನೇ ಕಲುಷಿತಗೊಳಿಸಲಾಗುತ್ತಿದ್ದು, ಇದರ ಮೇಲೆ ಅವಲಂಬಿತವಾಗಿರುವ ನಾಗರಿಕರು ಹಾಗೂ ಜೀವ ವೈವಿಧ್ಯತೆಯು ಅಪಾಯಕ್ಕೆ ಸಿಲುಕಿದೆ' ಎಂದು ನ್ಯಾಯಪೀಠ ಆತಂಕ ವ್ಯಕ್ತಪಡಿಸಿದೆ.

ಸಂಕ್ಷಿಪ್ತ ಸುದ್ದಿ

ಗೂಢಚರ್ಯೆ: ರಷ್ಯಾದಲ್ಲಿ ಅಮೆರಿಕ ಪತ್ರಕರ್ತ ಸೆರೆ

ಇವಾನ್

ಮಾಸ್ಕೊ(ಎಪಿ-):ಗೂಢಚರ್ಯೆ ನಡೆಸಿರುವ ಆಪಾದನೆಯ ಮೇಲೆ ಅಮೆರಿಕದ 'ವಾಲ್ ಸ್ಟ್ರೀಟ್ ಜರ್ನಲ್'ನ ವರದಿಗಾರರೊಬ್ಬರನ್ನು ಬಂಧಿಸಿರುವುದಾಗಿ ರಷ್ಯಾದ ಉನ್ನತ ಭದ್ರತಾ ಏಜೆನ್ಸಿ ಹೇಳಿದೆ.

ರಹಸ್ಯ ಮಾಹಿತಿಗಳನ್ನು ಕಲೆ ಹಾಕಲು ಯತ್ನಿಸುತ್ತಿದ್ದ ವರದಿಗಾರ ಇವಾನ್ ಗೆರ್ಸ್‌ಕೊವಿಚ್ ಅವರನ್ನು ಯೆಕಟೆರಿನ್ ಬರ್ಗ್ ನಗರದಲ್ಲಿ ಬಂಧಿಸಲಾಯಿತು ಎಂದು ಫೆಡರಲ್ ಸೆಕ್ಯುರಿಟಿ ಸರ್ವೀಸ್ ಗುರುವಾರ ಹೇಳಿದೆ. ರಷ್ಯಾ ಸೇನೆಯ ಕೈಗಾರಿಕಾ ಸಂಕೀರ್ಣದಲ್ಲಿರುವ ಉದ್ಯಮವೊಂದರ ಚಟುವಟಿಕೆಗಳ ಬಗ್ಗೆ ರಹಸ್ಯ ಮಾಹಿತಿಗಳನ್ನು ಗೆರ್ಸ್‌ಕೊವಿಚ್ ಅಮೆರಿಕದ ನಿರ್ದೇಶನದ ಮೇರೆಗೆ ಕಲೆ ಹಾಕುತ್ತಿದ್ದರು ಎಂದು ಎಫ್‌ಎಸ್‌ಬಿ ಆರೋಪಿಸಿದೆ.

ಹೆಲಿಕಾಪ್ಟರ್ ಅಪಘಾತ: 9 ಸೇನಾ ಸಿಬ್ಬಂದಿ ಸಾವು

ಫೋರ್ಟ್ ಕ್ಯಾಂಬೆಲ್, ಅಮೆರಿಕ (ಎ.ಪಿ): ಕೆಂಟುಕಿ ಬಳಿ ಸೇನೆಯ ಎರಡು ಹಾಕ್ ಹೆಲಿಕಾಪ್ಟರ್‌ಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ಒಂಬತ್ತು ಮಂದಿ ಮೃತಪಟ್ಟಿದ್ದಾರೆ ಎಂದು ಸೇನೆಯ ವಕ್ತಾರರು ತಿಳಿಸಿದ್ದಾರೆ.

ದೈನಿಕ ತರಬೇತಿ ಅವಧಿಯ ವೇಳೆ ಬುಧವಾರ ಸಂಜೆ ಅವಘಡ ಸಂಭವಿಸಿದೆ. ಏರ್‌ಬೋರ್ನ್ ವಿಭಾಗಕ್ಕೆ ಸೇರಿದ ಎರಡು ಎಚ್‌ಎಚ್–60 ಹೆಲಿಕಾಪ್ಟರ್‌ಗಳ ನಡುವೆ ಢಿಕ್ಕಿ ಸಂಭವಿಸಿತು. ತನಿಖೆ ನಡೆದಿದೆ ಎಂದು ತಿಳಿಸಿದ್ದಾರೆ.

ಸದ್ಯ ಅಪಘಾತಕ್ಕೆ ಕಾರಣ ತಿಳಿದುಬಂದಿಲ್ಲ. ಈಗ ಅವಘಡದಲ್ಲಿ ಮೃತಪಟ್ಟ ಯೋಧರ ಕುಟುಂಬಗಳ ಕುರಿತು ನಮ್ಮ ಗಮನವಿದೆ ಎಂದು ಏರ್‌ಬೋರ್ನ್ ವಿಭಾಗದ ಹೇಳಿಕೆ ತಿಳಿಸಿದೆ.

'ಲಿಂಕ್ಸ್–ಯು2' ಬೆಂಕಿ ನಿಯಂತ್ರಣ ವ್ಯವಸ್ಥೆ ಖರೀದಿ: ಬಿಇಎಲ್ ಜೊತೆ ಒಪ್ಪಂದಕ್ಕೆ ಸಹಿ

ನವದೆಹಲಿ (ಪಿಟಿಐ): ನೌಕಾಪಡೆಗಾಗಿ ಅಂದಾಜು ₹ 1,700 ಕೋಟಿ ವೆಚ್ಚದಲ್ಲಿ 13 'ಲಿಂಕ್ಸ್–ಯು2' ಎಂಬ ಬೆಂಕಿ ನಿಯಂತ್ರಣ ವ್ಯವಸ್ಥೆಗಳನ್ನು ಖರೀದಿಸುವ ಸಂಬಂಧ ರಕ್ಷಣಾ ಸಚಿವಾಲಯವು ಬೆಂಗಳೂರು ಮೂಲದ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಜೊತೆ ಗುರುವಾರ ಒಪ್ಪಂದಕ್ಕೆ ಸಹಿ ಹಾಕಿದೆ.

ದೇಶೀಯವಾಗಿಯೇ ಅಭಿವೃದ್ಧಿಪಡಿಸಲಾಗಿರುವ 'ಲಿಂಕ್ಸ್–ಯು2' ವ್ಯವಸ್ಥೆಯು ಕಡಲು, ವಾಯುಪ್ರದೇಶ ಅಥವಾ ಭೂಮಿ ಮೇಲಿನ ಗುರಿಗಳನ್ನು ನಿಖರವಾಗಿ ತಲುಪುವ ಸಾಮರ್ಥ್ಯ ಹೊಂದಿದೆ ಎಂದು ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,300
ಒಡವೆ ಚಿನ್ನ 1ಗ್ರಾಂ	₹5,640
ಬೆಳ್ಳಿ ಕೆ.ಜಿಗೆ	₹72,200

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹435
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹440

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹14500
ಎಸಿ	₹7700
ಆರ್‌ಪಿ	₹10250
ಆರ್‌ಸಿ	₹5160

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹146
ಆರ್‌ಎಸ್‌ಎಸ್-5	₹139
ಗುಡ್ ಲಾಟ್	₹131

ಔಷಧ, ವಿಶೇಷ ಆಹಾರದ ಮೇಲಿನ ಸುಂಕ ರದ್ದು

ನವದೆಹಲಿ (ಪಿಟಿಐ): ವಿಶೇಷ ವೈದ್ಯಕೀಯ ಉದ್ದೇಶಗಳಿಗೆ ಬಳಸುವ ಆಹಾರ ಪದಾರ್ಥಗಳು ಹಾಗೂ ಔಷಧಗಳ ಆಮದಿನ ಮೇಲೆ ವಿಧಿಸುವ ಮೂಲ ಕಸ್ಟಮ್ಸ್ ಸುಂಕವನ್ನು ಕೇಂದ್ರ ಸರ್ಕಾರವು ರದ್ದುಮಾಡಿದೆ. ಇದು ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ಹಲವು ವಿಧದ ಕ್ಯಾನ್ಸರ್‌ಗಳ ಚಿಕಿತ್ಸೆಯಲ್ಲಿ ಬಳಸುವ ಪೆಂಬ್ರೊಲಿಜುಮ್ಯಾಬ್ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ಕೂಡ ರದ್ದುಮಾಡಲಾಗಿದೆ. ಔಷಧಗಳಿಗೆ ಸಾಮಾನ್ಯವಾಗಿ ಶೇಕಡ 10ರಷ್ಟು ಮೂಲ ಕಸ್ಟಮ್ಸ್ ಸುಂಕ ವಿಧಿಸಲಾಗುತ್ತದೆ. ಕೆಲವು ಜೀವರಕ್ಷಕ ಔಷಧಗಳಿಗೆ ಶೇ 5ರಷ್ಟು ಸುಂಕ ಇರುತ್ತದೆ.

'ಅಪರೂಪದ ಕಾಯಿಲೆಗಳ ಚಿಕಿತ್ಸೆಗೆ ವೈಯಕ್ತಿಕವಾಗಿ ಬಳಕೆ ಮಾಡುವ ಎಲ್ಲ ಔಷಧಗಳು ಹಾಗೂ ವಿಶೇಷ ವೈದ್ಯಕೀಯ ಉದ್ದೇಶದ ಆಹಾರ ಪದಾರ್ಥಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕವನ್ನು ತೆಗೆದುಹಾಕಲಾಗಿದೆ' ಎಂದು ಕೇಂದ್ರ ಹಣಕಾಸು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹1000-1500
ಮಧ್ಯಮ	₹700-1000
ಸಣ್ಣ	₹400-700

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1690 (---)
ಸೋಯಾ (ರಿಫೈಂಡ್)	₹1050 (---)
ಸೂರ್ಯಕಾಂತಿ (ರಿಫೈಂಡ್)	₹1090 (---)
ಪಾಮೋಲಿನ್	₹955 (---)

ಸಚಿವ ಪೀಯೂಷ್ ಗೋಯಲ್ ಮಾಹಿತಿ

'3 ಲಕ್ಷ ಟನ್ ಈರುಳ್ಳಿ ಖರೀದಿ'



3 ಲಕ್ಷ ಟನ್ ಈರುಳ್ಳಿ ಖರೀದಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮುಂಬೈ (ಪಿಟಿಐ): ಕೇಂದ್ರ ಸರ್ಕಾರದ ಸಂಸ್ಥೆಗಳು ಹಿಂಗಾರು ಹಂಗಾಮಿನಲ್ಲಿ 3 ಲಕ್ಷ ಟನ್ ಈರುಳ್ಳಿ ಖರೀದಿಸಲಿವೆ ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವ ಪೀಯೂಷ್ ಗೋಯಲ್ ಗುರುವಾರ ಹೇಳಿದ್ದಾರೆ.

ಕಳೆದ ವರ್ಷ ಇದೇ ಅವಧಿಯಲ್ಲಿ 2.5 ಲಕ್ಷ ಟನ್ ಈರುಳ್ಳಿ ಖರೀದಿಸಲಾಗಿತ್ತು ಎಂದು ಅವರು ಮಾಹಿತಿ ನೀಡಿದ್ದಾರೆ. ರೈತರಿಗೆ ನ್ಯಾಯೋಚಿತ ಬೆಲೆ ಸಿಗುವಂತೆ ಮಾಡುವ ಉದ್ದೇಶದಿಂದ 3 ಲಕ್ಷ ಟನ್ ಈರುಳ್ಳಿ ಖರೀದಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಕಳೆದ ತಿಂಗಳಿನಿಂದ ಈರುಳ್ಳಿ ಬೆಲೆ ಭಾರಿ ಇಳಿಕೆ ಕಾಣುತ್ತಿರುವುದರಿಂದ ಮಹಾರಾಷ್ಟ್ರದ ಬೆಳೆಗಾರರು ಪ್ರತಿಭಟನೆ ನಡೆಸುತ್ತಿದ್ದಾರೆ.

ಏಪ್ರಿಲ್–ಜೂನ್ ಅವಧಿಯಲ್ಲಿ ಹಿಂಗಾರು ಬೆಳೆ ಬೆಳೆಯಲಾಗುತ್ತದೆ. ದೇಶಿ ಬೇಡಿಕೆಯ ಶೇಕಡ 65ರಷ್ಟು ಈರುಳ್ಳಿಯನ್ನು ಅಕ್ಟೋಬರ್–ನವೆಂಬರ್‌ನ ಮುಂಗಾರು ಅವಧಿಯಲ್ಲಿ ಬೆಳೆಯಲಾಗುತ್ತದೆ.

ಅನ್‌ಅಕಾಡೆಮಿ: ಉದ್ಯೋಗ ಕಡಿತ

ಬೆಂಗಳೂರು (ರಾಯಿಟರ್ಸ್): ಶಿಕ್ಷಣ ಕ್ಷೇತ್ರದ ನವೋದ್ಯಮ ಕಂಪನಿ ಅನ್‌ಅಕಾಡೆಮಿ ತನ್ನ ನೌಕರರ ಪೈಕಿ ಶೇಕಡ 12ರಷ್ಟು ಮಂದಿಯನ್ನು ಕೆಲಸದಿಂದ ತೆಗೆಯಲಿದೆ. ಹೂಡಿಕೆಗಳು ಕಡಿಮೆಯಾಗಿರುವುದು, ಕಂಪನಿಯನ್ನು ಲಾಭದ ಹಳಿಗೆ ತರಬೇಕಿರುವ ಒತ್ತಡ ಈ ನಿರ್ಧಾರಕ್ಕೆ ಕಾರಣ.

ಇದಕ್ಕೆ ಸಂಬಂಧಿಸಿದಂತೆ ಕಂಪನಿಯ ಸಿಇಒ ಬರೆದಿರುವ ಇ-ಮೇಲ್‌ಅನ್ನು ರಾಯಿಟರ್ಸ್ ಪರಿಶೀಲಿಸಿದೆ. 'ಇಂದು ಹೂಡಿಕೆಯು ಕಡಿಮೆಯಾಗಿದೆ, ಉದ್ಯಮವನ್ನು ಲಾಭದಾಯಕವಾಗಿ ನಡೆಸುವುದು ಮಹತ್ವದ್ದಾಗುತ್ತದೆ' ಎಂದು ಸಿಇಒ ಗೌರವ್ ಮುಂಜಾಲ್ ಅವರು ನೌಕರರಿಗೆ ಬರೆದಿರುವ ಇ-ಮೇಲ್‌ನಲ್ಲಿ ಹೇಳಿದ್ದಾರೆ.

ಎಷ್ಟು ನೌಕರರನ್ನು ಕೆಲಸದಿಂದ ತೆಗೆಯಲಾಗುತ್ತದೆ, ಈಗಿರುವ ನೌಕರರ ಸಂಖ್ಯೆ ಎಷ್ಟು ಎಂಬ ಕುರಿತು ಪ್ರತಿಕ್ರಿಯೆ ನೀಡಲು ಅನ್‌ಅಕಾಡೆಮಿ ವಕ್ತಾರರು ನಿರಾಕರಿಸಿದ್ದಾರೆ.

ದೇಶದ ಶಿಕ್ಷಣ ಕ್ಷೇತ್ರದ ಹಲವು ನವೋದ್ಯಮ ಕಂಪನಿಗಳು ಸಹಸ್ರಾರು ಮಂದಿ ನೌಕರರನ್ನು ಈಚಿನ ದಿನಗಳಲ್ಲಿ ಕೆಲಸದಿಂದ ತೆಗೆದಿವೆ. ಈ ಕಂಪನಿಗಳಿಗೆ ಹೊಸ ಬಂಡವಾಳ ಸಂಗ್ರಹ ಕಷ್ಟವಾಗುತ್ತಿದೆ ಎನ್ನಲಾಗಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹339-601
ದ್ವಿತಳಿ (ಬಿ.ವಿ)	₹232-678

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ	
ಕೋಕ	12500-25000
ಹೊಸತು	22500-40000
ಹಳತು	48000-54500
ಚಿತ್ರದುರ್ಗ	
ಬೆಟ್ಟೆ	34219-34659
ಕೆಂಪುಗೋಟು	29200-29600
ರಾಶಿ	43939-44369
ಆಪಿ	44429-44879
ಚನ್ನಗಿರಿ	
ರಾಶಿ	43000-46021
ತುಮಕೂರು	
ರಾಶಿ	44500-45100
ಶಿವಮೊಗ್ಗ	
ಗೊಬರಲು	17009-29211
ರಾಶಿ	17009-29211
ಸಿದ್ದಾಪುರ	
ಬಿಳಿಗೋಟು	25669-29869
ಕೋಕ	26119-28819
ಚಾಲಿ	34389-34489
ಕೆಂಪುಗೋಟು	30899-31899
ರಾಶಿ	43099-44299
ತಟ್ಟಿಬೆಟ್ಟೆ	36099-36099
ಶಿರಸಿ	
ಬೆಟ್ಟೆ	33399-43699
ಬಿಳಿಗೋಟು	24299-31099
ಚಾಲಿ	33108-35829
ಕೆಂಪುಗೋಟು	28199-33199
ರಾಶಿ	36069-43919
ಯಲ್ಲಾಪುರ	
ಬಿಳಿಗೋಟು	24018-33209
ಚಾಲಿ	32699-37550
ಕೋಕ	16899-26899
ಕೆಂಪುಗೋಟು	24899-32317
ರಾಶಿ	40419-48912
ತಟ್ಟಿಬೆಟ್ಟೆ	37090-43799

ಮುಂಬೈ ಧಾರಣೆ

ಶೇಂಗಾ

30-3-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11100-11150
ದಪ್ಪ ಗುಜರಾತ್(ಹೊಸ)	12000-12050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1700 (---)
ಒಂದು ವಾರದ ಡೆಲಿವರಿ	1695 (---)
ಸೋಯಾ ಕಚ್ಚಾ	950 (---)
ಪಾಮ್ ವಾರದ ಡೆಲಿವರಿ	953 (---)
ಸೂರ್ಯಕಾಂತಿ ಎಣ್ಣೆ ಕಚ್ಚಾ	940 (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ
10ಗ್ರಾಂ 59,100 (---)
ಬೆಳ್ಳಿ ಕೆ.ಜಿ 71,000 (---)

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ಸಂಪರ್ಕಿಸಿ: 9611227266/ 9611221244

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 12,000/- ರಿಂದ 15,000/- ಬೆಂಗಳೂರು -54 ಸಂಪರ್ಕಿಸಿ: ಹೆಚ್ಚಿನ ಮಾಹಿತಿಗಾಗಿ 9148525233, 7899235388

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, ಟಿ.ವಿ.ಎಸ್ ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ, ಡಿಗ್ರಿ,ITI ನವರುಗಳು 16,600-65.000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ 9686220858

ವೈಯಕ್ತಿಕ

Change of Name

CHANGE OF NAME
We, Mrs.GOURI KAR and Mr.MANASIJ KAR, Parents Presently R/at flat No. B-1103, 'Brigade Metropolis', ITPL Main Road, Mahadevapura, Bangalore - 5600048. Karnataka,India, hereby declare that we have changed our daughter's name from SHIREEN KAR to SHIREEN BANERJEE KAR, hereafter she will be known and called as SHIREEN BANERJEE KAR only. vide affidavit dated 27.01.2022, sworn before K.V.Jagannath Reddy, Advocate & Notary Public, Bengalore

ಹೆಸರಿನಲ್ಲಿ ಬದಲಾವಣೆ
ನಾನು ಈ ಮೊದಲಿದ್ದ ಜಯಲಕ್ಷ್ಮೀ ಪಿ. ಎಂಬ ಹೆಸರನ್ನು ನನ್ನ ಮದುವೆಯ ನಂತರ ಶ್ರೀಮತಿ ಜಯಲಕ್ಷ್ಮೀ ಹನುಮಂತಪ್ಪ ಹಟ್ಟಿ ಸಾ: ಲಕ್ಕುಂಡಿ, ತಾ:ಜಿ: ಗದಗ ಎಂದು ಮನೋಹರ ಎಚ್. ಮೆಹರವಾಡೆ ನೋಟರಿ, ಗದಗ ಇವರ ಸಮ್ಮುಖದಲ್ಲಿ ದಿನಾಂಕ:25–02–2023 ರಂದು ಬದಲಾವಣೆ ಮಾಡಿಕೊಂಡಿರುತ್ತೇನೆ.

DH DECCAN HERALD ಪ್ರಜಾವಾಣಿ
BOOK YOUR PROPERTY TEXT AD ON SATURDAY & SUNDAY
DH ALL + PRAJAVANI BENGALURU CITY
FOR JUST ₹ 2250/-*
*conditions apply
For more information contact:
9845114560 | 9901641752
9731810277 | 9886213331
080 - 45557163 | 45557164

TRAVEL CORNER

BGS WORLD TOURS ಬಿಜಿಎಸ್ ವರ್ಲ್ಡ್ ಟೂರ್ಸ್‌ನಿಂದ
ಉತ್ತಮ ಪ್ರವಾಸಗಳು: 15.4.2023, ಕಾಶಿ, ಗಯಾ, ಅಯೋಧ್ಯ, ಅಲಹಾಬಾದ, ನೇಮಿಶಾರಣ್ಯ 6 ದಿನಗಳು ರೈಲಿನಲ್ಲಿ 20,000/–, ವಿಮಾನದಲ್ಲಿ 35,000/–. 20.4.2023 ಮತ್ತು 2.5.2023 ಜೈಪುರ, ಆಗ್ರ, ಕಾಶಿ, ಹರಿದ್ವಾರ, ದೆಹಲಿ 12 ದಿನಗಳು ರೈಲಿನಲ್ಲಿ 35,000/–, ವಿಮಾನದಲ್ಲಿ 45,000/–. 18.4.2023 ಗುಜರಾತ್ 6 ದಿನಗಳು ರೈಲಿನಲ್ಲಿ 23,000/– ವಿಮಾನದಲ್ಲಿ 35,000/–. 25.4.2023, 5.5.2023 ಶ್ರೀಲಂಕಾ ರಾಮಾಯಣ ಪ್ರವಾಸ 7 ದಿನಗಳು 59,000/–. 10 ದಿನಗಳು 78,000/– ಸಾವಿರ. 15.4.2023 ದುಬೈ ಫೆಸ್ಟಿವಲ್ 5 ದಿನಗಳು. 2.5.2023 ಸಿಂಗಪೂರ್, ಮಲೇಷಿಯಾ, ಥೈಲ್ಯಾಂಡ್ 7/12 ದಿನಗಳು 1.9.2023 ದುಬೈ, ಇರಾನ್, ಅಜೆರ್‌ಬೈಜಿನ್ 16 ದಿನಗಳು. ಸಂಪರ್ಕಿಸಿ: ಎನ್.ಎಸ್. ಇಂದ್ರೇಶ್. ಪೀಣ್ಯ ದಾಸರಹಳ್ಳಿ ಮತ್ತು ವಿಜಯನಗರ, ಬೆಂಗಳೂರು.
ಮೊಬೈಲ್ 9845133785, 9686200695

ಪ್ರವಾಸ

Travel

08/05/2023ರಿಂದ ವಿಮಾನ ಮತ್ತು`AC`ಬಸ್ಸಿನಲ್ಲಿ 9/13ದಿನಗಳ ನವದೆಹಲಿ,ಆಗ್ರಾ, ಹರಿದ್ವಾರ,ಕಾಶಿ,ಬೈದ್ಯನಾಥ್, ಗಯಾ,ಇತ್ಯಾದಿ`ಅಮರನಾಥ್ ಹಾಗೂ`ದಕ್ಷಿಣಭಾರತ, ರಾಮೇಶ್ವರ,ನವಗ್ರಹ,ಮದುರೈ, ಇತ್ಯಾದಿ`ಏಷ್ಯನ್`ಟ್ರಾವೆಲ್`ಲೈನ್ಸ್. 164/3.ಅರ್.ವಿ.ರಸ್ತೆ ಬೆಂಗಳೂರು~4 8105657052/ 9480182865 (ಷಣ್ಮುಗಾನಂದ)

6.4.2023 ನೇಪಾಳ, ಮುಕ್ತಿನಾಥ, ಕಾಶಿ 13.4.2023 ಕೇರಳ, ತಮಿಳುನಾಡು 14.5.2023 ಯಮುನೋತ್ರಿ, ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9482435755, 9845035349

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 17/04/23 ಜಾರ್ಖಂಡ್, ಕೊಲ್ಕತಾ, ಭುವನೇಶ್ವರ್. 26/04/23 ಜಮ್ಮು, ಕಾಶ್ಮೀರ, ವೈಷ್ಣೋದೇವಿ 08/06/23 ಚಾರ್ಧಮ್ ಯಾತ್ರ. 9964527782, 9591017782

ಶಿವನಂದಿ ಟ್ರಾವೆಲ್ಸ್ ಹನುಮಂತನಗರ,ಬೆಂಗಳೂರು ಅಮರನಾಥ್ ಯಾತ್ರೆ,ಕಟ್ರಾ ವೈಷ್ಣೋದೇವಿ,ದೆಹಲಿ,ಶ್ರೀನಗರ 12ದಿನಗಳು 1.7.2023, 14.7.2023. ಕಾಶಿಯಾತ್ರೆ, ದೆಹಲಿ,ಆಗ್ರಾ,ಅಯೋಧ್ಯ 13ದಿನಗಳು 17.5.2023. ದುಬೈ,ಅಬುಧಾಬಿ 5ದಿನಗಳು 17.4.2023, 15.5.2023 ಸಂಪರ್ಕಿಸಿ 9036056352 9481027363

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಐಪಿಎಲ್ ಹಬ್ಬಕ್ಕೆ ಹದಿನಾರರ ಸಂಭ್ರಮ

ಬಹುಮಾನ ಮೊತ್ತ	
ವಿಜೇತರು	₹ 20 ಕೋಟಿ
ರನ್ನರ್ಸ್ ಅಪ್	₹13 ಕೋಟಿ
ಮೂರನೇ ಸ್ಥಾನ	₹ 7 ಕೋಟಿ
ನಾಲ್ಕನೇ ಸ್ಥಾನ	₹ 6.5 ಕೋಟಿ

ನವದೆಹಲಿ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಚೊಚ್ಚಲ ಪ್ರಶಸ್ತಿ ಜಯಿಸುವ ಕನಸು. ಬಹುತೇಕ ತಮ್ಮ ವೃತ್ತಿಜೀವನದ ಕೊನೆಯ ಟೂರ್ನಿಯಲ್ಲಿ ಮಿಂಚುವ ಹುಮ್ಮಸ್ಸು ಮಹೇಂದ್ರಸಿಂಗ್ ಧೋನಿಗೆ. ಅತ್ಯಂತ ಯಶಸ್ವಿ ನಾಯಕನೆಂಬ ಹೆಗ್ಗಳಿಕೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಅಲಂಕರಿಸುವ ಉತ್ಸಾಹ ರೋಹಿತ್ ಶರ್ಮಾಗೆ. ಶುಕ್ರವಾರ ಆರಂಭವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಹತ್ತು ತಂಡಗಳ ಆಟಗಾರರಿಗೆ ಇಂತಹ ಹತ್ತಾರು ಕನಸುಗಳಿವೆ. ಧೋನಿ, ಕೊಹ್ಲಿ ಮತ್ತು ರೋಹಿತ್ ಅವರು ಕಳೆದ 15 ಆವೃತ್ತಿಗಳಲ್ಲಿ ತಮ್ಮ ಆಟದ ಮೂಲಕ ಟೂರ್ನಿಯನ್ನು ಶ್ರೀಮಂತಗೊಳಿಸಿದ್ದಾರೆ. ಕ್ರಿಕೆಟ್ ಮತ್ತು ಮನರಂಜನೆಯ ಸಮ್ಮಿಶ್ರ ಪಾಕವಾಗಿರುವ ಟೂರ್ನಿಯಲ್ಲಿ ಈ ಬಾರಿ ಕೆಲವು ಹೊಸ ಪ್ರತಿಭೆಗಳು ಕಣಕ್ಕಿಳಿಯಲಿವೆ. ಕೆಲವು ಪ್ರಮುಖರು ಗಾಯದ ಸಮಸ್ಯೆಯಿಂದಾಗಿ ಹೊರಗುಳಿದಿದ್ದಾರೆ. ಆಟದ ರೋಚಕತೆ ಹೆಚ್ಚಿಸುವ ಕೆಲವು ಹೊಸ ನಿಯಮಗಳೂ ಜಾರಿಯಾಗುತ್ತಿವೆ. ಈ ಬಾರಿ 'ಇಂಪ್ಯಾಕ್ಟ್ ಪ್ಲೇಯರ್' ಕೂಡ ಕಣಕ್ಕಿಳಿಯಲಿರುವುದು ಹೊಸ ಬೆಳವಣಿಗೆ.

ವಿರಾಟ್ ಕೊಹ್ಲಿ

ಇಂದಿನಿಂದ ಟೂರ್ನಿ: ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ –ಚೆನ್ನೈ ಸೂಪರ್ ಕಿಂಗ್ಸ್ ಹಣಾಹಣಿ

ತೋಳ್ಬಲ ಮೆರೆಯುವ ಹುಮ್ಮಸ್ಸಿನಲ್ಲಿ ಮಹಿ

ಅಹಮದಾಬಾದ್/ಬೆಂಗಳೂರು: ಸತತ ಹದಿನಾರನೇ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ಆಡಲಿರುವ ಮಹೇಂದ್ರಸಿಂಗ್ ಧೋನಿ ತಮ್ಮ 'ಕಟ್ಟುಮಸ್ತಾದ ತೋಳ್ಬಲ' ತೋರಿಸಲು ಸಿದ್ಧರಾಗಿದ್ದಾರೆ.

ಹೌದು. ಪ್ರತಿಯೊಂದು ಐಪಿಎಲ್‌ನಲ್ಲಿಯೂ ಹೊಸದೊಂದು ಕೇಶವಿನ್ಯಾಸ, ಗಡ್ಡದ ವಿನ್ಯಾಸಗಳೊಂದಿಗೆ ಕಣಕ್ಕಿಳಿಯುತ್ತಿದ್ದ ಧೋನಿ ಈ ಸಲ ತಮ್ಮ ಬೈಸೆಪ್ಸ್ (ಕಟ್ಟುಮಸ್ತಾದ ತೋಳುಗಳು)ನೊಂದಿಗೆ ಗಮನ ಸೆಳೆಯಲಿದ್ದಾರೆ. 2020ರಲ್ಲಿ ಕೋವಿಡ್ ಸೃಷ್ಟಿಸಿದ್ದ ಬಿಕ್ಕಟ್ಟಿನಿಂದಾಗಿ ಎಲ್ಲ ಆಟಗಾರರು ಹೆಚ್ಚು ಸಮಯ ಮನೆಯಲ್ಲಿ ಕಳೆದಿದ್ದು. ಆಗ ಅವರ ದೈಹಿಕ ಫಿಟ್‌ನೆಸ್‌ನಲ್ಲಿ ಕೆಲವು ಬದಲಾವಣೆಗಳು ಕಂಡಿದ್ದವು. ಆ ವರ್ಷ ದುಬೈನಲ್ಲಿ ನಡೆದ ಐಪಿಎಲ್‌ನಲ್ಲಿ ಧೋನಿ ಅವರ ತೋಳುಗಳು ಸ್ಥೂಲವಾಗಿದ್ದು ಮತ್ತು ಅವರ ದೇಹತೂಕ ಏರಿದ್ದರ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಸಂದೇಶಗಳು ಓಡಾಡಿದ್ದವು.

ಆದರೆ ಕಳೆದ ಮೂರು ವರ್ಷಗಳಲ್ಲಿ ಅವರು ವ್ಯಾಯಾಮ ಮತ್ತು ಪೌಷ್ಟಿಕ ಆಹಾರ ಸೇವನೆಯ ಮೂಲಕ ಕಟ್ಟುಮಸ್ತು ಮಾಡಿಕೊಂಡಿದ್ದಾರೆ. 41ರ ವಯಸ್ಸಿನಲ್ಲಿಯೂ ಅವರ ಫಿಟ್‌ನೆಸ್ ಪ್ರೇಮ ಮುಂದುವರೆದಿದೆ. ಅವರ ನಾಯಕತ್ವದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವು ನಾಲ್ಕು ಬಾರಿ ಚಾಂಪಿಯನ್ ಆಗಿದೆ. ಇದೀಗ ಚೆನ್ನೈ ಬಳಗವು ಶುಕ್ರವಾರ ಆರಂಭವಾಗಲಿರುವ ಐಪಿಎಲ್ ಟೂರ್ನಿಯ ಮೊದಲ ಪಂದ್ಯದಲ್ಲಿ 'ಹಾಲಿ ಚಾಂಪಿಯನ್' ಹಾರ್ದಿಕ್ ಪಾಂಡ್ಯ ನಾಯಕತ್ವದ ಗುಜರಾತ್ ಟೈಟನ್ ವಿರುದ್ಧ ಕಣಕ್ಕಿಳಿಯಲಿದೆ. ಮೊಟೇರಾದ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ.

ಧೋನಿ ತಮ್ಮ ಶಾಂತಚಿತ್ತದ ನಾಯಕತ್ವ ಮತ್ತು ವಿಕೆಟ್ ಕೀಪಿಂಗ್‌ಗೆ ಹೆಸರಾದವರು. ಅವರು ಭಾರತ ತಂಡದ ನಾಯಕರಾಗಿದ್ದ ಸಂದರ್ಭದಲ್ಲಿ ಪದಾರ್ಪಣೆ ಮಾಡಿದ್ದ ಹಾರ್ದಿಕ್ ಐಪಿಎಲ್‌ನಲ್ಲಿ 'ರೆಡ್ ಹಾಟ್ ಕ್ಯಾಪ್ಟನ್' ಆಗಿ ಗುರುತಿಸಿಕೊಂಡಿದ್ದಾರೆ. ಆಲ್‌ರೌಂಡರ್ ಹಾರ್ದಿಕ್ ಬಳಗವು ಹೋದ ವರ್ಷ ಚೊಚ್ಚಲ ಐಪಿಎಲ್ ಆಡಿತ್ತು. ಫೈನಲ್‌ನಲ್ಲಿ ರಾಜಸ್ಥಾನ ರಾಯಲ್ಸ್ ವಿರುದ್ಧ ಗೆದ್ದಿತ್ತು. ಈ ಬಾರಿ ಕೇನ್ ವಿಲಿಯಮ್ಸನ್ ಗುಜರಾತ್ ತಂಡದಲ್ಲಿ ಆಡುತ್ತಿರುವುದು ಹಾರ್ದಿಕ್ ಆತ್ಮವಿಶ್ವಾಸ ಹೆಚ್ಚಿಸಿದೆ.

ಚೆನ್ನೈ ಬಳಗದಲ್ಲಿ ಬೆನ್ ಸ್ಟೋಕ್ಸ್, ಅನುಭವಿ ಅಜಿಂಕ್ಯ ರಹಾನೆ ಆಡಲಿದ್ದಾರೆ. ಉಭಯ ತಂಡಗಳಲ್ಲಿಯೂ ಉತ್ತಮ ಆಲ್‌ರೌಂಡರ್‌ಗಳಿರುವುದರಿಂದ ರೋಚಕ ಹಣಾಹಣಿ ನಡೆಯುವ ನಿರೀಕ್ಷೆ ಇದೆ.

ಧೋನಿ ಅವರ ವೃತ್ತಿ ಜೀವನದ ಕೊನೆಯ ಐಪಿಎಲ್ ಟೂರ್ನಿ ಇದಾಗಿದೆ ಎಂದು ಹೇಳಲಾಗುತ್ತಿದೆ. ಆದರೆ ಈ ಕುರಿತು ಧೋನಿ ತುಟಿಬಿಚ್ಚಿಲ್ಲ.

ಧೋನಿಗೆ ಗಾಯ: ಧೋನಿ ಅವರಿಗೆ ಅಭ್ಯಾಸದ ವೇಳೆ ಮೊಣಕಾಲಿಗೆ ಗಾಯವಾಗಿದೆ. ಆದರೆ ಅವರು ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ ಎಂದು ತಂಡದ ಸಿಇಒ ಕಾಶಿ ವಿಶ್ವನಾಥನ್ ಹೇಳಿದ್ದಾರೆ.

ತಂಡಗಳು: ಚೆನ್ನೈ ಸೂಪರ್ ಕಿಂಗ್ಸ್: ಮಹೇಂದ್ರಸಿಂಗ್ ಧೋನಿ (ನಾಯಕ/ವಿಕೆಟ್‌ಕೀಪರ್), ಋತುರಾಜ್ ಗಾಯಕವಾಡ್, ಅಜಿಂಕ್ಯ ರಹಾನೆ, ಅಂಬಟಿ ರಾಯುಡು, ಮೋಯಿನ್ ಅಲಿ, ಬೆನ್ ಸ್ಟೋಕ್ಸ್, ಶಿವಂ ದುಬೆ, ರವೀಂದ್ರ ಜಡೇಜ, ಡ್ವೇನ್ ಪ್ರಿಟೋರಿಯಸ್, ಮಿಚೆಲ್ ಸ್ಯಾಂಟನರ್, ಡೆವೊನ್ ಕಾನ್ವೆ, ದೀಪಕ್ ಚಾಹರ್, ತುಷಾರ್ ದೇಶಪಾಂಡೆ, ರಾಜವರ್ಧನ್ ಹಂಗರೇಕರ್, ಸಿಸಾಂಡಾ ಮಗಾಲ, ಅಜಯ್ ಮಂಡ್, ಆಕಾಶ್ ಸಿಂಗ್, ಮಹೀಷ ತೀಕ್ಷಣ, ಪ್ರಶಾಂತ್ ಸೋಳಂಕಿ, ಸಿಮರಜೀತ್ ಸಿಂಗ್.

ಗುಜರಾತ್ ಟೈಟನ್ಸ್: ಹಾರ್ದಿಕ್ ಪಾಂಡ್ಯ (ನಾಯಕ), ಕೇನ್ ವಿಲಿಯಮ್ಸನ್, ಶುಭಮನ್ ಗಿಲ್, ಡೇವಿಡ್ ಮಿಲ್ಲರ್, ರಾಹುಲ್ ತೆವಾಟಿಯಾ, ರಶೀದ್ ಖಾನ್, ಶಿವಂ ಮಾವಿ, ಶ್ರೀಕರ್ ಭರತ್, ಮ್ಯಾಥ್ಯೂ ವೇಡ್, ವೃದ್ಧಿಮಾನ್ ಸಹಾ (ಮೂವರು ವಿಕೆಟ್‌ಕೀಪರ್), ಅಲ್ಜರಿ ಜೋಸೆಫ್, ಜೋಶುವಾ ಲಿಟಲ್, ಮೊಹಮ್ಮದ್ ಶಮಿ, ನೂರ್ ಅಹಮದ್, ರವಿಶ್ರೀನಿವಸಾನ್ ಸಾಯಿಕಿಶೋರ್, ಪ್ರದೀಪ್ ಸಂಗ್ವಾನ್, ಮೋಹಿತ್ ಶರ್ಮಾ, ಒಡಿಯನ್ ಸ್ಮಿತ್, ಜಯಂತ್ ಯಾದವ್, ಯಶ್ ದಯಾಳ್.


ಮಹೇಂದ್ರಸಿಂಗ್ ಧೋನಿ –ಸಿಎಸ್‌ಕೆ ಟ್ವಿಟರ್ ಚಿತ್ರ

ಮಹೇಂದ್ರಸಿಂಗ್ ಧೋನಿ (ಚೆನ್ನೈ ಸೂಪರ್‌ಕಿಂಗ್ಸ್)	
ಪಂದ್ಯ	234
ರನ್	4978
ಶ್ರೇಷ್ಠ	84*
ಸ್ಟ್ರೈಕ್‌ರೇಟ್	135.20
ಅರ್ಧಶತಕ	24
ಬೌಂಡರಿ	346
ಸಿಕ್ಸರ್	229
ಕ್ಯಾಚ್	135
ಸ್ಟಂಪಿಂಗ್	39


ಹಾರ್ದಿಕ್ ಪಾಂಡ್ಯ

ಹಾರ್ದಿಕ್ ಪಾಂಡ್ಯ (ಗುಜರಾತ್ ಟೈಟನ್ಸ್)	
ಪಂದ್ಯ	107
ರನ್	1963
ಶ್ರೇಷ್ಠ	91
ಸ್ಟ್ರೈಕ್‌ರೇಟ್	147.59
ಅರ್ಧಶತಕ	8
ಬೌಂಡರಿ	146
ಸಿಕ್ಸರ್	110
ಕ್ಯಾಚ್	57
ವಿಕೆಟ್	50

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನೆಮಾ ಆ್ಯಪ್

ಐಪಿಎಲ್ ವಿಜೇತರು

ವರ್ಷ	ವಿಜೇತ ತಂಡ	ರನ್ನರ್‌ಅಪ್
2008	ರಾಜಸ್ಥಾನ	ಚೆನ್ನೈ
2009	ಡೆಕ್ಕನ್ ಚಾರ್ಜರ್ಸ್	ಬೆಂಗಳೂರು
2010	ಚೆನ್ನೈ	ಮುಂಬೈ
2011	ಚೆನ್ನೈ	ಬೆಂಗಳೂರು
2012	ಕೋಲ್ಕತ್ತ	ಚೆನ್ನೈ
2013	ಮುಂಬೈ	ಚೆನ್ನೈ
2014	ಕೋಲ್ಕತ್ತ	ಪಂಜಾಬ್
2015	ಮುಂಬೈ	ಚೆನ್ನೈ
2016	ಹೈದರಾಬಾದ್	ಬೆಂಗಳೂರು
2017	ಮುಂಬೈ	ಪುಣೆ ಸೂಪರ್‌ಜೈಂಟ್ಸ್
2018	ಚೆನ್ನೈ	ಹೈದರಾಬಾದ್
2019	ಮುಂಬೈ	ಚೆನ್ನೈ
2020	ಮುಂಬೈ	ಡೆಲ್ಲಿ
2021	ಚೆನ್ನೈ	ಕೋಲ್ಕತ್ತ
2022	ಗುಜರಾತ್	ರಾಜಸ್ಥಾನ

ಸಾರ್ವಕಾಲಿಕ ದಾಖಲೆಗಳು ಬ್ಯಾಟಿಂಗ್

ಮಾದರಿ	ಆಟಗಾರ	ಸಾಧನೆ
ರನ್	ವಿರಾಟ್ ಕೊಹ್ಲಿ	6,624
ಬೌಂಡರಿ	ಶಿಖರ್ ಧವನ್	701
ಸಿಕ್ಸರ್	ಕ್ರಿಸ್ ಗೇಲ್	357
ಸ್ಕೋರ್	ಕ್ರಿಸ್ ಗೇಲ್	175*
ಬೌಲಿಂಗ್		
ವಿಕೆಟ್ಸ್	ಡ್ವೇನ್ ಬ್ರಾವೊ	183
ಶ್ರೇಷ್ಠ	ಅಲ್ಜರಿ ಜೋಸೆಫ್	12ಕ್ಕೆ 6
ಸರಾಸರಿ	ಆ್ಯಡಂ ಜಂಪಾ	17.61
ಎಕಾನಮಿ	ರಶೀದ್ ಖಾನ್	6.37
ಡಾಟ್‌ಬಾಲ್	ಭುವನೇಶ್ವರ್	1,406

ತಂಡವೊಂದರ ಗರಿಷ್ಠ ಮೊತ್ತ	
ಬೆಂಗಳೂರು	5ಕ್ಕೆ 263
ಕನಿಷ್ಠ ಮೊತ್ತ	
ಬೆಂಗಳೂರು	49

ರೋಹಿತ್ ಶರ್ಮಾ

ರೋಚಕತೆ ತುಂಬುವ ಹೊಸ ನಿಯಮಗಳು

ಬೆಂಗಳೂರು: ಈ ಬಾರಿಯ ಐಪಿಎಲ್‌ನಲ್ಲಿ ಕೆಲವು ಹೊಸ ನಿಯಮಗಳನ್ನು ಜಾರಿಗೆ ತರಲಾಗಿದ್ದು, ಆಟದ ರೋಚಕತೆಯನ್ನು ಇನ್ನಷ್ಟು ಹೆಚ್ಚಿಸಲಿದೆ. 'ಇಂಪ್ಯಾಕ್ಟ್ ಪ್ಲೇಯರ್' ಬಳಕೆ, ಟಾಸ್ ಬಳಿಕ ಅಂತಿಮ ಇಲೆವೆನ್ ಆಯ್ಕೆ, ವೈಡ್ ಮತ್ತು ನೋಬಾಲ್‌ಗೂ ಡಿಆರ್‌ಎಸ್ ಪಡೆದುಕೊಳ್ಳುವ ಅವಕಾಶವನ್ನು ಈ ಬಾರಿ ನೀಡಲಾಗಿದೆ.

'ಇಂಪ್ಯಾಕ್ಟ್ ಪ್ಲೇಯರ್' ನಿಯಮದ ಪ್ರಕಾರ ತಂಡಗಳು ಅಂತಿಮ ಇಲೆವೆನ್ ಜತೆಗೆ, ಐವರು ಬದಲಿ ಆಟಗಾರರನ್ನು ಕೂಡಾ ಹೆಸರಿಸಬೇಕು. ಅದರಲ್ಲಿ ಒಬ್ಬ ಆಟಗಾರ (ಇಂಪ್ಯಾಕ್ಟ್ ಪ್ಲೇಯರ್) ಪಂದ್ಯದ ಯಾವುದೇ ಹಂತದಲ್ಲಿ ಆರಂಭಿಕ ಇಲೆವೆನ್‌ನ ಆಟಗಾರರನ್ನು ಬದಲಾಯಿಸಿ ಕಣಕ್ಕಿಳಿಯಬಹುದು. ಇನಿಂಗ್ಸ್‌ನ 14ನೇ ಓವರ್‌ನ ಮುಕ್ತಾಯಕ್ಕೆ ಮುನ್ನ ಈ ಬದಲಾವಣೆ ಮಾಡಬೇಕು.

ಬ್ಯಾಟ್ ಮಾಡುವ ತಂಡವು ಔಟಾದ ಅಥವಾ ನಿವೃತ್ತಿಗೊಂಡು ಪೆವಿಲಿಯನ್ ಮರಳಿದ ಬ್ಯಾಟರ್‌ಗೆ ಬದಲಿಯಾಗಿ ಇಂಪ್ಯಾಕ್ಟ್ ಪ್ಲೇಯರ್‌ಅನ್ನು ಕಣಕ್ಕಿಳಿಸಿದರೂ 11 ಆಟಗಾರರಿಗಷ್ಟೇ ಬ್ಯಾಟ್ ಮಾಡಲು ಅವಕಾಶವಿದೆ.

ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಈ ನಿಯಮವನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು.

● ಟಾಸ್ ಬಳಿಕ ಅಂತಿಮ ಇಲೆವೆನ್ ಆಯ್ಕೆ

ಟಾಸ್ ಆದ ಬಳಿಕ ಅಂತಿಮ ಇಲೆವೆನ್ ಆಯ್ಕೆ ಮಾಡುವ ಅವಕಾಶವನ್ನು ತಂಡಗಳಿಗೆ ನೀಡಲಾಗಿದೆ. 'ಪ್ರತಿ ತಂಡದ ನಾಯಕರು ಆಡುವ 11 ಮಂದಿ ಆಟಗಾರರು ಮತ್ತು ಐವರು ಸಬ್‌ಸ್ಟಿಟ್ಯೂಟ್ ಫೀಲ್ಡರ್‌ಗಳ ಹೆಸರನ್ನು ಟಾಸ್ ಬಳಿಕ ಮ್ಯಾಚ್ ರೆಫರಿಗೆ ನೀಡಬಹುದು' ಎಂದು ಹೊಸ ನಿಯಮ ಹೇಳಿದೆ.

ಟಾಸ್ ಬಳಿಕ ಅಂತಿಮ ಹನ್ನೊಂದರ ಬಳಗದಲ್ಲಿ ಏನಾದರೂ ಬದಲಾವಣೆ ಬಯಸಿದರೆ, ಹೊಸ ನಿಯಮವು ಅದಕ್ಕೆ ಅವಕಾಶ ಕಲ್ಪಿಸಿದೆ. ಮೊದಲು ಬ್ಯಾಟ್ ಮಾಡಬೇಕೇ ಅಥವಾ ಬೌಲಿಂಗ್ ಮಾಡಬೇಕೇ ಎಂಬುದರ ಆಧಾರದಲ್ಲಿ ಅತ್ಯುತ್ತಮ ತಂಡವನ್ನು ಆಯ್ಕೆ ಮಾಡುವ ಅವಕಾಶ ತಂಡಗಳಿಗೆ ಲಭಿಸಿದೆ.

● ವೈಡ್, ನೋಬಾಲ್‌ಗೂ ಡಿಆರ್‌ಎಸ್

ವೈಡ್ ಮತ್ತು ನೋಬಾಲ್‌ಗೂ ಅಂಪೈರ್ ತೀರ್ಪು ಮರುಪರಿಶೀಲನೆ (ಡಿಆರ್‌ಎಸ್) ಪಡೆದುಕೊಳ್ಳುವ ಹೊಸ ನಿಯಮವನ್ನು ಅಳವಡಿಸಲಾಗಿದೆ. ಈಚೆಗೆ ನಡೆದ ಡಬ್ಲ್ಯುಪಿಎಲ್‌ನಲ್ಲಿ ಈ ನಿಯಮ ಜಾರಿಯಾಗಿತ್ತು.

ವೈಡ್ ಮತ್ತು ನೋಬಾಲ್‌ಗೆ ಸಂಬಂಧಿಸಿದಂತೆ ಅಂಪೈರ್ ನೀಡುವ ತೀರ್ಪಿಗೆ ಅತೃಪ್ತಿಯಿದ್ದರೆ ಆಟಗಾರ್ತಿಯರಿಗೆ ಡಿಆರ್‌ಎಸ್ ಮೊರೆ ಹೋಗಬಹುದು.

ಉದ್ಘಾಟನೆಯಲ್ಲಿ ರಶ್ಮಿಕಾ,ತಮನ್ನಾ

ಅಹಮದಾಬಾದ್: ಐಪಿಎಲ್ ಟೂರ್ನಿಯ ಉದ್ಘಾಟನಾ ಸಮಾರಂಭದಲ್ಲಿ ನಟಿಯರಾದ ರಶ್ಮಿಕಾ ಮಂದಣ್ಣ ಮತ್ತು ತಮನ್ನಾ ಭಾಟಿಯಾ ಸೇರಿದಂತೆ ಪ್ರಮುಖ ತಾರೆಯರು ಪ್ರದರ್ಶನ ನೀಡಲಿದ್ದಾರೆ.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಶುಕ್ರವಾರ ಮೊದಲ ಪಂದ್ಯಕ್ಕೂ ಮುನ್ನ ವರ್ಣರಂಜಿತ ಸಮಾರಂಭ ಆಯೋಜಿಸಲಾಗಿದೆ.

ರಶ್ಮಿಕಾ ಮತ್ತು ತಮನ್ನಾ ಅವರು ಪಾಲ್ಗೊಳ್ಳುವುದನ್ನು ಐಪಿಎಲ್ ಟ್ವಿಟರ್ ಖಾತೆ ಖಚಿತಪಡಿಸಿದೆ. ಗಾಯಕ ಅರಿಜೀತ್ ಸಿಂಗ್ ಅವರೂ ಪ್ರೇಕ್ಷಕರನ್ನು ರಂಜಿಸಲಿದ್ದಾರೆ. ಸಮಾರಂಭ ಸಂಜೆ 6 ಕ್ಕೆ ಆರಂಭವಾಗಲಿದೆ.

'ಕ್ರಿಕೆಟ್‌ನ ಅತಿದೊಡ್ಡ ಹಬ್ಬದ ಉದ್ಘಾಟನಾ ಸಮಾರಂಭವು ಜಗತ್ತಿನ ಅತಿದೊಡ್ಡ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಅರಿಜಿತ್ ಸಿಂಗ್ ಗಾಯನ ನಡೆಸಿಕೊಡಲಿದ್ದಾರೆ' ಎಂದು ಟ್ವಿಟರ್ ಖಾತೆ ಹೇಳಿದೆ.

ಮೊದಲ ಪಂದ್ಯಕ್ಕೆ ಭುವನೇಶ್ವರ್ ನಾಯಕ

ಭುವನೇಶ್ವರ್

ನವದೆಹಲಿ (ಪಿಟಿಐ): ಭಾರತದ ಅನುಭವಿ ವೇಗಿ ಭುವನೇಶ್ವರ್ ಕುಮಾರ್ ಅವರು ಸನ್‌ರೈಸರ್ಸ್ ಹೈದರಾಬಾದ್ (ಎಸ್‌ಆರ್‌ಎಚ್) ತಂಡವು ಆಡುವ ಐಪಿಎಲ್‌ನ ಮೊದಲ ಪಂದ್ಯದಲ್ಲಿ ನಾಯಕತ್ವ ವಹಿಸಲಿದ್ದಾರೆ.

ತಂಡದ ನಿಯೋಜಿತ ನಾಯಕ, ದಕ್ಷಿಣ ಆಫ್ರಿಕಾದ ಏಡನ್ ಮರ್ಕರಂ ಅವರು ರಾಷ್ಟ್ರೀಯ ತಂಡದಲ್ಲಿ ಆಡುತ್ತಿದ್ದು, ಮೊದಲ ಪಂದ್ಯಕ್ಕೆ ಲಭ್ಯರಿಲ್ಲ. ಹೀಗಾಗಿ ಭುವನೇಶ್ವರ್ ಜವಾಬ್ದಾರಿ ನಿಭಾಯಿಸಲಿದ್ದಾರೆ.

ಏಪ್ರಿಲ್ 2ರಂದು ನಡೆಯುವ ತನ್ನ ಮೊದಲ ಪಂದ್ಯದಲ್ಲಿ ಎಸ್‌ಆರ್‌ಎಚ್ ತಂಡವು ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ.

ಮರ್ಕರಂ ಅವರು ಸದ್ಯ ನೆದರ್ಲೆಂಡ್ಸ್ ಎದುರಿನ ಏಕದಿನ ಸರಣಿಯಲ್ಲಿ ಆಡುತ್ತಿದ್ದಾರೆ. ಏಪ್ರಿಲ್ 3ರಂದು ಐಪಿಎಲ್ ಟೂರ್ನಿಗಾಗಿ ಭಾರತಕ್ಕೆ ಆಗಮಿಸಲಿದ್ದಾರೆ.

ಎರಡು ಪಂದ್ಯಗಳಿಗೆ ಗುವಾಹಟಿ ಸಜ್ಜು

ಗುವಾಹಟಿ (ಪಿಟಿಐ): ಇದೇ ಮೊದಲ ಬಾರಿ ಐಪಿಎಲ್ ಟೂರ್ನಿಯ ಪಂದ್ಯಗಳನ್ನು ಆಯೋಜಿಸಲು ಗುವಾಹಟಿ ಸಜ್ಜಾಗಿದೆ.

ಐಪಿಎಲ್‌ನ ಎರಡು ಪಂದ್ಯಗಳು ಇಲ್ಲಿನ ಅಸ್ಸಾಂ ಕ್ರಿಕೆಟ್ ಸಂಸ್ಥೆ (ಎಸಿಎ) ಕ್ರೀಡಾಂಗಣದಲ್ಲಿ ನಡೆಯಲಿವೆ. ರಾಜಸ್ತಾನ ರಾಯಲ್ಸ್ ತಂಡ ತನ್ನ ಎರಡು 'ಹೋಂ' ಪಂದ್ಯಗಳನ್ನು ಇಲ್ಲಿ ಆಡಲಿದ್ದು, ಏ.5 ರಂದು ಪಂಜಾಬ್ ಕಿಂಗ್ಸ್ ಹಾಗೂ ಏ.8 ರಂದು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳನ್ನು ಎದುರಿಸಲಿದೆ.

'2020 ರಲ್ಲಿ ರಾಜಸ್ತಾನ ತಂಡದ ಎರಡು ಪಂದ್ಯಗಳ ಆತಿಥ್ಯದ ಅವಕಾಶವನ್ನು ನಮಗೆ ನೀಡಲಾಗಿತ್ತು. ಆದರೆ ಕೋವಿಡ್ ಕಾರಣ ಆ ವರ್ಷ ಪಂದ್ಯ ನಡೆಯಲಿಲ್ಲ. ಈ ಬಾರಿ ಎರಡು ಪಂದ್ಯಗಳು ಆಯೋಜಿಸುತ್ತಿರುವುದು ಸಂತಸದ ವಿಷಯ' ಎಂದು ಎಸಿಎ ಕಾರ್ಯದರ್ಶಿ ತ್ರಿದಿಬ್ ಕೊನ್ವರ್ ಹೇಳಿದ್ದಾರೆ.

ಪುಲ್ಲಂಗಡ ತಂಡಕ್ಕೆ ಭರ್ಜರಿ ಜಯ

ಕೊಡವ ಕೌಟುಂಬಿಕ ಹಾಕಿ ಟೂರ್ನಿ: ಮಾತಂಡ, ಪಟ್ಟಡ ತಂಡಗಳ ಮುನ್ನಡೆ

ಪ್ರಜಾವಾಣಿ ವಾರ್ತೆ

ನಾಪೋಕ್ಲು (ಕೊಡಗು ಜಿಲ್ಲೆ): ಪುಲ್ಲಂಗಡ ತಂಡದವರು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಗುರುವಾರದ ಪಂದ್ಯದಲ್ಲಿ ಜಯ ಸಾಧಿಸಿದರು.

ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ 4-0 ಅಂತರದಿಂದ ಅದೇಂಗಡ ತಂಡವನ್ನು ಮಣಿಸಿದರು.

ಮಾತಂಡ ತಂಡದವರು 5–4ರಲ್ಲಿ ಚೇನಂಡ ತಂಡದವರನ್ನು ಪೆನಾಲ್ಟಿ ಶೂಟೌಟ್‌ನಲ್ಲಿ ಮಣಿಸಿದರೆ, ಪಟ್ಟಡ 3–2ರಲ್ಲಿ ಬಲಚಂಡ ವಿರುದ್ಧ, ಬಿದ್ದಂಡ 7–6ರಿಂದ ಅರೆಯಡ ವಿರುದ್ಧ, ಬೊಳಕಾರಂಡ 4–3ರಿಂದ ಕೇಲೇಟಿರ ತಂಡದ ವಿರುದ್ಧ ಗೆದ್ದರು.

ಮಂಡೆಪಂಡ 2-0ರಲ್ಲಿ ಕಡೆಮಾಡ ವಿರುದ್ಧ ಗೆದ್ದರೆ, ಕುಪ್ಪಂಡ (ಕೈಕೇರಿ) ತಂಡದವರು 3-0ರಲ್ಲಿ ಬಿದ್ದಾಟಂಡ ತಂಡದವರನ್ನು ಸೋಲಿಸಿದರು. ಪುಟ್ಟಿಚಂಡ 3-1ರಲ್ಲಿ ಕಾವಡಿಚಂಡ ವಿರುದ್ಧ, ನಾಪಂಡ 2–0ರಲ್ಲಿ ಚೇಂದಂಡ ವಿರುದ್ಧ, ಕಂಬಿರಂಡ 1–0ರಲ್ಲಿ ಮಚ್ಚಾರಂಡ ಎದುರು ಗೆಲುವು ಸಾಧಿಸಿದರು.

ಕಲ್ಲಿಚಂಡ 2–0ರಿಂದ ಕಂಗಡ ವಿರುದ್ಧ, ಕರಿನೆರವಂಡ 2–0ರಲ್ಲಿ ಕರವಂಡ ವಿರುದ್ಧ, ಬೊಳ್ಳಂಡ 3–0ರಲ್ಲಿ ಅಪ್ಪಡೇರಂಡ ವಿರುದ್ಧ, ಚೀಯಕ ಪೂವಂಡ 2–1ರಲ್ಲಿ ಮನೆಯಪಂಡ ಎದುರು, ಬೊಟ್ಟೋಳಂಡ 1–0ರಲ್ಲಿ ಕುಲ್ಲಚಂಡ ಎದುರು, ಅಚ್ಚಪಂಡ 1–0 ಅಲ್ಲುಮಡ ವಿರುದ್ಧ ಗೆದ್ದರು.

ಕೊಂಗೇಟಿರ 2–0ರಲ್ಲಿ ಬೇರೆರ ವಿರುದ್ಧ, ವಾಟೇರಿರ 1–0ರಲ್ಲಿ ಕೊಂಡಿರ ಎದುರು, ಅಲ್ತಂಡ 4–2ರಲ್ಲಿ ಮುಂಡಚಾಡಿರ ವಿರುದ್ಧ, ಮಣವಟ್ಟಿರ 2–0 ಅಂತರದಿಂದ ಪಟ್ಟಮಾಡ ತಂಡವನ್ನು ಮಣಿಸಿತು.

ನಾಪೋಕ್ಲು ಸಮೀಪದ ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕೊಡವ ಕೌಟುಂಬಿಕ ಹಾಕಿ ಟೂರ್ನಿ ಪಂದ್ಯದಲ್ಲಿ ನಾಪಂಡ ಮತ್ತು ಚೇಂದಂಡ ತಂಡದವರ ಸೆಣಸಾಟ

ಫುಟ್‌ಬಾಲ್: ಎಜಿಒಆರ್‌ಸಿಗೆ ಗೆಲುವು

ಬೆಂಗಳೂರು: ಸಂಘಟಿತ ಆಟವಾಡಿದ ಅಕೌಂಟಂಟ್ ಜನರಲ್ಸ್ ಆಫೀಸ್ ರಿಕ್ರಿಯೇಷನ್ ಕ್ಲಬ್ (ಎಜಿಒಆರ್‌ಸಿ) ತಂಡದವರು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿದರು.

ಗುರುವಾರ ಇಲ್ಲಿ ನಡೆದ ಪಂದ್ಯದಲ್ಲಿ ಎಜಿಒಆರ್‌ಸಿ 3–1ರಿಂದ ಗಜಾನನ ಎಫ್‌ಸಿ ವಿರುದ್ಧ ಗೆದ್ದರು. ವಿಜೇತ ತಂಡಕ್ಕಾಗಿ ಭುವನ್ ಆರ್. (44ನೇ ನಿ.), ಯೋಗಿತ್ ಎನ್. (76ನೇ ನಿ.), ಲೋಕೇಶ್ ಎಂ. (90 + 5ನೇ ನಿ.) ಗೋಲು ಗಳಿಸಿದರು. ಗಜಾನನ ತಂಡಕ್ಕಾಗಿ ಶಿವಕುಮಾರ್ 78ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿದರು.

ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಬಿಟಿಎಂ ಎಫ್‌ಸಿ- ಬ್ಲಿಟ್ಜ್ ಎಫ್‌ಸಿ ಸೆಣಸಲಿವೆ. ಮಧ್ಯಾಹ್ನ 1 ಗಂಟೆಗೆ ಈ ಪಂದ್ಯ ನಡೆಯಲಿದೆ.

ಗಾಲ್ಫ್: ಮುನ್ನಡೆಯಲ್ಲಿ ಲಾರ್ಸ್ ವಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿಖರ ಪ್ರದರ್ಶನ ನೀಡಿದ ನೆದರ್ಲೆಂಡ್ಸ್‌ನ ಲಾರ್ಸ್ ವಾನ್ ಮೆಯೆಲ್ ಅವರು ಇಲ್ಲಿ ನಡೆಯುತ್ತಿರುವ ದಿ ಚಾಲೆಂಜ್ ಗಾಲ್ಫ್ ಟೂರ್ನಿಯ ಮೂರನೇ ಸುತ್ತಿನ ಬಳಿಕ ಮುನ್ನಡೆ ಸಾಧಿಸಿದ್ದಾರೆ.

ಕರ್ನಾಟಕ ಗಾಲ್ಫ್ ಸಂಸ್ಥೆ ಕೋರ್ಸ್‌ನಲ್ಲಿ ಗುರುವಾರ ಅವರು 67 ಸ್ಟ್ರೋಕ್‌ಗಳಲ್ಲಿ ಸ್ಪರ್ಧೆ ಕೊನೆಗೊಳಿಸಿದರು. ಈ ಮೂಲಕ ಒಟ್ಟಾರೆ 199 ಸ್ಕೋರ್‌ಗಳೊಂದಿಗೆ ಅಗ್ರಸ್ಥಾನಕ್ಕೇರಿದರು. ಮೊದಲ ಎರಡು ಸುತ್ತುಗಳಲ್ಲಿ ಅವರು ತಲಾ 66 ಸ್ಟ್ರೋಕ್‌ಗಳನ್ನು ತೆಗೆದುಕೊಂಡಿದ್ದರು.

ತಲಾ 201 ಸ್ಕೋರ್ ಹೊಂದಿರುವ ಇಂಗ್ಲೆಂಡ್‌ನ ಅಲೆಕ್ಸ್ ಫಿಟ್ಜ್‌ಪ್ಯಾಟ್ರಿಕ್ ಮತ್ತು ಸ್ವಿಟ್ಜರ್ಲೆಂಡ್‌ನ ಜೊಯೆಲ್ ಗಿರ್‌ಬ್ಯಾಕ್ ಅವರು ಜಂಟಿ ಎರಡನೇ ಸ್ಥಾನದಲ್ಲಿದ್ದಾರೆ. ಮೂರನೇ ಸುತ್ತಿನ ಸ್ಪರ್ಧೆ ಕೊನೆಗೊಳಿಸಲು ಇವರು ಕ್ರಮವಾಗಿ 71 ಹಾಗೂ 68 ಸ್ಟ್ರೋಕ್‌ಗಳನ್ನು ತೆಗೆದುಕೊಂಡರು.ಫ್ರಾನ್ಸ್‌ನ ಫ್ರೆಡೆರಿಕ್ ಲ್ಯಾಕ್ರೊಕ್ಸ್ ಮತ್ತು ಜರ್ಮನಿಯ ಮೈಕಲ್ ಹಿರ್ಮರ್ (202) ಜಂಟಿ ನಾಲ್ಕನೇ ಸ್ಥಾನದಲ್ಲಿದ್ದಾರೆ. ಭಾರತದ ಕಾರ್ತಿಕ್ ಶರ್ಮಾ (203) ಬಳಿಕದ ಸ್ಥಾನ ಹೊಂದಿದ್ದಾರೆ. ಅವರು 70 ಸ್ಟ್ರೋಕ್‌ಗಳೊಂದಿಗೆ ಮೂರನೇ ಸುತ್ತಿನ ಸ್ಪರ್ಧೆಯನ್ನು ಕೊನೆಗೊಳಿಸಿದರು.

ಲಾರ್ಸ್ ವಾನ್ ಮೆಯಿಲ್ –ಪ್ರಜಾವಾಣಿ ಚಿತ್ರ/ ಬಿ.ಎಚ್. ಶಿವಕುಮಾರ್

ಐಟಿಎಫ್– ಮೈಸೂರು ಓಪನ್ ಟೆನಿಸ್ ಟೂರ್ನಿ: ಫೈಸಲ್ ಖಮರ್‌ಗೆ ನಿರಾಸೆ

ಎಂಟರ ಘಟ್ಟಕ್ಕೆ ಕರಣ್, ಪ್ರಜ್ವಲ್

• ಮೋಹನ್ ಕುಮಾರ ಸಿ.

ಮೈಸೂರು: ರೋಚಕ ಹಣಾಹಣಿಯಲ್ಲಿ ಗೆದ್ದ ಭಾರತದ ಕರಣ್ ಸಿಂಗ್ ಹಾಗೂ ತವರಿನ ಅಂಗಳದಲ್ಲಿ ಮತ್ತೊಮ್ಮೆ ಪಾರಮ್ಯ ಮೆರೆದ ಎಸ್.ಡಿ.ಪ್ರಜ್ವಲ್ ದೇವ್ ಇಲ್ಲಿ ನಡೆಯುತ್ತಿರುವ ಐಟಿಎಫ್–ಮೈಸೂರು ಓಪನ್ ಟೆನಿಸ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ಗುರುವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಕರಣ್ ಸಿಂಗ್ ಅವರು 7–6, 3–6, 6–4ರಲ್ಲಿ ಭಾರತದವರೇ ಆದ ಸಿದ್ಧಾರ್ಥ ರಾವತ್ ವಿರುದ್ಧ ಗೆದ್ದರು.

ಕರಣ್ ಸಿಂಗ್ ಗ್ರೌಂಡ್‌ಸ್ಟ್ರೋಕ್, ಬ್ಯಾಕ್‌ಹ್ಯಾಂಡ್ ಹೊಡೆತಗಳಿಂದ ಸಿದ್ಧಾರ್ಥ್ ಅವರನ್ನು ಕಾಡಿದರು. ಟೈಬ್ರೇಕ್‌ನಲ್ಲಿ ಮೊದಲ ಸೆಟ್ ಗೆದ್ದರು. 2ನೇ ಸೆಟ್‌ನಲ್ಲಿ ಪುಟಿದೆದ್ದ ರಾವತ್, ಕರುಣ್ ಅವರ ಬಲವಾದ ಸರ್ವ್‌ಗಳನ್ನು ಮುರಿದು ಬ್ರೇಕ್‌ಪಾಯಿಂಟ್‌ಗಳ ಬಲದಿಂದ ಸೆಟ್ ತಮ್ಮದಾಗಿಸಿಕೊಂಡರು. ಜಿದ್ದಾಜಿದ್ದಿನಿಂದ ಕೂಡಿದ್ದ 3ನೇ ಸೆಟ್ ಕರುಣ್ ಪಾಲಾಯಿತು. ತೀವ್ರ ಪೈಪೋಟಿ ನೀಡಿದ ಇಬ್ಬರೂ 2 ಗಂಟೆ 31 ನಿಮಿಷಗಳ ಆಟವಾಡಿ ರಂಜಿಸಿದರು.

ಪ್ರಜ್ವಲ್ ಮಿಂಚು: ತವರಿನ ಅಂಗಳದಲ್ಲಿ ಮೈಸೂರಿನ ಎಸ್.ಡಿ.ಪ್ರಜ್ವಲ್ ಮತ್ತೆ ಮಿಂಚಿದರು. ಭಾರತದವರೇ ಆದ ವಿಷ್ಣುವರ್ಧನ್ ಅವರನ್ನು 6–3, 7–6ರಿಂದ ಮಣಿಸಿದರು. ಮೆಚ್ಚಿನ ಫೋರ್‌ಹ್ಯಾಂಡ್ ಹೊಡೆತಗಳಿಂದ ಅಂಕಗಳನ್ನು ದೋಚಿದ ಪ್ರಜ್ವಲ್ ಮೊದಲ ಸೆಟ್ ಅನ್ನು ಸುಲಭವಾಗಿ ಗೆದ್ದರು. 2ನೇ ಸೆಟ್ ಅನ್ನು ಟೈಬ್ರೇಕ್‌ನಲ್ಲಿ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮತ್ತೊಂದು ಪಂದ್ಯದಲ್ಲಿ ಮುಕುಂದ್ ಶಶಿಕುಮಾರ್ 6–1, 6–2ರಲ್ಲಿ ಫೈಸಲ್ ಖಮರ್ ಅವರನ್ನು ಸುಲಭವಾಗಿ ಮಣಿಸಿ ಎಂಟರ ಘಟ್ಟ ಪ್ರವೇಶಿಸಿದರು. ಇದಕ್ಕೂ ಮೊದಲು ಸರ್ಬಿಯಾದ ಬೋರಿಸ್ ಬುಟುಲಿಜಾ ಅವರನ್ನು 6–3, 3–6, 6–3ರಲ್ಲಿ ಗೆದ್ದು, ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು.

ರಿಷಭ್, ಇಕ್ಬಾಲ್, ನಿತಿನ್‌ಗೆ ನಿರಾಸೆ: ಭರವಸೆ ಮೂಡಿಸಿದ್ದ ಭಾರತಸ ರಿಷಭ್ ಅಗರ್‌ವಾಲ್ ಅವರು ಉಕ್ರೇನ್‌ನ ವ್ಲಾಡಿಸ್ಲಾವ್ ಆರ್ಲವ್ ಎದುರು 1–6, 7–5, 4–6ರಿಂದ ಸೋತರೆ, ಇಶಾಕ್ ಇಕ್ಬಾಲ್ 3–6, 3–6ರಿಂದ ಅಮೆರಿಕದ ಆಲಿವರ್ ಕ್ರಾಫರ್ಡ್ ಅವರಿಗೆ ಮಣಿದರು. ನಿತಿನ್ ಕುಮಾರ್ ಸಿನ್ಹಾ 1–6, 5–7ರಲ್ಲಿ ಫ್ರಾನ್ಸ್‌ನ ಫ್ಲಾರೆಂಟ್ ಬಾಕ್ಸ್ ಅವರಿಂದ ನಿರಾಸೆ ಅನುಭವಿಸಿದರು.

ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್ 6–2, 6–3ರಲ್ಲಿ ಮಲೇಶ್ಯಾದ ಮಿತ್ಸುಕಿ ವೈಕಾಂಗ್ ಲಿಯಾಂಗ್ ಎದುರು, ಬ್ರಿಟನ್‌ನ ಜಾರ್ಜ್ ಲೊಫಗೆನ್ 6–0, 6–1ರಲ್ಲಿ ದಕ್ಷಿಣ ಕೊರಿಯಾದ ವೂಬಿನ್ ಶಿನ್ ವಿರುದ್ಧ ಗೆದ್ದು ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಡಬಲ್ಸ್ ಪಂದ್ಯಗಳಲ್ಲಿ ಪರೀಕ್ಷಿತ್ ಸೋಮಾನಿ– ಮನಿಷ್ ಸುರೇಶ್ ಕುಮಾರ್ ಜೋಡಿ 6–3, 6–7, 12–10ರಲ್ಲಿ ಅಮೆರಿಕದ ಡಾಲಿ ಬ್ಲಾಂಚ್– ನಿಕೋಲಸ್ ಬೈಬೆಲ್ ಎದುರು, ಋತ್ವಿಕ್ ಚೌಧರಿ–ನಿಕಿ ಪೂಣಚ್ಚ ಜೋಡಿ 6–3, 7–6ರಲ್ಲಿ ಫ್ರಾನ್ಸ್‌ನ ಫ್ಲಾರೆಂಟ್ ಬಾಕ್ಸ್– ಭಾರತದ ನಿತಿನ್ ಸಿನ್ಹಾ ವಿರುದ್ಧ ಗೆದ್ದು ಸೆಮಿ ಫೈನಲ್ ಪ್ರವೇಶಿಸಿದರು. ಭಾರತದ ಇಶಾಕ್ ಇಕ್ಬಾಲ್– ಕರಣ್ ಸಿಂಗ್ ಜೋಡಿ 1–6, 5–7ರಿಂದ ಆಸ್ಟ್ರೇಲಿಯಾದ ಬ್ಲೇಕ್ ಎಲಿಸ್– ಉಕ್ರೇನ್‌ನ ವ್ಲಾಡಿಸ್ಲಾವ್ ಆರ್ಲವ್ ಎದುರು ನಿರಾಸೆ ಅನುಭವಿಸಿತು.

ಭಾರತದ ಕರಣ್ ಸಿಂಗ್ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ವಿಶ್ವಕಪ್: ಪಾಕ್ ಪಂದ್ಯಗಳಿಗೆ ಬಾಂಗ್ಲಾ ಆತಿಥ್ಯ?

ಕರಾಚಿ: ಈ ವರ್ಷದ ಕೊನೆಯಲ್ಲಿ ಭಾರತದಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಪಾಕಿಸ್ತಾನ ತಂಡವು ತನ್ನ ಪಂದ್ಯಗಳನ್ನು ಬಾಂಗ್ಲಾದೇಶ ಅಥವಾ ಶ್ರೀಲಂಕಾದಲ್ಲಿ ಆಡುವ ಸಾಧ್ಯತೆಯಿದೆ.

ಏಷ್ಯಾಕಪ್ ಟೂರ್ನಿಗೆ ಭಾರತ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸದಿರಲು ಬಿಸಿಸಿಐ ನಿರ್ಧರಿಸಿತ್ತು. ತನ್ನ ಪಂದ್ಯಗಳನ್ನು ಪಾಕಿಸ್ತಾನದ ಬದಲು ತಟಸ್ಥ ತಾಣದಲ್ಲಿ ಆಡುವುದಾಗಿ ಭಾರತ ಹೇಳಿತ್ತು.

ಅದರ ಬೆನ್ನಲ್ಲೇ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಈ ನಿಲುವು ತೆಗೆದುಕೊಂಡಿದೆ. 'ಏಷ್ಯಾ ಕಪ್‌ಗೆ ಬಿಸಿಸಿಐ ತನ್ನ ತಂಡವನ್ನು ಪಾಕಿಸ್ತಾನಕ್ಕೆ ಕಳುಹಿಸದಿದ್ದರೆ, ನಾವು ವಿಶ್ವಕಪ್ ಆಡಲು ಭಾರತಕ್ಕೆ ಹೋಗದಿರಲು ನಿರ್ಧರಿಸಿದ್ದೇವೆ. ನಮ್ಮ ಪಂದ್ಯಗಳನ್ನು ಬಾಂಗ್ಲಾದೇಶ ಅಥವಾ ಶ್ರೀಲಂಕಾದಲ್ಲಿ ಆಡಲು ಬಯಸಿದ್ದೇವೆ' ಎಂದು ಪಿಸಿಬಿ ಮೂಲಗಳು ಹೇಳಿವೆ.

'ಪಾಕಿಸ್ತಾನವು ಏಕದಿನ ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ಬಾಂಗ್ಲಾದೇಶದಲ್ಲಿ ಆಡುವ ಸಾಧ್ಯತೆಯಿದೆ. ಈ ಕುರಿತ ಚರ್ಚೆ ನಡೆಯುತ್ತಿದೆಯಾದರೂ, ಪಿಸಿಬಿ ಅಧಿಕೃತ ತೀರ್ಮಾನ ತೆಗೆದುಕೊಂಡಿಲ್ಲ' ಎಂದು ಇಎಸ್‌ಪಿಎನ್‌ಕ್ರಿಕ್‌ಇನ್ಫೊ ವೆಬ್‌ಸೈಟ್ ವರದಿ ಮಾಡಿದೆ.

ಏಷ್ಯಾ ಕಪ್ ಟೂರ್ನಿ ಸೆಪ್ಟೆಂಬರ್‌ನಲ್ಲಿ ನಡೆಯಲಿದ್ದು, ಭಾರತ ಮತ್ತು ಪಾಕಿಸ್ತಾನ ತಂಡಗಳು ಒಂದೇ ಗುಂಪಿನಲ್ಲಿವೆ.

ಶ್ರೀಕಾಂತ್‌ಗೆ ಮಣಿದ ಪ್ರಣೀತ್

ಮ್ಯಾಡ್ರಿಡ್ ಬ್ಯಾಡ್ಮಿಂಟನ್: ಕ್ವಾರ್ಟರ್‌ಫೈನಲ್‌ಗೆ ಸಿಂಧು

ಮ್ಯಾಡ್ರಿಡ್ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಪಿ.ವಿ. ಸಿಂಧು ಅವರು ಮ್ಯಾಡ್ರಿಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ 21-15, 21-12ರಿಂದ ಭಾರತದವರೇ ಆದ ಬಿ.ಸಾಯಿ ಪ್ರಣೀತ್ ಅವರನ್ನು ಪರಾಭವಗೊಳಿಸಿದರು.

ವಿಶ್ವ ರ‍್ಯಾಂಕಿಂಗ್‌ನಲ್ಲಿ 21ನೇ ಸ್ಥಾನದಲ್ಲಿರುವ ಶ್ರೀಕಾಂತ್ 49ನೇ ಕ್ರಮಾಂಕದ ಆಟಗಾರನ ಎದುರು ಸುಲಭ ಜಯ ಸಂಪಾದಿಸಿದರು.

ಶ್ರೀಕಾಂತ್ ಅವರಿಗೆ ಎಂಟರಘಟ್ಟದಲ್ಲಿ ಕಠಿಣ ಸವಾಲು ಎದುರಾಗಿದೆ. ಅಗ್ರ ಶ್ರೇಯಾಂಕದ, ಜಪಾನ್ ಆಟಗಾರ ಕೆಂಟಾ ನಿಶಿಮೊಟೊ ಅವರ ಎದುರು ಸೆಣಸಬೇಕಿದೆ. ನಿಶಿಮೊಟೊ ಅವರಿಗೆ ಎರಡನೇ ಸುತ್ತಿನಲ್ಲಿ ವಾಕ್‌ಓವರ್ ಲಭಿಸಿದೆ.

ಮಹಿಳಾ ಸಿಂಗಲ್ಸ್ ವಿಭಾಗದ ಪ್ರೀಕ್ವಾರ್ಟರ್ ಫೈನಲ್ ಹಣಾಹಣಿಯಲ್ಲಿ ಸಿಂಧು 21-16, 21-14ರಿಂದ ಇಂಡೋನೇಷ್ಯಾದ ಪುತ್ರಿ ಕುಸುಮಾ ವರ್ದನಿ ಅವರನ್ನು ಪರಾಭವಗೊಳಿಸಿದರು. ಭಾರತದ ಆಟಗಾರ್ತಿ, ಈ ವರ್ಷದಲ್ಲಿ ಇದೇ ಮೊದಲ ಬಾರಿ ಟೂರ್ನಿಯೊಂದರ ಎರಡನೇ ಸುತ್ತಿನ ತಡೆ ದಾಟಿದರು. ಸಿಂಧು, ಎಂಟರಘಟ್ಟದಲ್ಲಿ ಡೆನ್ಮಾರ್ಕ್‌ನ ಮಿಯಾ ಬ್ಲಿಚ್‌ಫೆಲ್ಟ್ ಎದುರು ಆಡುವರು.

ಪುರುಷರ ಸಿಂಗಲ್ಸ್ ವಿಭಾಗದ ಎರಡನೇ ಸುತ್ತಿನ ಇನ್ನುಳಿದ ಪಂದ್ಯಗಳಲ್ಲಿ ಕಿರಣ್ ಜಾರ್ಜ್ 17-21, 12-21ರಿಂದ ಡೆನ್ಮಾರ್ಕ್‌ನ ಮ್ಯಾಗ್ನಸ್ ಜೋಹಾನ್ಸನ್ ಎದುರು ಮತ್ತು ಪ್ರಿಯಾಂಶು ರಾಜಾವತ್ 14-21, 15-21ರಿಂದ ಫ್ರಾನ್ಸ್‌ನ ತೋಮಾ ಜೂನಿಯರ್ ಪೊಪೊವ್ ಎದುರು ಎಡವಿದರು.

ಕಿದಂಬಿ ಶ್ರೀಕಾಂತ್

ಫುಟ್‌ಬಾಲ್: 'ಡಿ' ಗುಂಪಿನಲ್ಲಿ ಭಾರತ

ನವದೆಹಲಿ (ಪಿಟಿಐ): 17 ವರ್ಷದೊಳಗಿನವರ ಏಷ್ಯಾಕಪ್ ಟೂರ್ನಿಗೆ ಭಾರತ ತಂಡವು ಜಪಾನ್, ವಿಯೆಟ್ನಾಂ, ಉಜ್ಬೆಕಿಸ್ತಾನ ಜತೆ ಡಿ ಗುಂಪಿನಲ್ಲಿ ಸ್ಥಾನ ಪಡೆದಿದೆ. ಟೂರ್ನಿ ಥಾಯ್ಲೆಂಡ್‌ನಲ್ಲಿ ಜೂನ್ 15ರಿಂದ ನಡೆಯಲಿದೆ.

'ಐಒಎಗೆ ಶೀಘ್ರ ಸಿಇಒ ನೇಮಿಸಿ'

ಲಾಸನ್ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಗೆ (ಐಒಎ) ಶೀಘ್ರ ಮುಖ್ಯ ಕಾರ್ಯನಿರ್ವಹಣಾಧಿಕಾರಿಯನ್ನು (ಸಿಇಒ) ನೇಮಿಸುವಂತೆ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಗುರುವಾರ ಸೂಚಿಸಿದೆ.

ಐಒಸಿಯ 140ನೇ ಅಧಿವೇಶನವು ಈ ವರ್ಷದ ಅಕ್ಟೋಬರ್‌ನಲ್ಲಿ ಮುಂಬೈನಲ್ಲಿ ನಡೆಯಲಿದೆ ಎಂದೂ ಸಮಿತಿ ಖಚಿತಪಡಿಸಿದೆ. ಇತ್ತೀಚೆಗೆ ನಡೆದ ಐಒಎ ಚುನಾವಣಾ ಫಲಿತಾಂಶಗಳಿಗೂ ಬುಧವಾರ ರಾತ್ರಿ ನಡೆದ ಕಾರ್ಯಕಾರಿ ಮಂಡಳಿ ಸಭೆಯಲ್ಲಿ ಅನುಮೋದನೆ ದೊರೆಯಿತು.

'ರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿಯು ಇನ್ನೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಥವಾ ಪ್ರಧಾನ ಕಾರ್ಯದರ್ಶಿಯನ್ನು ನೇಮಿಸಿಲ್ಲ. ಈ ಕುರಿತು ವಿಳಂಬ ಮಾಡದೆ ಶೀಘ್ರ ನೇಮಕ ಮಾಡಿಕೊಳ್ಳಬೇಕು' ಎಂದು ಐಒಸಿ ಸೂಚಿಸಿದೆ.